ಕಸ್ತೂರಿ



ಮೇ, ೧೯೬೧

ಜ್ಞಾನ ಮತ್ತು ಮನೋರಂಜನೆ

“ಕಸ್ತೂರಿ ಬಳಗ”ದ ಹೊಸ ಯೋಜನೆ

೬೦ ಸಂಚಿಕೆಗಳು ಪುಕ್ಕಟೆ!

ಪ್ರತಿತಿಂಗಳ ೧ನೇ ದಿನಾಂಕ
ಪ್ರಕಟವಾಗುವದು

ಲೋಕಶಿಕ್ಷಣ ಟ್ರಸ್ಟಿನ
ಪ್ರಕಾಶನ

* “ಕಸ್ತೂರಿ” ಇಂದು ನಮ್ಮ ಸರ್ವಶ್ರೇಷ್ಠ ಡೈಜೆಸ್ಟ್-ಸಾರಸಾಹಿತ್ಯ.
* ಪ್ರತಿ ತಿಂಗಳೂ ಎಷ್ಟೋ ಓದುಗರು ಪ್ರತಿಗಳ ಬಗ್ಗೆ ನಿರಾಶೆಯಾಗುತ್ತಿದ್ದಾರೆ. ಅದಕ್ಕಾಗಿ ಈ ಯೋಜನೆ. ಇಂದಿನಿಂದಲೇ “ಕಸ್ತೂರಿ”ಯ ಮುಂದಿನ ೬೦ ಸಂಚಿಕೆಗಳನ್ನು ಕಾಯ್ದಿರಿಸಿ. ಅದು ಪ್ರತಿ ತಿಂಗಳೂ ನೀವಿದ್ದಲ್ಲಿ ಕೈಸೇರುವದು.
* ನೀವು ಪ್ರತ್ಯೇಕ ಚಂದಾ ಹಣ ಕಳಿಸಬೇಕಾಗಿಲ್ಲ!
* ಕೇವಲ ರೂಪಾಯಿ ಒಂದುನೂರಾ ಇಪ್ಪತ್ತು (ರೂ. ೧೨೦) ಠೇವು ಇಟ್ಟರೆ ಸಾಕು.
* ಐದು ವರ್ಷಗಳಲ್ಲಿ ೬೦ ಸಂಚಿಕೆಗಳನ್ನೂ ಪಡೆದುದಲ್ಲದೆ ನಿಮ್ಮ ೧೨೦ ರೂ. ಗಳ ಠೇವನ್ನು ಮರಳಿ ಪಡೆಯುವಿರಿ.
* ಈ ಯೋಜನೆ ಜೂನ್ ೩೦, ೧೯೬೧ರ ವರೆಗೆ ಮಾತ್ರ ಊರ್ಜಿತದಲ್ಲಿರುವದು.
* ಕೂಡಲೇ “ಕಸ್ತೂರಿ ಬಳಗ” ಕ್ಕೆ ಸೇರಿರಿ.

ಕೆಳಗಿನ ಫಾರ್ಮನ್ನು ತುಂಬಿ ಹಣ ಸಹಿತ ಇಂದೇ ಕಳಿಸಿರಿ.

ವ್ಯವಸ್ಥಾಪಕರು “ಕಸ್ತೂರಿ ಬಳಗ,” ಪೋ. ಬಾ. ನಂ. ೩೦, ಹುಬ್ಬಳ್ಳಿ.

ಮಿತ್ರರೆ, ನಿಮ್ಮ “ಕಸ್ತೂರಿ ಬಳಗ”ದ ಯೋಜನೆಯಲ್ಲಿ ಭಾಗ ವಹಿಸಲು ನಾನು ಅಪೇಕ್ಷಿಸುತ್ತೇನೆ. ಅದಕ್ಕಾಗಿ ರೂ. ೧೨೦ ನ್ನು ಇಂದು ಮ. ಆ./ಚೆಕ್ಕು/ಡ್ರಾಫ್ಟ್ ಮೂಲಕ ಕಳಿಸಿದ್ದೇನೆ. ಈ ಯೋಜನೆಯಂತೆ.......೧೯೬೧ ರಿಂದ ೫ ವರ್ಷ ಕಾಲ ಕಸ್ತೂರಿ ಸಂಚಿಕೆಗಳನ್ನೂ ಆ ಅವಧಿಯ ಕೊನೆಗೆ ರೂ. ೧೨೦ ನ್ನೂ ಪಡೆಯಲು ಹಕ್ಕು ನನಗಿದೆ. ಕೂಡಲೆ “ಕಸ್ತೂರಿ ಬಳಗದ ಠೇವಿನ ರಶೀದಿ”ಯನ್ನು ಕಳಿಸಿರಿ.

ಹೆಸರು (ಪೂರ್ಣ) ____________________

ವಿಳಾಸ ____________________

ಪ್ರಾಂತ್ಯ ____________ (ಜಿಲ್ಲಾ) ____________

ಕಸ್ತೂರಿ

ಕಸ್ತೂರಿ

ಕನ್ನಡ ಡೈಜೆಸ್ಟ್

ಪ್ರತಿತಿಂಗಳ ೧ ನೆ ದಿನಾಂಕ ಪ್ರಕಟವಾಗುವುದು.

ಮುಖ್ಯ ಸಂಪಾದಕರು :
ರಂಗನಾಥ ದಿವಾಕರ

ಸಹಾಯಕ ಸಂಪಾದಕರು :
ಪಿ. ವಿ. ಆಚಾರ್ಯ

ಪ್ರಕಾಶಕರು :
ಲೋಕ ಶಿಕ್ಷಣ ಟ್ರಸ್ಟ್-ಹುಬ್ಬಳ್ಳಿ

ಕಚೇರಿ :
ಸಂಯುಕ್ತ ಕರ್ನಾಟಕ ಕಾರ್ಯಾಲಯ
ಹುಬ್ಬಳ್ಳಿ

ಮುದ್ರಕರು :
ಸಂಯುಕ್ತ ಕರ್ನಾಟಕ ಮುದ್ರಣಾಲಯ
ಹುಬ್ಬಳ್ಳಿ

ಮುಖಚಿತ್ರ :
ಮಂಗಳೂರಿನ ಸೆಂಟ್ ಅಲೋಸಿಯಸ್ ಕಾಲೇಜಿನ ಮುಂಭಾಗ :
ಡಾ. ಡಿ. ವಿ. ರಾವ್

ಚಂದಾ ದರ :
ವಾರ್ಷಿಕ (ಅಂಚೆಸೇರಿ). ರೂ. [illegible]
ಅರ್ಧ ವರ್ಷ — ರೂ. [illegible]
ಬಿಡಿಸಂಚಿಕೆ — ರೂ. [illegible]

Kasturi, May 1961

ಲೇಖಕರಿಗೆ ಸೂಚನೆ

ಕಸ್ತೂರಿಯಲ್ಲಿ ಪ್ರಕಟನೆಗಾಗಿ ಲೇಖ, ಪ್ರಬಂಧ, ಕಥೆ ಮೊದಲಾದವನ್ನು ಸ್ವೀಕರಿಸಲಾಗುವುದು. ಕಾಗದದ ಒಂದೇ ಮಗ್ಗಲಿಗೆ ವಿರಳವಾಗಿ ಬರೆದು ಕಳಿಸಬೇಕು. ಲೇಖಕರು ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ತಿಳಿಸಬೇಕಲ್ಲದೆ, ಅನುವಾದ, ರೂಪಾಂತರ ಇಲ್ಲವೆ ಸಾಧಾರ ಲೇಖಗಳಾದರೆ ಅವುಗಳ ಮೂಲ ಲೇಖಕ ಹಾಗು ಪ್ರಕಾಶಕರ ಹೆಸರು ವಿಳಾಸಗಳನ್ನೂ ಒದಗಿಸಬೇಕು. ಮೂಲ ಲೇಖಕರ ಅನುಮತಿ ಪಡೆದೇ ಲೇಖಗಳನ್ನು ಕಳಿಸಿದರೆ ಅವುಗಳ ಮೇಲೆ ಬೇಗನೆ ನಿರ್ಣಯಕ್ಕೆ ಬರಲು ಸುಲಭವಾಗುವುದು. ಅಸ್ವೀಕೃತ ಲೇಖಗಳು ತಿರುಗಿ ಬೇಕಾಗಿದ್ದರೆ **ಲೇಖಗಳ ಸಂಗಡವೇ** ತಿರುಗಿ ಕಳಿಸಲು ಅವಶ್ಯಬೀಳುವಷ್ಟು ಅಂಚೆ ತಿಕೀಟುಗಳನ್ನೂ ಕಳಿಸಿರಬೇಕು. ಲೇಖ ಸ್ವೀಕೃತವಾದರೆ ಯಥಾವಕಾಶ ಪ್ರಕಟಿಸಲಾಗುವದು. ಲೇಖಕರು ತಮ್ಮ ಲೇಖಗಳ ಸ್ಥಳಪ್ರತಿಗಳನ್ನು ಕಾಯ್ದಿಟ್ಟುಕೊಳ್ಳುವದೊಳಿತು. ಲೇಖಗಳು ಅಕಸ್ಮಾತ್ತಾಗಿ ಕಳೆದು ಹೋದರೆ ಸಂಪಾದಕರು ಹೊಣೆಗಾರರಲ್ಲ.

ಲೇಖ ಪ್ರಕಟವಾದರೆ "ಕಸ್ತೂರಿ"ಯು ಆಗಿಂದಾಗ್ಗೆ ಗೊತ್ತುಪಡಿಸಿಕೊಂಡ ಕ್ರಮದಲ್ಲಿ ಪ್ರತಿಫಲವನ್ನು ಆದಷ್ಟು ಬೇಗ ಕೊಡಲಾಗುವದು. ಲೇಖಗಳಲ್ಲಿ ಸೂಕ್ತ ಬದಲಾವಣೆ ಮಾಡಿಕೊಳ್ಳುವ ಅಧಿಕಾರ ಸಂಪಾದಕರಿಗಿದೆ.

ಚಂದಾದಾರರಿಗೆ ಸೂಚನೆ

ಪ್ರತಿತಿಂಗಳ"ಕಸ್ತೂರಿ"ಆಯಾ ತಿಂಗಳ ೧ನೇ ದಿನಾಂಕದೊಳಗೇ ಪ್ರಕಟವಾಗುವದು. ಅದು ಚಂದಾದಾರರಿಗೆ ಆಯಾ ತಿಂಗಳ ೫ನೇ ದಿನಾಂಕದೊಳಗೆ ತಲಪುವದು. ಹಾಗೆ ಬಾರದಿದ್ದರೆ ಚಂದಾದಾರರು ತಮ್ಮ ಟಪಾಲು ಕಟ್ಟೆಯಲ್ಲಿ ಮೊದಲು ವಿಚಾರಿಸಿ ನಮಗೆ ತಿಳಿಸಬೇಕು. ಚಂದಾದಾರರು ಕಾರ್ಯಾಲಯದೊಡನೆ ಪತ್ರವ್ಯವಹಾರ ಮಾಡುವಾಗ್ಗೆ ತಮ್ಮ ಚಂದಾ ನಂಬರು ಕಾಣಿಸಲು ಮರೆಯಬಾರದು.

ಈ ಸಂಚಿಕೆಯಲ್ಲಿ

ಪುಸ್ತಕವಿಭಾಗ

ಕಸ್ತೂರಿ

ಸಂಚಿಕೆ ೯ ಮೇ ೧೯೬೧ ವರ್ಷ ೫

ತಿಳಿವಳಿಕೆಯ ಬೆಳಕು

ಒಮ್ಮೆ ನೂರು ಜನರನ್ನು ಒಂದು ಕತ್ತಲೆಯ ಕೋಣೆಯಲ್ಲಿ ಕೂಡಿಟ್ಟರು. ಪ್ರತಿಯೊಬ್ಬನ ಕೈಯಲ್ಲೂ ಒಂದು ಹೊತ್ತಿಸದ ಹಣತೆ ಇತ್ತು. ಅವರಲ್ಲೊಬ್ಬ ಹೇಗೋ ತನ್ನ ಹಣತೆಯನ್ನು ಹೊತ್ತಿಸಿದ. ಅದರಿಂದ ಅವರೆಲ್ಲ ಒಬ್ಬರನ್ನೊಬ್ಬರು ನೋಡಲು ಮತ್ತು ಅರಿತುಕೊಳ್ಳಲು ಅನುಕೂಲವಾಯಿತು. ಉಳಿದವರೂ ತಮ್ಮ ತಮ್ಮ ಹಣತೆಯನ್ನು ಹೊತ್ತಿಸತೊಡಗಿದಾಗ ಅವರ ಸುತ್ತಲಿದ್ದ ಇತರ ವಸ್ತುಗಳು ಕಾಣಿಸತೊಡಗಿದವು. ಕೊನೆಗೆ ಎಲ್ಲ ದೀಪಗಳು ಹೊತ್ತಿದಾಗ ಕೋಣೆಯಲ್ಲಿದ್ದ ಪ್ರತಿಯೊಂದು ವಸ್ತುವೂ ಸ್ಪಷ್ಟವಾಗಿ, ತನ್ನೆಲ್ಲ ಸೌಂದರ್ಯ ಸಹಿತ ಗೋಚರವಾಯಿತು.

ಈಗ ಚಿತ್ತವಿಟ್ಟು ಕೇಳು, ಅಲ್ಲಿ ನೂರು ಹಣತೆಗಳಿದ್ದವು, ಆದರೆ ಒಂದೇ ಒಂದು ವಿಚಾರವಿತ್ತು. ಹಾಗಿದ್ದರೂ ಕೋಣೆಯಲ್ಲಿದ್ದ ಪ್ರತಿಯೊಂದರ ವಿವರವನ್ನೂ ಪ್ರಕಟಗೊಳಿಸಲು ನೂರೂ ಹಣತೆಗಳ ಬೆಳಕು ಅವಶ್ಯಕವಾಯಿತು. ಪ್ರತಿಯೊಂದು ದೀಪವೂ ಒಂದು ದೊಡ್ಡ ವಿಚಾರದ, ಒಂದು ದೊಡ್ಡ ಪ್ರಕಾಶದ ಅಂದರೆ ಸೃಷ್ಟಿಕರ್ತನ ಅಸ್ತಿತ್ವ ಮತ್ತು ಮಹಿಮೆಯ ನೂರರಲ್ಲೊಂದು ಅಂಶವಾಗಿತ್ತು. ಮನುಷ್ಯನೊಬ್ಬ ಒಂದು ಪ್ರತಿಮೆಯನ್ನು ನೂರು ತುಂಡುಗಳಾಗಿ ಮಾಡಿ ಆ ನೂರರಲ್ಲಿ ಪ್ರತಿಯೊಬ್ಬನಿಗೆ ಒಂದೊಂದು ತುಂಡನ್ನು ಕೊಟ್ಟಂತಿತ್ತು. ಆ ನೂರು ಜನರು ಪರಸ್ಪರರನ್ನು ಹುಡುಕಿಕೊಂಡು ಆ ತುಂಡುಗಳನ್ನು ಒಂದುಗೂಡಿಸಲೆತ್ನಿಸಿ ಹಲವಾರು ಕುರೂಪ ಪ್ರತಿಮೆಗಳನ್ನು ಸೃಷ್ಟಿಸಿ ಕೊನೆಗೆ ಅದನ್ನು ಸರಿಯಾದ ರೀತಿಯಲ್ಲಿ ಹೊಂದಿಸಲು ಸಮರ್ಥರಾದರು.

ಈಗ ನೋಡು, ಪ್ರತಿಯೊಬ್ಬನೂ ತನ ಹಣತೆಯನ್ನು ಹೊತ್ತಿಸಿದ. ನೂರು ಹಣತೆಗಳ ಒಟ್ಟು ಪ್ರಕಾಶವೇ ಸತ್ಯ ಮತ್ತು ಸಾಕ್ಷಾತ್ಕಾರವಾಗಿತ್ತು. ಇದರಿಂದ ಅವರಿಗೆ ಸಮಾಧಾನವಾಗಬೇಕಿತ್ತು. ಆದರೆ ಪ್ರತಿಯೊಬ್ಬನೂ ತನ್ನ ಸುತ್ತಲಿನ ವಸ್ತುಗಳ ಸೌಂದರ್ಯಕ್ಕೆ ಅವುಗಳನ್ನು ಕತ್ತಲೆಯಿಂದ ಬೆಳಕಿಗೆ ತಂದ ತನ್ನ ಹಣತೆಯ

ಪ್ರಕಾಶವೇ ಕಾರಣವೆಂದು ತಿಳಿದ. ಕೆಲವರು ತಮ್ಮ ದೀಪಗಳನ್ನು ಪೂಜಿಸತೊಡಗಿದರೆ ಉಳಿದವರು ಬೇರೆ ಬೇರೆ ದಿಕ್ಕುಗಳಲ್ಲಿ ಹೋಗತೊಡಗಿದರು. ಆ ದೊಡ್ಡ ಪ್ರಕಾಶ ನೂರು ಪ್ರಕಾಶಗಳಾಗಿ ವಿಭಜಿಸಲ್ಪಟ್ಟಿತು. ಅವುಗಳಲ್ಲಿ ಒಂದೊಂದೂ ಸತ್ಯದ ಒಂದು ತಿಲಮಾತ್ರ ಅಂಶವನ್ನಷ್ಟೇ ಪ್ರಕಾಶಿಸುವಂತಾಯಿತು. ನೋಡಿದೆಯಾ, ನಿಜ ಪ್ರಕಾಶವನ್ನು ಕಂಡುಹಿಡಿಯಲು ಆ ನೂರೂ ದೀಪಗಳು ಮತ್ತೆ ಒಂದುಗೂಡಬೇಕಲ್ಲವೆ ?

ಇಂದು ಜನರು ಪರಸ್ಪರ ಸಂದೇಹದಿಂದ ಅಲೆಯುತ್ತಿದ್ದಾರೆ. ಪ್ರತಿಯೊಬ್ಬನೂ ತನ್ನ ದೀಪದ ಪ್ರಕಾಶದಲ್ಲಿ, ಸುತ್ತಲೂ ದುಃಖದಾಯಕವಾದ ಕತ್ತಲೆಯ ಮಾಯೆಯನ್ನು ಹರಡಿಕೊಂಡು ತನ್ನ ಹಣತೆಯ ಪ್ರಕಾಶದಿಂದ ಬೆಳಗುವ ಯಾವುದೊಂದು ವಸ್ತುವಿನ ಪ್ರಕಾಶಕ್ಕೆ ಅಂಟಿಕೊಂಡು ಅಲೆಯುತ್ತಿದ್ದಾನೆ. ಆದ್ದರಿಂದಲೇ ನಾನು ಹೇಳುವುದು. ಇರುವುದು ಒಂದೇ ವಿಚಾರ, ಒಂದೇ ಸತ್ಯ. ಆದರೆ ಅದಕ್ಕೆ ಮುಖಗಳು ಮಾತ್ರ ನೂರಿವೆ. ಈ ಒಂದನ್ನೇ ಕಾಣಲು ಆ ಕೋಣೆಯಲ್ಲಿಯ ಜನರಂತೆ ಎಲ್ಲರೂ ತಮ್ಮ ಸಂಗಡಿಗರನ್ನು ಕೂಡಿಕೊಂಡಿರಬೇಕಾಗುವುದು. *

— ಜಿಯೋವನಿ ಜುವರೆಶ್ಚಿ, ಇಟಾಲಿಯನ್ ಲೇಖಕ

ಸಂಪತ್ತು–ವಿಪತ್ತು

ಒಮ್ಮೆ ರಾಜನೊಬ್ಬ ಚಿಕ್ಕ ವಯಸ್ಸಿನ ಸೇವಕನೊಬ್ಬನನ್ನು ಕರೆದುಕೊಂಡು ಹಡಗದಲ್ಲಿ ಪ್ರಯಾಣ ಮಾಡುತ್ತಿದ್ದ. ಎಂದೂ ಸಮುದ್ರವನ್ನು ನೋಡದಿದ್ದ ಆ ಹುಡುಗ ಹೆದರಿ ಅಳತೊಡಗಿದ. ರಾಜ ಎಷ್ಟು ರಮಿಸಿ ಹೇಳಿದರೂ ಆ ಹುಡುಗ ಅಳುವುದನ್ನು ನಿಲ್ಲಿಸಲಿಲ್ಲ. ಆಗ ಹಡಗದಲ್ಲಿದ್ದ ಪಂಡಿತನೊಬ್ಬ " ರಾಜಾ, ಅಪ್ಪಣೆಯಾದರೆ ನಾನಾತನನ್ನು ಸುಮ್ಮನಿರಿಸುವೆ " ಎಂದ. ರಾಜ ಒಪ್ಪಿದ.

ಆ ಪಂಡಿತ ಆ ಹುಡುಗನನ್ನೆತ್ತಿ ಸಮುದ್ರಕ್ಕೆಸೆದುಬಿಟ್ಟ. ಹುಡುಗ ಒಂದೆರಡು ಸಲ ಮುಳುಗಿ ನೀರು ಕುಡಿದು ಮೇಲೆದ್ದಾಗ ನಾವಿಕನೊಬ್ಬನು ಅವನ ಕೂದಲನ್ನು ಹಿಡಿದು ಅವನನ್ನು ಮೇಲಕ್ಕೆಳೆದುಕೊಂಡ.

ಆ ನಂತರ ಆ ಹುಡುಗ ಹಡಗದ ಮೂಲೆಯಲ್ಲಿ ಶಾಂತವಾಗಿ ಕುಳಿತುಕೊಂಡ. " ಇದೇನಾಶ್ಚರ್ಯ ! '' ಎಂದು ರಾಜ ಕೇಳಿದಾಗ ಪಂಡಿತ ಹೇಳಿದ " ನೀರಿನಲ್ಲಿ ಮುಳುಗಿ ಸಾಯುವ ಕಷ್ಟದ ಕಲ್ಪನೆ ಆ ಹುಡುಗನಿಗಿರಲಿಲ್ಲ. ಆದ್ದರಿಂದ ಹಡಗದಲ್ಲಿ ಕುಳಿತು ಪ್ರಯಾಣ ಮಾಡುವುದು ಎಷ್ಟು ಹಿತಕರ ಮತ್ತು ಸುರಕ್ಷಿತವಾದುದು ಎಂಬುದು ಅವನಿಗೆ ಗೊತ್ತಿರಲಿಲ್ಲ.''

ವಿಪತ್ತನ್ನು ಅನುಭವಿಸಿದವನಿಗೆ ಸಂಪತ್ತಿನ ನಿಜ ಬೆಲೆ ತಿಳಿಯುತ್ತದೆ. ರೊಟ್ಟಿಯ ತುಣುಕಿನ ಬೆಲೆ ತಿಳಿಯುವುದು ಹಸಿದವನಿಗಲ್ಲದೆ ಹೊಟ್ಟೆ ತುಂಬಿದವನಿಗಲ್ಲ.

— ಅರಬೀ ಕಥೆ

ಇಲ್ಲಿದೆ ಒಂದು ಪ್ರತ್ಯೇ
ಸುಲಭ ಉಪಾಯ

ನಿಮ್ಮ ಮಕ್ಕಳು ಒಳ್ಳೆಯವರಾಗಬೇಕೇ?

ಇಂದಿನ ಸಾಮಾಜಿಕ ಜೀವನದಲ್ಲಿ ಅತ್ಯಂತ ಉಪೇಕ್ಷಿತವಾದ ಸಮಸ್ಯೆ ಯಾವುದು ?

ಈ ಪ್ರಶ್ನೆಗೆ ಹಲವರು ಹಲವಾರು ಉತ್ತರ ಹೇಳಬಹುದು. ಆದರೆ ನಲುವತ್ತು ವರ್ಷಗಳಿಂದ ಈ ಪ್ರಶ್ನೆಗೆ ಉತ್ತರ ಹುಡುಕಲು ಪ್ರಯತ್ನಿಸುತ್ತಿರುವ ಮತ್ತು ಮಕ್ಕಳ ಪಾಲನೆಪೋಷಣೆಯ ಯೋಗ್ಯ ವಿಧಾನವನ್ನು ಹುಡುಕಲು ಪ್ರಯತ್ನಿಸುತ್ತಿರುವ ಡಾ. ಜೇಮ್ಸ್ ಬೋಸಾರ್ಡರು ಮಾತ್ರ " ನಾವು ನಮ್ಮ ಮಕ್ಕಳನ್ನು ಉಪೇಕ್ಷಿಸುತ್ತಿದ್ದೇವೆ. ಮಕ್ಕಳೊಂದಿಗೆ ಹೇಗೆ ಮಾತಾಡಬೇಕು, ಅವರೆದುರಿನಲ್ಲಿ ನಮ್ಮನಮ್ಮಲ್ಲಿ ಯಾವ ರೀತಿ ಮಾತಾಡಿಕೊಳ್ಳಬೇಕು ಎಂಬುದನ್ನು ನಾವು ಯೋಚಿಸುವುದೇ ಇಲ್ಲ. ಇದೇ ಸಮಾಜದಲ್ಲಿ ಅತ್ಯಂತ ಉಪೇಕ್ಷಿತವಾದ ಸಮಸ್ಯೆಯಾಗಿದೆ" ಎಂದು ಖಂಡಿತವಾಗಿ ಹೇಳುತ್ತಾರೆ.

ಮನೆಯಲ್ಲಿ ಊಟಕ್ಕೆ ಕುಳಿತಾಗ ಜನ ಏನು ಮಾತಾಡುತ್ತಾರೆಂದು ತಿಳಿಯಲು ಡಾ. ಬೋಸಾರ್ಡರು ಟೇಪ್‌ರಿಕಾರ್ಡರ್ ಮೂಲಕ ಅನೇಕ ರಿಕಾರ್ಡುಗಳನ್ನು ಸಂಪಾದಿಸಿದರು. " ಬೇರೆ ಬೇರೆ ಬಗೆಯ ಕುಟುಂಬಗಳಲ್ಲಿ ನಡೆಯುವ ಸಂಭಾಷಣೆಯ ಮೂಲಕ ನನ್ನ ಪ್ರಶ್ನೆಗೊಂದು ಉತ್ತರ ಸಿಕ್ಕೀತು ಎಂದು ನಾನು ಭಾವಿಸಿರಲಿಲ್ಲ. ಇವರು ಹೇಗೆ, ಏನು ಮಾತಾಡುತ್ತಾರೆ ಎಂದು ತಿಳಿಯಲು ನಾನು ಅಪೇಕ್ಷಿಸುತ್ತಿದ್ದೆ. ಎಲ್ಲ ಮನೆಗಳಲ್ಲಿ ಸಾಮಾನ್ಯವಾಗಿ ಒಂದೇ ಧಾಟಿಯ ಸಂಭಾಷಣೆ ನಡೆಯುವುದನ್ನು ಕಂಡು ನನಗೆ ಆಶ್ಚರ್ಯವಾಯಿತು " ಎಂದಿದ್ದಾರೆ ಅವರು.

" ಊಟದ ಕಾಲದಲ್ಲಿ ನಡೆಯುವ ಸಂಭಾಷಣೆಯಲ್ಲಿ ಪರನಿಂದೆಯೆ ಹೆಚ್ಚಾಗಿರುತ್ತದೆ. ಜನರು ಸಾಮಾನ್ಯವಾಗಿ ಇನ್ನೊಬ್ಬರ ವಿಚಾರದಲ್ಲಿ ಪ್ರಶಂಸಾಪರವಾದ ಒಂದು ಶಬ್ದವನ್ನೂ ಆಡುವುದಿಲ್ಲ. ಮಿತ್ರರು, ನೆಂಟರು, ನೆರೆಯವರು, ಅಂಗಡಿಕಾರರು, ಮೇಲಧಿಕಾರಿಗಳು ಎಲ್ಲರ ವಿಚಾರದಲ್ಲೂ ಟೀಕೆ ನಡೆದಿರುತ್ತದೆ. ಇವರು ತಮ್ಮ ಜೀವನದ ಪ್ರತಿಯೊಂದು ವಿಚಾರದಲ್ಲೂ ಬೇಸತ್ತಿರುತ್ತಾರೆ. ಇವರ ಈ ಬಗೆಯ ಪರದೂಷಣೆಯಿಂದ ಮಕ್ಕಳ ಮನಸ್ಸಿನ ಮೇಲೆ ವಿಪರೀತ ಕೆಟ್ಟ ಪರಿಣಾಮವಾಗುತ್ತದೆ. ಇಂಥವರ ಮನೆಯ ಮಕ್ಕಳು ಹೆಚ್ಚಾಗಿ ಸಮಾಜ ವಿರೋಧಿಗಳೂ ಕೋಪಿಷ್ಠರೂ ಆಗಿ ಬೆಳೆಯುತ್ತಾರೆ.

" ಇನ್ನೊಂದು ಬಗೆಯಿದೆ ಈ ಸಂಭಾಷಣೆಯಲ್ಲಿ. ಇಲ್ಲಿ ಮನೆಯ ಹಿರಿಯರು ತಮ್ಮ ತಮ್ಮಲ್ಲಿಯೆ ಜಗಳಾಡುತ್ತಾರೆ. ಒಬ್ಬರನ್ನೊಬ್ಬರು ದೂಷಿಸುತ್ತಾರೆ, ನಿಂದಿಸುತ್ತಾರೆ. ಸಾರಿಗೆ ಉಪ್ಪು ಹೆಚ್ಚು ಎಂದು ಗಂಡ ನೀರಿನ ತಟ್ಟೆಯನ್ನೆತ್ತಿ ಬಿಸಾಕುತ್ತಾನೆ. ಗಂಡ ಹೇಳಿದ ಸಾಮಾನು ತರಲಿಲ್ಲ

ಎಂದು ಹೆಂಡತಿ ಅನ್ನದ ತಪ್ಪಲೆಗೆ ತೂತು ಬೀಳುವ ಹಾಗೆ ಅದನ್ನು ನೆಲಕ್ಕೆ ಅಪ್ಪಳಿಸುತ್ತಾಳೆ. ಮಕ್ಕಳ ಮೇಲೆ ಇದರಿಂದ ಒಳ್ಳೆಯ ಪರಿಣಾಮ ಹೇಗಾದೀತು? ಅವರು ದೊಡ್ಡವರಾದ ಮೇಲೆ ಇದರ ಪರಿಣಾಮ ಕಂಡುಬಂದು ಅವರೂ ಇದೇ ಮಾದರಿಯಲ್ಲಿ ಅಸಹನೆಯಿಂದ, ಅವಿವೇಕದಿಂದ ವರ್ತಿಸತೊಡಗುತ್ತಾರೆ.

"ಮೂರನೆಯ ರೀತಿಯ ಜನರೂ ಇದ್ದಾರೆ. ಈ ಜನ ಮನೆಯಲ್ಲಿ ಬಹಳ ಸಭ್ಯತೆಯಿಂದ ಮಾತಾಡುತ್ತಾರೆ, ನಗೆಚಾಟಿಕೆ ಮಾಡುತ್ತಾರೆ. ಆದರೆ ಇದು ಕೇವಲ ನಟನೆಯಾಗಿರುತ್ತದೆ. ಪ್ರತಿಯೊಬ್ಬನೂ ತನ್ನ ಬುದ್ಧಿಚಮತ್ಕೃತಿಯನ್ನು ಪ್ರದರ್ಶಿಸಲು ಬಯಸುತ್ತಿರುತ್ತಾನೆ. ಮಕ್ಕಳ ಕಡೆಗೆ ಯಾರ ಲಕ್ಷ್ಯವೂ ಇರುವುದಿಲ್ಲ. ತಾವು ಪರಕೀಯರು ಅನಾಥರು ಎಂಬ ಭಾವನೆ ಅವರಿಗುಂಟಾಗಿ ಅವರು ಕಂಗೆಡುತ್ತಾರೆ. ನೈಚ್ಯಾನುಸಂಧಾನದಿಂದ ಆವೃತ್ತರಾಗಿ ಮನೆಯ ಹಿರಿಯರನ್ನು ಆದರದಿಂದ ಕಾಣುವುದನ್ನು ನಿಲ್ಲಿಸುತ್ತಾರೆ.


"ಇನ್ನು ನಾಲ್ಕನೆಯ ಬಗೆಯ ಜನರ ರೀತಿ. ಇವರು ಮಕ್ಕಳ ಮಾನಸಿಕ ವಿಕಾಸಕ್ಕೆ ಅನುಕೂಲವಾಗುವಂತೆ ಮಾತುಕತೆ ನಡೆಸುತ್ತಾರೆ. ತಮ್ಮ ಮಾತುಕತೆಗಳಲ್ಲಿ ಮಕ್ಕಳನ್ನೂ ಸೇರಿಸಿಕೊಂಡು ಅವರಲ್ಲಿ ಉತ್ಸಾಹ ತುಂಬುತ್ತಾರೆ."

ಡಾ. ಬೋಸಾರ್ಡರು ತಮ್ಮ ಅನುಭವದಿಂದ ಮೇಲಿನ ಮಾತುಗಳನ್ನು ಹೇಳಿದ್ದಾರೆ. ಮನೆಯಲ್ಲಿ ಮಕ್ಕಳ ಪ್ರಗತಿಗೆ ಅನುಕೂಲವಾಗುವಂಥ ವಾತಾವರಣ ಹುಟ್ಟಿಸಲು ಹಿರಿಯರು ತಮ್ಮ ಮಾತುಕತೆಗಳ ರೀತಿಯನ್ನು ಸುಧಾರಿಸಿಕೊಳ್ಳಬೇಕು ಎಂದು ಅವರು ಸೂಚಿಸುತ್ತಾರೆ. ಹಿರಿಯರ ಮಾತುಕತೆಗಳಲ್ಲಿ ಭಾಗವಹಿಸಲು ಮಕ್ಕಳೂ ಬಯಸುತ್ತಾರೆ ಎಂಬುದನ್ನು ಸದಾ ಧ್ಯಾನದಲ್ಲಿಟ್ಟುಕೊಳ್ಳಬೇಕು. ಮಕ್ಕಳ ವಿಚಾರ ಅಪರಿಪಕ್ವವಾಗಿರಬಹುದು. ಆದರೂ ಅವನ್ನು ಕೇಳಿಕೊಳ್ಳಬೇಕು. ಇಲ್ಲವಾದಲ್ಲಿ ಅವರ ವಿಚಾರ ಯಾವಾಗಲೂ ಅಪರಿಪಕ್ವವಾಗಿಯೆ ಉಳಿಯುವುದು.

ಹೇಗೆ ಮಾತಾಡಬೇಕು ಎಂದು ತಿಳಿಯದವರಿಗೆ ಡಾ. ಬೋಸಾರ್ಡರು ಒಂದು ಸೂಚನೆಯಿತ್ತಿದ್ದಾರೆ: "ಒಬ್ಬ ವಕೀಲನಿದ್ದ. ಆತ ಊಟದ ಕಾಲದಲ್ಲಿ ಒಂದು ಪ್ರಶ್ನೆ ಕೇಳುತ್ತಿದ್ದ. ಅವನ ಹೆಂಡತಿ ಮತ್ತು ಮಕ್ಕಳು ತಮಗೆ ತಿಳಿದಂತೆ ಉತ್ತರ ಕೊಡುತ್ತಿದ್ದರು. ಆಮೇಲೆ ಆ ವಕೀಲ ಪ್ರಶ್ನೆಯ ನಿಜವಾದ ಉತ್ತರವನ್ನು ವಿವರಿಸಿ ಹೇಳುತ್ತಿದ್ದ. ನೀವೂ ಹೀಗೆಯೆ ಮಾಡಿ."

ವಕೀಲನ ಈ ಉಪಾಯದಿಂದ ಮಕ್ಕಳ ತರ್ಕಬುದ್ಧಿ ಮತ್ತು ಜ್ಞಾನದ ವಿಕಾಸವಾಗುವುದರ ಜೊತೆಗೆ ಅನವಶ್ಯಕವಾದ ಟೀಕೆ-ಟಿಪ್ಪಣಿಗಳಿಗೆ, ನಿಂದೆಯ ಮತ್ತು ವ್ಯರ್ಥ ಮಾತುಗಳಿಗೆ ಅವಕಾಶವೇ ಇರುತ್ತಿರಲಿಲ್ಲ. ತಮ್ಮ ಮಕ್ಕಳು ಒಳ್ಳೆಯವರಾಗಬೇಕು ಎಂಬ ಅಭಿಲಾಷೆಯಿರುವವರೆಲ್ಲರೂ ಮಕ್ಕಳ ಮನಸ್ಸಿನ ಮೇಲೆ ಮನೆಯಲ್ಲಿ ನಡೆಯುವ ಪ್ರತಿಯೊಂದು ಮಾತು, ಕೃತಿಗಳ ಪರಿಣಾಮವಾಗುತ್ತದೆ ಎಂಬ ಸತ್ಯವನ್ನು ಗಮನಿಸಿದಲ್ಲಿ ಡಾ. ಬೋಸಾರ್ಡರ ಹಿತವಾಕ್ಯದ ಕಲ್ಪನೆ ಸಹಜವಾಗಿ ಬಂದೀತು.

"ಜ್ಞಾನೋದಯ" ದಿಂದ



ನಿಮ್ಮ ಹಿರಿತನ ಕಳಕೊಳ್ಳದೆ ಮಕ್ಕಳೊಂದಿಗೆ ಮಕ್ಕಳಾಗಲು ನಿಮಗೆ ಸಾಧ್ಯವಾದರೆ ಅದು ಬಹಳ ಉತ್ತಮ.

—ಜಾನ್ ಮಾಸೋನ್ ಬ್ರಾವುನ್

ದಾರಿಯ ಕೊನೆಯಲ್ಲಿ



ಮೂಲ : ರವೀಂದ್ರನಾಥ ಠಾಕೂರ

ಅನು : ಎ. ನಾಗಭೂಷಣರಾವ್ ಸಿಂಧೆ

ನಾನು ದಾರಿಯ ಅಂಚಿನಲ್ಲಿ ಕುಳಿತು ಬರೆಯುತ್ತೇನೆ. ಈ ದಾರಿ ಛಾಯಾಮಯವಾದುದು. ಈ ಅಂಚಿನಲ್ಲಿ ನನ್ನದೊಂದು ಪುಟ್ಟ ಮನೆಯಿದೆ. ಇದರ ಕಿಟಕಿಗಳು ತೆರೆದಿವೆ. ಮುಂಜಾವಿನಲ್ಲಿ ಅಶೋಕವೃಕ್ಷದ ನೆರಳಿನೊಂದಿಗೆ ಸೂರ್ಯನ ಪ್ರಥಮ ಕಿರಣಗಳು ನನ್ನ ಮುಂದೆ ಬಂದು ನಿಲ್ಲುತ್ತವೆ. ನನ್ನನ್ನು ನೋಡುತ್ತವೆ. ನನ್ನ ಮಡಲಿನಲ್ಲಿ ಬಿದ್ದು ಆಟವಾಡುತ್ತವೆ. ನನ್ನ ಬರಹದ ಮೇಲೂ ಸಹ ಬಂದು ಬೀಳುತ್ತವೆ. ನನ್ನನ್ನು ಬಿಟ್ಟು ಹೋಗುವಾಗ ಮಾತ್ರ ಪುಟಗಳ ಮೇಲೆ ತಮ್ಮ ಕೆಲವು ಸುವರ್ಣ ರೇಖೆಗಳನ್ನು ಬಿಟ್ಟು ತೆರಳುತ್ತವೆ. ನನ್ನ ಕೃತಿಗಳ ಮೇಲೆ ಅವುಗಳ ಸುವರ್ಣಚುಂಬನ ಮಾತ್ರ ಅಚ್ಚಳಿಯದೆ ನಿಲ್ಲುತ್ತದೆ. ನನ್ನ ಬರಹದ ಸುತ್ತಲೂ ಪ್ರಭಾತ ಪುಟಿದೇಳುತ್ತದೆ. ಹೊಲ-ಗದ್ದೆಯ ಹೂವು, ಮೇಘಗಳ ವರ್ಣ, ಮುಂಜಾವಿನ ಮಂದ ಸಮೀರ, ನಿದ್ರಾದೇವಿಯ ಕಟಾಕ್ಷ ನನ್ನ ಬರವಣಿಗೆಯಲ್ಲಿ ಬೆರೆತುಹೋಗುತ್ತದೆ. ಅರುಣೋದಯದ ಪ್ರೇಮ ನನ್ನ ಬರಹದ ನಾಲ್ದೆಸೆಯನ್ನೂ ಆವರಿಸಿಕೊಳ್ಳುತ್ತದೆ.

ನನ್ನ ಕಣ್ಣಮುಂದೆ ಬಂದವರೆನಿತು ಜನ. ಹೋದವರೆನಿತು ಜನ. ಪ್ರಭಾತದ ಕಾಂತಿ ಅವರನ್ನು ಆಶೀರ್ವದಿಸುತ್ತಿದೆ, ಸ್ನೇಹದಿಂದ ಹೇಳುತ್ತಿದೆ: "ನಿನ್ನ ಯಾತ್ರೆ ಶುಭವಾಗಲಿ". ಹಕ್ಕಿಗಳು ಮಂಗಳಗಾನವನ್ನು ಮಾಡುತ್ತಿವೆ. ಹಾದಿಯ ಅಕ್ಕಪಕ್ಕದಲ್ಲಿ ಇನ್ನೇನು ಅರಳಲಿರುವ ಹೂವುಗಳು ಆಸೆಯಂತೆ ಅರಳುತ್ತಿವೆ. ಯಾತ್ರೆಯ ಆರಂಭದ ಸಮಯದಲ್ಲಿ "ಭಯವಿಲ್ಲ! ಭಯವಿಲ್ಲ!" ಎಂದು ಎಲ್ಲರೂ ದನಿಗೂಡಿಸುತ್ತಿರುವರು. ಆಕಾಶದಲ್ಲಿ ಪ್ರಭಾತ ತನ್ನ ಬಾಹುಗಳನ್ನು ಪಸರಿಸಿದೆ, ಅನಂತದತ್ತ ಬೆರಳುಮಾಡಿ ಜಗತ್ತಿಗೆ ಪಥವನ್ನು ತೋರಿಸುತ್ತಿದೆ. ಪ್ರಭಾತ—

ಜಗತ್ತಿನ ಆಸೆ, ಅದರ ಆಶ್ವಾಸನೆ ಹಾಗೂ ಪ್ರತಿ ದಿನದ ನಾಂದಿ. ಆತ ನಂದನದ ಪಾರಿಜಾತದ ಗಂಧವನ್ನು ತಂದು ಪೃಥ್ವಿಯ ಹೂವುಗಳ ಸುಗಂಧದೊಡನೆ ಬೆರಸಿ ಅವುಗಳನ್ನು ಎಚ್ಚರಿಸುತ್ತಾನೆ. ಪ್ರಭಾತ, ಜಗತ್ತಿನ ಯಾತ್ರೆಯಲ್ಲಿ ಆರಂಭದ ಆಶೀರ್ವಾದ, ಆ ಆಶೀರ್ವಾದ ಮಿಥ್ಯವಲ್ಲ.

ಜಗತ್ತಿನ ಮಾನವಕೋಟಿಯು ನನ್ನ ಕೃತಿಗಳ ಮೇಲೆ ತನ್ನ ಛಾಯೆಯನ್ನು ಬಿಟ್ಟು ದಾರಿ ಹಿಡಿದು ತೆರಳುತ್ತಿದೆ. ಅವರು ತಮ್ಮೊಂದಿಗೆ ಏನನ್ನೂ ತೆಗೆದುಕೊಂಡು ಹೋಗಲಾರರು. ಅವರು ಸುಖದುಃಖಗಳನ್ನು ಮರೆಯುತ್ತಾ ಮರೆಯುತ್ತಾ ತೆರಳುತ್ತಾರೆ. ತಮ್ಮ ಜೀವನದಿಂದ ಪ್ರತಿಯೊಂದು ಗಳಿಗೆಯ ಭಾರವನ್ನು ಕಳಚುತ್ತಾ ತೆರಳುತ್ತಾರೆ. ಅವರ ಹಾಸ್ಯ-ರೋದನಗಳು ನನ್ನ ಕೃತಿಗಳಲ್ಲಿ ಮೂಡಿ ಅಂಕುರಿತವಾಗುತ್ತದೆ. ಅವರು ತಮ್ಮ ಗೋಳನ್ನು ಮರೆತು, ಪ್ರೇಮವನ್ನು ತಮಗಾಗಿ ಉಳಿಸಿಕೊಂಡು ಹೋಗುತ್ತಾರೆ.

ಮತ್ತೆ ಯಾವುದೂ ಅವರೊಂದಿಗೆ ಉಳಿಯದೆ ಪ್ರೇಮವೊಂದೇ ಅವರ ಜೊತೆಯಲ್ಲಿರುತ್ತದೆ. ಅವರು ಹಾದಿಯ ಉದ್ದಕ್ಕೂ ಪ್ರೀತಿಸುತ್ತಲೇ ಮುಂದೆ ಸಾಗುತ್ತಾರೆ. ಹಾದಿಯ ಯಾವ ಭಾಗವನ್ನು ಅವರು ತಮ್ಮ ಕಾಲಿಂದ ಮೆಟ್ಟುವರೋ ಅಷ್ಟೇ ಜಾಗವನ್ನು ಅವರು ಪ್ರೀತಿಸುತ್ತಾರೆ; ಅದೇ ಜಾಗದಲ್ಲಿ ತಮ್ಮದೊಂದು ಚಿಹ್ನೆಯನ್ನು ಬಿಟ್ಟುಹೋಗಲು ಬಯಸುತ್ತಾರೆ; ಅವರ ಅಗಲಿಕೆಯ ಕಣ್ಣೀರಿನಿಂದ ಆ ಜಾಗ ತೊಯ್ದುಹೋಗುತ್ತದೆ. ಹಾದಿಯ ಇಕ್ಕೆಲದಲ್ಲೂ ಹೊಸ ಹೊಸ ತಾರೆಗಳು ಬೆಳಗುತ್ತಿರುತ್ತವೆ. ಹೊಸ ಹಾದಿಗರನ್ನು ಪ್ರೀತಿಸುತ್ತಾ ಮುಂದೆ ಬರುತ್ತಿರುತ್ತವೆ. ಪ್ರೇಮದ ಆಕರ್ಷಣೆಯಿಂದ ಅವರು ಹೊರಟುಹೋಗುತ್ತಾರೆ. ಪ್ರೇಮದ ಪ್ರಭಾವದಿಂದ ಅವರ ಪ್ರಯಾಣದ ಆಯಾಸ ದೂರವಾಗುತ್ತದೆ. ಮಾತೃಸ್ನೇಹದಿಂದ ಜಗತ್ತಿನ ಶೋಭೆಯು ಅವರೊಂದಿಗೆ ಹೋಗುತ್ತಿರುತ್ತದೆ. ಹೃದಯಾಂಧಕಾರದ ಅಂತಃಪುರದಿಂದ ಅವರನ್ನು ಹೊರಗೆ ಕರೆದುಕೊಂಡು ಬರುತ್ತದೆ: ಹಿಂದಿನಿಂದ ಬಂದು ಮುಂದೆ ಆಲಿಂಗಿಸಿಕೊಂಡು ಕರೆದುಕೊಂಡು ಹೋಗುತ್ತದೆ.

ಪ್ರೇಮವನ್ನೇನಾದರೂ ಬಂಧಿಸಿಡಬಹುದಾಗಿದ್ದರೆ ಹಾದಿಗರ ಯಾತ್ರೆ ನಿಂತಂತೆಯೇ. ಪ್ರೇಮದ ಸಮಾಧಿ ಎಲ್ಲಿಯಾದರೂ ಇದ್ದಿದ್ದರೆ ಪಥಿಕ ಆ ಸಮಾಧಿಯ ಮೇಲೆ ಜಡಶಿಲೆಯ ಚಿಹ್ನೆಯಂತೆ ಬಿದ್ದಿರುತ್ತಿದ್ದ. ನಾವೆಯ ಹಗ್ಗವು ನಾವೆಯನ್ನು ಯಾವ ರೀತಿ ಬಂಧಿಸಿ ಕರೆದುಕೊಂಡು ಹೋಗುವುದೋ ಅದೇ ರೀತಿ ಯಥಾರ್ಥ ಪ್ರೇಮವು ಯಾರನ್ನೂ ಬಂಧನದಲ್ಲಿಡದೆ ತನ್ನೊಂದಿಗೆ ಬಂಧಿಸಿ ಕರೆದುಕೊಂಡು ಹೋಗುತ್ತದೆ. ಪ್ರೇಮ-ಬಂಧನದ ಸೆಳೆತದಲ್ಲಿ ಇತರ ಬಂಧನಗಳೆಲ್ಲವೂ ಕಿತ್ತುಹೋಗುತ್ತವೆ. ಬೃಹತ್‌ಪ್ರೇಮದ ಪ್ರಭಾವದಿಂದ ಸಣ್ಣ ಪ್ರೇಮದ ಎಲ್ಲಾ ಸೂತ್ರಗಳು ಕಿತ್ತುಹೋಗುತ್ತವೆ. ಆದುದರಿಂದಲೇ ಜಗತ್ತು ಈ ರೀತಿ ನಡೆಯುತ್ತಿದೆ; ಇಲ್ಲದಿದ್ದರೆ ಎಂದೋ ತನ್ನ ಭಾರವನ್ನು ತಾನೇ ಸಹಿಸದೆ ಕೆಳಗೆ ಬಿದ್ದುಬಿಡುತ್ತಿತ್ತು.

ಪಥಿಕಗಣವು ನಡೆದುಹೋಗುತ್ತಿರುವಾಗ ನಾನು ಕಿಟಿಕಿಯ ಬಳಿ ಕುಳಿತುಕೊಂಡು ಅವರು ನಗುವುದನ್ನು ನೋಡುತ್ತಿರುತ್ತೇನೆ. ಅಳುವನ್ನು ಕೇಳುತ್ತಿರುತ್ತೇನೆ. ಯಾವ ಪ್ರೇಮವು ಅಳಿಸುತ್ತದೆಯೋ ಅದೇ ಪ್ರೇಮವು ಕಣ್ಣೀರನ್ನು ಒರೆಸುತ್ತದೆ. ನಗುವನ್ನು ಪ್ರಕಾಶಮಾನವಾಗಿ ಮಾಡುತ್ತದೆ. ನಗುವಿನಿಂದ, ಅಳುವಿನಿಂದ, ಸುವೃಷ್ಟಿಯಿಂದ ಅದು ನಮ್ಮ ನಾಲ್ದೆಸೆಯಲ್ಲೂ ಸೌಂದರ್ಯದ ಉಪವನವನ್ನು ಪ್ರಫುಲ್ಲವಾಗಿಟ್ಟಿರುತ್ತದೆ. ಪ್ರೇಮವು ಯಾರನ್ನೂ ಕೊನೆಯ ಹಂತದವರೆಗೂ ಅಳಲು ಬಿಡುವುದಿಲ್ಲ. ಯಾವ ಪ್ರೇಮವು ಒಬ್ಬನ ವಿರಹದಿಂದ ನಿನ್ನನ್ನು ಅಳಿಸುತ್ತದೆಯೋ, ಅದೇ ಪ್ರೇಮವು ಬೇರೆ ಎಷ್ಟೋ

ಜನರನ್ನು ನಿನ್ನ ಬಳಿಗೆ ಕರೆತರುತ್ತದೆ.

ಪ್ರಾತಃಕಾಲದಲ್ಲಿ ಪ್ರಫುಲ್ಲ ಹೃದಯದಿಂದ ಯಾತ್ರೆಮಾಡಲು ಹೊರಟ ಜನರು ದೂರ— ಬಹುದೂರ ಸಾಗಬೇಕಾಗುತ್ತದೆ. ಹಾದಿಯ ಮೇಲೆ ಅವರ ಪ್ರೇಮವಿಲ್ಲದಿದ್ದರೆ, ಆ ಜನರು ಬಹುದೂರ ನಡೆಯಲಾರರು. ಈ ಪಥವು ಪ್ರೀತಿಸುತ್ತದೆ, . ಈ ಕಾರಣದಿಂದಲೇ ಪ್ರತಿಯೊಂದು ಹೆಜ್ಜೆಯಿಂದಲೂ ಅವರಿಗೆ ತೃಪ್ತಿ ಸಿಗುತ್ತದೆ. ಅವರು ಕಾಲ್ತೆಗೆಯಲು ಬಯಸುವುದಿಲ್ಲ. ಪ್ರತಿ ಹೆಜ್ಜೆಯಲ್ಲೂ ಅವರಿಗೆ ಈ ರೀತಿ ಭ್ರಮೆಯುಂಟಾಗುತ್ತದೆ: "ಇದುವರೆಗೂ ಹೇಗೆ ಪಡೆದನೋ ಹಾಗೆ ಇಂದು ಹೊಂದಲಾರೆ" ಎಂದು. ಆದರೆ ಮುಂದೆ ಮುಂದೆ ಹೋದಂತೆಲ್ಲಾ ಅವರು ಇದೆಲ್ಲವನ್ನೂ ಮರೆತುಬಿಡುತ್ತಾರೆ. ಪ್ರತಿ ಹೆಜ್ಜೆಗೂ ಅವರು ದುಃಖವನ್ನು ಮರೆಯುತ್ತಾ ತೆರಳುತ್ತಾರೆ. ಮೊದಲು ಅವರು ಆಸೆ ಮಾಡಿ ಕುಳಿತುಕೊಳ್ಳುತ್ತಾರೆ, ಆದುದರಿಂದಲೆ ಅಳುತ್ತಾರೆ. ಇಲ್ಲದಿದ್ದರೆ ಹೀಗೆ ಅಳುವುದಕ್ಕೆ ಯಾವ ಕಾರಣವೂ ಇಲ್ಲ.

ಅಲ್ಲಿ ನೋಡು, ಪುಟ್ಟ ಮಗುವನ್ನು ತಾಯಿ ಮಡಲಿನಲ್ಲಿ ಎತ್ತಿಕೊಂಡು ಸಂಸಾರಪಥದಲ್ಲಿ ಹೋಗುತ್ತಿದ್ದಾಳೆ. ಆ ಮಗುವಿನ ಹತ್ತಿರ ತಾಯಿಯನ್ನು ಯಾರು ತಾನೆ ಕಟ್ಟಿಹಾಕಿದ್ದಾರೆ? ಆ ಮಗುವಿನ ಮೂಲಕ ತಾಯಿಯನ್ನು ಯಾರು ಎಳೆದುಕೊಂಡು ಹೋಗುತ್ತಿದ್ದಾರೆ? ಪ್ರೇಮದ ಪ್ರಭಾವದಿಂದಾಗಿ ಹಾದಿಯಲ್ಲಿದ್ದ ಮುಳ್ಳುಗಳೆಲ್ಲವೂ ತಾಯಿಯ ಪಾದದಡಿ ಯಾವ ರೀತಿ ಹೂವಾಗುತ್ತಿವೆ! ಮಗುವನ್ನು ತಾಯಿಯ ಮಡಲಿನಲ್ಲಿಟ್ಟು ಮನೆಯೆಡೆಗೆ ದಾರಿ ಮಧುರವಾಗುವಂತೆ ಮಾಡಿದವರಾರು? ಆದರೆ, ಅಯ್ಯೊ! ತಾಯಿ ಇದನ್ನು ತಿಳಿಯಲು ಇಷ್ಟೇಕೆ ತಪ್ಪುಗಳನ್ನು ಮಾಡುತ್ತಾಳೆ? ಈ ಮಗುವಿನಿಂದಲೇ ತನ್ನ ಅವಸಾನವೆಂದು ತಾಯಿಯೇಕೆ ಚಿಂತಿಸುತ್ತಿರುವಳು? ಅನಂತ ಪಥದಲ್ಲಿ ಜಗತ್ತಿನ ಎಲ್ಲ ಬಾಲಕರು ಒಟ್ಟಾಗಿ ಸೇರಿ ಆಟ ಮಾಡುತ್ತಾರೆ; ಒಬ್ಬ ಬಾಲಕ ತಾಯಿಯ ಕೈ ಹಿಡಿದುಕೊಂಡು ಬಾಲಕರ ಆ ರಾಜ್ಯಕ್ಕೆ—ಶತಕೋಟಿ ಸಂತಾನವಿರುವ ಆ ಕಡೆಗೆ—ಕರೆದುಕೊಂಡು ಹೋಗುತ್ತಾನೆ. ಅಲ್ಲಿ ಜಗತ್ತಿನ ಸಮಸ್ತ ಕೋಮಲ ಮುಖಗಳೂ ಅರಳಿ ಒಂದು ನಂದನವೇ ಆಗಿದೆ. ಆಕಾಶದ ಚಂದ್ರನನ್ನು ಜಗಳವಾಡಿ ಎತ್ತಿಕೊಂಡುಹೋಗಲು ಅದೆಂತಹ ಆಗ್ರಹ! ಅಲ್ಲಿದೆ, ತೊದಲು ಭಾಷೆಯ ಮಧುರ ಕಲ್ಲೋಲ. ಮತ್ತೆ ಅಲ್ಲಿ ಕೇಳು, ಸುಕುಮಾರ ಅಸಹಾಯ ಬಾಲಕಗಣವು ಯಾವ ರೀತಿ ರೋದಿಸುತ್ತಿದೆ! ಕುಸುಮ ದಲಗಳನ್ನು ಕೀಟಗಳು ತಿನ್ನುವಂತೆ ಈ ಮೃದು, ಕೋಮಲ ಶಿಶುಶರೀರವನ್ನು ರೋಗ ಜೀರ್ಣಿಸುತ್ತಿದೆ. ಕೋಮಲ ಕಂಠದಿಂದ ಸ್ವರ ಹೊರಡುತ್ತಿಲ್ಲ. ಕ್ಷೀಣಸ್ವರದಲ್ಲಿ ಅಳಲು ಪ್ರಯತ್ನಿಸುತ್ತಿದೆ. ಅಳು ಗಂಟಲಿನ ಒಳಗೇ ಲುಪ್ತವಾಗುತ್ತಿದೆ. ಮಕ್ಕಳ ಮೇಲೆ ಈ ದಾಂಡಿಗ ವಯಸ್ಕರಿಂದ ಎಷ್ಟು ಅತ್ಯಾಚಾರವಾಗುತ್ತಿದೆ!

ಒಬ್ಬ ಹುಡುಗನು ಬಂದು ತನ್ನ ತಾಯಿಯನ್ನು ಜಗತ್ತಿನ ಎಲ್ಲಾ ಮಕ್ಕಳ ತಾಯಿಯನ್ನಾಗಿ ಮಾಡಿಬಿಡುತ್ತಾನೆ. ಯಾರಿಗೆ ಮಕ್ಕಳಿರುವುದಿಲ್ಲವೋ ಅವರಿಗೆ ಅನಂತ ಸ್ವರ್ಗದ ಒಂದು ಬಾಗಿಲು ಯಾವಾಗಲೂ ಮುಚ್ಚಿರುತ್ತದೆ. ಮಗು ಬಂದು ಸ್ವರ್ಗದ ಆ ಬಾಗಿಲನ್ನೇ ತೆರೆದುಬಿಡುತ್ತದೆ. ಅನಂತರ ನೀನು ಹೊರಟುಹೋಗುವೆ; ಅವನನ್ನು ಹೋಗಲು ಬಿಡು. ಅವನ ಕೆಲಸ ಮುಗಿಯಿತು, ಮತ್ತೊಂದು ಕೆಲಸ ಮಾಡಬೇಕಾಗಿದೆ.

ಪ್ರೇಮವು ನಮ್ಮನ್ನು ಒಳಗಿನಿಂದ ಹೊರಗೆ ಕರೆದುಕೊಂಡು ಬರುತ್ತದೆ, ತನ್ನನ್ನು ಇತರರ ಹತ್ತಿರಕ್ಕೆ ಕರೆದುಕೊಂಡು ಹೋಗುತ್ತದೆ; ನಮ್ಮನ್ನು ಒಬ್ಬರಿಂದ ಮತ್ತೊಬ್ಬರ ಕಡೆಗೆ ಹೋಗುವಂತೆ ಮಾಡುತ್ತದೆ. ಇದರಿಂದ ನಾವು ಅದನ್ನು ಹಾದಿಯ ಬೆಳಕೆಂದು ಕರೆಯುತ್ತೇವೆ.

ಪಥವನ್ನು ತೋರಿಸಲೆಂದೇ ಎಲ್ಲರೂ ಬಂದಿರುವರೇ ಹೊರತು ವಿಘ್ನವಾಗಲೆಂದು ಯಾರೂ

ಬಂದಿಲ್ಲ. ಆದುದರಿಂದ ಯಾವ ಗುಂಪೂ ನಿನ್ನನ್ನು ಮುತ್ತಿಕೊಂಡಿರುವುದಿಲ್ಲ. ಎಲ್ಲರೂ ಒಬ್ಬೊಬ್ಬರಾಗಿ ಹೊರಟುಹೋಗುತ್ತಾರೆ. ಯಾರೂ ತನ್ನನ್ನೇ ಆಗಲಿ ಅಥವಾ ಮತ್ತಾರನ್ನಾಗಲೀ ಬಂಧಿಸಿ ನಿಲ್ಲಿಸಲು ಬಯಸುವುದಿಲ್ಲ. ತನ್ನ ಇಚ್ಛೆಯ ಪ್ರಕಾರ ಯಾವ ವ್ಯಕ್ತಿ ತನ್ನ ಸುತ್ತಲೂ ಗೋಡೆಯನ್ನು ಕಟ್ಟಿಕೊಳ್ಳುತ್ತಾನೆಯೋ ಅವನಿಗೂ ಕಾಲಪ್ರವಾಹ ನಿರಂತರವಾಗಿ ಅಪ್ಪಳಿಸಿ ಅವನು ಕಟ್ಟಿಕೊಂಡ ಗೋಡೆಗಳನ್ನು ಕೆಳಗುರುಳಿಸಿ ಅವನನ್ನು ಹಾದಿಗೆ ಎಳೆದು ತರುತ್ತದೆ. ಆಗ ಅವನು ಆವರಣದ ಅಭಾವದಿಂದ 'ಹಾ' ಎಂದು ಗೋಳಿಡುತ್ತಾ ಸಾಯುತ್ತಾನೆ. ಜಗತ್ತು ಸಂದೇಹವಾದಾಗ ಹೇಳತೊಡಗುತ್ತದೆ: ಮಣ್ಣಿನ ಮಧ್ಯೆ ಈ ಜೀವನವನ್ನು ವಿಲೀನಗೊಳಿಸಲು ಪ್ರಾಣಪಣ ಮಾಡುವುದೆಂದು.

ನಾವು ಪಥಿಕರಾಗಿಯೇ ಜನ್ಮವೆತ್ತಿದ್ದೇವೆ. ಒಂದು ವೇಳೆ ಅನಂತ ಶಕ್ತಿಯೂ ಈ ಅನಂತ ಪಥದ ಮೇಲೆ ಕೇವಲ ಬಲಪೂರ್ವಕವಾಗಿ ನಮ್ಮನ್ನು ಕರೆದುಕೊಂಡು ಹೋದರೆ, ಪ್ರಚಂಡ ಭಾಗ್ಯವು ಒಂದು ವೇಳೆ ನಮ್ಮ ಮುಡಿಯನ್ನು ಮುಷ್ಟಿಯಲ್ಲಿ ಹಿಡಿದು ಎಳೆದುಕೊಂಡು ಹೋದರೆ ಅಂಥ ವೇಳೆಯಲ್ಲಿ ನಮ್ಮಂತಹ ದುರ್ಬಲ ಜನರು ಏನು ತಾನೆ ಮಾಡಬಲ್ಲರು? ಆದರೆ ಈ ಯಾತ್ರೆಯ ಪ್ರಾರಂಭದಲ್ಲಿ ಶಾಸನದ ವಜ್ರ ಕಠೋರ ಧ್ವನಿಯನ್ನು ನಾವು ಕೇಳುತ್ತಿಲ್ಲ. ಪ್ರಭಾತದ ಆಶ್ವಾಸನಪೂರ್ಣ ವಾಣಿಯನ್ನು ಮಾತ್ರ ಕೇಳುತ್ತಿದ್ದೇವೆ. ಹಾದಿಯಲ್ಲಿ ಕಷ್ಟವಿದೆ, ಖಂಡಿತವಾಗಿಯೂ ದುಃಖವಿದೆ. ಆದರೂ ಸಹ ನಾವು ಪ್ರೀತಿಸುತ್ತಾ ಮುಂದೆ ಸಾಗುತ್ತಿದ್ದೇವೆ. ಎಲ್ಲ ವೇಳೆಯಲ್ಲಿ ನಾವು ಇದನ್ನು ಲೆಕ್ಕಿಸುವುದಿಲ್ಲ ಎಂಬುದೇನೋ ಸರಿ. ಆದರೆ ಪ್ರೇಮವು ಸಹಸ್ರದಿಶೆಗಳಲ್ಲೂ ತನ್ನ ತೋಳನ್ನು ಚಾಚಿದೆ. ಆ ನಿರಂತರ ಪ್ರೇಮದ ಆಹ್ವಾನವನ್ನು ಮುಡಿಯಲ್ಲಿ ಧರಿಸಿ ನಾವು ಸಾಗುವುದನ್ನು ಕಲಿಯೋಣ; ಮೋಹದ ಬಲೆಯಲ್ಲಿ ಬೀಳದಿರೋಣ, ಅಂತ್ಯದಲ್ಲಿ ಅಮೋಘವಾದ ಶಾಸನವೊಂದು ಬಂದು ನಮ್ಮನ್ನು ಸಂಕೋಲೆಗಳಿಂದ ಬಂಧಿಸಿಕೊಂಡೊಯ್ಯದಿರಲೆಂದು ಹಾರೈಸೋಣ.

ನಾನು ಸಹಸ್ರಾರು ಜನರ ವಿಲಾಸ ಹಾಗೂ ಆನಂದ ಧ್ವನಿಗಳ ಅಂಚಿನಲ್ಲಿ ಕುಳಿತುಕೊಂಡಿದ್ದೇನೆ. ನಾನು ನೋಡುತ್ತಿದ್ದೇನೆ. ಯೋಚಿಸುತ್ತಿದ್ದೇನೆ. ಪ್ರೀತಿಸುತ್ತಿದ್ದೇನೆ. ಪಥಿಕರಿಗೆ ಹೇಳುತ್ತಿದ್ದೇನೆ: "ನಿಮ್ಮ ಈ ಯಾತ್ರೆ ಮಂಗಲದಾಯಕವಾಗಲಿ; ನಾನು ಪ್ರೇಮವನ್ನು ನಿಮ್ಮ ದಾರಿ ವೆಚ್ಚಕ್ಕೆಂದು ಕೊಡುತ್ತಿರುವೆನು." ಏಕೆಂದರೆ ಪಥದಲ್ಲಿ ಸಾಗುತ್ತಿರುವಾಗ ಯಾವ ವಸ್ತುವಿನ ಅವಶ್ಯಕತೆಯೂ ಇರುವುದಿಲ್ಲ, ಕೇವಲ ಪ್ರೇಮದ ಅವಶ್ಯಕತೆ ಮಾತ್ರವಿರುತ್ತದೆ. ಎಲ್ಲರೂ ಅದೇ ಪ್ರೇಮವನ್ನು ಎಲ್ಲರಿಗೂ ಕೊಡಲಿ. ಒಬ್ಬ ಪಥಿಕನು ಮತ್ತೊಬ್ಬ ಪಥಿಕನಿಗೆ ಯಾವ ತೊಂದರೆಯೂ ಬಾರದಂತೆ ಸಾಗಲು ಸಹಾಯ ಮಾಡಲಿ. *

ಈಚೆಗೆ ನಾವು ವೈದ್ಯಶಾಸ್ತ್ರದಲ್ಲಿ ಮಹಾ ಪ್ರಗತಿ ಹೊಂದಿದ್ದೇವೆ. . . . ಹಿಂದೆ ಬರಿ ತುರಿಕೆಯೆಂದು ಕರೆಯುತ್ತಿದ್ದುದನ್ನು ಈಗ ಅಲರ್ಜಿ ಎನ್ನುತ್ತಿದ್ದೇವೆ.

ಕಾಲು ಶತಕದ ಶ್ರಮದಿಂದ ಅವರು
ಕನ್ನಡಕ್ಕೆ ಅಸಮಾನ ಸೇವೆ ಮಾಡಿದರು

ಕನ್ನಡಕ್ಕೆ ಶಬ್ದಕೋಶವಿತ್ತ ಜರ್ಮನ್

ಟ. ಎಸ್. ಸಾವನಗೌಡರು

ಕಿಟ್ಟೆಲ್ಲರ ಕನ್ನಡ-ಇಂಗ್ಲಿಷ್ ನಿಘಂಟು ೧೮೯೪ರಲ್ಲಿ ಪ್ರಕಟವಾಯಿತು. ಈ ಮಾತಿಗೆ ೭೦ ವರ್ಷವಾಗುತ್ತ ಬಂದಿದೆ. ಆದರೆ ಅದನ್ನು ಮೀರಿಸುವುದಂತಿರಲಿ, ಅದರ ಹೆಗಲೆತ್ತರಕ್ಕೆ ನಿಲ್ಲಬಲ್ಲ ಬೇರೊಂದು ಕನ್ನಡ ಶಬ್ದಕೋಶವನ್ನು ನಾವಿನ್ನೂ ಕಂಡಿಲ್ಲ. ಕಿಟ್ಟೆಲ್ಲರ ಕಣ್ತಪ್ಪಿ ಉಳಿದ ಮತ್ತು ಈ ಮುಕ್ಕಾಲು ಶತಮಾನದ ಅವಧಿಯ ತೀವ್ರ ಚಟುವಟಿಕೆಯ ದಾರಿಯಲ್ಲಿ ಭಾಷೆ ಹೊಸದಾಗಿ ಅರಗಿಸಿಕೊಂಡ ಸಾವಿರಾರು ಶಬ್ದಗಳು ಕೋಶಪ್ರವೇಶವಿಲ್ಲದೆ ತ್ರಿಶಂಕುವಾಗಿಯೆ ಉಳಿದಿವೆ.

ಈ ಒಂದು ಸಂಗತಿಯಿಂದಲೇ ರೆವರೆಂಡ್ ಕಿಟ್ಟೆಲ್ಲರು ಎಷ್ಟು ಕಷ್ಟಸಾಧ್ಯವಾದ ಮಹಾ ಕಾರ್ಯವನ್ನು ಕನ್ನಡಿಗರಿಗಾಗಿ ಮಾಡಿದರೆಂಬುದನ್ನು ನಾವು ಊಹಿಸಬಹುದು. ಜರ್ಮನಿಯಲ್ಲಿ ಹುಟ್ಟಿ ಬೆಳೆದ ಒಬ್ಬ ಕ್ರೈಸ್ತ ಮಿಶನರಿ ಪರದೇಶದಲ್ಲಿ, ದುಸ್ಸಹವಾದ ಹವೆಯಲ್ಲಿ, ಪರಭಾಷೆಯೊಂದರಲ್ಲಿ ಪರಿಣತಿ ಪಡೆದು, ಇಂಥ "ಮೇರುಕೃತಿ"ಯೊಂದನ್ನು ಸಂಗ್ರಹಿಸಿ ಪ್ರಕಟಿಸಿದನೆಂಬುದು ಅದಕ್ಕೆ ಇನ್ನೂ ಹೆಚ್ಚಿನ ಮಹತ್ವವನ್ನು ತರುತ್ತದೆ.

ಕಿಟ್ಟೆಲ್ಲರು ಪಾದ್ರಿಯಾಗಿ ಕರ್ನಾಟಕಕ್ಕೆ ಬಂದಾಗ ಕನ್ನಡ ಜನ ಕನ್ನಡವನ್ನು ಮರೆತಿದ್ದಿಲ್ಲವಾದರೂ ತಮ್ಮ ಭಾಷೆಯ 'ಲೆಕ್ಕಪತ್ರ'ವನ್ನು ಮಾತ್ರ ಬರೆದಿಟ್ಟಿರಲಿಲ್ಲ. ಸಂಸ್ಕೃತ ಅಮರಕೋಶದ ಮಾದರಿಯಲ್ಲಿ ಕೆಲ ನಿಘಂಟುಗಳಿದ್ದರೂ ಅವು ತೀರ ಅಪೂರ್ಣ ಅಪರ್ಯಾಪ್ತವಾಗಿದ್ದವು. ಕನ್ನಡಿಗರ ಭಾಷಾಸಂಪತ್ತಿನ ಲೆಕ್ಕಪತ್ರವನ್ನು ಕಲೆಹಾಕಿ ಜೋಡಿಸುವ ಕೆಲಸ ಈ ನಾಡಿನಲ್ಲಿ ಧರ್ಮಪ್ರಸಾರಕ್ಕಾಗಿ ಬಂದ ಈ ಮಿಶನರಿಯ ಕೊರಳಿಗೆ ಬಿತ್ತು. ಅವರು ಅದಕ್ಕಾಗಿ ಮೂವತ್ತು ವರ್ಷ ದುಡಿದು ಅದನ್ನು 'ಟ್ಯೂಟಾನಿಕ್ ಚೊಕ್ಕಟತನ'ದಿಂದ ಪೂರೈಸಿದರು. ಅದಕ್ಕಾಗಿ ಅವರು ಹಳೆಗನ್ನಡ ಕಲಿತರು. ಸಂಸ್ಕೃತವನ್ನು ಅರಗಿಸಿಕೊಂಡರು, ನಡೆಗನ್ನಡದ ಹೆಜ್ಜೆಯನ್ನು ಗುರುತಿಸಲು ಊರೂರು ಸುತ್ತಿದರು.

ಫರ್ಡಿನಂಡ್ ಕಿಟ್ಟೆಲ್ಲರು ೧೮೩೨ ಎಪ್ರಿಲ್ ೭ ರಂದು ಜರ್ಮನಿಯ ಫ್ರೀಲಂಡ್ ಪ್ರಾಂತದ ರೋಸ್ಟರ್‌ಹ್ಯಾಫ್‌ನಲ್ಲಿ ಹುಟ್ಟಿದರು. ಅವರು ಆರು ಜನ ಮಕ್ಕಳಲ್ಲಿ ಹಿರಿಯರು. ಆನ್‌ರಿಕ್‌ನಲ್ಲಿ ಅಜ್ಜನ ಮನೆಯಲ್ಲಿದ್ದು ಹೈಸ್ಕೂಲು ಕಲಿತು ಮುಗಿಸಿದೊಡನೆ ಅವರು ಮಿಶನರಿ (ಧರ್ಮಪ್ರಚಾರಕ) ಯಾಗುವ ಕನ್ನಡಿಗರ ಪಾಲಿಗೆ ಸುದೈವದ್ದೆನಿಸಿದ-ನಿರ್ಣಯ ಮಾಡಿದರು. ಸ್ವತಃ ತಮ್ಮೂರಿನ ಪಾಸ್ತರರೂ ಮಿಶನ್ ಸಮಿತಿಯ ಸದಸ್ಯರೂ ಆಗಿದ್ದ ಅವರ ತಂದೆ ಸಂತೋಷದಿಂದಲೇ ಒಪ್ಪಿದರು. ಬಾಸೆಲ್‌ನಲ್ಲಿರುವ ಮಿಶನ್ ಕಾಲೇಜಿನಲ್ಲಿ ಮೂರುವರೆ ವರ್ಷ ಅಭ್ಯಾಸ ಪೂರೈಸಿ ತಮ್ಮ


೨೨ ನೇ ವಯಸ್ಸಿನಲ್ಲಿ ಕನ್ನಡನಾಡಿಗೆ ಮತ ಪ್ರಸಾರಕ್ಕಾಗಿ ಬಂದರು. ಆನುಷಂಗಿಕವಾಗಿ, ಕಿಟ್ಟೆಲ್ ಕುಟುಂಬದಲ್ಲಿ ಭಾರತಕ್ಕೆ ಬಂದವರು ಫರ್ಡಿನಂಡರೊಬ್ಬರೇ ಅಲ್ಲ; ಅವರ ತಮ್ಮಂದಿರಲ್ಲೊಬ್ಬರು ಕೆಲಕಾಲ ತಲಚೇರಿಯಲ್ಲಿ ಮಿಶನರಿಯಾಗಿ ಕೆಲಸ ಮಾಡಿದರು.

ಕಿಟ್ಟೆಲ್ಲರ ಪ್ರಾರಂಭಿಕ ಮಿಶನರಿ ಜೀವನ ಮಡಿಕೇರಿ, ಮಂಗಳೂರುಗಳಲ್ಲಿ ಕಳೆಯಿತು. ಅಲ್ಲೇ ಅವರ ಕನ್ನಡ ಭಾಷಾಪ್ರವೇಶವೂ ಆಯಿತು. ಅವರು ಅದನ್ನು ಉತ್ಸಾಹದಿಂದಲೇ ಕಲಿತರು. ೧೧೦ ಲಕ್ಷ ಜನ ಸಂಖ್ಯೆಯಿದ್ದ ಈ ವಿಸ್ತಾರವಾದ ಕನ್ನಡ ನಾಡಿನಲ್ಲಿ ಪಸರಿಸಿದ ಮಿಶನ್ನಿನ ಶಾಲೆಗಳಿಗಾಗಿ ಕನ್ನಡ ಪಠ್ಯ ಪುಸ್ತಕಗಳು ಬೇಕಾಗಿದ್ದವು, ಕ್ರೈಸ್ತ ಮತಗಳಿಗೆ ಶುದ್ಧ ಕನ್ನಡದಲ್ಲಿ ಬೈಬಲ್ಲಿನ ಅನುವಾದ ಬೇಕಾಗಿತ್ತು, ಮತಪ್ರಸಾರಕ್ಕಾಗಿ ಚೆನ್ನಾಗಿ ಬರೆಯಲ್ಪಟ್ಟ ಪುಸ್ತಕ ಪುಸ್ತಿಕೆಗಳು ಬೇಕಾಗಿದ್ದವು. ಆದರೆ ಭವ್ಯವಾದ ಹಳೆಗನ್ನಡ ಸಾಹಿತ್ಯವಿದ್ದರೂ ಪ್ರಚಲಿತ ಗದ್ಯದಲ್ಲಿ ಬರವಣಿಗೆ ಬೆಳೆದುಬಂದಿರಲಿಲ್ಲ. ಭಾಷಾಭ್ಯಾಸದಲ್ಲಿ ಅಪರಿಮಿತ ಹುಮ್ಮಸವುಳ್ಳ ಕಿಟ್ಟೆಲ್ಲರೇ ಈ ಕೊರತೆ ನೀಗಿಸಲು ಯೋಗ್ಯರೆಂದು ಮಿಶನ್ನಿನ ಅಧಿಕಾರಿಗಳು ತೀರ್ಮಾನಿಸಿದರು.

ಮಿಶನ್ ಕಾರ್ಯಕ್ಕಾಗಿ ರೆವರೆಂಡ್ ಕಿಟ್ಟೆಲ್ಲರು ಮಂಗಳೂರು, ಮಡಿಕೇರಿ, ನೀಲಗಿರಿ ಮತ್ತು ಧಾರವಾಡಗಳಲ್ಲಿ ಸರತಿಯ ಮೇಲೆ ತಿರುಗಾಡಬೇಕಾಗುತ್ತಿತ್ತು. ಇಲ್ಲಿನ ಹವೆ ಅವರಿಗೆ (ಮಡಿಕೇರಿಯೊಂದನ್ನು ಬಿಟ್ಟು) ಸರಿ ಹೋಗುತ್ತಿರಲಿಲ್ಲ. ಅವರ ಆರೋಗ್ಯ ಕೆಡುತ್ತ ಹೋಗುತ್ತಿತ್ತು. ಮೇಲೆ ವೈಯಕ್ತಿಕ ದುರಂತವೊಂದರಗಿತು. ೧೮೬೦ ರಲ್ಲಿ ಅವರು ಮದುವೆಯಾಗಿದ್ದ ಪಾಲೀನ್ ಐತ್ ಎಂಬ ಅನುಕೂಲೆಯಾದ ಮಡದಿ ನಾಲ್ಕೇ ವರ್ಷದ ದಾಂಪತ್ಯದ ನಂತರ ಎರಡು ಗಂಡು ಮಕ್ಕಳನ್ನು ಬಿಟ್ಟು ತೀರಿಕೊಂಡರು. ಇವೆಲ್ಲವುಗಳ ನಡುವೆ ಕಿಟ್ಟೆಲ್ಲರು ಅವಿರತವಾಗಿ ತಮ್ಮ ಕನ್ನಡಾಭ್ಯಾಸವನ್ನು ಮುಂದುವರಿಸುತ್ತಲೇ ಇದ್ದರು.

೧೮೬೬ರಲ್ಲಿ ಕಿಟ್ಟೆಲ್ಲರು ಮಕ್ಕಳೊಡನೆ ಜರ್ಮನಿಗೆ ಮರಳಿ ಆರೋಗ್ಯವನ್ನು ಸುಧಾರಿಸಿಕೊಂಡರು. ಮರಳುವಾಗ ಅವರು ತಮ್ಮ ಮೊದಲನೇ ಹೆಂಡತಿಯ ತಂಗಿ ಜೂಲಿಯನ್ನು ವಿವಾಹವಾಗಿದ್ದರು. ೧೮೬೭ ರಲ್ಲಿ ಅವರು ಭಾರತಕ್ಕೆ ಮರಳುವಾಗಲೆ ಅವರ ಕನ್ನಡ ಭಾಷಾ ಪಾಂಡಿತ್ಯದ ಕೀರ್ತಿ ಬ್ರಿಟಿಶ್ ಸರಕಾರದ ಉಚ್ಚ ವರ್ಗಗಳ ಕಿವಿಯ ವರೆಗೂ ಮುಟ್ಟಿತ್ತು. ಅವರು ಕನ್ನಡಕ್ಕೊಂದು ಆಧುನಿಕ ನಿಘಂಟನ್ನು ರಚಿಸಲು ಕಿಟ್ಟೆಲ್ಲರನ್ನು ಕೇಳಿಕೊಂಡರು. ಕಿಟ್ಟೆರು ಕನ್ನಡದ ಪ್ರಪ್ರಥಮ ನಿಘಂಟುಕಾರರಲ್ಲವೆಂಬುದು ನಿಜ. ರೆವರೆಂಡ್ ರೀವ್ಸ್ ಎಂಬವರು ೧೮೩೨ ರಲ್ಲೇ ಒಂದು ಕನ್ನಡ - ಇಂಗ್ಲಿಷ್ ಶಬ್ದಕೋಶ ಪ್ರಕಟಿಸಿದ್ದರು. ಆದರೆ ಅದು ಪರಿಪೂರ್ಣತೆಗಿಂತ ಬಹುದೂರವಾಗಿತ್ತು. ಅಧಿಕಾರಿಗಳು ಕಿಟ್ಟೆಲ್ಲರನ್ನು ಆರಿಸಿದ್ದರಲ್ಲಿ ವಿಶೇಷವೇನೂ ಇಲ್ಲ. ಅವರು ಆಗಲೇ ಕನ್ನಡದ ಕಾವ್ಯಪ್ರಪಂಚದಲ್ಲಿ ಎಷ್ಟು ಆಳವಾಗಿ ಅವಗಾಹಿಸಿದ್ದರೆಂದರೆ ಯಾವ ಶಬ್ದ ಯಾವ ಗ್ರಂಥದ ಯಾವ ಸ್ಥಳದಲ್ಲಿ ಬರುತ್ತದೆಂದು ಅವರು ನೆನಪಿನಿಂದಲೇ ಹೇಳಬಲ್ಲವರಾಗಿದ್ದರು.

ಅವರ ಮಿಶನ್ ಮಿತ್ರರಾದ ಡಾ. ಮೋಗ್ಲಿಂಗ್ ಮತ್ತು ಭಾಷಾಶಾಸ್ತ್ರಿಗಳಾದ ಡಾ. ಬರ್ನೆಲ್ಲರ ಪ್ರೋತ್ಸಾಹನೆಯಿಂದ ಅವರು ಕನ್ನಡ ಕೋಶ ನಿರ್ಮಾಣದ ವೀಳ್ಯವೆತ್ತಿದರು. ಪ್ರಾರಂಭದಲ್ಲಿ ಮಿಶನ್ ಕೆಲಸದ ಜೊತೆಗೇ ಈ ಭಾರವನ್ನೂ ವಹಿಸಿಯೇನೆಂಬ ಧೈರ್ಯ ಅವರಿಗಿತ್ತು. ಆದರೆ ಹವೆಯ ಅಸಹ್ಯತೆ ಮತ್ತು ಕೈಬರಹದ ಪ್ರತಿಗಳಲ್ಲಿ ದೀರ್ಘ ಕಾಲ ಮಗ್ನರಾಗಿರುವುದರಿಂದ ಅವರ ತಲೆ ದಿಮ್ಮೆಂದು ತಿರುಗತೊಡಗುತ್ತಿದ್ದುದರಿಂದ ಎರಡೂ ಕೆಲಸ ಏಕಕಾಲದಲ್ಲಿ ನೀಗಲಾರ


A
KANNADA-ENGLISH
DICTIONARY
BY
F. KITTEL
E.M
ORE

ದೆಂದು ಬೇಗನೆ ಸ್ಪಷ್ಟವಾಯಿತು. ಬ್ರಿಟಿಶ ಸರಕಾರದ ಧನಸಹಾಯವಿದ್ದುದರಿಂದ ಈಗ ಅವರಿಗೆ ಕೋಶದ ಕಾರ್ಯದಲ್ಲೇ ಮಗ್ನರಾಗಲು ಸಾಧ್ಯವಾಯಿತು.

ತಮ್ಮ ಕೋಶವನ್ನು ಪರಿಪೂರ್ಣವಾಗಿ ಮಾಡುವ ಧ್ಯೇಯ ಸಾಧನೆಯಲ್ಲಿ ಕಿಟ್ಟೆಲ್ಲರು ಯಾವ ಯತ್ನವನ್ನೂ ಮಾಡದೆ ಉಳಿಸಿರಲಿಲ್ಲ. ಅನೇಕ ಸಹಾಯಕರನ್ನು ನೇಮಿಸಿಕೊಂಡು ಪ್ರಾಚೀನ ಗ್ರಂಥಗಳಿಂದ ಶಬ್ದಗಳನ್ನು ಶೇಖರಿಸಿದರು ; ನೆರೆ ಭಾಷೆಗಳಾದ ತೆಲುಗು ತಮಿಳು ಮಲಯಾಳಿಗಳ ನಿಘಂಟುಗಳಿಂದ ಸಂವಾದಿ ಶಬ್ದಗಳನ್ನು ಕಲೆ ಹಾಕಿದರು; ಉಪಲಬ್ಧ ಸಂಸ್ಕೃತ ಕನ್ನಡ ಕೋಶಗಳಿಂದ ಅರ್ಥ ವೈವಿಧ್ಯಗಳನ್ನು ಗುರುತಿಸಿಕೊಂಡರು; ಕೃಷಿ ವಾಣಿಜ್ಯ ಯಂತ್ರಾದಿ ಕರ್ಮಗಳಲ್ಲಿ ನಿರತರಾದವರನ್ನು ಕರೆಸಿಕೊಂಡು ಆಯಾ ವ್ಯವಸಾಯಗಳಿಗೆ ಸಂಬಂಧಿಸಿದ ಶಬ್ದಗಳನ್ನು ಕೇಳಿ ತಿಳಿದುಕೊಂಡರು ; ಗಾದೆ ಮಾತುಗಳನ್ನು ಸಂಗ್ರಹಿಸಿದರು. ತಮ್ಮ ದೇಶದಲ್ಲಿ ಪ್ರಚಲಿತವಿದ್ದ ಹಲವು ಪದಾರ್ಥಗಳನ್ನು ಸದಾ ಜೇಬಿನಲ್ಲಿಟ್ಟುಕೊಂಡು ಎದುರಿಗೆ ಸಿಕ್ಕಿದ ಕನ್ನಡಿಗ ಮಿತ್ರರಿಂದ (ಅವರ ಸಂಖ್ಯೆ ವಿಪುಲವಾಗಿತ್ತು) ಅವುಗಳ ಕನ್ನಡ ಹೆಸರುಗಳನ್ನು ಕೇಳಿ ಬರೆದುಕೊಳ್ಳುತ್ತಿದ್ದರು. ಸಂತೆಯ ದಿನಗಳಲ್ಲಿ ಹುಬ್ಬಳ್ಳಿ ಧಾರವಾಡ ಮೊದಲಾದ ಶಹರುಗಳಿಗೆ ಬಂದ ಹಳ್ಳಿಗರೊಡನೆ ಸ್ನೇಹ ಬೆಳೆಸಿ ಅವರ ಮಾತುಗಳನ್ನಾಲಿಸಿ ಪ್ರಚಲಿತ ಕನ್ನಡ ಶಬ್ದಗಳನ್ನೂ ಪಡೆಮಾತುಗಳನ್ನೂ ಹೆಕ್ಕಿಕೊಳ್ಳುತ್ತಿದ್ದರು. ಹುಬ್ಬಳ್ಳಿಯಲ್ಲಿ ಕೆಲ ಕಾಲವಿದ್ದು ಶ್ರೀ ವಸ್ತ್ರದ ಶಿವಲಿಂಗಪ್ಪನವರಿಂದ ಅನೇಕ ಹೊಸ ಶಬ್ದಗಳನ್ನು ಕಿಟ್ಟೆಲ್ಲರು ಸಂಗ್ರಹಿಸಿದರು.

ಇಲ್ಲಿನ ಅಪ್ರತಿಹತ ಪರಿಶ್ರಮದಿಂದ ಸೋತವರಾಗಿ ನಡುನಡುವೆ ಅವರು ಜರ್ಮನಿಗೆ ಮರಳಬೇಕಾಗುತ್ತಿತ್ತು. ೧೮೭೭ ರಿಂದ ೧೮೮೩ರ ವರೆಗೆ ಎಸ್ಲಿಂಗೆನ್ನಿನಲ್ಲಿ ವಾಸ ಮಾಡಿ ಅಲ್ಲಿನ ತಂಪು ಹವೆಯಲ್ಲಿ ಒಮ್ಮೆ ಸಂಗ್ರಹವಾದುದನ್ನೆಲ್ಲ ನೇರ್ಪಡಿಸಿಕೊಂಡರು. ೧೮೮೩ ರಲ್ಲಿ ಭಾರತಕ್ಕೆ ಹಿಂದಿರುಗಿ ಧಾರವಾಡದಲ್ಲಿ ನೆಲಸಿದರು. ಆದರೆ ಅಲ್ಲಿನ ಹವೆಗೆ ರಾತ್ರಿ ನಿದ್ರೆಯೆ ಹತ್ತದ್ದರಿಂದ ಮಡಿಕೇರಿಗೆ ವರ್ಗಾಯಿಸಬೇಕಾಯಿತು.

ಭಾರತೀಯ ವಿದ್ವಾಂಸರೊಡನೆ ಚರ್ಚೆ, ವಿಚಾರ ವಿನಿಮಯಗಳ ನಂತರ ತಿದ್ದುಪಡಿ ಹೊಂದಿದ ಕೈಬರಹದ ಪ್ರತಿ ೧೮೯೨ ರಲ್ಲಿ ಅಣಿಯಾಯಿತು. ೨೦,೦೦೦ ಶಬ್ದಗಳನ್ನೊಳಗೊಂಡ ಪ್ರಕಾಂಡ ಹೊತ್ತಗೆಯಾಗಿತ್ತದು. ಅವರು ಈ ಉದ್ಯಮ ಕೈಕೊಂಡು ೨೫ ವರ್ಷವಾಗಿತ್ತು. ಅನಂತರ ಅವರು ದಕ್ಷಿಣ ಜರ್ಮನಿಯ ವಿಶ್ವವಿದ್ಯಾಲಯ ನಗರವಾದ ತುಬಿಂಜೆನ್‌ನಲ್ಲಿ ನೆಲಸಿ ನಿಘಂಟುವಿನ ಮುದ್ರಣದ ಮೇಲ್ವಿಚಾರಣೆ ನಡೆಸಿದರು. ೧೮೯೪ ರಲ್ಲಿ ಮುದ್ರಣ ಕಾರ್ಯ ಮುಗಿಯಿತು. ತುಬಿಂಜೆನ್ ವಿಶ್ವವಿದ್ಯಾಲಯವು ಈ ಮಹಾ ಕಾರ್ಯಕ್ಕಾಗಿ ಅವರಿಗೆ ಡಾಕ್ಟರ್ ಪದವಿಯನ್ನು ದಯಪಾಲಿಸಿತು.

ರೆವರೆಂಡ್ ಕಿಟ್ಟೆಲ್ಲರ ಕನ್ನಡ ಸೇವೆ ಶಬ್ದಕೋಶಕ್ಕೆನೇ ಮಿತವಾಗಿಲ್ಲ. ಅವರು ಕೇಶಿರಾಜನ ಶಬ್ದಮಣಿದರ್ಪಣವನ್ನು ಶುದ್ಧವಾಗಿ ಸಂಪಾದಿಸಿದರು. (ಅದರ ಸುಂದರ ಮುದ್ರಿತ ಪ್ರತಿ ೧೯೦೩ ರಲ್ಲಿ ಕಿಟ್ಟೆಲ್ಲರು ಮರಣಾಸನ್ನರಾಗಿದ್ದಾಗ ಅವರ ಕೈ ಸೇರಿತು.) ನಾಗವರ್ಮನ ಛಂದಸ್ಸನ್ನೂ ಅವರು ಪರಿಷ್ಕರಿಸಿ ಸಂಪಾದಿಸಿದರು. ನಿಘಂಟುವಿನ ಪಾಂಡಿತ್ಯಪೂರ್ಣ ಮುನ್ನುಡಿ ಭಾಷಾಶಾಸ್ತ್ರಿಗಳ ಕೈದೀವಿಗೆಯಾಗಿದೆ; ನಾಗವರ್ಮನ ಛಂದಸ್ಸಿನ ಮುನ್ನುಡಿ ಒಂದು ಸಾಹಿತ್ಯ ಚರಿತ್ರೆಯೇ ಆಗಿದೆ. ಸಾವಿರ ಕನ್ನಡ ಗಾದೆಗಳ ಸಂಗ್ರಹವೊಂದನ್ನೂ ಅವರು ಪ್ರಕಟಿಸಿದರು. ಜರ್ಮನ್ ಭಾಷೆಯಲ್ಲಿ "ಲಿಂಗ ಸಂಪ್ರದಾಯದ ಮೂಲ" ಮತ್ತು "ದ್ರಾವಿಡ ಅಕ್ಷರಮಾಲೆ" ಎಂಬ ಗ್ರಂಥಗಳನ್ನೂ ಅವರು ಬರೆದಿ

ದ್ದರೆಂದು ಅನೇಕರಿಗೆ ಗೊತ್ತಿರಲಿಕ್ಕಿಲ್ಲ. ಕನ್ನಡ ಬೈಬಲ್ಲಿನ ತಿದ್ದುಪಡಿಯನ್ನು ಅವರು ನಿರಂತರವಾಗಿ ನಡೆಸಿದ್ದರು.

ಕ್ರೈಸ್ತಧರ್ಮ ಪ್ರಚಾರಕ್ಕಾಗಿ ಅವರು ಬರೆದ ಚಿಕ್ಕ-ಪುಟ್ಟ ಪುಸ್ತಕಗಳಿಗೆ ಲೆಕ್ಕವಿಲ್ಲ. ಎಲ್ಲಕ್ಕಿಂತ ಹೆಚ್ಚಾಗಿ ಭಾಮಿನಿ ಷಟ್ಪದಿಯಲ್ಲಿ ಅವರು ಬರೆದ ಕ್ರಿಸ್ತ ಚರಿತ್ರೆಯು ಕಿಟ್ಟೆಲ್ಲರು ಕವಿತಾಶಕ್ತಿ ಸಂಪನ್ನರೂ ಆಗಿದ್ದರೆಂದು ತೋರಿಸುತ್ತದೆ. ಶಿಲುಬೆಗೇರಿಸುವ ಸನ್ನಿವೇಶದ ಒಂದು ಪದ್ಯವನ್ನು ಅದರಿಂದ ಇಲ್ಲಿ ಉದ್ಧರಿಸಬಹುದು :

ಒಯ್ದುರಾತನ ದಂಡಿನಾಳ್ಗಳು
ಹೊಯ್ದುರಾತನ ಬಾರುಹಗ್ಗದಿ
ಗೆಯ್ದುರಾತಗೆ ಹಾಸ್ಯ, ರಾಜನ ಸೋಗು ತೊಡಿಸುತಲಿ
ಕೊಯ್ದುರಾತನ ತಲೆಯ ಮುಳ್ಳಿಂ
ಬಯ್ದುರಾತಗೆ ರಾಜ ಎನುತಲಿ
ಕೈದುವೆನುತಲೆ ಕೊಟ್ಟ ಬೆತ್ತದಿ ಹೊಡೆದರಾತನಿಗೆ ॥

ಕನ್ನಡದಲ್ಲಿ ಜರ್ಮನ್ ಕವಿ? ಹೌದು, ಅದೇ ಈಗ ವಿಶೇಷ. *



ಪೂರ್ವಗ್ರಹ ಬಿಟ್ಟರೆ ....

ಪೂರ್ವ ಆಫ್ರಿಕದಲ್ಲಿ ಸಂಚರಿಸುತಿದ್ದ ಆಚಾರ್ಯ ಕಾಲೇಲಕರರನ್ನು ಒಂದು ಪತ್ರಿಕಾಪರಿಷತ್ತಿನಲ್ಲಿ ಕೆಲ ಆಫ್ರಿಕನ್ ಸುದ್ದಿಗಾರರು, “ನೀವು ಮಾಂಸಾಹಾರವನ್ನೇಕೆ ತೆಗೆದುಕೊಳ್ಳುವುದಿಲ್ಲ ? ” ಎಂದು ಕೇಳಿದರು.

“ಅದು ಅವರವರ ರುಚಿಗೆ ಸೇರಿದ ವಿಚಾರ,” ಎಂದು ಆಚಾರ್ಯರು ತಮ್ಮ ಸಹಜವಾದ ದಾಕ್ಷಿಣ್ಯವೃತ್ತಿಯಿಂದ ಉತ್ತರವಿತ್ತರು.

ಆದರೆ ಆಫ್ರಿಕನ್ ಸುದ್ದಿಗಾರರು ಅವರನ್ನು ಪೀಡಿಸಿ ಭಾರತದ ಅಹಿಂಸಾತತ್ವವನ್ನು ನಗೇಗೀಡು ಮಾಡುವ ಹಟ ತೊಟ್ಟಂತೆ ಕಾಣಿಸಿತು. ಮಾಂಸಾಹಾರದಲ್ಲಿ ಏನು ದೋಷ ? ಶರೀರಕ್ಕೆ ಬೇಕಾದ ಉತ್ತಮ ಆಹಾರ ಸತ್ವ ಅದರಲ್ಲಿಲ್ಲವೆ ? ಮಾಂಸಾಹಾರ ವರ್ಜಿಸುವುದು ಹೆಡ್ಡತನವಲ್ಲವೆ ? ಇತ್ಯಾದಿಯಾಗಿ ಪ್ರಶ್ನೆಗಳ ಸುರಿಮಳೆಯನ್ನೇ ಕರೆದರು.

ಆಗ ಕಾಲೇಲಕರರು ಹೀಗೆ ನುಡಿದು ಪೃಚ್ಛಕರ ಬಾಯಿ ಮುಚ್ಚಿಸಿದರು: “ಒಳ್ಳೇದು, ಇಲ್ಲಿ ನೋಡಿ. ಇಲ್ಲಿ ಸೇರಿದ ನಿಮ್ಮಲ್ಲಿ ಒಬ್ಬಬ್ಬರ ಪೂರ್ವಜರಾದರೂ ನರಭಕ್ಷಕರಾಗಿದ್ದಿರಬೇಕು. ಪೂರ್ವಗ್ರಹವನ್ನು ಬದಿಗಿರಿಸಿದರೆ ಮನುಷ್ಯ ಮಾಂಸವು ಮತ್ತಾವ ಮಾಂಸದಷ್ಟೇ ಉತ್ತಮ ಪ್ರೋಟೀನುಯುಕ್ತವಾಗಿದೆ. ಹೀಗಿರುವಾಗ ಅವರ ವಂಶದವರಾದ ನೀವು ನರಮಾಂಸವನ್ನು ವರ್ಜಿಸುವುದು ಹೆಡ್ಡತನವಲ್ಲವೆ ? ”

ಅದು ಮುಸ್ಸಂಜೆಯಲ್ಲಿ ಹುಟ್ಟಿ
ಮುಂಜಾವಿನೊಳಗೆ ಸಾಯುತ್ತದೆ

ಮೇಫ್ಲೈ: ಒಂದು ದಿನದ ಬೆಡಗು

ಮುರಲೀಧರ

ನಿಸರ್ಗದ ಅರ್ಥಶಾಸ್ತ್ರವನ್ನು ಕುರಿತು ಚಿಂತಿಸುತ್ತ ಕೆಲವೊಂದು ಹೂಗಳನ್ನು ಅದು ಏಕೆ ಸೃಷ್ಟಿಸಿರಬಹುದೆಂದು ನಾವು ಸೋಜಿಗಪಡುತ್ತೇವೆ. ಗುಲಾಬಿ, ಮಲ್ಲಿಗೆ......ನೋಡಲು ಎಷ್ಟು ಚೆನ್ನು! ಆದರೆ ಅವು ಬೀಜಗಳನ್ನಾಗಲಿ ಹಣ್ಣನ್ನಾಗಲಿ ಕೊಡುವುದಿಲ್ಲ. ನಿಸರ್ಗ ಅವುಗಳನ್ನು ಯಾವುದಕ್ಕಾಗಿ ನಿರ್ಮಿಸಿರಬಹುದು? ಅದು ಕೇವಲ ಸೌಂದರ್ಯಕ್ಕಾಗಿ ಸೌಂದರ್ಯವನ್ನು ಸೃಷ್ಟಿಸುವುದಕ್ಕೆ ಹೆಸರಾಗಿಲ್ಲ ತಾನೆ?

ಆದರೆ ಪ್ರಾಣಿಜಗತ್ತಿನ ಇನ್ನೊಂದು ಸೃಷ್ಟಿಯನ್ನು ನೋಡಿದರೆ ನಾವು ಇನ್ನಷ್ಟು ಅಪ್ರತಿಭ ಆಶ್ಚರ್ಯಕ್ಕೊಳಗಾಗುತ್ತೇವೆ. ಎಫಿಮೆರಾ ಅಥವಾ ಮೇಫ್ಲೈ ಎಂದು ಹೆಸರಾದ ಆ ಪಾತರಗಿತ್ತಿಯನ್ನು ಉಂಟುಮಾಡುವಲ್ಲಿ ಯಾವ ಉದ್ದೇಶವನ್ನು ನಿಸರ್ಗ ಇಟ್ಟುಕೊಂಡಿದ್ದೀತು? ಅದರ ಜೀವನ ನಂಬಲಾರದಷ್ಟು ವಿಚಿತ್ರವಾಗಿದೆ. ಬೇಸಗೆಯ ಪ್ರಾರಂಭದಲ್ಲೊಂದು ದಿನ ಸಂಜೆ ಅವು ಸರೋವರ ಅಥವಾ ನದಿಯಿಂದ ಮೇಲೆದ್ದು ಗಗನಕ್ಕೆ ಹಾರುತ್ತವೆ. ಮುಸ್ಸಂಜೆಯ ಮಂದ ಪ್ರಕಾಶದಲ್ಲಿ ಬಾನಲ್ಲಿ ಹಾರುವ ಇಳಿಯುವ ಅಪೂರ್ವ ನರ್ತನಗಳನ್ನು ಪ್ರದರ್ಶಿಸುತ್ತವೆ. ಆ ಮೇಲೆ ಸಾಯುತ್ತವೆ. ಮರುದಿನದ ಸೂರ್ಯೋದಯವನ್ನು ಕೂಡ ಅವು ಕಾಣುವುದಿಲ್ಲ. ಒಂದಿರುಳಿನ ಈ ಬಾಳುವೆಗಾಗಿಯೆ ಅವುಗಳಿಗೆ "ಎಫಿಮೆರಾ" (ಒಂದು ದಿನದ ಕೂಸು) ಎಂದು ಹೆಸರು.

ಜಗತ್ತಿನಲ್ಲಿ ಸುಮಾರು ೪೭೦ ಜಾತಿಯ ಎಫಿಮೆರಾಗಳಿವೆ. ಸಿಹಿನೀರಿನ ಆಶಯಗಳು ಅವುಗಳ ಜನ್ಮಸ್ಥಾನ. ನದೀ ಸರೋವರಗಳ ತಳದ ಕೆಸರಿನಲ್ಲಿ ಹುಳಗಳಂತೆ ಹರಿದಾಡುತ್ತ ಇರುವ ಅವು ತಮ್ಮ ಜೀವನದ ಚರಮ ದಿನದಂದು ಮೆಲ್ಲಗೆ ನೀರ ಮೇಲ್ಭಾಗಕ್ಕೆ ಏರಿ ಬರುತ್ತವೆ. ಆಗ ಒಮ್ಮೆಲೇ ಅವುಗಳಿಗೆ ರೆಕ್ಕೆಯೊಡೆಯುತ್ತದೆ- ಅವು ದಿಮ್ಮೆಂದು ಹಾರುತ್ತವೆ. ಮಬ್ಬುಗತ್ತಲಲ್ಲಿ ಪ್ರತಿಯೊಂದೂ ತನ್ನ ಜೋಡಿಯನ್ನು ಕಂಡುಕೊಳ್ಳುತ್ತದೆ. ಎರಡೂ ಸೇರಿ ಹಾರಾಟ ಕೈಕೊಳ್ಳುತ್ತವೆ. ಕೆಲ ತಾಸುಗಳ ಡೊಂಬರ ಕುಣಿತದ ನಂತರ ಅವು ಸಂಯೋಗ ಮಾಡುತ್ತವೆ. ಅದೇ ಮುಕ್ತಾಯ. ಗಂಡು ತತ್ಕ್ಷಣ ನಿರ್ವಿಣ್ಣವಾಗಿ ಒದ್ದಾಡುತ್ತ ಕೆಳಗೆ ಉದುರುತ್ತದೆ. ಹೆಣ್ಣು ಯಾವುದೋ ಜಲಾಶಯದಲ್ಲಿ ತತ್ತಿಗಳನ್ನು ಉದುರಿಸಿ ತಾನೂ ನೀರಿಗೆ ಬೀಳುತ್ತದೆ; ಇಲ್ಲವೆ ನೀರಲ್ಲಿ ಮುಳುಗಿ ಅಲ್ಲಿ ತತ್ತಿಗಳನ್ನು ಚೆಲ್ಲುತ್ತದೆ. ಹೇಗಿದ್ದರೂ ಅದು ಮತ್ತೆ ಮೇಲೇಳುವುದಿಲ್ಲ. ಮೀನುಗಳು ಅದನ್ನು ನುಂಗಿಬಿಡುತ್ತವೆ.

ಎಫಿಮೆರಾಗಳು ಗಗನಗಾಮಿಗಳಾಗುವಾಗ ಲಕ್ಷಗಟ್ಟಲೆಯಲ್ಲಿ ಆಗಬಹುದು. ಇಟಲಿ, ದಕ್ಷಿಣ ಫ್ರಾನ್ಸ್ ಮೊದಲಾದೆಡೆ ಅವು ಮುಸ್ಸಂಜೆಯಲ್ಲಿ ಮೋಡಗಳಂತೆ ಗಗನವನ್ನು ಕವಿಯುವುದುಂಟು. ದೀಪದ ಬುರುಡೆಗಳ ಸುತ್ತ ತಿತ್ತಿರಿತಿರುಗಿ ಕತ್ತಲುಂಟುಮಾಡುವುದುಂಟು. ಅವುಗಳ ಆಟ ಮುಗಿದಾಗ ಅದು ಮೀನುಗಳಿಗೆ ಹಬ್ಬದ ದಿನ.

ಈ ಒಪ್ಪೊತ್ತಿನ ಜೀವನ ಉತ್ಥಾನ ಶೃಂಗಾರವೊಂದಕ್ಕೇ ಮೀಸಲಾಗಿರುತ್ತದೆ. ಜೀವನದ ಈ ಅಂತಿಮ ದಿನದಂದು ಎಫಿಮೆರಾಗಳು ಏನನ್ನೂ

ತಿನ್ನುವುದಿಲ್ಲ— ಏಕೆಂದರೆ ಅವುಗಳಿಗೆ ಬಾಯಿಯೆ ಇರುವುದಿಲ್ಲ. ಶರೀರದಲ್ಲಿ ಆಹಾರ ಸತ್ವದ ಶೇಖರಣೆಯೂ ಅವುಗಳಿಗಿರುವುದಿಲ್ಲೆಂದು ತೋರುತ್ತದೆ. ಆದ್ದರಿಂದ ಕಾಮೋನ್ಮಾದದಲ್ಲಿ ಜೊತೆಗೂಡಿದ ನಂತರ ಬರುವ ಆಯಾಸವನ್ನು ತಾಳಿಕೊಳ್ಳಲಾರದೆ ಅವು ಅವಸಾನವನ್ನು ಕಾಣುತ್ತವೆ.



ಎಫಿಮೆರಾದ ಈ ಒಂದಂಕದ ಜೀವನ ನಾಟಕದ ತಯಾರಿಕೆ ಮಾತ್ರ ಒಂದು, ಕೆಲ ವೇಳೆ ಎರಡು ವರ್ಷಗಳ ಹಿಂದೆಯೆ ಪ್ರಾರಂಭವಾಗಿರುತ್ತದೆ. ಅದೆಲ್ಲ ನದೀ-ಸರೋವರಗಳ ತಳದ ಕೆಸರಲ್ಲಿ ಸಾಗಿರುತ್ತದೆ. ಆಗ ಅವು ಕೇವಲ ಹುಳಗಳು— ಅಸಹ್ಯ ಹುಳಗಳು. ಉದ್ದನ್ನ ಮೈ, ಮೂರು ಭಾಗವಾದ ಬಾಲವುಳ್ಳ ಆರು ಕಾಲಿನ ಈ ಹುಳ ತನ್ನ ಮೈಯುದ್ದಕ್ಕೂ ಇರುವ ಮೀನಿನ ಕಿವಿರದಂಥ ಇಂದ್ರಿಯಗಳಿಂದ ನೀರಿನಲ್ಲಿರುವ ಪ್ರಾಣವಾಯುವನ್ನು ಉಸಿರಾಡಿಸುತ್ತಿರುತ್ತದೆ.

ಈ ಅವಸ್ಥೆಯಲ್ಲಿ ಎಫಿಮೆರಾಗಳನ್ನು ನೋಡಿದರೆ ಬಲು ಆಲಸಿ ಜೀವಿಗಳೆನಿಸಬಹುದು. ನೀರಲ್ಲಿ ಕ್ರಿಮಿ- ಅವಸ್ಥೆಯನ್ನು ಕಳೆಯುವ ಹಾರಾಡುವ ಕೀಟಗಳು ಎಫಿಮೆರಾಗಳು ಮಾತ್ರವಲ್ಲ. ಸೊಳ್ಳೆ, ಜೀರುಂಡೆ ಮೊದಲಾದವುಗಳೂ ರೆಕ್ಕೆ ಮೂಡುವ ಮೊದಲು ನೀರಲ್ಲೆ ಇರುತ್ತವೆ. ಆದರೆ ಅವುಗಳಿಗೆ ಗಾಳಿಯಿಲ್ಲದೆ ಬದುಕಲು ಬಾರದ್ದರಿಂದ ಆಗಾಗ್ಗೆ ಮೇಲಕ್ಕೆ ಬಂದುಉಸಿರು ತೆಗೆದುಕೊಳ್ಳಬೇಕಾಗುತ್ತದೆ. ಎಫಿಮೆರಾವೋ ನೀರಲ್ಲೇ ಉಸಿರಾಡಿಸಬಲ್ಲದಾದ್ದರಿಂದ ಅದಕ್ಕೆ ಚಟುವಟಿಕೆ ಅಗತ್ಯವಿಲ್ಲ. ಆಹಾರಕ್ಕಾಗಿಯೂ ಅದು ಓಡಾಡಬೇಕಾಗಿಲ್ಲ. ಅದು ಬಹುತರವಾಗಿ ಸಸ್ಯಾಹಾರಿಯಾದ್ದರಿಂದ ಕೆಸರಲ್ಲಿರುವ ಸಸ್ಯಗಳನ್ನೆ ಕಬಳಿಸಿ ಬಾಳುವುದು.

ಅದು ಸಮೀಚೀನವಾಗಿಯೆ ಕಬಳಿಸುತ್ತದೆ-ಮತ್ತು ವೇಗವಾಗಿಯೆ ಬೆಳೆಯುತ್ತದೆ. ಈ ಬೆಳವಣಿಗೆಗೆ ಅನುಕೂಲವಾಗುವಂತೆ ಅದು ಕೆಲವೊಮ್ಮೆ ಪ್ರತಿ ತಿಂಗಳಿಗೊಮ್ಮೆ ಪರೆ ಬಿಚ್ಚಬೇಕಾಗುತ್ತದೆ. ಕೆಲ ಜಾತಿಯ ಎಫಿಮೆರಾಗಳು ತಮ್ಮ ಜಲಚರ ಜೀವನದಲ್ಲಿ ಇಪ್ಪತ್ತಕ್ಕಿಂತಲೂ ಹೆಚ್ಚು ಸಲ ಪರೆ ಕಳಚಿ ಹಾಕುವುದುಂಟು.

ಅನಂತರ ಒಂದು ದಿನ ಸಹಸಾ ಅದು ತನ್ನ ಆಲಸ್ಯಧಾಮವನ್ನು ಬಿಟ್ಟು ಯಾವುದೋ ಉತ್ತೇಜನದ ಪ್ರೇರಣೆಯಿಂದ ಮೇಲಕ್ಕೆ ಬರುತ್ತದೆ. ನೀರ ಮೇಲ್ಭಾಗಕ್ಕೆ ಅದು ತಲುಪುತ್ತಲೆ ಅಘಟಿತ ಘಟನೆಯೊಂದು ಜರುಗುತ್ತದೆ. ಅದರ ಮೈ-ಮೇಲಿನ ಪರೆ ಒಮ್ಮೆಲೆ ಒಡೆಯುತ್ತದೆ. ಕ್ಷಣಕಾಲ ಹುಳ ವಿಲಿವಿಲಿ ಒದ್ದಾಡುತ್ತದೆ. ತಕೋ! ಅದರ ಬೆನ್ನಿಗೆ ನಾಲ್ಕು ರೆಕ್ಕೆಗಳು ಬಿಚ್ಚಿವೆ. ಕ್ರಿಮಿಯಿದ್ದದ್ದು ಕೀಟವಾಗಿದೆ!

ಆ ಕ್ಷಣದಿಂದ ಅದು ಗಾಳಿಯಲ್ಲಿ ಉಸಿರಾಡಿಸುವ ಪ್ರಾಣಿ. ಹಕ್ಕಿಯಂತೆ ರೆಕ್ಕೆಯುಳ್ಳ ಜೀವಿ. ಆದರೆ ಅದರ ಬಾಯಿ ಈಗ ಮುದ್ರಿತವಾಗಿದೆ.

ಆದರೂ ಅದಿನ್ನೂ ತನ್ನ ವಾಯುಗಾಮಿ ಜೀವನಕ್ಕೆ ಪೂರ್ತಿ ಅಣಿಯಾಗಿಲ್ಲ. ಅದಕ್ಕೆ ಮೊದಲು ಇನ್ನೊಂದು ಆಶ್ಚರ್ಯಕರ ಪರಿವರ್ತನೆ

ಆಗಬೇಕು. ಈ ಅದ್ಭುತ ಮತ್ತಾವ ಪ್ರಬುದ್ಧ ಕೀಟದ ಜೀವನದಲ್ಲೂ ಒದಗದಂಥಾದ್ದು. ಒದ್ದಾಡುತ್ತ ಅದು ಹತ್ತಿರದ ಯಾವುದಾದರೊಂದು ಟೊಂಗೆಯನ್ನೇರಿ ಮತ್ತೊಮ್ಮೆ ತನ್ನ ಪರೆಯುಚ್ಚುತ್ತದೆ. ಮೈಯ ತೊಗಲಷ್ಟೇ ಅಲ್ಲ, ರೆಕ್ಕೆಗಳ ಮೇಲ್ಹೊಗಲೂ ಕಳಚಿ ರೆಕ್ಕೆಗಳು ಶುದ್ಧ ಪಾರದರ್ಶಕವಾಗುತ್ತವೆ.

ಅದೇ ಎಫಿಮೆರಾದ ಪ್ರಬುದ್ಧ ಜೀವನದ ಪ್ರಾರಂಭ ಮತ್ತು ಅದರ ಅವಸಾನದ ಪ್ರಾರಂಭ ಕೂಡ. ಜೊತೆಗಾತಿಯ ಶೋಧ, ಗಗನ ಸಹಗಮನ, ಪಾಂಡುರಾಯನಂಥ ಅಭಿಶಪ್ತ ಮೃತ್ಯು, ಮಾದ್ರಿಯ ಜಲಚಿತಾರೋಹಣ.

ಒಂದು ಹೆಣ್ಣು ೫೦೦ ರಿಂದ ೬೦೦ ತತ್ತಿಗಳನ್ನಿಡುತ್ತದೆ. ಲಕ್ಷಗಟ್ಟಳೆಯಲ್ಲಿ ನಡೆಯುವ ಅವುಗಳ ಶೃಂಗಾರ ನಾಟ್ಯವನ್ನು ನೋಡಿದರೆ ಕೆಲವೇ ವರ್ಷಗಳಲ್ಲಿ ಪೃಥ್ವಿಯನ್ನು ಮುಚ್ಚುವಷ್ಟು ಎಫಿಮೆರಾಗಳು ಉತ್ಪತ್ತಿಯಾಗಬೇಕು. ಆದರೆ ನಿಸರ್ಗ ಎಂದಿನಂತೆ "ಜೀವೊ ಜೀವಸ್ಯ ಜೀವನಂ" ನೀತಿಯಿಂದ ಸಂಖ್ಯಾವೃದ್ಧಿಯನ್ನು ಹಿಡಿತದಲ್ಲಿಡುತ್ತದೆ. ಎಫಿಮೆರಾಕ್ಕೆ ನೀರಲ್ಲಿ ಶತ್ರುಗಳು ಹೇರಳ. ಮೀನುಗಳಿಗೆ ಅವುಗಳೆಂದರೆ ಪ್ರೀತಿಯ ತಿಂಡಿ; ಅವುಗಳಂತೆ ನೀರಲ್ಲಿ ಬೆಳೆಯುವ ಕೊಡತಿ ಹುಳ (Dragon fly) ಗಳೂ ಈ ಸಸ್ಯಾಹಾರಿ ಕೀಟಗಳನ್ನು ಸ್ವಾಹಾ ಮಾಡುತ್ತವೆ.

ಜೀವಜಂತುಗಳ ಆಯುಷ್ಯದ ಅವಸ್ಥೆಗಳನ್ನು ನೋಡಿದರೆ ಬಾಲ್ಯಾವಸ್ಥೆ ಅಲ್ಪಾವಧಿಯದು, ಪ್ರೌಢಾವಸ್ಥೆ ಅದಕ್ಕಿಂತ ನಾಲ್ಕೈದು ಪಟ್ಟು ದೀರ್ಘವಾದುದು ಎಂಬುದು ಸಾಮಾನ್ಯ ನಿಯಮ. ಆದರೆ ಇಲ್ಲಿದೆ ಎಫಿಮೆರಾ—ಅದಕ್ಕೆ ಒಂದೆರಡು ವರ್ಷಗಳ ಸುದೀರ್ಘ ಬಾಲ್ಯಾವಸ್ಥೆ; ಕೆಲ ತಾಸುಗಳ ಪ್ರೌಢಾವಸ್ಥೆ. ಅದು ಈ ಬಗೆಯ ತಿರುವು ಮುರುವು ಜೀವನವನ್ನೇಕೆ ಆರಿಸಿಕೊಂಡಿತೋ ಯಾರು ಬಲ್ಲರು? ಬಹುಶಃ ನಿಸರ್ಗವು ಇದೂ ಒಂದು ವಿಪರೀತ ಪ್ರಯೋಗ ಇರಲಿ ಎಂದುಕೊಂಡಿರಬಹುದು. *



ಇಲೆಕ್ಟ್ರಿಕ್ ರಿಸ್ಟ್‌ವಾಚು

ಲೆನಿನ್‌ಗ್ರಾಡಿನ ಪ್ರೊತ್ರಾದಪೊರೆತ್ಸ ಎಂಬ ಗಡಿಯಾರದ ಕಾರಖಾನೆಯು ವಿದ್ಯುತ್ ಕೈಗಡಿಯಾರಗಳನ್ನು ನಿರ್ಮಿಸಿದೆ. ಈ ಗಡಿಯಾರಗಳಿಗೆ ಚಾವಿ ಕೊಡಬೇಕಾಗುವುದಿಲ್ಲ. ಅದರಲ್ಲಿಯೇ ಇರಿಸಲಾದ ಎರಡು ಗ್ರಾಮ್ ತೂಕದ ಬ್ಯಾಟರಿಯಿಂದೇ ಒಳಗಿನ ಯಂತ್ರಗಳಿಗೆ ವಿದ್ಯುತ್ ಪೂರೈಕೆಯಾಗಿ ಅದು ನಡೆಯುತ್ತದೆ. ಈ ಸಣ್ಣ ಬ್ಯಾಟರಿ ಒಂದು ವರ್ಷದ ವರೆಗೆ ನಡೆಯುತ್ತದೆ.

ಇದೇ ಕಾರಖಾನೆಯ ಯಂತ್ರನಿರ್ಮಾಪಕರು ಇಂಥದೇ ಇನ್ನೊಂದು ಹೊಸ ಮಾದರಿಯ ವಿದ್ಯುತ್ ಕೈಗಡಿಯಾರವನ್ನು ನಿರ್ಮಿಸುತ್ತಿದ್ದಾರೆ. ಅದರ ಮೇಲಿನ ಒಂದು ಸಣ್ಣ ಬಟನ್ ಒತ್ತಿದರೆ ರಾತ್ರಿ ಆ ಗಡಿಯಾರದ ಮೇಲ್ಭಾಗದಲ್ಲಿ ವಿದ್ಯುತ್ತಿನ ಬೆಳಕು ಬಿದ್ದು ಆ ಬೆಳಕಿನಲ್ಲಿ ಪುಸ್ತಕ, ಪತ್ರ, ಇತ್ಯಾದಿ ಓದಲಿಕ್ಕೆ ಆಗುತ್ತದೆ.

ಗಭೀರ ರಾತ್ರಿಯಲ್ಲಿ ಪ್ರಬಲ ಮಂತ್ರಿಯೊಬ್ಬ ದರೋಡೆಕೋರರ ಮುಂದೆ ನಿಸ್ಸಹಾಯನಾಗಿದ್ದ!

ನಾನು ಸಾವಿನ ಮುಖ ಕಂಡಾಗ

ಎನ್. ವಿ. ಗಾಡಗೀಳ

"ಇದು ನಿನ್ನ ಮರಣವಲ್ಲ; ಹೀಗಿಲ್ಲ ನಿನ್ನ ಮರಣ" ಎಂದು ಯಾರೋ ಕಿವಿಯಲ್ಲಿ ಗುಣುಗುಣಿಸಿದಂತಾಯಿತು. ನಾನು ಈ ಶಬ್ದಗಳನ್ನು ಕೇಳಿದಂತೆ ಭಾಸವಾದಾಗಿನ ಪರಿಸ್ಥಿತಿಯಲ್ಲಿ ಯಾರೇ ಪ್ರತ್ಯಕ್ಷವಾಗಿ ನುಡಿದಿದ್ದರೂ ನಂಬುವಂತಿರಲಿಲ್ಲ. ಅಷ್ಟು ಕಲ್ಪನಾತೀತವಾಗಿ ಭಯಂಕರವಾಗಿದ್ದಿತು ಆ ಪರಿಸ್ಥಿತಿ. ಅನಪೇಕ್ಷಿತವಾದುದು ದುತ್ತೆಂದು ಮುಂದೆ ಬಂದು ನಿಂತು ನಂತರ ಅಪೇಕ್ಷಿತ ರೀತಿಯಲ್ಲಿ ಅದರ ಪರ್ಯವಸಾನವಾಗದಂಥ ವಿಚಿತ್ರ ಘಟನೆ ಅದಾಗಿದ್ದಿತು. ಆ ಹತ್ತಿಪ್ಪತ್ತು ನಿಮಿಷಗಳಲ್ಲಿ ದುಃಖಾಂತದ ಕರುಣರಸ ಹಾಗೂ ಸುಖಾಂತದ ಆನಂದ ಇವೆರಡೂ ಸಮ್ಮಿಳಿತವಾಗಿದ್ದವು. ಮೂರೇ ಪಾತ್ರಗಳ ಈ ನಾಟಕದಲ್ಲಿ ಪ್ರಸ್ತುತ ಲೇಖಕನ ದೈವವೇ ದಿಗ್ದರ್ಶಕನ ಪಾತ್ರ ವಹಿಸಿತ್ತು.

ಸಾತಾರೆಯಿಂದ ಪುಣೆಯ ಪ್ರವಾಸವನ್ನು ಎಷ್ಟು ಆನಂದದಿಂದ, ಉತ್ಸಾಹದಿಂದ ಪೂರೈಸಿದ್ದೆ. ೧೯೫೨ ಎಪ್ರಿಲ್ ೨೮ ನೇ ದಿನಾಂಕ ಅಪರಾಹ್ನದಲ್ಲಿ ಸಾತಾರೆಯಲ್ಲಿ ಕನ್ಯಾಶಾಲೆಯ



"ಅನಗಡ ಮೋತೀ"ಯಿಂದ

ಹೊಸ ಕಟ್ಟಡದ ಉದ್ಘಾಟನೆಯನ್ನು ನೆರವೇರಿಸಿದ್ದೆ! ಅಲ್ಲಿಂದ ಹೊರಡುವ ಪೂರ್ವದಲ್ಲಿ, ಹಾಸಿಗೆ ಹಿಡಿದಿದ್ದ ಅಕ್ಕನ ಭೆಟ್ಟಿಗೆ ಹೋಗಿದ್ದೆ. 'ಇದೇ ನಮ್ಮ ಕೊನೆಯ ಭೆಟ್ಟಿ' ಎಂದು ಆಕೆ ನುಡಿದಾಗ, "ಮೊಮ್ಮಕ್ಕಳ ಮುಂಜಿವೆ ಆಗದೆ ನಿನ್ನನ್ನು ಒಯ್ಯಬಾರದೆಂದು ನಾನು ಯಮನನ್ನು ನಿರ್ಬಂಧಿಸುತ್ತೇನೆ" ಎಂದು ನಾನು ಮಾರ್ನುಡಿದೆ. ಯಮನೆಂದರೆ ಲೋಕೋಪಯೋಗಿ ಶಾಖೆಯಲ್ಲಿಯ ನಾಲ್ಕನೇ ದರ್ಜೆಯ ಕಾರಕೂನನೆಂದೇ ನಾನು ಭಾವಿಸಿದಂತಿತ್ತು. ನನ್ನ ಈ ವಾಕ್ಯದಿಂದ ತನ್ನ ತಮ್ಮನು ವಿನೋದಿಯಾಗಿದ್ದಾನೆಂದು ನನ್ನಕ್ಕ ಭಾವಿಸಿರಲು ಸಾಕು. ನಾನು ನಮಸ್ಕರಿಸಿ ಹೊರಟು ನಿಂತಾಗ ಅವಳ ಶತಾಯುಷಿಯಾಗು ಎಂಬ ಆಶೀರ್ವಚನದ ಪರೀಕ್ಷೆ ಕೆಲವೇ ಗಂಟೆಗಳಲ್ಲಿ ನಡೆಯಲಿದೆ ಎಂಬುದರ ಸುಳಿವು ಆಗ ನಮ್ಮಿಬ್ಬರಿಗೂ ಇದ್ದಿರಲಿಲ್ಲ.

ಸಾತಾರೆಯಿಂದ ಸಂಜೆ ಏಳುಗಂಟೆಗೆ ನಾನು ಕಾರಿನಲ್ಲಿ ಪುಣೆಗೆ ಧಾವಿಸಿದೆ. ಮರುದಿನ ಹೈದರಾಬಾದದಲ್ಲಿ ನಡೆಯಲಿದ್ದ ಬೃಹನ್ಮಹಾರಾಷ್ಟ್ರ ಪರಿಷತ್ತಿನ ಅಧ್ಯಕ್ಷಸ್ಥಾನವನ್ನು ಅಲಂಕರಿಸುವುದಕ್ಕಾಗಿ ಅಲ್ಲಿಗೆ ತೆರಳಲು ಪುಣೆಯಲ್ಲಿ ರಾತ್ರಿ ಮೇಲುಗಾಡಿಯನ್ನು ಹಿಡಿಯಬೇಕಾಗಿದ್ದಿತು. ವೇಗದಿಂದ ಸಾಗಿದ್ದ ಕಾರಿನಲ್ಲಿ ನಾನು ಮರುದಿನದ ಭಾಷಣದ ಸಿದ್ಧತೆಯನ್ನೂ ಅಷ್ಟೇ ವೇಗದಿಂದ ನಡೆಸಿದ್ದೆ.

ಈ ವಿಚಾರಸರಣಿಯಲ್ಲಿಯೆ ನಾನು ರಾತ್ರಿ ಹತ್ತು ಗಂಟೆಗೆ ಪುಣೆಗೆ ಹಿಂತಿರುಗಿದೆ. ಅಲ್ಲಿ ಖಾಸಗಿ ಹಾಗೂ ಸರಕಾರಿ ಕಾಗದಪತ್ರಗಳನ್ನು ನೋಡುತ್ತ ಸುಮಾರು ಎರಡು ಗಂಟೆ ಕಾಲ ಕಳೆದು ರೇಲ್ವೆ ಸ್ಟೇಶನ್ನಿಗೆ ಹೊರಟೆ. ಈ ಪ್ರವಾಸಿ ಸಾಮಾನ್ಯನಾಗಿರಲಿಲ್ಲ; ಅಂತೇ ನಿಲ್ದಾಣದಲ್ಲಿ ಯೋಗ್ಯ ಪೋಲೀಸ್ ವ್ಯವಸ್ಥೆ ಇದ್ದಿತು. ಮದ್ರಾಸ್ ಮೇಲಿಗೆ ಖಡಕಿಯಲ್ಲಿ ಏನೋ ಅಪಘಾತವಾಗಿದ್ದರಿಂದ ಅದು ಒಂದು ಗಂಟೆ ತಡವಾಗಿ ಬರುವುದು ಎಂಬ ಸುದ್ದಿ ನನಗಾಗಿ ಕಾದಿತ್ತು. ಪ್ಲಾಟ್‌ಫಾರ್ಮ್ ಮೇಲೆಯೆ ವೇಳೆಗಳೆಯಬೇಕೆಂದು ನಿರ್ಧರಿಸಿ ನಾನು ಮತ್ತೆ ಇಬ್ಬರು ಮೂವರು ಕುರ್ಚಿಗಳನ್ನು ತರಿಸಿಕೊಂಡು ಕುಳಿತೆವು. ಗಂಟೆಯೊಳಗಾಗಿ ಗಾಡಿ ಬಂದಿತು; ಸಂರಕ್ಷಣ ಶಾಖೆಯ ಪೋಲೀಸರು ರಿಝರ್ವ್ಡ್ ಫರ್ಸ್ಟ್ ಕ್ಲಾಸ್ ಡಬ್ಬಿಯನ್ನು ಮೊದಲು ಪರೀಕ್ಷಿಸಿದ ನಂತರ ನನ್ನ ಹಾಸಿಗೆ, ಬಟ್ಟೆಯ ಪೆಟ್ಟಿಗೆ, ಸರಕಾರಿ ಹಾಗೂ ಗುಪ್ತ ಕಾಗದ ಪತ್ರಗಳ ಪೆಟ್ಟಿಗೆ ಮುಂತಾದ ಸಾಮಾನುಗಳನ್ನು ಒಳಗೆ ಇಡಲಾಯಿತು. ಒಂದೆರಡು ನಿಮಿಷಗಳಲ್ಲಿ ನಾನೂ ಡಬ್ಬಿಯನ್ನೇರಿದೆ.

ಮಧ್ಯರಾತ್ರಿಯಾಗಿ ಹೋಗಿತ್ತು. ಎರಡೂ ಬಾಗಿಲಗಳ ಮೇಲಿನ ಸೂಚನೆಗಳನ್ನು ಓದಿ ನೋಡಿಕೊಂಡು ಬೋಲ್ಟ್ ಏರಿಸಿದೆ. ಕಿಡಿಕಿಗಳು ಮುಚ್ಚಿದ್ದರಿಂದ ಆ ಕಡೆಗೆ ನಾನು ನೋಡಲಿಲ್ಲ. ಅವು ತೆರೆದಿದ್ದರೂ ಹಾಗೇ ಬಿಟ್ಟುಬಿಡುತ್ತಿದ್ದೆ. ಬೇಸಿಗೆಯ ದಿನ ಇಂಗ್ಲೀಷ್ ಪಂಚಾಂಗದಂತೆ ಎಪ್ರಿಲ್ ೨೯ ನೇ ತಾರೀಖು ಪ್ರಾರಂಭವಾಗಿತ್ತು. ತನ್ನ ಹಣೆಬರಹದಲ್ಲಿ ಏನಿತ್ತೆಂಬುದು ಪಾಪ, ಆ ದಿನಕ್ಕೂ ಗೊತ್ತಿರಲಿಕ್ಕಿಲ್ಲ. ಮಹಾಘಟನೆ ಸಂಭವಿಸುವ ಕಾಲಕ್ಕೆ ಸೃಷ್ಟಿಯೂ ಅಪರಿಚಿತ ರೂಪಧಾರಣ ಮಾಡುತ್ತದೆ; ಝಂಝಾವಾತ ಬೀಸುತ್ತದೆ. ಅರಸು ಸಾಯತಕ್ಕವನಿದ್ದರೆ ಆಕಾಶದಲ್ಲಿ ಧೂಮಕೇತು ಮೂಡುತ್ತದೆ; ಅಥವಾ ಭೂಮಿಯ ಮೇಲೆ ನಾಯಿಗಳು ಅಳಹತ್ತುತ್ತವೆ. ಆದರೆ ಆಕಾಶ ನಿರಭ್ರವಾಗಿತ್ತು. ಸಾಗಿದ್ದ ಗಾಡಿಯ ಸದ್ದೇ ಸದ್ದು. ಒಂದೆರಡು ನಿಮಿಷಗಳಲ್ಲಿ ಮೈಮೇಲಿನ ಬಟ್ಟೆಗಳನ್ನು ಕಳಚಿ ಗೂಟಕ್ಕೆ ತಗಲಿಸಿದೆ. ಇಡೀ ದಿನದ ಘಟನೆಗಳನ್ನು ಕ್ಷಣ ಹೊತ್ತು ಧ್ಯಾನಿಸಿದೆ. ದೊಡ್ಡ ದೀಪವನ್ನು ಆರಿಸಿ ಮೂಲೆಯಲ್ಲಿಯ ನೀಲಿದೀಪವನ್ನು ಹಚ್ಚಿದೆ. ತಲೆ ಮೇಲಿನ ರಾಜಮುಕುಟ ಮನಸಿ

ಬಾಯಿಯ ದುರ್ಗಂಧವನ್ನು ಕಾಲ್ಗೇಟಿನಿಂದ ತೊಲಗಿಸಿರಿ

ಅದರೊಂದಿಗೆ ದಿನವಿಡೀ

ದಂತಕ್ಷಯವನ್ನು ಇದಿರಿಸಿರಿ !



ಏಕೆಂದರೆ : ಕಾಲ್ಗೇಟ್ ಡೆಂಟಲ್ ಕ್ರೀಮ್‌ನೊಂದಿಗೆ ಒಮ್ಮೆ ಹಲ್ಲುಜ್ಜುವುದರಿಂದ ಬಾಯಿಯಲ್ಲಿ ದುರ್ಗಂಧವನ್ನುಂಟು ಮಾಡುವ ಹಾಗೂ ಹಲ್ಲುಗಳನ್ನು ಕ್ಷಯಿಸುವ ಶೇಕಡ 85ರಷ್ಟು ಕ್ರಿಮಿಗಳು ನಾಶವಾಗುತ್ತವೆ.

ಊಟವಾದೊಡನೆ ಕಾಲ್ಗೇಟನಿಂದ ಹಲ್ಲುಜ್ಜುವುದರಿಂದ ದಂತ-ಮಂಜನಗಳ ಇತಿಹಾಸದಲ್ಲೇ ಹಿಂದೆಂದೂ ಆಗದಷ್ಟು ಅಧಿಕ ಜನರ ದಂತಕ್ಷಯವನ್ನು ಅಧಿಕ ಪ್ರಮಾಣದಲ್ಲಿ ತಡೆಗಟ್ಟಲು ಸಾಧ್ಯವಾಗುತ್ತದೆ. ಇದಲ್ಲದೆ,ಕಾಲ್ಗೇಟನಿಂದ 10ರಲ್ಲಿ 7 ಸಂದರ್ಭಗಳಲ್ಲಿ ಬಾಯಿಯ ದುರ್ಗಂಧವು ಕೂಡಲೇ ನಿವಾರಿಸಲ್ಪಡುತ್ತದೆ. ಈ ಎರಡು ಪ್ರಮಾಣಗಳನ್ನು ಕಾಲ್ಗೇಟ್ ವೈಜ್ಞಾನಿಕ ಪರೀಕ್ಷೆಗಳ ಮುಖೇನ ಸಿದ್ಧಗೊಳಿಸಿರುತ್ತದೆ. ಕಾಲ್ಗೇಟಿಗೆ ಮಾತ್ರ ಈ ಪ್ರಮಾಣವಿದೆ !

ಊಟವಾದ ಮೇಲೆ ಬರೀ ಬಾಯಿ ಮುಕ್ಕಳಿಸುವುದರಿಂದ ಪ್ರಯೋಜನವಾಗಲಾರದು—ಪ್ರತಿ ಊಟದ ಮೇಲೆ ತಪ್ಪದೆ ನಿಮ್ಮ ಹಲ್ಲುಗಳನ್ನು ಕಾಲ್ಗೇಟನಿಂದ ಉಜ್ಜಿರಿ. ಇದರ ಪ್ರಬಲವಾದ ಸಂದು ಸಂದುಗಳಿಗೆ ಒಳನುಗ್ಗುವ ನೊರೆಯು ಅಗೋಚರವಾದ ಹಲ್ಲುಗಳ ನಡುವಿನ ಸಂದುಗಳಿಗೆ ಹೊಕ್ಕು, ನಿಮ್ಮ ಬಾಯಿಯ ದುರ್ಗಂಧಕ್ಕೂ, ಹಲ್ಲುಗಳ ಕ್ಷಯಿಸುವಿಕೆಗೂ ಕಾರಣವಾದ ಆ ಕೊಳೆಯುತ್ತಿರುವ ಆಹಾರ ಕಣಗಳನ್ನು ನಿವಾರಿಸಿ ಸ್ವಚ್ಛಗೊಳಿಸುವುದು.

ಮಕ್ಕಳಿಗೆ ಕಾಲ್ಗೇಟನಿಂದ ಹಲ್ಲುಜ್ಜುವುದೆಂದರೆ ತುಂಬಾ ಪ್ರೀತಿ, ದೀರ್ಘಕಾಲ ಉಳಿಯುವ ಅದರ ನೆಚ್ಚಿನ ಪೆಪರ್‌ಮಿಂಟ್ ಸ್ವಾದವು ಇದರಲ್ಲಿ ಕೂಡಿರುತ್ತದೆ.

ನಿಮಗೆ ಹಲ್ಲುಪುಡಿ ಹೆಚ್ಚು ಇಷ್ಟವಾಗಿದ್ದರೆ ಈ ಎಲ್ಲಾ ಪ್ರಯೋಜನಗಳನ್ನು ಕಾಲ್ಗೇಟ್ ಟೂತ್ ಪೌಡರ್‌ನಿಂದಲೂ ಪಡೆಯಿರಿ...ಒಂದು ಡಬ್ಬಿ ಹಲವು ತಿಂಗಳುಗಳವರೆಗೆ ಸಾಕಾಗುವುದು.

ಕಾಲ್ಗೇಟನಿಂದ ತಪ್ಪದೆ ಹಲ್ಲುಜ್ಜುವುದರಿಂದ

- ✓ ಬಾಯಿಯ ದುರ್ಗಂಧವು ನಿವಾರಿಸಲ್ಪಡುತ್ತದೆ
- ✓ ದಂತಕ್ಷಯವನ್ನು ವಿರೋಧಿಸಲಾಗುವುದು
- ✓ ಹಲ್ಲುಗಳು ಪರಿಶುಭ್ರವಾಗಿ ಉಳಿಯುವವು



DCG.31 K

ಬಾಯಿಯ ದುರ್ಗಂಧವನ್ನು ನಿವಾರಿಸಲು ಮತ್ತು ಹಲ್ಲುಗಳು ಶುಭ್ರವಾಗಿರಲು...ಹೆಚ್ಚಿಗೆ ಜನರು ಪ್ರಪಂಚದ ಇನ್ನಿತರ ಡೆಂಟಲ್ ಕ್ರೀಮ್‌ಗಳಿಗಿಂತ ಅಧಿಕವಾಗಿ ಕಾಲ್ಗೇಟನ್ನೇ ಕೊಂಡುಕೊಳ್ಳುತ್ತಾರೆ

ಗೊಂದು ಹೊರೆ ಎಂಬ ಮಾತು ನನಗೆ ಅನ್ವಯಿಸುತ್ತಿರಲಿಲ್ಲ. ಸಾರ್ವಜನಿಕ ಚಿಂತೆಯು ನನ್ನಂತೆ ಎಲ್ಲರಿಗೂ ಇದ್ದುದರಿಂದ ಮಂತ್ರಿಪದದ ಅವಧಿಯಲ್ಲಿಯೂ ನಾನು ನಿದ್ದೆಗೇಡಾದುದಿಲ್ಲ. ನಿತ್ಯವಾದ ಚಿಂತೆ ವ್ಯಗ್ರತೆಗಳ ಮೂಲಕ ನಾನು ಸ್ಥಿತಪ್ರಜ್ಞನಾಗಿದ್ದೆ. ಸ್ವಿಚ್ ಒತ್ತಿದ ಕೂಡಲೆ ದೀಪ ಆರಿಹೋಗುವಂತೆ ಹಾಸಿಗೆಗೆ ಬೆನ್ನು ಹಚ್ಚಿದ ಕೂಡಲೆ ನಿದ್ರಾಪರವಶನಾದೆ.

ನಿದ್ದೆಯಲ್ಲಿ ಮನಸ್ಸು ಸ್ತಬ್ಧವಾಗಿರದೆ ಪಂಚೇಂದ್ರಿಯಗಳ ಕಾರ್ಯವನ್ನು ನೋಡಿಕೊಳ್ಳುತ್ತಿರುತ್ತದಂತೆ. ನನ್ನ ನಿದ್ದೆಯೂ ಹಗುರು. ಆದರೆ ಅಂದಿನ ದಿನ ಮಾತ್ರ ನಿದ್ರಾವಶವಾಗಿದ್ದ ನನ್ನ ಮನಸು ಹೊರಗಡೆ ನಡೆಯುತ್ತಿದ್ದ ಯಾವ ಘಟನೆಯನ್ನೂ ಗಮನಿಸಲಿಲ್ಲ. ಆ ಘಟನೆಯ ಸದ್ದಿನಿಂದ ಎಚ್ಚರಾಗಲಿಲ್ಲ. ಗಾಡಿಯು ಸಪ್ಪಳದಲ್ಲಿ ಆ ಸದ್ದು ಅಡಗಿ ಹೋಗಿರಬೇಕು.

ಪುಣೆಯಿಂದ ಹೊರಟ ಆ ಮೇಲ್ ಗಾಡಿ ದೌಂಡದಲ್ಲಿ ನಿಂತಿರಲೇಬೇಕು. ಅಲ್ಲಿಯ ವರೆಗೆ ನಾನು ನಿದ್ದೆಯಲ್ಲಿ ತಲ್ಲೀನನಾಗಿದ್ದೆ. ಮೇಲೆ ತಿರುಗುತ್ತಿದ್ದ ಬೀಸಣಿಕೆಯ ತಂಪು ಗಾಳಿಯು ನಿದ್ದೆಗೆ ಹಿತಕರವಾಗಿತ್ತು. ಮೂಲೆಯಲ್ಲಿದ್ದ ನೀಲೀ ದೀಪವು ಘಟನೆಯ ವಾತಾವರಣವನ್ನು ನಿರ್ಮಿಸಿ ತುಂಟ ಸಾಕ್ಷಿದಾರನಂತೆ ಸ್ತಬ್ಧವಾಗಿತ್ತು.

ಬ್ರಾಹ್ಮ ಮುಹೂರ್ತದಲ್ಲಿ ಇಂಥ ಸ್ಥಿತಿಯಲ್ಲಿ ಹೆಗಲ ಮೇಲೇನೊ ಜಡವಸ್ತು ಇದ್ದಂತೆ ಭಾಸವಾಗಹತ್ತಿತು. ಕ್ಷಣಾರ್ಧದಲ್ಲಿ ಕಣ್ಣು ತೆರೆದೆ. ಮುಖಕ್ಕೆ ಮುಖವಾಡ ಹಾಕಿಕೊಂಡಂಥ ಟೊಣಪನೊಬ್ಬನು ನನ್ನ ಎರಡೂ ಹೆಗಲುಗಳನ್ನು ಅದುಮುತ್ತ 'ಪೈಸಾ ಕಿಧರ ಹೈ' ಎಂದು ಅರಚಿದ. ನನ್ನ ಕಣ್ಣುಕಿವಿಗಳು ಆ ಪ್ರಸಂಗದ ಪರಿಚಯವನ್ನು ಮಾಡಿಕೊಟ್ಟವು. ಹೆಗಲ ಮೇಲಿದ್ದ ಆತನ ಕೈಗಳ ಗತಿಯಿಂದ ಸಂಕಟದ ಶಕ್ತಿಯನ್ನು ತರ್ಕಿಸುವಂತಾಯಿತು. ಮತ್ತೆ ಕ್ಷಣಾರ್ಧದಲ್ಲಿ ಕೈಯಲ್ಲಿ ಚೂರಿ ಹಿಡಿದುಕೊಂಡ ಆ ಟೊಣಪನು ತುಸು ಬಾಗಿ, "ಬೋಲೊ, ಪೈಸಾ ಕಿಧರ ಹೈ?" ಎಂದು ಗರ್ಜಿಸಿದ. ಮುಖವಾಡ ಹಾಕಿಕೊಂಡಿದ್ದರಿಂದ ಆತನನ್ನು ಗುರುತಿಸಲೂ ಸಾಧ್ಯವಿರಲಿಲ್ಲ. ಅವರಿಬ್ಬರೂ ಬೆಳಕಿಗಡ್ಡವಾಗಿ ನಿಂತಿದ್ದರಿಂದ ಕತ್ತಲೆಯಿದ್ದಂತೆ ಅನಿಸುತ್ತಿತ್ತು.

ನನ್ನ ಮನಸ್ಸು ಒಂದೆರಡು ಕ್ಷಣ ಯಾವ ನಿರ್ಣಯಕ್ಕೂ ಬರಲಿಲ್ಲ. ಇಡೀ ಆಯುಷ್ಯದಲ್ಲಿ ವಾಗ್ಬಾಣಗಳನ್ನುಳಿದು ಬೇರೆ ಯಾವ ಶಸ್ತ್ರ ಪ್ರಹಾರ ಮಾಡಿರದಂಥ, ಜೀವಮಾನದಲ್ಲಿ ಹೃದಯ ಪರಿವರ್ತನದಲ್ಲಿಯೆ ಶ್ರದ್ಧೆಯನ್ನಿಟ್ಟು ಜನಮನವನ್ನು ಮತಗಳನ್ನು ಗೆದ್ದಂಥ, ಅಷ್ಟೊಂದು ಶ್ರದ್ಧೆಯಿಂದಲ್ಲದಿದ್ದರೂ ವ್ಯಾವ-ಹಾರಿಕವಾಗಿಯಾದರೂ ಅಹಿಂಸೆಯನ್ನು ಅಂಗೀಕರಿಸಿದಂಥ ನನ್ನನ್ನು ಘಾತಿಸುವುದಕ್ಕಾಗಿ ಯಮನು ಮೋರೆಗೆ ಮುಸುಕು ಹಾಕಿಕೊಂಡ, ಚೂರಿ ಹಿಡಿದು ಕೊಂಡ ನಿಶಾಚರನನ್ನು ಆರಿಸಬೇಕೆ?

ಕಣ್ಣಿಗೆ ಕಣ್ಣು ಕೂಡಿದ್ದರೆ ನನ್ನ ಅಧಿಕಾರ ದೃಷ್ಟಿಗೆ ಅವರು ತಲೆ ಬಾಗಬಹುದಿತ್ತು; ನಿಶ್ಶಸ್ತ್ರರಾಗಿ ಬಂದಿದ್ದರೆ ನನ್ನ ವಾಣೀ ವಿಲಾಸಕ್ಕೆ ಮೋಹಿತರಾಗಿ ಹಿಂತಿರುಗಬಹುದಿತ್ತು. ನಚಿಕೇತನ ಕಾಲಕ್ಕೆ ಮಾಡಿದ ತಪ್ಪನ್ನೇ ಪುನಃ ಮಾಡಬಾರದೆಂದು ಯಮನು ತಾನೇ ಸ್ವತಃ ಬರದೆ ಈ ಸಲ ಈ ಅಭಿನವ ದೂತರನ್ನು ಕಳಿಸಿರಬಹುದು.

"ಪೈಸಾ ಕಿಧರ್ ಹೈ, ತಬಾ ಕರೇಂಗೆ" ಎಂದು ಆ ವ್ಯಕ್ತಿಗಳಿಬ್ಬರೂ ಭವಿಷ್ಯವಾಣಿಯನ್ನು ಕೇಳಿಸಿದರು.

"ಪೈಸಾ ನಹಿ ಹೈ, ಕ್ಯಾ ಕರ ರಹೆ ಹೊ" ಎಂದು ನಾನು ಅವರನ್ನು ನಿವಾರಿಸಿದೆ.

ನಾವೇನು ಮಾಡುತ್ತಿರುತ್ತೇವೆಂಬುದು ಅನೇಕ ಸಲ ನಮಗೇ ಹೊಳೆಯುವುದಿಲ್ಲ. ಸುತ್ತಲಿನ ಪರಿಸ್ಥಿತಿಗನುಗುಣವಾಗಿ ಪ್ರತಿಕ್ರಿಯೆಯು ಅಳು ಅಥವಾ ನಗುವಿನ ರೂಪದಲ್ಲಿ ವ್ಯಕ್ತವಾಗುತ್ತಿರು

ತ್ತದೆ. ಮುಂದಿನ ಕೃತಿಗೂ ಅದೇ ಮೂಲ. ಇಲ್ಲಿಯೂ ಹಾಗೇ ಆಯಿತು. ಈ ಘಟನೆ ನಡೆದು ಹೋದ ನಂತರ ಅನೇಕರು ನಾನು ಲಕ್ಷ್ಮೀಧರನ ನೀತಿಯನ್ನು ಏಕೆ ಅವಲಂಬಿಸಲಿಲ್ಲ, ಅದೇ ನಿಜ ವಾಗಿ ವ್ಯಾವಹಾರಿಕವಾಗಿದ್ದಿತು ಎಂದು ಹೇಳಿ ದ್ದಾರೆ. ನನಗೇಕೊ ಆ ಮಾರ್ಗ ಹೊಳೆಯಲಿಲ್ಲ. ಬಹುಶಃ ಅವರು ಕೇಳುತ್ತಿದ್ದ ಹಣವೂ ನನ್ನಲ್ಲಿರ ಲಿಲ್ಲ. ಶಿಕ್ಷಣ ಸಂಸ್ಕಾರಗಳಿಂದ ರೂಪುಗೊಂಡ ಶೀಲವೇ ಪ್ರಸಂಗ ವಿಶೇಷದಲ್ಲಿ ವ್ಯಕ್ತವಾಗುತ್ತ ದೆಂಬುದು ನಿಜ. 'ಕ್ಯಾ ಕರ ರಹೇ ಹೋ' ಎಂಬ ವಾಕ್ಯವನ್ನು ಆಡುವ ಹೊತ್ತಿಗೆ ನಾನು ಒಂದು ನಿರ್ಣಯಕ್ಕೆ ಬಂದಿದ್ದೆ; ಚೂರಿ ಹಿಡಿದಿದ್ದವನ ಮುಂಗೈಯನ್ನು ಗಟ್ಟಿಯಾಗಿ ಹಿಡಿದಿಟ್ಟೆ.

ಆತನು ಚೂರಿಯನ್ನು ಕೆಳಗಿಳಿಸಲು ಹೆಣ ಗುತ್ತಿದ್ದ. ನಾನು ನಿರೋಧಿಸುತ್ತಿದ್ದೆ. ಆ ಚೂರಿಯು ಆಗ ನೇರವಾಗಿ ನನ್ನ ಹೃದಯದಲ್ಲಿ ಳಿಯಬಹುದಾಗಿತ್ತು. ಹರೆಯದಲ್ಲಿ ತುಸು ಮಲ್ಲವಿದ್ಯೆಯನ್ನು ಕಲಿತಿದ್ದರಿಂದ ಪ್ರತೀಕಾರವು ಅಯಶಸ್ವಿಯಾದರೂ ಚೂರಿಯು ನನ್ನನ್ನು ಘಾತಿಸದಿರಲೆಂದು ಎಡಮಗ್ಗುಲಿಗೆ ಹೊರಳಿದೆ. ಆಗ ಆತನು ನನ್ನನ್ನು ಕೆಳಗೆಳೆದ. ತನ್ನ ಮುಂಗೈಯನ್ನೂ ಬಿಡಿಸಿಕೊಂಡ; ನಾನೂ ಚೂರಿಯ ಇರಿತದಿಂದ ಪಾರಾದೆ. ಎಡಗೈಗೆ ತುಸು ಗಾಯವಾಗಿತ್ತು.

ಈಗ ಬರ್ತಿನ ಮೇಲಿಂದ ನಾನು ಕೆಳಗೆ ಬೋರಲು ಬಿದ್ದಿದ್ದೆ. ಎದ್ದು ನಿಲ್ಲಬೇಕೆನ್ನುವುದ ರೊಳಗಾಗಿ ಆತ ನನ್ನ ಮೂಗಿನ ಮೇಲೆ ಲತ್ತಾ ಪ್ರಹಾರ ಮಾಡಿದ್ದರಿಂದ ಮೂಗಿನಿಂದ ರಕ್ತ ಸುರಿಯಹತ್ತಿತು. ಹಾಗೇ ನಾನು 'ಕ್ಯಾ ಕರ್ ರಹೇ ಹೊ' ಎಂದು ಎರಡು ಮೂರು ಸಲ ಕಿರಿ ಚುವಷ್ಟರಲ್ಲಿ ದಿಂಬಿನ ಹತ್ತರ ಇದ್ದ ಖಾದೀ ಶರ್ಟನ್ನೆತ್ತಿಕೊಂಡು ನನ್ನ ಬಾಯಿಗೆ ತುರುಕಿದ. ದೀನೋದ್ಧಾರಕ, ದಾರಿದ್ರ್ಯ ನಿವಾರಕ, ಅನ್ಯಾ ಯಾಪಹಾರಕವಾದ ಖಾದಿ ನನ್ನ ಬಾಯನ್ನೇ ಮುಚ್ಚಿಬಿಟ್ಟಿತು; ಕೈಗಳಿಂದ ಪ್ರತೀಕಾರ ಮಾಡ ಬೇಕೆನ್ನುವುದರಲ್ಲಿ ಆತನು ತನ್ನ ಎರಡೂ ಕೈ-ಗಳನ್ನು ನನ್ನ ಕರವಸ್ತ್ರದಿಂದಲೇ ಬೆನ್ನಹಿಂದೆ ಬಿಗಿದು ಬಿಟ್ಟಿದ್ದನು. ಕಣ್ಣುಗಳೂ ಭೂಮಿಗೆ ತಾಗಿದಂತಾಗಿದ್ದರಿಂದ ಏನೂ ಕಾಣಿಸುತ್ತಿರಲಿಲ್ಲ. ಚೀರಾಡಿ ಏನನ್ನೂ ಸಾಧಿಸುವಂತಿರಲಿಲ್ಲ. ಕಣ್ಣಿಂದ ಬೆದರಿಸುವುದೂ ಅಶಕ್ಯವಾಗಿತ್ತು. ಐದಾರು ಕ್ಷಣಗಳಲ್ಲಿ ಇಷ್ಟೆಲ್ಲ ನಡೆದದ್ದರಿಂದ ಈ ಚಿತ್ರಪಟದಲ್ಲಿ ಇನ್ನೂ ಏನೇನು ಘಟಿಸುವುದೆಂಬ ದರ ಕಲ್ಪನೆಯೆ ಆಗಲೊಲ್ಲದು. ಅಳುವ ರೂಢಿ ಇರಲಿಲ್ಲ; ಅತ್ತು ಸಾಧಿಸಬೇಕಾದುದೂ ಇರ ಲಿಲ್ಲ. 'ಅರಚುವುದು' ಅಥವಾ 'ಬೊಬ್ಬೆ ಇಡು ವುದು' ಪ್ರಜಾಪ್ರಭುತ್ವದಲ್ಲಿಯ ಹಕ್ಕು. ಆದರೆ ಈಗ ಅದಕ್ಕೂ ಚ್ಯುತಿ ಬಂದಿತ್ತು. ಹೆಡಮುರಿಗೆ ಕಟ್ಟಿ ಒಗೆದ ಸ್ಥಿತಿಯಲ್ಲಿ ಒದ್ದಾಡುವುದು ಅಶಕ್ಯ; ಅದರಲ್ಲಿಯೂ ಇಬ್ಬರು ಯಮದೂತರು ಸಾಕ್ಷಾ ತ್ತಾಗಿ ನಿಂತಿರುವಾಗ ಹೇಗೆ ಸಾಧ್ಯವಾದೀತು? ನಾನು ತುಸು ಹೊಯ್ದಾಡಿದೊಡನೆ ಅವರಲ್ಲೊ ಬ್ಬನು ಮತ್ತೊಮ್ಮೆ ಬಲವಾಗಿ ಲತ್ತೆ ಕೊಟ್ಟಿದ್ದ ರಿಂದ ಕಣ್ಣಿಗೆ ಕತ್ತಲೆ ಕವಿದಂತಾಯಿತು!

ಭಾರತ ಸರಕಾರದ ಹದಿನಾಲ್ಕು ಮಂತ್ರಿ ಗಳಲ್ಲಿ ಒಬ್ಬನಾಗಿ, ಭಾರತ ಸರಕಾರದ ರೇಲ್ವೆ ಯಲ್ಲಿ ಸಂರಕ್ಷಣೆಗಾಗಿ ಅಧಿಕಾರಿಗಳು, ಹತ್ತಾರು ಪೋಲೀಸರನ್ನಿಟ್ಟುಕೊಂಡು ಪ್ರವಾಸ ಮಾಡು ತ್ತಿದ್ದ ನಾನು ಈ ಸ್ಥಿತಿಯಲ್ಲಿ ಸಿಕ್ಕುಬಿದ್ದಿದ್ದೆ. ವಿಕ್ರಮ ರಾಜನು ತಿಪ್ಪೆಯಲ್ಲಿ, ಕೈಕಾಲು ಕತ್ತ ರಿಸಿಕೊಂಡು ಹೊರಳಾಡಬೇಕಾಯಿತು. ಆದರೂ ಆತನ ಪ್ರಾಣ ಇಂಗಿದ್ದಿಲ್ಲ. ಶನಿ ಮಹಾತ್ಮೆ ಹಾಗೆ ಹೇಳುತ್ತಿದೆ.

ಆತ ನನ್ನ ಮೂಗಿನ ಮೇಲೆ ಒದೆಯನ್ನಿತ್ತು ನನ್ನ ಮೂಗನ್ನೇ ಕೊಯ್ದಂತೆ ಮಾಡಿದ್ದ. ದೈವದ ಉದ್ದೇಶವು ಇಷ್ಟೇ ಆಗಿರಬಹುದು. ಶ್ರೀವಿಷ್ಣುವು ಭೃಗುವಿನ ಒದೆಯನ್ನು ಹೃದಯದಲ್ಲಿ ಧರಿಸಿ ಲಾಂಛನವಾಗಿ ಅಂಗೀಕರಿಸಿದ. ಇಲ್ಲಿ ಕೂಡ

ನಾನು ಒಳ್ಳೆ ಅರ್ಥವನ್ನೇ ಏಕೆ ಗ್ರಹಿಸಬಾರದು? ಭೃಗು ವಿದ್ವಾಂಸನಾದ ಬ್ರಾಹ್ಮಣನಾಗಿದ್ದ; ಭಗವಾನ್ ವಿಷ್ಣುವು ಧಾತೃಶಕ್ತಿ. ಇಂದಿನ ಪ್ರಜಾಪ್ರಭುತ್ವದಲ್ಲಿ ಸರಕಾರಕ್ಕೆ ಲತ್ತೆ ಕೊಡುವ ಅಧಿಕಾರ ಸಾಮಾನ್ಯ ನಾಗರಿಕನಿಗ ದೊರೆತಿಲ್ಲವೆ? ಈ ಅಧಿಕಾರವೀಗ ಕೆಲವರಿಗೆ ಮರ್ಯಾದಿತವಾಗಿರದೆ ಇಡೀ ಜನತೆಗೆ ಪ್ರಾಪ್ತವಾಗಿದೆ. ಈ ಘಟನೆಯೂ ಅದರ ದೃಷ್ಟಾಂತವೆಂದೇ ನನ್ನ ಮನಸ್ಸಿನಲ್ಲಿ ಸುಳಿದುಹೋಯಿತು.

ಹೀಗೆ ಒಂದೆರಡು ಕ್ಷಣಗಳುರುಳುವುದರೊಳಗಾಗಿ ಕುತ್ತಿಗೆಗೆ ಬಟ್ಟೆಯ ಉರುಲು ಹಾಕಿ ಇಬ್ಬರೂ ಎರಡೂ ಕಡೆಗಳಿಂದ ಎಳೆಯಹತ್ತಿದ್ದರು. ಸತ್ಯವಾನನನ್ನು ಕೋಣದ ಮೇಲೆ ಕುಳ್ಳಿರಿಸಿ ಆತನ ಪ್ರಾಣಗಳನ್ನು ಯಮನು ಎಳೆಯುತ್ತಿದ್ದ ಪೌರಾಣಿಕ ಚಿತ್ರವು ಕಣ್ಣ ಮುಂದೆ ನಿಂತಿತು. ಕುತ್ತಿಗೆಯ ಉರುಲು ಬಿಗಿಯಾಗಹತ್ತಿತು. ಇದು ನೇಣೇ ಎಂಬಲ್ಲಿ ಸಂದೇಹವುಳಿಯಲಿಲ್ಲ. ಸ್ವಾತಂತ್ರ್ಯ ಸಮರದಲ್ಲಿ ಗಲ್ಲಿಗೇರುವುದು ರಮ್ಯವೂ ಆಕರ್ಷಕವೂ ಆದ ಭಾವನೆಯಾಗಿದ್ದು ಅನೇಕರು ತಮಗೆ ಇಂಥ ಹುತಾತ್ಮರ ಮರಣ ಬರಲಿ ಎಂದು ಹಾರೈಸಿದ್ದು ಉಂಟು. ಕೊರಳಿಗೆ ಹಾರ ಬೀಳಬೇಕೆಂದು ವಿಧಿಯು ವಿಧಿಸಿದರೂ ದೇಶದ ಸ್ವಾತಂತ್ರ್ಯಕ್ಕಾಗಿ ನೇಣಿನ ಹಗ್ಗವನ್ನೇ ಸ್ವಾಗತಿಸಬೇಕೆಂದು ಹೇಳುವ ಕವಿ ಬಿಸ್ಮಿಲ್ಲಾನ ಕಾವ್ಯವನ್ನಾರು ಮರೆತಾರು? ಆದರೆ ಇದು ದೇಶಕ್ಕಾಗಿ ಕೊರಳೊಡ್ಡಿದ ಉರುಲಾಗಿರಲಿಲ್ಲ. ಅಂಥ ವೇಳೆ ಭೂತಕಾಲದಲ್ಲಿ ಸೇರಿಹೋಗಿತ್ತು. ಈಗ ದೇಶಕ್ಕಾಗಿ ಜೀವಿಸಿ ದೇಶದ ಉತ್ಕರ್ಷವನ್ನು ಸಾಧಿಸಬೇಕಾದ ಕಾಲವಾಗಿದ್ದಿತು. ಅನೇಕ ಯೋಜನೆಗಳು ಕಾರ್ಯಗತವಾಗಹತ್ತಿದ್ದವು; ಮತ್ತೆ ಕೆಲವು ಈ ಐದು ವರ್ಷಗಳಲ್ಲಿ ರೂಪತಾಳಹತ್ತಿದ್ದವು. ಚುನಾವಣೆಯಲ್ಲಿ ಲಕ್ಷಾವಧಿ ಮತಗಳನ್ನು ಗಳಿಸಿದ್ದರಿಂದ ಲೋಕಪ್ರಿಯತೆಯ ಅಹಂಕಾರವು ಮನಸ್ಸಿನ ಸಿಂಹಾಸನದಲ್ಲಿ ಆರೂಢವಾಗಿದ್ದಿತು. ಆದರೆ ಇಲ್ಲಿ ಇದೆಂಥ ಪ್ರಸಂಗ! ಯಾರೋ ಯಾರನ್ನೋ ಗಲ್ಲಿಗೇರಿಸಲು ಸಿದ್ಧರಾಗಿದ್ದರು. ಇನ್ನು ಕ್ಷಣಾರ್ಧದಲ್ಲಿ . . . ಉಸಿರಾಡಿಸುವುದೂ ಕಷ್ಟಸಾಧ್ಯವಾಗಿತ್ತು. ಕಣ್ಣು ತೆರೆದಿದ್ದು ದೃಷ್ಟಿ ನಿಚ್ಚಳವಾಗಿತ್ತು. ಜೀವನ ಮರಣಗಳ ನಡುವಿನ ಹೊಸ್ತಿಲನ್ನು ದಾಟಲು ನಾನು ಕಾಲನ್ನೂ ಎತ್ತಿದ್ದೆ. ಸಾವು ಸನ್ನಿಹಿತವಾಗಿದೆಂಬುದನ್ನು ಮನಸ್ಸು ಅರಿತುಕೊಂಡಿತು. ಜೀವನದುದ್ದಕ್ಕೂ ಪೂಜಿಸಿದ, ಆರಾಧಿಸಿದ ಯಾವ ದೇವರೂ ಕಣ್ಣೆದುರು ಸುಳಿಯಲಿಲ್ಲ; ಮನಸ್ಸಿನಲ್ಲಿ ಅದರ ವಿಚಾರವೂ ಬರಲಿಲ್ಲ.

ವಾತ ಪಿತ್ತ ಕಫಗಳಿಂದ ಗಂಟಲು ಬಿಗಿದು ಬಂದಿರಲಿಲ್ಲ; ಆದರೂ ಹರಿ ಸ್ಮರಣೆ ನಡೆಯಲಿಲ್ಲ. ಇಪ್ಪತ್ತೆಂಟು ವರ್ಷ ಕಾಲ ಜೀವನದ ಸಂಗಾತಿಯಾಗಿದ್ದವಳ ನೆನಪೂ ಬರಲಿಲ್ಲ. ಆಕೆಯ ಸ್ಥಳಕ್ಕೆ ಬಂದವಳ ನೆನಪೂ ಆಗಲಿಲ್ಲ. ಒಬ್ಬ ಮಕ್ಕಳ ನೆನಪು ಕೂಡ ಸುಳಿಯಲಿಲ್ಲ. ಮಾಯಾಬಂಧನದಿಂದ ಮುಕ್ತನಾದಂತಿದ್ದೆ. ನನ್ನ ಹಿಂದುಳಿದವರ ಗತಿ ಏನಾದೀತೆಂಬ ವಿಚಾರವೂ ಸ್ಪರ್ಶಿಸಲಿಲ್ಲ. ಇಲ್ಲಿಯ ನಾನು ಮತ್ತು ಅಲ್ಲಿಯ ನಾನು ಇವರಲ್ಲಿ ಒಂದೇ ಕ್ಷಣದ ಅಂತರ ಉಳಿದಿತ್ತು. ಜಾಗೃತವಾಗಿದ್ದ ಮನಸಿನಲ್ಲಿ ಒಂದು ವಿಚಾರ ಸುಳಿಯುತ್ತಿತ್ತು. ಅನೇಕರ ಮರಣವನ್ನು ನಾನು ಕಂಡಿದ್ದೆ. ಅಂತ್ಯ ಕಾಲದ ಸ್ಥಿತಿಯ ಪರಿಚಯ ನನಗಿತ್ತು. ಆದರೆ ಇಲ್ಲಿ ನಾಡಿ ಸರಾಗವಾಗಿತ್ತು; ಬಿಕ್ಕಳಿಕೆ ಇದ್ದಿಲ್ಲ. ದೀಪವು ಕ್ರಮೇಣ ನಂದಿ ಹೋಗುವ ರೀತಿಯೂ ಇದಾಗಿರಲಿಲ್ಲ. ಆದರೆ ಅದು ಶಾಂತವಾಗಿ ಬಿಡುವುದು ಮಾತ್ರ ಖಂಡಿತವಾಗಿತ್ತು. ಮೇಲಿನ ಉಸಿರು ಮೇಲೆಯೆ, ಕೆಳಗಿನದು ಕೆಳಗೆಯೆ. ಕೊರಳಿನ ಸುತ್ತಲೂ ವಿಲಕ್ಷಣ ಒತ್ತಡ.

ಯೆರವಡಾದ ಕತ್ತಲೆ ಕೋಣೆಯ ನೆನಪಾಯಿತು. ಈ ಕತ್ತಲೆ ಕೋಣೆಯು ಜೇಲಿನ ಮುಖ್ಯ

ಕಟ್ಟಡದಿಂದ ೨೦ ಅಡಿಗಳ ಅಂತರದಲ್ಲಿದ್ದು ಅದಕ್ಕೆ ಹೊಂದಿಯೆ ಗಲ್ಲಿಗೇರಿಸುವ ಕೋಣೆಯಿದ್ದಿತು. ಕತ್ತಲೆ ಕೋಣೆಯ ಗೋಡೆ ಹಾಗೂ ನೇಣಿನ ಕೋಣೆಯ ಬಾಗಿಲು ಇವುಗಳ ನಡುವೆ ಕೇವಲ ಹತ್ತು ಅಡಿಗಳ ಅಂತರವಿದ್ದಿತು. ನಾವು ಅನೇಕ ಸಲ ಕತ್ತಲೆ ಕೋಣೆಯಲ್ಲಿದ್ದೆವು. ಆಗ ಅನೇಕ ರನ್ನು ಗಲ್ಲಿಗೇರಿಸಿದ್ದನ್ನು ನಾನು ಕಂಡಿದ್ದೇನೆ. ರಾಮರಾಮ ಎನ್ನುತ್ತ ಬರುವ ಆ ವ್ಯಕ್ತಿಯು ಬಾಗಿಲ ತೆರೆದ ಕೂಡಲೆ ಒಳಹೋಗುತ್ತಿದ್ದ. ಮುಂದೆ ಕ್ಷಣಾರ್ಧದಲ್ಲಿ ಕಟ್ ಎಂಬ ಸದ್ದು. ನಂತರ ಎಲ್ಲವೂ ನೀರವ. ಹೀಗಿತ್ತು ಆ ಕ್ರಮ.

ಆ ಎಲ್ಲ ದೃಶ್ಯ ಕಣ್ಣು ಮುಂದೆ ಹಾಯ್ದು ಹೋಯಿತು. ಕೇವಲ 'ಕಟ್' ಎನ್ನುವುದೊಂದೇ ಉಳಿದಿದೆ ಎಂದು ಖಂಡಿತವಾಗಿತ್ತು. ಜೀವನ ಯಾತ್ರೆ ಮುಗಿಯಿತು. ಸುಖ ದುಃಖದ ಯಾವ ಅನುಭವವೂ ಉಂಟಾಗಲಿಲ್ಲ. ಉರುಲು ಬಿಗಿಯಾಗಹತ್ತಿತು, ಪ್ರಜ್ಞೆ ಹೋಗಹತ್ತಿತು. ಅಷ್ಟರಲ್ಲಿ ಲೇಖದ ಪ್ರಾರಂಭದಲ್ಲಿ ಹೇಳಿದ 'ಇದು ನಿನ್ನ ಮೃತ್ಯುವಲ್ಲ. ಹೀಗಿಲ್ಲ ನಿನ್ನ ಮರಣ' ಎಂದು ಯಾರೊ ನನ್ನ ಕಿವಿಯಲ್ಲಿ ಗುಣಗುಣಿಸಿದಂತಾಯಿತು. ಸ್ಟಂಪ್ ಬಿದ್ದ ನಂತರ ಅಂಪಾಯರನು 'ನೋ ಬಾಲ್' ಎಂದು ಅರಚಿದರೇನು ಬಂತು ? ಹೀಗೆಲ್ಲ ವಿಚಾರಗಳು ಬರುತ್ತಿರುವಾಗಲೆ ಉರುಲು ಮತ್ತಿಷ್ಟು ಬಿಗಿಯಾಗುತ್ತಿತ್ತು.

ಆ ಕ್ಷಣಕ್ಕೆ ಪುನಃ ಅದೇ ಶಬ್ದಗಳ ಉಚ್ಚಾರ ನನ್ನ ಕಿವಿಯಲ್ಲಿ ಆಯಿತು. ನಾನೇನೋ ಧೇನಿಸುವಷ್ಟರಲ್ಲಿ ಕುತ್ತಿಗೆಯ ಉರುಲಿನ ಬಿಗುವೂ ಕಡಿಮೆಯಾಯಿತು. "ಗಾಡಿ ಠೇರ ರಹೀ ಹೈ" ಎಂದು ಅವರಲ್ಲೊಬ್ಬ ಉಚ್ಚರಿಸಿದ. ಇಬ್ಬರೂ ಉರುಲಿನ ಬಟ್ಟೆಯನ್ನು ಬಿಟ್ಟುಕೊಟ್ಟರು.

ನೇಣು ಸಡಿಲಾದ್ದರಿಂದ ಹೀಗೆ ಊಹಿಸಿದೆ. ಇನ್ನೊಂದು ಕ್ಷಣ. ಗಾಡಿಯ ಬಾಗಿಲು ತೆರೆದ ಸದ್ದು. ಮರಣ ತೊಲಗಿತೆಂದು ಭಾವಿಸಿದೆ. ಆದರೂ ಚಲನವಲನ ಮಾಡಿದರೆ ಮತ್ತೇನು ಗಂಡಾಂತರವೊ ಎಂದು ಹಾಗೇ ಬಿದ್ದುಕೊಂಡೆ. ಶಕ್ತಿಸರ್ವಸ್ವವೂ ಕಿವಿಯಲ್ಲಿಯೆ ಕೇಂದ್ರೀಭೂತವಾಗಿತ್ತು. ಎದುರಿಗೆ ಬಂದಿದ್ದ ಮೃತ್ಯು ಹಿಂತಿರುಗಿದ್ದ; ವ್ಯಾಪಾರ ಹೊಂದದಿದ್ದ ಗಿರಾಕಿಯಂತೆ. ಗಾಡಿಯೆ ಮರಣವನ್ನು ನಿವಾರಿಸಿದಂತಿತ್ತು. ಈ ಅತಿಥಿ ಹೀಗೆ ಬಂದು, ಹೀಗೆ ಹೋದದ್ದೇಕೆ-ಎಂಬುದೂ ಒಂದು ರಹಸ್ಯವಾಗಿತ್ತು. ಬಾಗಿಲು ಮುಚ್ಚಿದ ಸದ್ದು ಕೇಳಿ ಬಿದ್ದಲ್ಲಿಂದಲೆ ಕತ್ತು ಹೊರಳಿಸಿ ನೋಡಿದೆ. ಯಾರೂ ಡಬ್ಬಿಯಲ್ಲಿರಲಿಲ್ಲ. ನಂತರ ದನದಂತೆ ನಾನು ಗಾಡಿಗೆ ಮೂತಿಯನ್ನು ತಿಕ್ಕಿದೆ. ಮೋರೆಗೆ ಕಟ್ಟಿದ ಶರ್ಟನ್ನು ಸರಿಸಿದೆ. ಬೆನ್ನಹಿಂದೆ ಕಟ್ಟಿದ್ದ ಕೈಗಳನ್ನೂ ಬಿಡಿಸಿಕೊಂಡು ಎದ್ದುನಿಂತೆ. ಹಾಸಿಗೆಯೆಲ್ಲ ಕೆಟ್ಟುಹೋಗಿತ್ತು. ಬಟ್ಟೆ- ಕಾಗದಗಳು ಅತ್ತಿತ್ತ ಬಿದ್ದಿದ್ದವು. ಗಂಡಾಂತರ ದೂರವಾಗಿದ್ದರೂ ಗಂಡಾಂತರದ ಸರಪಳಿಯನ್ನೆಳೆದೆ. ಗಾಡಿ ತಕ್ಷಣ ನಿಂತಿತು.

ನನ್ನ ರಕ್ಷಣೆಗಾಗಿದ್ದ ಅಧಿಕಾರಿಗಳೂ ಪೋಲೀಸರೂ ಧಾವಿಸಿ ನನ್ನ ಡಬ್ಬಿಯ ಹತ್ತಿರ ಬಂದು, ಕಳ್ಳರನ್ನು ಶೋಧಿಸುವುದರ ಬದಲು, ತಮ್ಮ ನೌಕರಿಗೆ ಗಂಡಾಂತರ ಉಂಟಾದ ಬಗ್ಗೆ ಚಿಂತಿಸತೊಡಗಿದರು. ಕಳ್ಳರು ಗಾಡಿಯಲ್ಲಿ ಅಥವಾ ಅದರ ಬುಡದಲ್ಲಿ ಅಡಗಿಕೊಂಡಿರಬಹುದೇನೊ ಎಂದು ಗಾರ್ಡನು ಶೋಧ ನಡೆಸಿದ. ಆದರೆ ಯಾರೂ ಸಿಗಲಿಲ್ಲ. ಗಾಡಿ ಪುನಃ ಹೊರಟಿತು. ಕುರ್ಡುವಾಡಿ ಬರುವ ವರೆಗೆ ಡಬ್ಬಿಯ-ಲ್ಲಿಯ ಪೋಲೀಸ ಅಧಿಕಾರಿಗಳು ಈ ದುರ್ಘಟನೆ ಹೇಗೆ ಸಂಭವಿಸಿತೆಂಬ ಬಗ್ಗೆಯೆ ವಿಚಾರ ನಡೆಸಿದ್ದರು. ಎರಡು ರೂಪಾಯಿ ಕೂಡ ಇಲ್ಲದಿದ್ದ ಹಣದ ಪಾಕೀಟು, ಸಾಹಿತ್ಯ ಹಾಗೂ ರಾಜ್ಯ ಕಾರಭಾರದಲ್ಲಿ ಸೇವೆ ಸಲ್ಲಿಸಲು ಸಹಾಯಕವಾ-ಗಿದ್ದ ಫೌಂಟನ್ ಪೆನ್ ಕಾಣೆಯಾಗಿದ್ದವು. ದಿಂಬಿನ ಕೆಳಗಿದ್ದ ಕೈಗಡಿಯಾರವೂ ಇಲ್ಲದಾಗಿತ್ತು. ಎಂಥ ಪ್ರಸಂಗದಿಂದ ನಾನು ಪಾರಾದೆ

ನೆಂಬುದರ ಕಲ್ಪನೆಯು ಕ್ರಮೇಣ ಸಂಪೂರ್ಣವಾಗಿ ಉಂಟಾಗಹತ್ತಿತು. ಬಲಗಡೆಯ ಕಿಟಿಕಿಯಲ್ಲಿ ಉದಯೋನ್ಮುಖದ ಸೂರ್ಯಬಿಂಬ ಕಾಣುತ್ತಿತ್ತು.

ದೇಹದ ಮೇಲಿನ ಗಾಯಗಳ ನೋವಿಗಿಂತ ಮನಸ್ಸಿಗಾದ ನೋವೇನೂ ಕಡಿಮೆಯಾಗಿರಲಿಲ್ಲ. ನಡೆದ ಘಟನೆಯ ವಾರ್ತೆ ಕುರ್ಡುವಾಡಿ ನಿಲ್ದಾಣಕ್ಕೆ ಮೊದಲೆ ಬಂದು ಮುಟ್ಟಿತ್ತು. ಡಾಕ್ಟರ್ ಹಾಗೂ ಮತ್ತೊಬ್ಬನು ಡಬ್ಬಿಯಲ್ಲಿ ಬಂದರು. ಪ್ರಕರಣವನ್ನು ಉಪ್ಪುಕಾರ ಹಚ್ಚಿ, ಹೇಗೆ ಸಿದ್ಧಪಡಿಸಬೇಕೆಂಬುದನ್ನು ಆತ ಹೇಳಿದ. ಆ ಪ್ರಸಂಗದಲ್ಲಿಯೂ ಆತನ ವಿನೋದದಿಂದ ನನಗೆ ತಾನಾಗಿಯೆ ನಗು ಬಂದಿತು. ಯಾರೋ ಚಹವನ್ನು ತಂದಿತ್ತರು. ಸೇವೆಗೆ ಅವಕಾಶ ದೊರೆತದ್ದಕ್ಕಾಗಿ ಎಲ್ಲರೂ ತಾವು ಧನ್ಯರಾದಂತೆ ಭಾವಿಸಿದರು. ಅದಕ್ಕಿಂತಲೂ ಹೆಚ್ಚಿನ ಕೊನೆಯ ಸೇವೆ ಸಲ್ಲಿಸಲು ನನ್ನ ದುರ್ದೈವವು ಅವರಿಗೆ ಅವಕಾಶ ಒದಗಿಸಲಿಲ್ಲವೆಂದು ಕ್ಷಣಕಾಲ ದುಃಖವಾಯಿತು. " ಇದೊಂದು ರಾಜಕಾರಣದ ಸ್ಟಂಟ್ " ಎಂದು ಯಾರೊ ಅಂದರು. " ಇದು ನಿಮ್ಮ ರಾಜಕೀಯ ಶತ್ರುಗಳ ಕೆಲಸವಲ್ಲವೆ ? " ಎಂದು ಆರೋಪಿಪರ ವಕೀಲನು ಪ್ರಶ್ನೆ ಕೇಳಿಯೆಬಿಟ್ಟನು. " ನನ್ನ ರಾಜಕೀಯ ಶತ್ರುಗಳು ಹಾಗೂ ವಿರೋಧಿಕರು ಸಭ್ಯರಾಗಿದ್ದಾರೆಂ "ದು ನಾನು ಉತ್ತರಿಸಿದೆ. ಕಳ್ಳ ಸಿಕ್ಕು ಶಿಕ್ಷಿಸಲ್ಪಟ್ಟ ಎಂಬುದಕ್ಕಿಂತ ಸ್ನೇಹಪ್ರತೀಕವಾಗಿ ದೊರೆತಿದ್ದ ಕೈಗಡಿಯಾರವು ಪುನಃ ನನ್ನ ಕೈಗೆ ಬರುವುದೆಂಬ ಸಂತೋಷವೇ ಮಿಗಿಲಾಗಿದ್ದಿತು. ಅದಕ್ಕೆ ನಾನು ಎಷ್ಟೊಂದು ಬೆಲೆ ತೆತ್ತಿದ್ದೆ.

ಹೋಗಿ ಹಿಂತಿರುಗಲಾಗದ ಮತ್ತು ಅಲ್ಲಿಯ ಅನುಭವವನ್ನು ನಿವೇದಿಸಲಾಗದ ಮೃತ್ಯುವಿನ ಆಚೆಯ ಪ್ರಾಂತದಲ್ಲಿ ನಾನೊಂದು ಹೆಜ್ಜೆಯನ್ನಿಟ್ಟು ದೃಷ್ಟಿಕ್ಷೇಪ ಮಾಡಿ ಬಂದಿದ್ದೆ. ಶ್ರವಣ ಶಕ್ತಿ ಉತ್ತಮವಾಗಿತ್ತು— ಮೃತ್ಯುವಿನ ಗತಿಯನ್ನು ಹೆಜ್ಜೆಯನ್ನು ನಾನು ಆಲಿಸಿದ್ದೆ ; ತೆರೆದ ಕಣ್ಣಿನಿಂದ ನೋಡಿದ್ದೆ. ನಂತರ ತಿಲಮಾತ್ರ ಅಂಶ ನನ್ನಲ್ಲಿಲ್ಲದಿದ್ದರೂ ' ನನ್ನ ಮರಣ ನಾನು ಕಣ್ಣಿಂದಲೆ ಕಂಡೆ,' ಎಂದೇ ಆ ಸಂಭ್ರಮದ ವರ್ಣನೆ ಮಾಡಿದ್ದೇನೆ.

ಸೆಶನ್ಸ ಕೋರ್ಟಿನಲ್ಲಿ ಪಂಚರೆದುರು ನಾನು ನನ್ನ ಹೇಳಿಕೆಯನ್ನಿತ್ತ ಮರುಕ್ಷಣದಲ್ಲಿಯೆ ಪಂಚಪ್ರಮುಖನು ತನ್ನ ಇಹಲೋಕ ಯಾತ್ರೆಯನ್ನು ಮುಗಿಸಿದ್ದ. ಎಲ್ಲ ವಿಲಕ್ಷಣ !

ಈ ಘಟನೆಯ ನಂತರ ಅನೇಕ ಸ್ನೇಹಿತರು ನನಗೆ ಪತ್ರ ಬರೆದರು. ಈ ಪ್ರಸಂಗದ ವರ್ಣನೆ ಮಾಡಬೇಕೆಂದು ಕೆಲವರು ಸೂಚಿಸಿದರು. "ಇದು ನಿನ್ನ ಮರಣವಲ್ಲ; ಹೀಗಿಲ್ಲ ನಿನ್ನ ಮರಣ" ಎಂಬ ಶಬ್ದಗಳನ್ನು ಪ್ರತ್ಯಕ್ಷ ಕೇಳಿದ ಅನುಭವದ ಕುರಿತು ತತ್ತ್ವಜ್ಞಾನಿಗಳೊಂದಿಗೆ ಚರ್ಚಿಸಿದೆ. ಇದು ಕೇವಲ ಮನಸ್ಸಿನ ಹಳವಂಡವೆಂದು ಕೆಲವರು ಹೇಳಿದರೆ ಇನ್ನು ಕೆಲವರು ಅಪೌರುಷೇಯ ಶಕ್ತಿಯಿದೆಂದು ಹೇಳಿದರು. ಆದರೆ ನನ್ನ ಶ್ರದ್ಧೆಯ ಮೇಲೆ ಇದರಿಂದಾಗಿರುವ ಪರಿಣಾಮವನ್ನು ನಾನು ರಹಸ್ಯವೆಂದೇ ಕಾಪಾಡಿಕೊಂಡು ಬಂದಿದ್ದೇನೆ. ಆದರೆ ಮರಣವನ್ನು ಸಂದರ್ಶಿಸುವ ಸಂಭ್ರಮವು ಅಶಕ್ಯಪ್ರಾಯವಾಗಿರುವುದರಿಂದ ವಾಚಕರಿಗೆ ವಿಶ್ವಾಸದಿಂದ ಆತ್ಮೀಯತೆಯಿಂದ ನಿವೇದಿಸಿದ್ದೇನೆ. ನೋಡಿದ ಮರಣದ ಮೃತ್ಯುಲೇಖವನ್ನು ಸಂಪಾದಕನ ಬದಲು ನಾನೇ ಬರೆದಿದ್ದೇನೆ ! *


ಪೋರ್ತುಗೀಜ್ ಸರ್ವಾಧಿಕಾರಿ ಸಾಲಝಾರನ ವಿರುದ್ಧ
ಅವನ ದೇಶೀಯರೇ ನಡೆಸಿದ ವಿಲಕ್ಷಣ ಪ್ರತಿಭಟನೆ

"ಸಾಂತಾಮೇರಿಯಾ" ದ ಮಹಾಯಾತ್ರೆ

"ದುಷ್ಯಂತ"

೨೧ ಸಾವಿರ ಟನ್ ಭಾರವುಳ್ಳ, ೬೦೦ ಅಡಿ ಉದ್ದವಿರುವ, ಬೂದು ಬಣ್ಣದ ಸಾಂತಾಮೇರಿಯಾ ಪೋರ್ತುಗಾಲದ ಒಂದು ಹೆಮ್ಮೆಯ ಹಡಗವಾಗಿದ್ದು ಉತ್ತರ ಹಾಗೂ ದಕ್ಷಿಣ ಅಮೇರಿಕೆಗಳತ್ತ ಆಗಾಗ ಐಷ್ ಆರಾಮದ ಸಂಚಾರಕ್ಕಾಗಿ ಪ್ರವಾಸಿಗಳನ್ನು ಕರೆದುಕೊಂಡು ಹೋಗುವ ವಾಡಿಕೆಯದಾಗಿತ್ತು. ಅಂಥ ಒಂದು ಪ್ರವಾಸದ ನಿಮಿತ್ತ ಸಾಂತಾಮೇರಿಯಾ ಇದೇ ಜನೆವರಿ ೯ ರಂದು ೫೮೦ ಜನ ಪ್ರವಾಸಿಕರನ್ನು ಕರೆದುಕೊಂಡು ಪೋರ್ತುಗಾಲದ ರಾಜಧಾನಿಯಾದ ಲಿಸ್ಬನ್ ನಗರದಿಂದ ಹೊರಟಿತು. ಮೊದಲು ಪಶ್ಚಿಮ ಆಫ್ರಿಕೆಯ ದಂಡೆಗುಂಟಸಾಗಿ, ಮುಂದೆ ದಕ್ಷಿಣ ಅಮೇರಿಕೆಯ ಉತ್ತರಕ್ಕಿರುವ ವ್ಹೆನೆಝುವೆಲಾ ಪ್ರಾಂತದ ಮುಖ್ಯ ಬಂದರವಾದ ಲಾಗ್ವೇರಾ ಬಂದರವನ್ನು ಜನೆವರಿ ೨೦ ರಂದು ತಲುಪಿದಾಗ ಸಾಂತಾ ಮೇರಿಯಾದಲ್ಲಿ ಆಗಲೆ ೬೨೦ ಪ್ರವಾಸಿಕರಿದ್ದರು. ಮುಂದೆ ೪೫ ದಿನಗಳ ಕಾಲ ಪ್ರಯಾಣ ಮಾಡಿ ಅಮೇರಿಕಾ ಸಂಯುಕ್ತ ಸಂಸ್ಥಾನಗಳ ದಕ್ಷಿಣಕ್ಕಿರುವ ಪೋರ್ಟ್ ಎವರ್‌ಗ್ಲೇಡ್ಸ್ ಬಂದರವನ್ನು ಅದು ತಲುಪಬೇಕಿತ್ತು.

ಲಾಗ್ವೇರಾದಲ್ಲಿ ಅದು ಮತ್ತಷ್ಟು ಪ್ರವಾಸಿಗಳನ್ನು ಹತ್ತಿಸಿಕೊಳ್ಳಲು ತಂಗಿದ್ದಾಗ ೬೯ ಜನರು ಹಡಗನ್ನೇರಿದರು. ಯಾರೂ ಏನೂ ಸಂದೇಹ



ಪಡಲಿಲ್ಲ. ಬೇರೆ ಬೇರೆಯಾಗಿ ಬಂದವರಂತೆ ಅವರು ಅಲ್ಲಲ್ಲಿ ಹೋಗಿ ನಿಂತುಕೊಂಡಿದ್ದರು. ಅವರು ಸಂಗಡ ತಂದ ಕೈಚೀಲಗಳನ್ನು ಪರೀಕ್ಷಿಸಿದ್ದರೆ ಬಟ್ಟೆಬರೆಗಳೇನೂ ಇರದೇ ಬಂದೂಕು ಹಾಗೂ ಇತರ ಶಸ್ತ್ರಾಸ್ತ್ರಗಳು ಸಿಗಬಹುದಾಗಿತ್ತು. ಆದರೆ ಯಾರೂ ನೋಡಲಿಲ್ಲ. ಈ ಶತಮಾನದ ಭಾರಿ ಸಮುದ್ರ ಸಾಹಸಗಳಲ್ಲೊಂದಕ್ಕೆ ಅಣಿಯಾಗಿ ಬಂದಿದ್ದ ಈ ೬೯ ಜನರಲ್ಲಿ ಟಿಕೀಟನ್ನು ತೆಗೆಯಿಸಿದವರು ಮೂವತ್ತು ಜನ ಮಾತ್ರ! ಉಳಿದವರಿಗೆ ಟಿಕೀಟು ತೆಗೆಯಿಸಲು ಅವರಲ್ಲಿ ಹಣವಿರಲಿಲ್ಲ! ಅವರು ಎದೆಗುಂದಲಿಲ್ಲ. ಇತರ ೩೯ ಜನರು ಟಿಕೀಟುಧಾರಿಗಳನ್ನು ಕಳಿಸಲು ಬಂದ "ಸ್ನೇಹಿತರೂ ಬಳಗದವರೂ" ಆಗಿ, ಹಡಗವನ್ನು ಹತ್ತಿದರು. ಹಡಗು ಬಿಡುವ ವೇಳೆಯಾದರೂ ಹೊರಡುತ್ತೇವೆ ಎನ್ನುತ್ತ ಅಲ್ಲಿಯೇ ಉಳಿದರು. ಟಿಕೀಟು ಇಲ್ಲದಿದ್ದರೆ ಸಮುದ್ರಕ್ಕೆಸೆಯುವುದೇನಿಲ್ಲವಷ್ಟೆ. ಮುಂದಿನ ನಿಲ್ದಾಣ ಬಂದಾಗ ಅವರಿಗೆ ದಂಡ, ತಪ್ಪಿದರೆ ಶಿಕ್ಷೆಯ ವಿಧಿ ಕಾದಿತ್ತೆಂದು ಅವರು ಹಾಗೆಯೇ ಹಡಗದಲ್ಲಿ ಉಳಿದರು. ಆದರೆ ಅವರಿಗೆ ದಂಡ ತೆರುವ ಪ್ರಸಂಗ ಬರಲಿಲ್ಲ.

ಎರಡು ದಿನ ಮುಂಚೆ ಅದೇ ಬಂದರದಲ್ಲಿ ಆರು ಜನ ಕರಿಬಟ್ಟೆ ಧರಿಸಿದವರು ಒಂದು ದೊಡ್ಡ ಶವ ಪೆಟ್ಟಿಗೆಯನ್ನು ಸಾಂತಾ ಮೇರಿಯಾಕ್ಕೆ ತಂದಿದ್ದರಂತೆ. ಅವರೊಡನೆ ಒಬ್ಬ ವಿಧವೆ ಬಂದಿದ್ದಳು. ಅವಳ ಗೋಳಾಟ ಎಷ್ಟು ಕರುಣಾಜನಕವಾಗಿತ್ತೆಂದರೆ ಅನೇಕ ಪ್ರವಾಸಿಕರ ಲಕ್ಷ ಅತ್ತ ಸೆಳೆಯಲ್ಪಟ್ಟಿತ್ತು. ಆ ಆರು ದುಃಖಿಗಳಿಗೆ ಈ ಪರಮ ದುಃಖಿನಿಯನ್ನು ಸಂತೈಸಬೇಕಾದರೆ ಸಾಕು-ಬೇಕಾಗಿತ್ತು.

ಘಟನೆಯ ದಿನ ರಾತ್ರಿ ಒಂದು ಗಂಟೆಯ ವೇಳೆಯಾಗಿರಬೇಕು. ಸಾಗರದಲ್ಲಿ ಸಾಗಿದ್ದ ಎಲ್ಲರೂ ನಿದ್ರೆಯ ಅಮಲಿನಲ್ಲಿದ್ದರು. ಹಠಾತ್ತಾಗಿ ಆ ೬೯ ಜನ ಮೆಶೀನ್‌ಗನ್ ಸಹಿತವಾಗಿ ಹಡಗನ್ನು ನಡೆಯಿಸುವ ಎಂಜಿನ್ ಕೋಣೆಯತ್ತ ಸಾಗಿದರು. ಅಲ್ಲಿಯ ನಾವಿಕರಲ್ಲಿ ಒಬ್ಬ ಬಂಡುಗಾರರನ್ನು ಕಂಡು ಹಡಗಿನ ಕಪ್ತಾನನ ಕ್ಯಾಬಿನ್ನಿನ ಕಡೆಗೆ ಧಾವಿಸಿದನು. ಆದರೆ ಗುಂಡಿನೇಟಿಗೆ ತುತ್ತಾಗಿ ನೆಲಕ್ಕುರುಳಿದನು. ಈ ಗದ್ದಲದಲ್ಲಿ ಇನ್ನಿಬ್ಬರಿಗೆ ಗಾಯಗಳು ಸಂಭವಿಸಿದವು. ಬಂಡುಗಾರರ ನಾಯಕನು ಎಂಜಿನ್ನಿನಲ್ಲಿರುವ ಫೋನನ್ನು ಕೈಗೆತ್ತಿಕೊಂಡು, ಮಲಗಿದ್ದ ಕಪ್ತಾ-ನನನ್ನು ಒದರಿ ಎಬ್ಬಿಸಿ, ಹಡಗನ್ನು ತಾನು ವಶಪಡಿಸಿಕೊಂಡದ್ದಾಗಿ ತಿಳಿಯಪಡಿಸಿದನು. ಅಷ್ಟರಲ್ಲಿ ಬಾಗಿಲಲ್ಲಿಯೆ ಕಾದಿದ್ದ ಬಂಡುಗಾರರು ಕಪ್ತಾನನನ್ನು ಬಂಧಿಸಿ ಬೇಡಿಯನ್ನು ತೊಡಿಸಿದರು.

ಕೇವಲ ಹತ್ತು ನಿಮಿಷಗಳಲ್ಲಿ, ವಿಶೇಷ ಸಾವು-ನೋವುಗಳಿಲ್ಲದೆ ಸಾಂತಾ ಮೇರಿಯಾ ಬಂಡುಗಾರರ ಕೈವಶವಾಗಿ ಮುಗಿದುಹೋಯಿತು!

ಆದರೆ ಈ ಘಟನೆ ನಡೆಯುವಲ್ಲಿ ೨-೩ ತಿಂಗಳಿನಿಂದ ಸಿದ್ಧತೆ ನಡೆದಿತ್ತು. ಯಾರು ಯಾರು ಯಾವ ಕೆಲಸಕ್ಕೆ ಸಿದ್ಧರಾಗಬೇಕು ಎಂಬುದನ್ನು ಗೊತ್ತುಪಡಿಸಲಾಗಿತ್ತು. ಆ ಕೆಲಸ ಬಾರದವರಿಗೆ ತರಬೇತಿಯನ್ನು ಕೊಡಲಾಗಿತ್ತು. ಹಡಗನ್ನು ನಡೆಯಿಸುವ, ಮತ್ತಿತರ ಎಲ್ಲ ವಿದ್ಯೆಗಳನ್ನೂ ಅವರವರಿಗೆ ಕಲಿಸಲಾಗಿತ್ತು. ಹಡಗು ಲಿಸ್ಬನ್ನಿನಿಂದ ಹೊರಡುವಾಗಲೇ ಬಂಡುಗಾರರ ಪಕ್ಷವಾಗಿ ಒರ್ವ ಹುಡುಗಿ ಟೆಲಿಫೋನ್ ಆಪ-ರೇಟರ್ ಎಂಬುದಾಗಿ ಅಲ್ಲಿ ಕೆಲಸಕ್ಕೆ ಸೇರಿಕೊಂಡಿದ್ದಳು. ಆ ಶವದ ಪೆಟ್ಟಿಗೆಯಾಗಲಿ, ಶವವಾಗಲಿ ಮುಂದೆ ಯಾರ ಕಣ್ಣಿಗೂ ಬೀಳಲಿಲ್ಲ. ಬಂಡಾಯಗಾರರು ದೊಡ್ಡ ದೊಡ್ಡ ಶಸ್ತ್ರಾಸ್ತ್ರಗಳನ್ನು ತರಲು ಹೂಡಿದ ಹಂಚಿಕೆಯಿದೆಂದು ಕೆಲವರು ಊಹಿಸಿದ್ದಾರೆ.

ಈ ಘಟನೆ ಜರುಗಿದ ಮೇಲೆ ಅದನ್ನು ಜಗ-ತ್ತಿಗೆ ಆಗಿಂದಾಗ ಸಾರಲು ಅವರಲ್ಲಿ ಆಗ ಯಾವ ಅನುಕೂಲತೆಯೂ ಇರಲಿಲ್ಲ. ಇದನ್ನು ಯೋಜಿ

ಸಿದ್ಧ ಸಾಹಸಿಗಳು ವೆನೆಝುವೆಲಾ ದೇಶದ ಪರಿಚಿತ, ವಿಶ್ವಾಸಿಕ ಪತ್ರಿಕಾಸಂಪಾದಕನೊಬ್ಬ ನನ್ನು ಕಂಡು, ತಮ್ಮ ಸಂಗಡ ಓರ್ವ ವರದಿಗಾರ-ನನ್ನೂ ಫೋಟೋಗ್ರಾಫರನನ್ನೂ ಕಳಿಸಿಕೊಡ ಬೇಕೆಂದು ಕೇಳಿದಾಗ, ಆ ಸಂಪಾದಕ ಮಹಾ ಶಯ ನಕ್ಕುಬಿಟ್ಟಿದ್ದನು. ಹಡಗುಗಳ್ಳತನವು ೨೦ ನೆಯ ಶತಮಾನದಲ್ಲಿ ದಕ್ಕುವಂತಹದಲ್ಲ ವೆಂದೂ ಅವನು ಉಪದೇಶಿಸಿದ್ದ.

ಹಡಗದಲ್ಲಿದ್ದ ಪ್ರಯಾಣಿಕರಿಗೆ ನಟ್ಟಿರುಳ ಸನ್ನಿವೇಶದ ಸುಳಿವೇ ಇರಲಿಲ್ಲ. ಉತ್ತರ ದಿಕ್ಕಿನತ್ತ ಸಾಗಿದ್ದ ಹಡಗು ದಕ್ಷಿಣ ದಿಕ್ಕಿನತ್ತ ಹಿಂತಿರುಗಿ ಸಾಗಿದ್ದುದೂ ಅವರಿಗೆ ಗೊತ್ತಾಗಲಿಲ್ಲ. ಅದು ಹೇಗೊ — ಬಹುಶಃ ಸಮುದ್ರದ ಅಬ್ಬರ ದಿಂದ ಇರಬೇಕು — ಪ್ರಯಾಣಿಕರಿಗೆ ರಾತ್ರಿ ಸಿಡಿದ ಗುಂಡುಗಳ ಸಪ್ಪಳವೂ ಕೇಳಬಂದಿರಲಿಲ್ಲ. ಬೆಳಗಿನ ಉಪಹಾರಕ್ಕೆಂದು ಅವರಲ್ಲಿ ಬಹು ಜನ ಬಂದು ಕುಳಿತಿದ್ದಾಗ ಬಂಡುಗಾರರ ನಾಯಕನು ಹಡಗನ್ನು ತಾನು ವಶಪಡಿಸಿಕೊಂಡುದಾಗಿಯೂ ಸಾಲಝಾರ ಸರಕಾರದ ಪ್ರತಿಸ್ಪರ್ಧಿ ಡೆಲ್ಗ್ಯಾಡೋ, ಪೋರ್ತುಗಾಲದ "ಸ್ವತಂತ್ರ" ಸರಕಾರದ ಅಧ್ಯಕ್ಷನಾಗಿದ್ದು ಅವನ ಆಧಿಪತ್ಯಕ್ಕೆ ಈ ಹಡಗು ಒಳಗಾಗಿದೆಯೆಂದೂ ಯಾರ ವಿತ್ತಜೀವಗಳಿಗೂ ಧಕ್ಕೆಯಿಲ್ಲವೆಂದೂ ಸಾರಿದಾಗಲೇ ಅವರಿಗೆ ಈ ವಿಷಯ ತಿಳಿದುಬಂದುದು!

ಅಲ್ಲಿಂದ ಬಂಡುಗಾರರ ನಾಯಕನು ತನ್ನ ಸಾಹಸವನ್ನು ವಾಯರಲೆಸ್ ಮೂಲಕ ಬಣ್ಣದ ಮಾತಿನಿಂದ ಸಾರಿದನು. "ಡೆಲ್ಗ್ಯಾಡೊನೇ ಪೋರ್ತುಗಾಲದ ನಿಜವಾದ ಅಧ್ಯಕ್ಷ. ಸಾಲಝಾರನ ನಿರಂಕುಶ ಪ್ರಭುತ್ವಕ್ಕೆ ವಿರೋಧಿಗಳಿದ್ದವರೆಲ್ಲ ಒಂದೆಡೆಗೆ ಸಾರಿ, ತಮ್ಮ ದೇಶದ ವಿಮೋ-ಚನೆಯ ದೀಕ್ಷೆಯನ್ನು ಕೈಕೊಂಡಿದ್ದಾರೆ. ಪೋರ್ತುಗೀಜ್ ಪ್ರದೇಶದ ವಿಮೋಚನೆಯಲ್ಲಿ ಸಾಂತಾ ಮೇರಿಯಾ ಮೊದಲನೆಯ ಹೆಜ್ಜೆಯಾಗಿದೆ" ಎಂದ.

ಹೀಗೆ ಪ್ರಾರಂಭವಾಯಿತು ೩೨ ವರ್ಷಗಳಿಂದ ಪೋರ್ತುಗಾಲ ಮತ್ತು ಅದರ ವಸಾಹತುಗಳನ್ನು ಉಕ್ಕಿನ ಹಿಡಿತದಿಂದ ಆಳುತ್ತಿರುವ ಸರ್ವಾಧಿಕಾರಿ ಡಾ. ಅಂಟೋನಿಯೊ ಡಿ ಒಲಿವೇರಾ ಸಾಲಝಾರನ ವಿರುದ್ಧ ಪೋರ್ತುಗೀಸ್ ನಾಗರಿಕರಿಂದಲೇ ಪ್ರಪ್ರಥಮವಾಗಿ ಯೋಜಿಸಲ್ಪಟ್ಟ ಬಂಡಾಯದ ಕಥೆ. ಅಂದಿನಿಂದ ೧೨ ದಿನಗಳ ವರೆಗೆ ಜಗತ್ತಿನ ಪ್ರಬಲ ರಾಷ್ಟ್ರಗಳ ಹಡಗಗಳಿಂದ ಬೆನ್ನಟ್ಟಲ್ಪಟ್ಟು ಸಾಗರವನ್ನು ಸುತ್ತಿದ ಸಾಂತಾಮೇರಿಯಾದ ನಾಟಕ ನಡೆಯಿತು.

ಜನರಲ್ ಹಂಬರ್ಟೋ ಡೆಲ್ಗ್ಯಾಡೊ ಸಾಲಝಾರನ ಪ್ರಬಲ ಪ್ರತಿಸ್ಪರ್ಧಿ. ಮೂರು ವರ್ಷಗಳ ಹಿಂದಿನ ಚುನಾವಣೆಯಲ್ಲಿ ಅವನು ಪೋರ್ತುಗಾಲದ ಅಧ್ಯಕ್ಷ ಪದಕ್ಕೆ ಸಾಲಝಾರನ ಅಧಿಕೃತ ಹುರಿಯಾಳಿನ ವಿರುದ್ಧ ಸ್ಪರ್ಧಿಸಿದ್ದನು. ಸಾಲಝಾರನ ಆಡಳಿತದಲ್ಲಿ, ಚುನಾವಣೆಯಲ್ಲೇ ಆಗಲಿ ಸರಕಾರದ ವಿರುದ್ಧ ಏನೂ ಹೇಳುವ ಸ್ವಾತಂತ್ರ್ಯ ಜನರಿಗಿರಲಿಲ್ಲ. ಚುನಾವಣೆ ಮುಗಿಯುವ ತನಕ ಕಾಯ್ದು, ಅವನನ್ನು ಬಂಧಿಸುವ ಎತ್ತುಗಡೆ ನಡೆಯಿತು. ಚುನಾವಣೆಯ ಫಲಿತಾಂಶ ಹೊರಬಿತ್ತು; ಸರಕಾರಿ ಕೈವಾಡ ಎಲ್ಲೆಲ್ಲಿಯೂ ನಡೆದರೂ ಶೇಕಡ ೨೩ ರಷ್ಟು ಮತಗಳನ್ನು ಅವನು ಸಾಲಝಾರನಿಂದ ಕಿತ್ತುಕೊಂಡಿದ್ದನು. ಅಂತೆಯೇ ಅವನನ್ನು ಕೂಡಲೇ ಬಂಧಿಸಬೇಕೆಂದು ಆಜ್ಞೆ ಹೊರಟಿತ್ತು. ಡೆಲ್ಗ್ಯಾಡೊ ಮೂರು ತಿಂಗಳ ಕಾಲ ತಲೆಮರೆಸಿಕೊಂಡಿದ್ದ. ಕೊನೆಗೆ ಅವನನ್ನು ದೇಶದ್ರೋಹಿಯೆಂದು ಪರಿಗಣಿಸಿ ದೇಶಬಾಹಿರನನ್ನಾಗಿ ಮಾಡಿದ ಮೇಲೆ ಈ ಎರಡು ವರ್ಷಗಳ ಕಾಲ ಬ್ರಾಝಿಲ್‌ನಲ್ಲಿ ವಾಸವಾಗಿದ್ದ.

ಆದರೆ ಸಾಂತಾಮೇರಿಯಾ ಹಡಗವನ್ನು ಆಕ್ರಮಿಸುವ ಯೋಜನೆಯ ಸಂಪೂರ್ಣ ಯಶಸ್ಸು ಡೆಲ್ಗ್ಯಾಡೊನದಾಗಿರದೆ ಇನ್ನೊಬ್ಬ ವ್ಯಕ್ತಿಯದಾಗಿತ್ತು. ಯಾರು ಈತ ಎಂದು ಜಗತ್ತು ಕಣ್ಣು



ಗೆಲ್ವಾಯೋ : ಸಾಂತಾಮೇರಿಯಾದ ವೀರ

ತೆರೆದು ನೋಡಿತು. ಅವನೇ ಹೆನ್ರಿಕ್ ಗೆಲ್ವಾಯೋ.

ಪೋರ್ತುಗಾಲದ ಅತಿ ದೊಡ್ಡ ವಸಾಹತು ಎಂದರೆ ಆಫ್ರಿಕೆಯಲ್ಲಿರುವ ಅಂಗೋಲಾ. ಅಂಗೋಲಾದ ಮೂಲ ನಿವಾಸಿಗಳು ಸಾಲಝಾರ ಸರಕಾರದ ವಿರುದ್ಧ ಸಿಡಿದು ನಿಂತದ್ದನ್ನೂ ಪೋರ್ತುಗೀಸ್ ಸರಕಾರವು ಅದನ್ನು ಉಗ್ರೋಪಾಯದಿಂದ ಎದುರಿಸುತ್ತಿರುವುದನ್ನೂ ಇಂದು ನಾವು ಪತ್ರಿಕೆಯಲ್ಲಿ ಓದುತ್ತ ಇದ್ದೇವೆ ೨೦ ವರ್ಷಗಳ ಹಿಂದೆ ಗೆಲ್ವಾಯೋ ಇದೇ ಈ ಅಂಗೋಲಾದಲ್ಲಿ ಇನಸ್ಪೆಕ್ಟರ್ ಜನರಲ್ ಎಂದು ಹಲವು ವರ್ಷಗಳ ಕಾಲ ಕರ್ತವ್ಯನಿಷ್ಠತೆಯಿಂದ ಅಧಿಕಾರ ನಡೆಸಿದ. ಆದರೆ ಅಂಗೋಲಾದಲ್ಲಿ ಸಾಲಝಾರ ಸರಕಾರವು ನಡಿಸುತ್ತಿದ್ದ ಆಳಿಕೆ ದಬ್ಬಾಳಿಕೆಯಾಗಿದೆಯೆಂದು ದೀರ್ಘ ವರದಿಯನ್ನು ಸರಕಾರಕ್ಕೆ ಒಪ್ಪಿಸಿದಾಗ ಅವನನ್ನು ಕೂಡಲೇ ಬಂಧಿಸಿ ಸೆರೆಮನೆಯಲ್ಲಿಡಲಾಯಿತು.

ಗೆಲ್ವಾಯೊ ಜನ್ಮತಃ ಕ್ರಾಂತಿಕಾರಿ ಮನೋವೃತ್ತಿಯುಳ್ಳವ. ಜೇಲಿನಲ್ಲಿದ್ದಾಗ ಕೂಡ ಅವನು ಸಾಲಝಾರ ಆಳಿಕೆಯನ್ನು ಖಂಡಿಸಿ ಕರಪತ್ರಗಳನ್ನು ಬರೆದು ಗುಟ್ಟಿನಲ್ಲಿ ಹೊರಗೆ ಕಳಿಸುತ್ತಿದ್ದ. ಜೇಲರರನ್ನು ಕುರ್ಚಿಯಿಂದ ಹೊಡೆದು ಉರುಳಿಸಿ ಓಡಿಹೋಗಬೇಕೆಂದು ಯತ್ನಿಸಿದಾಗ ಅವನಿಗೆ ಪುನಃ ಹನ್ನೆರಡು ವರ್ಷಗಳ ಶಿಕ್ಷೆಯಾಯಿತು. ಈಗ ಎರಡು ವರ್ಷಗಳ ಹಿಂದೆ ಅವನು ಜಡ್ಡಾಗಿದೆಯೆಂದು ನಟಿಸಿ ಲಿಸ್ಬನ್ನಿನ ಸರಕಾರೀ ಆಸ್ಪತ್ರೆಗೆ ಸೇರಿಸಲ್ಪಟ್ಟ. ಆಗ ಅವನ ವಯಸ್ಸು ೬೪. ದವಾಖಾನೆಯಿಂದ ಅವನು ಹೇಗೊ ಪಾರಾದ. ಡಾಕ್ಟರನ ವೇಷ ಧರಿಸಿ ಹೊರಬಿದ್ದನೆಂದು ಕೆಲವರೂ ಹೆಣ್ಣಿನ ವೇಷ ಧರಿಸಿ ಪಾರಾದನೆಂದೂ (ಆ ವಯಸ್ಸಿನಲ್ಲಿ !) ಇನ್ನು ಹಲವರೂ ಹೇಳುವುದುಂಟು. ಪಾರಾಗಿ ಅಗಸನ ವೇಷದಿಂದ ಅರ್ಜೆಂಟಿನಾದ ರಾಯಭಾರಿ ಕಚೇರಿಗೆ ಬಂದು ಆಶ್ರಯಹೊಂದಿ ದಕ್ಷಿಣ ಅಮೇರಿಕೆಗೆ ಬಂದು, ಡೆಲ್ಗ್ಯಾಡೋನನ್ನು ಕೂಡಿಕೊಂಡಿದ್ದ. ಗೆಲ್ವಾಯೋನ ಜೀವನದಲ್ಲಿ ಅಚ್ಚರಿಗೊಳಿಸುವ ಸಂಗತಿಗಳು ಇನ್ನೂ ಹಲವಿವೆ. ಆತ ಪೋರ್ತುಗಾಲದ ಸುಪ್ರಸಿದ್ಧ ಕಾದಂಬರಿಕಾರ, ಕವಿ ಹಾಗೂ ನಾಟಕಕಾರ ! ಆ ವಯಸ್ಸಿನಲ್ಲೂ ತನ್ನ ಪತ್ನೀಮಣಿಗೆ ಪತ್ರ ಬರೆಯುತ್ತ ಕುಳಿತನೆಂದರೆ, ಹತ್ತಿಪ್ಪತ್ತು ಪುಟಗಳಿಗಿಂತ ಕಡಿಮೆ ಬರೆಯುತ್ತಿದ್ದಿಲ್ಲವಂತೆ !

ಗೆಲ್ವಾಯೋನ ಕವಿವಾಣಿ ಕಠೋರವಾಣಿಯೂ ಆಗಿದ್ದಿತು. ಪ್ರಯಾಣಿಕರಿಗೆಲ್ಲ ಆತನು ಎಚ್ಚರಿಕೆ ಕೊಡುತ್ತ ಯಾರಾದರೂ ತಿರುಗಿಬಿದ್ದುದಾದರೆ ಅವರ ಅವತಾರ ಸಮಾಪ್ತಿ ಮಾಡುವುದಾಗಿಯೂ ಸುಮ್ಮನಿದ್ದರೆ ಯಾರ ಜೀವಕ್ಕೂ ಅಪಾಯವನ್ನುಂಟುಮಾಡುವುದಿಲ್ಲವಾಗಿಯೂ ಸಾರಿದನು. ಹಡಗಿನಲ್ಲಿ ಸಂಗೀತ ಮನರಂಜನೆಗಳನ್ನು ನಿಲ್ಲಿಸಿದನು. ಹಡಗಿನ ಹೊರ ಅಂಗಣಕ್ಕೆ ಯಾರೂ ಬರಕೂಡದೆಂದು ಆಜ್ಞೆ ಇತ್ತನು.

ಹಡಗು ಉತ್ತರದ ಬದಲು ದಕ್ಷಿಣ ದಿಕ್ಕಿಗೆ

ತಿರುಗಿ ಗೊತ್ತುಗುರಿಯಿಲ್ಲದೆ ಅಟ್ಲಾಂಟಿಕ್ ಸಾಗರದ ಕೆಳಗೆ ಇಳಿಯತೊಡಗಿತು. ದಾರಿಯಲ್ಲಿ ಸೇಂಟ್ ಲೂಸಿಯಾ ಎಂಬ ದ್ವೀಪವು ಹತ್ತಿತು. ಅಲ್ಲಿಯ ಬ್ರಿಟಿಶ ನಾವಿಕ ಪಡೆಯ ಮುಖ್ಯಾಧಿಕಾರಿಯು ಅನತಿದೂರದಲ್ಲಿ ಭರದಿಂದ ಸಾಗಿದ್ದ ಸಾಂತಾಮೇರಿಯಾವನ್ನು ಕಂಡನು. ಆ ಗಳಿಗೆಗೆ ಸಾಂತಾಮೇರಿಯಾದಿಂದ ಒಂದು ಲೈಫ್ ಬೋಟ್ ಹೊರಬಿದ್ದಿತು. (ಅದರಲ್ಲಿ ಒಬ್ಬ ಗಾಯಾಳುವನ್ನೊಳಗೊಂಡು ಎಂಟು ಜನ ಪೋರ್ತುಗೀಜ ಖಲಾಸಿಗಳೂ ಒಂದು ಹೆಣವೂ ದಡದತ್ತ ಬಂದವು.) ಆದರೆ ಹಡಗದೊಂದಿಗೆ ಸಂಪರ್ಕ ಬೆಳೆಸಬೇಕೆಂದಾಗ ಉತ್ತರ ಬಾರದಿರಲು, ಅವನಿಗೆ ಸಂಶಯ ಬಂದಿತು. ಇದೇನೊ ಹೆಚ್ಚು ಕಡಿಮೆಯಾಗಿದೆಯೆಂದು ಅವನು ತನ್ನ ಯುದ್ಧನೌಕೆಯೊಂದನ್ನು ಅಣಿಗೊಳಿಸಿ ಹೊರಟನು. ಆದರೆ ಅಷ್ಟರಲ್ಲಿ ಸಾಂತಾಮೇರಿಯಾ ಕಣ್ಮರೆಯಾಗಿ ಬಿಟ್ಟಿತು.

ಸುದ್ದಿ ಬಾಹ್ಯ ಜಗತ್ತಿಗೆ ತಿಳಿದಾಗ ಅಲ್ಲೋಲಕಲ್ಲೋಲವೆದ್ದಿತು. ೩೦೦ ಕ್ಕೂ ಮಿಕ್ಕು ನಾವಿಕರಿದ್ದ ಈ ಹಡಗನ್ನು ಹತ್ತು ನಿಮಿಷಗಳಲ್ಲಿ ವಶಪಡಿಸಿಕೊಂಡ ಸಾಲಝಾರ ವಿರೋಧಿ ಬಂಡಾಯಗಾರರ ಧೈರ್ಯಕ್ಕೆ ಲೋಕ ತಲೆದೂಗಿತು. ೧೫ ನೆಯ ಶತಮಾನದ ನಂತರ ಇಂಥ ಕಡಲ ಸಾಹಸವನ್ನಾರೂ ಕೇಳಿದ್ದಿಲ್ಲ. ಆದರೆ ಚಿಂತೆ ಈ ಚೋದ್ಯವನ್ನು ಮರೆಸಿತು. ಸ್ಪೇನ್, ವೆನೆಝುವೆಲಾ, ಪೋರ್ತುಗಾಲ್, ಹಾಲಂಡ್ ಮತ್ತು ಅಮೇರಿಕದ ನಾಗರಿಕರು ನರುಬಿಸಿಲ, ನೀಲ ಜಲದ, ಹರಿತ ವನಸಿರಿಯ ಅಟ್ಲಾಂಟಿಕ ದ್ವೀಪಸ್ತೋಮಗಳ ಸುಖಪ್ರವಾಸಕ್ಕಾಗಿ ಸಾಂತಾಮೇರಿಯಾದಲ್ಲಿದ್ದರು. ಈ ಬಿಸಿ ತಲೆಯ ಬಂದೂಕುಧಾರಿಗಳ ಕೈವಶವಾದ ಹಡಗಿನಲ್ಲಿ ಅವರ ಸುರಕ್ಷಿತತೆಯ ಗತಿಯೇನು ?

ಅತ್ತ ಪೋರ್ತುಗಾಲ್‌ನಲ್ಲಿ ಬಿರುಗಾಳಿಯೆದ್ದಂತಾಯಿತು. ೭೧ ವರ್ಷದ ಸರ್ವಾಧಿಕಾರಿ ಸಾಲಝಾರ್ ಗಾಬರಿಗೊಂಡು ಎಲ್ಲಿ ದೇಶದಲ್ಲೇ ಅಂತರ್ಯುದ್ಧ ಆರಂಭವಾದೀತೋ ಎಂಬ ಭಯದಿಂದ ಸೈನ್ಯಕ್ಕೆ ಸಜ್ಜಾಗಲು ಆಜ್ಞೆ ಹೊರಡಿಸಿದ. ಸಾಂತಾಮೇರಿಯಾದ ಜೋಡಿ ಹಡಗಾದ ವೇರಾ ಕ್ರೂಜ್ ಬ್ರಾಜಿಲ್‌ನ ದಾರಿಯಲ್ಲಿತ್ತು. ಅದಕ್ಕೂ ತನ್ನಕ್ಕನ ಗತಿಯೇ ಬಂದೀತೆಂದು ೧೦ ಜನ ಗುಪ್ತ ಪೋಲೀಸರನ್ನು ಲಿಸ್ಬನ್ನಿನಿಂದ ವಿಮಾನ ಮೂಲಕ ಕಳಿಸಿ ಬ್ರೇಜಿಲ್ ತಲುಪಿದಾಗ ಅಲ್ಲಿ ಯಾರೂ ಅದನ್ನೇರದಂತೆ ಕಾವಲು ನಿಲ್ಲಿಸಲಾಯಿತು. ಮಿತ್ರರಾಷ್ಟ್ರಗಳಾದ ಬ್ರಿಟನ್ ಅಮೇರಿಕೆ, ಸ್ಪೇನ್‌ಗಳಿಗೆ "ತ್ರಾಹಿ" ಸಂದೇಶ ಕಳಿಸಿ ಸಾಂತಾಮೇರಿಯವನ್ನು ಬೆಂಬತ್ತಿ ಹಿಡಿದು ಕೊಡಬೇಕೆಂದು ಅಂಗಲಾಚಿದ.

ಪರಿಣಾಮವಾಗಿ ಎರಡನೇ ಮಹಾಯುದ್ಧದ ಅನಂತರದಲ್ಲಿ ಅದ್ವಿತೀಯವಾದ ರೀತಿಯಲ್ಲಿ ಹಡಗೊಂದನ್ನು ಸಾಗರಮಧ್ಯದಲ್ಲಿ ಬೆಂಬತ್ತುವ ಪ್ರಸಂಗ ಪ್ರಾರಂಭವಾಯಿತು. ಅಮೇರಿಕವು ತನ್ನೆಲ್ಲ ನೌಕಾಠಾಣೆಗಳಿಗೆ ಸಾಂತಾಮೇರಿಯಕ್ಕಾಗಿ ಕಣ್ಣಿಟ್ಟಿರಲು ಸಂದೇಶ ಕಳಿಸಿತು. ಬ್ರಿಟಿಶ್ ಫ್ರಿಗೇಟ್ ಹಡಗವಾದ "ರಾತ್‌ಸೇ", ಅಮೇರಿಕದ ವಿನಾಶಿಕೆಗಳಾದ "ಡಮಾಟೋ" ಮತ್ತು "ವಿಲ್ಸನ್" ಇವು "ಸಾಂತಾಮೇರಿಯಾ"ದ ಬೇಟೆ ಪ್ರಾರಂಭಿಸಿದವು. ಅನಂತರ ಮತ್ತೆರಡು ಅಮೇರಿಕನ್ ವಿನಾಶಿಕೆಗಳೂ ಟ್ಯಾಂಕರೂ ಬೇಟೆಯನ್ನು ಸೇರಿಕೊಂಡವು. ಆದರೆ ಬೇರಾವ ಹಡಗಕ್ಕಿಂತಲೂ ವೇಗಶಾಲಿಯಾದ ಸಾಂತಾಮೇರಿಯಾವನ್ನು ೨೨ಲಕ್ಷ ಚದರ ಮೈಲು ವಿಸ್ತಾರವಾದ ಅಟ್ಲಾಂಟಿಕದಲ್ಲಿ ಹುಡುಕುವುದೆಂದರೆ ಬಣವೆಯಲ್ಲಿ ಸೂಜಿ ಹುಡುಕುವುದಕ್ಕಿಂತ ಸುಲಭ ಕಾರ್ಯವಾಗಿರಲಿಲ್ಲ.

ಬೇಟೆ ಪ್ರಾರಂಭವಾದ ಮೂರನೇ ದಿನ ಡೇನಿಶ್ ವ್ಯಾಪಾರಿ ಹಡಗೊಂದು ವಿಲ್ಸನ್ ಬಂದರದಿಂದ ೫೦೦ ಮೈಲು ದೂರದಲ್ಲಿ ಸಾಂತಾಮೇರಿಯಾವನ್ನು ಕಂಡಿತು. ಆಗ ಅದು ಬೆಂಬ

ತ್ತಿದ ಹಡಗಗಳಿಂದ ೫೦೦ ಮೈಲು ದೂರವಿತ್ತು.

ಪೋರ್ಟೋರಿಕೋದಲ್ಲಿ ಬೀಡುಬಿಟ್ಟ ಅನೇಕ ದೂರಗಾಮಿ ಅಮೇರಿಕನ್ ವಿಮಾನಗಳು ಸಾಗರವನ್ನು ಮೈಲು ಮೈಲಾಗಿ ಶೋಧಿಸಲಾರಂಭಿಸಿದವು. ಹಾಲಂಡಿನ ಒಂದು ಹಡಗೂ ಮೂರು ವಿಮಾನಗಳೂ ಹೊಸದಾಗಿ ಬೇಟೆಪಡೆಯಲ್ಲಿ ಸೇರಿದವು. ನಡುವೆ ಬ್ರಿಟಿಶ್ ಹಡಗು "ರಾತ್‌ಸೇ" ಎಣ್ಣೆ ತೀರಿದ್ದರಿಂದ ಬೇಟೆಯಿಂದ ನಿವೃತ್ತವಾಗಬೇಕಾಯಿತು.

ಜನವರಿ ೨೫ ರಂದು ಸಂಜೆ ಅಮೇರಿಕದ ವಿಮಾನವೊಂದು ಸಾಂತಾಮೇರಿಯಾವನ್ನು ಕಂಡು ಅದರ ಫೋಟೋ ತೆಗೆದುಕೊಂಡಿತು. ಅದರೊಡನೆ ಸಂಪರ್ಕ ಬೆಳೆಸಿ ಪೋರ್ಟೋ ರಿಕೋಕ್ಕೆ ಬರಬೇಕೆಂದು ಕೇಳಿಕೊಂಡಾಗ ಸಾಂತಾಮೇರಿಯಾದ ನಾಯಕ ಗೆಲ್ವಾಯೊ ಖಂಡತುಂಡವಾಗಿ ನಿರಾಕರಿಸಿದ. "ಪೋರ್ತುಗಾಲಿನ ಸರ್ವಾಧಿಕಾರಿ ನಮ್ಮನ್ನು ಕಡಲುಗಳ್ಳರೆಂದು ಹೇಳಬಹುದು. ಆದರೆ ನಾವು ಕಳ್ಳರಲ್ಲ, ಕ್ರಾಂತಿಕಾರರು. ಪೋರ್ತುಗಾಲ್‌ನ ವಿಮೋಚನೆಗಾಗಿ ಹೊರಟವರು. ಅದರ ಅಂಗವಾಗಿ ಅಂಗೋಲಾಕ್ಕೆ (ಪೋರ್ತುಗಾಲ್‌ನ ಆಫ್ರಿಕನ್ ವಸಾಹತು) ಹೋಗುತ್ತಿದ್ದೇವೆ. ಆದರೆ ಸ್ಪೇನ್ ಪೋರ್ತುಗಾಲಗಳನ್ನು ಬಿಟ್ಟು ಮತ್ತಾವ ದೇಶದ ಬಂದರದಲ್ಲಾದರೂ ಅಮೇರಿಕದೊಡನೆ ಮಾತುಕತೆ ನಡೆಸಲು ನಾವು ಸಿದ್ಧರಿದ್ದೇವೆ" ಎಂದಾತ ಹೇಳಿದ.

ಬೇಟೆ ಮುಂದುವರಿಯಿತು. ಮೊದಮೊದಲು ಬ್ರಿಟಿಶ್ ಮತ್ತು ಅಮೇರಿಕನ್ ಹಡಗಗಳು ಸಾಂತಾಮೇರಿಯಾವನ್ನು ತಮ್ಮ ಮಿತ್ರನಾದ ಸಾಲಝಾರನ ಹೇಳಿಕೆಯಂತೆ ಹಿಡಿದುಕೊಳ್ಳಲು ಅನುವಾಗಿರುವಂತೆ ಕಂಡಿತು. ಆದರೆ ಗೆಲ್ವಾಯೋನ ಆಕಾಶವಾಣಿ ಸಂದೇಶಗಳು ಪ್ರಕಟವಾದೊಡನೆ ವಿಚಾರಗಳು ಬದಲಾದವು. ಕಡಲುಗಳ್ಳತನ ನಡೆದದ್ದಾದರೆ ಅಂತಾರಾಷ್ಟ್ರೀಯ ಕಾಯದೆಯಂತೆ ಆ ಹಡಗನ್ನು ಬಂಧಿಸಲು ಅವಕಾಶವಿದೆ. ಆದರೆ ಕಡಲುಗಳ್ಳತನವೆಂದರೆ ಒಂದು ಹಡಗು ಇನ್ನೊಂದರ ಮೇಲೆ ದಾಳಿ ನಡೆಸಿ ದರೋಡೆ ಮಾಡುವುದು. ಇಲ್ಲಿ ಹಡಗಿನಲ್ಲಿದ್ದವರೆ, ಹಡಗು ಯಾವ ರಾಷ್ಟ್ರದ್ದೋ ಅದರ ನಾಗರಿಕರೇ ಅದನ್ನು ವಶಪಡಿಸಿಕೊಂಡಿದ್ದರು. ಇದು ರಾಜಕೀಯ ಕ್ರಿಯೆ. ಇದರಲ್ಲಿ ಹೊರ ರಾಷ್ಟ್ರದವರಿಗೆ ಕೈಹಾಕಲು ಅಧಿಕಾರವಿಲ್ಲವೆಂದು ವಾದವೆದ್ದಿತು. ಸಾಲಝಾರನ ಸರಕಾರದ ಸರ್ವಾಧಿಕಾರಿ ವೃತ್ತಿಯ ಮೇಲೆ ಹೆಚ್ಚು ಹೆಚ್ಚು ಬೆಳಕು ಬೀಳತೊಡಗಿ ಜನಾಭಿಪ್ರಾಯ ಬ್ರಿಟಿಶ್ ಪಾರ್ಲಿಮೆಂಟಿನಲ್ಲಿಯೂ ಅಮೇರಿಕದ ಪತ್ರಿಕೆಗಳಲ್ಲೂ ರೂಪುಗೊಂಡದ್ದನ್ನು ನೋಡಿ ಬ್ರಿಟಿಶ್, ಅಮೇರಿಕನ್ ಸರಕಾರಗಳು ಗತ್ತು ಬದಲಿಸಬೇಕಾಯಿತು.

ಅವೀಗ ಸಾಂತಾ ಮೇರಿಯಾವನ್ನು "ಹಿಡಿಯುವ" ಗೊಡವೆ ಬಿಟ್ಟವು. ಇದಕ್ಕೆ ಇನ್ನೂ ಒಂದು ಕಾರಣವಿತ್ತು. ಅಮೇರಿಕನ್ ವಿನಾಶಿಕೆಗಳು ಸಾಂತಾ ಮೇರಿಯಾವನ್ನು ಸಮೀಪಿಸಿದಾಗ ಬಂಡುಗಾರಧುರೀಣ ಗೆಲ್ವಾಯೊ ಎಚ್ಚರವಿತ್ತಿದ್ದ: ಸಾಂತಾ ಮೇರಿಯಾವನ್ನು ಹಿಡಿಯಲು ಪ್ರಯತ್ನಿಸಿದರೆ ಹಡಗನ್ನೇ ಮುಳುಗಿಸಿ ಬಿಡುತ್ತೇವೆ ಎಂದು. ೪೨ ಅಮೇರಿಕನ್ನರನ್ನೊಳಗೊಂಡು ಸಾವಿರ ಜನರ ಜೀವದೊಡನೆ ಚಿನ್ನಾಟವಾಡುವ ಧೈರ್ಯ ಅಮೇರಿಕಕ್ಕಾಗಲಿಲ್ಲ.

ವಿಮಾನಗಳಿಂದ ವಿನಾಶಿಕೆಗಳಿಂದ ಮತ್ತು ಈಗ ಹೊಸದಾಗಿ ಬೇಟೆಗಾರ ತಂಡದಲ್ಲಿ ಸೇರಿದ ಒಂದು ಅಮೇರಿಕನ್ ಜಲಾಂತರ್ಗಾಮಿಯಿಂದ ಬೆನ್ನಟ್ಟಲ್ಪಟ್ಟ ಸಾಂತಾ ಮೇರಿಯಾದೊಳಗೆ ಜೀವನ ಹೇಗಿತ್ತು? ಅದನ್ನು ಬೆಂಬತ್ತಿದ ಹಡಗಗಳಿಗೆ ಆಗಾಗ್ಗೆ ಎಣ್ಣೆ ಕೊರತೆಯಾದರೂ ೧,೬೦೦ ಟನ್ ಎಣ್ಣೆ ಸಂಗ್ರಹವಿದ್ದುದರಿಂದ ಸಾಂತಾಮೇರಿಯಾ ಇನ್ನೂ ೫,೦೦೦ ಮೈಲು ಗುರಿಗೆಟ್ಟು ತಿರುಗಬಹುದಾಗಿತ್ತು. ಅದರ ಹತ್ತಿರ

ಆಹಾರ ಸಂಗ್ರಹ ೨೦ ದಿನಗಳಿಗೆ ಬೇಕಾದಷ್ಟು ಇತ್ತು.

ಬಂಡಾಯಗಾರರು ಆಹಾರ ರೇಶನ್ ಮಾಡಲಿಲ್ಲ. ಕೇವಲ ತೆಗೆದುಕೊಳ್ಳಬಹುದಾದ ಪದಾರ್ಥಗಳ ಸಂಖ್ಯೆ ಕಡಿಮೆ ಮಾಡಲ್ಪಟ್ಟಿತ್ತು. ರೇಡಿಯೋ ಕೇಳಲು ಅವರು ಯಾವ ಆತಂಕವನ್ನೂ ಮಾಡಲಿಲ್ಲ. ಬಂಡಾಯಗಾರ ಅಧಿಕಾರಿಗಳು ತುಂಬ ಸೌಜನ್ಯದಿಂದ ವರ್ತಿಸುತ್ತಿದ್ದರು. ಅವರು ಗಟ್ಟಿಗರಾಗಿದ್ದರು. ತರುಣರೂ ಸುಂದರಕಾಯರೂ ಆಗಿದ್ದರು. ಬಲು ಚೆನ್ನಾಗಿ ತಮ್ಮೊಡನೆ ನೃತ್ಯ ಮಾಡಿದ ಅವರನ್ನು ಪ್ರವಾಸಿಗಳಲ್ಲಿ ಶ್ರೀಮಂತರಾದ ತರುಣಿಯರು ಮೆಚ್ಚಿಕೊಂಡಿದ್ದರು. ಬಂಡಾಯದ ಮೂರನೇ ದಿವಸದಿಂದ ಹಡಗಿನ ಪತ್ರಿಕೆ ಹೊರಡತೊಡಗಿತು. ಅನಂತರ ರೇಡಿಯೋ ಮೂಲಕ ತಮ್ಮ ಮಿತ್ರಬಾಂಧವರಿಗೆ ಕ್ಷೇಮ ಸಮಾಚಾರ ಕಳಿಸಲು ಪ್ರವಾಸಿಕರಿಗೆ ಅನುಮತಿ ಕೊಡಲಾಗಿತ್ತು. ಮಕ್ಕಳು ದಿನವೆಲ್ಲ ಸಾಂತಾಮೇರಿಯಾದ ಆಕ್ರಮಣದ ನಾಟಕವನ್ನಾಡಿ ಸಂತೋಷಪಟ್ಟುಕೊಳ್ಳುತ್ತಿದ್ದರು.

ಈ ಪ್ರಕಾರ ಸಾಂತಾಮೇರಿಯಾ ಇನ್ನೂ ಇಪ್ಪತ್ತು ದಿನ ಸಾಗರದಲ್ಲಿ ನಿರ್ಭಯವಾಗಿ ತಿರುಗಬಹುದೆನಿಸುತ್ತಿತ್ತು. ಆದರೆ ಒಂದು ಸಂಗತಿ ಪ್ರಾರಂಭದಿಂದಲೇ ಈ ಸಾಹಸಕ್ಕೆ ಅಲ್ಪಾಯುಷ್ಯವನ್ನು ತರುವಂತೆ ಕಾಣಿಸಿತು. ಅದೆಂದರೆ ನೀರಿನ ಕೊರತೆ. ಮೊದಲಿಂದಲೇ ಅದರ ರೇಶನ್ ಪ್ರಾರಂಭವಾಗಿತ್ತು. ಸ್ನಾನದ ಮನೆಯಲ್ಲಿ ನಿರ್ದಿಷ್ಟ ಗಂಟೆಗಳಲ್ಲಷ್ಟೇ ನೀರು ಕೊಡುತ್ತಿದ್ದರು. ಹಡಗಿನ ಸ್ವಚ್ಛತೆಯ ಮೇಲೆ ನೀರಿನ ಕೊರತೆ ಬೇಗಬೇಗನೆ ದುಷ್ಪರಿಣಾಮ ಮಾಡಿತು.

ಒಂದು ವಾರ ಕಳೆಯುವಷ್ಟರಲ್ಲಿ ಪ್ರವಾಸಿಕರಲ್ಲಿ ಅನೇಕರು ತಮ್ಮ ಅಸಂತೋಷವನ್ನು ಕಪ್ತಾನನಿಗೆ ಬಹಿರಂಗವಾಗಿಯೆ ಪ್ರದರ್ಶಿಸಲಾರಂಭಿಸಿದರು.

ಹೀಗಾಗಿ ಅಮೇರಿಕನ್ ನೌಕೆಗಳೊಡನೆ ಮೊದಲಿನಿಂದಲೂ ಸೌಜನ್ಯದಿಂದಲೇ ವರ್ತಿಸಿದ್ದ ಗೆಲ್ವಾಯೊ ಎಂಟನೇ ದಿವಸ ಅಮೇರಿಕದಿಂದ ಬಂದ ಸಂದೇಶವನ್ನು ಹೆಚ್ಚು ಆದರದಿಂದ ಸ್ವಾಗತಿಸಿದ.

"ಯಾವುದಾದರೂ ದಕ್ಷಿಣ ಅಮೇರಿಕನ್ ಅಥವಾ ಪಶ್ಚಿಮ ಆಫ್ರಿಕನ್ ತಟಸ್ಥ ಬಂದರದಲ್ಲಿ ಎಲ್ಲ ಪ್ರವಾಸಿಕರನ್ನು ಇಳಿಸಲು ಸಿದ್ಧರಿದ್ದೇವೆ. ಆದರೆ ಅನಂತರ ಅಬಾಧಿತವಾಗಿ ಪ್ರಯಾಣ ಮುಂದುವರಿಸಲು ಬಿಡುವೆವೆಂದು ಅಮೇರಿಕನ್ ನೌಕಾಪಡೆ ಭಾಷೆ ಕೊಡಬೇಕು" ಎಂದಾತ ತಿಳಿಸಿದ. ಅಮೇರಿಕ ಒಪ್ಪಿತು. ಮಿತ್ರ ಸಾಲಝಾರನ ವಿರುದ್ಧ ಬಂಡಾಯಗಾರರು ಹೋರಾಡುವಾಗ ಕಣ್ಮುಚ್ಚಿಕೊಳ್ಳುವೆ ಎಂದು ಅದೀಗ ಹೇಳಲನುವಾಗಿತ್ತು.

ಅಂತೂ ಸಾಂತಾ ಮೇರಿಯಾ ಈಗ ಆಫ್ರಿಕದತ್ತ ಹೊರಟ ತನ್ನ ಮಾರ್ಗವನ್ನು ಬಿಟ್ಟು ಪಶ್ಚಿಮಕ್ಕೆ ಬ್ರಾಜಿಲ್ ಕಡೆ ಹೊರಳಿತು. ಬ್ರಾಜಿಲ್‌ನಲ್ಲೀಗ ಹೊಸ ಚುನಾವಣೆಯಾಗಿ ಅಧಿಕಾರಕ್ಕೆ ಬಂದಿದ್ದ ಅಧ್ಯಕ್ಷರು ಬಂಡಾಯಗಾರರಿಗೆ ಅನುಕೂಲ ಮನೋಭಾವದವರಾಗಿದ್ದುದರಿಂದ ತಮ್ಮ ಹಡಗಕ್ಕೆ ಅಲ್ಲಿ ಆಶ್ರಯ ದೊರೆಯಬಹುದೆಂಬ ಆಸೆ ಬಂಡಾಯಗಾರರಿಗಿತ್ತು.

ಸಾಂತಾ ಮೇರಿಯಾದ "ನಾಟಕ" ಪ್ರಾರಂಭವಾಗಿ ಹತ್ತುದಿನ ಕಳೆದ ಮೇಲೆ ಅದು ಬ್ರಾಜಿಲ್‌ನ ಬಂದರವಾದ ಪೋರ್ಟ್ ರಿಸೈಫ್‌ವನ್ನು ಸಮೀಪಿಸಿತು. ಆದರೆ ಅದರ ಕೊನೆಯ ಅಂಕ ಇನ್ನೂ ಉಳಿದಿತ್ತು. ಕ್ಯಾಪ್ಟನ್ ಗೆಲ್ವಾಯೋ ಈ ಬಂದರದಿಂದ ಸುರಕ್ಷಿತವಾಗಿ ಎಣ್ಣೆ ಆಹಾರಗಳನ್ನು ತುಂಬಿಕೊಂಡು ತಿರುಗಿ ಹೋಗಲು ಅನುಮತಿ ಕೊಡುವುದಾಗಿ ಆಶ್ವಾಸನ ದೊರೆತ ಹೊರತು ತಾನು ಬಂದರವನ್ನು ಪ್ರವೇಶಿಸಲಾರೆನೆಂದು ಪ್ರಕಟಿಸಿದ.

ಆದರೆ ಅದು ಸಾಧ್ಯವಿರಲಿಲ್ಲ. ಬ್ರಾಜಿಲ್ ಅಧ್ಯಕ್ಷರು ಅವರಿಗೆ ಅನುಕೂಲರಾಗಿದ್ದರೂ

ಕಾಯದೆ ಯಾರ ಕೈಗೂಸು? ಹಡಗದ ಒಡೆಯರು ತಮಗೆ ಅದನ್ನು ತಿರುಗಿ ಕೊಡಿಸಬೇಕೆಂದು ಬ್ರಾಜಿಲ್‌ನ ನ್ಯಾಯಾಲಯಕ್ಕೆ ಹೋದರೆ ಕೊಡಿಸದೆ ಉಪಾಯವೇ ಇರಲಿಲ್ಲ.

ಮಾತುಕತೆಗಳ ಹಗ್ಗಜಗ್ಗಾಟ ಕೊನೆಯಿರದೆ ಸಾಗುತ್ತಿರುವಾಗ ಬಂದರದಿಂದ ಮೂರು ಮೈಲ ಹೊರಗೆ, ಬ್ರಾಜಿಲ್‌ನ ಅಧಿಕಾರವ್ಯಾಪ್ತಿಯಿಂ ಒಂದೇ ಮೊಳ ದೂರದಲ್ಲಿ ಸಾಂತಾಮೇರಿಯಾ ಕಡಲಲ್ಲಿ ಗೊತ್ತುಗುರಿಯಿಲ್ಲದೆ ಸುತ್ತುಹಾಕುತ್ತ ಉಳಿಯಿತು.

ಒಂದು ದಿನ, ಎರಡು ದಿನ ಕಳೆಯಿತು. ಬ್ರಾಜಿಲ್ ಮಾಡಬಹುದಾದ ಸಹಾಯ ಒಂದೇ ಎಂದು ಅದರ ಅಧ್ಯಕ್ಷರು ಹೇಳಿದರು. ಬಂಡಾಯಗಾರರಿಗೆ ತಮ್ಮ ದೇಶದಲ್ಲಿ ಆಶ್ರಯ ಕೊಡಬಹುದು; ಪೋರ್ತುಗಾಲ್‌ಗೆ ಒಪ್ಪಿಸುವುದಿಲ್ಲ. ಆದರೆ ಬಂದರ ಪ್ರವೇಶಿಸಿದ ನಂತರ ಹಡಗನ್ನು ಅದರ ನಿಜವಾದ ಒಡೆಯರಿಗೆ ಒಪ್ಪಿಸದೆ ಉಪಾಯವೇ ಇಲ್ಲ.

ಕ್ಯಾಪ್ಟನ್ ಗೆಲ್ವಾಯೊ ಒಪ್ಪಲೇಬೇಕಾಗಿತ್ತು. ಇನ್ನೇನು ತಮ್ಮ ನಿರರ್ಥಕ ಪರ್ಯಟನ ಮುಗಿಯಿತೆಂದು ಬಗೆದಿದ್ದ ಪ್ರವಾಸಿಕರು ಮಾತುಕತೆಗಳಲ್ಲಿ ಸಮಯ ವ್ಯಯವಾಗುತ್ತಿರುವುದನ್ನು ನೋಡಿ ಆಕ್ರೋಶ ಪ್ರಾರಂಭಿಸಿದ್ದರು. ನೀರಿನ ಕೊರತೆಯಿಂದ ಯಾವಾಗ ಯಾವ ಪಿಡುಗು ಏಳುವುದೋ ಹೇಳಲಾರದ ಪರಿಸ್ಥಿತಿ ಇತ್ತು. ಒಂದೇ ಬಗೆಯ ಆಹಾರದಿಂದ ಕೆಳವರ್ಗದ ಪ್ರವಾಸಿಗಳು ರೋಸಿ ಹೋಗಿದ್ದರು. ಹಡಗಿನ ೩೦೦ ನಾವಿಕರು ನಿಶ್ಶಸ್ತ್ರರಾಗಿದ್ದರೂ ಗದ್ದಲವೆಬ್ಬಿಸಿದ್ದರು. ಅವರನ್ನು ಬಂದೂಕು ತೋರಿಸಿ ಸುಮ್ಮನಿರಿಸಿದಾಗ ಅವರಲ್ಲಿ ಮೂವರು ಸಮುದ್ರಕ್ಕೆ ಹಾರಿದರು. ಅವರನ್ನು ಪಾರುಮಾಡಬೇಕಾದರೆ ಸಾಕುಬೇಕಾಯಿತು.

ಹನ್ನೆರಡು ದಿನಗಳ ಯಾತ್ರೆಯ ನಂತರ ಹಡಗು ರಿಸೈಫ್ ಬಂದರವನ್ನು ಪ್ರವೇಶಿಸಿತು. ಪ್ರವಾಸಿಕರು ಆನಂದತುಂದಿಲರಾಗಿ ಇಳಿದು ಹೋದರು. ವೀರ ಕ್ಯಾಪ್ಟನ್ ಗೆಲ್ವಾಯೋನನ್ನು ಎದುರ್ಗೊಳ್ಳಲು ಸ್ವತಃ ಪೋರ್ತುಗಾಲ್‌ನ "ಪ್ರತಿಸರಕಾರ"ದ ಅಧ್ಯಕ್ಷ ಜನರಲ್ ಡೆಲ್ಗ್ಯಾಡೋ ಬಂದಿದ್ದರು.

"ಇದು ಸರ್ವಾಧಿಕಾರಿ ಸಾಲಝಾರರನ್ನುರುಳಿಸುವ ಹೋರಾಟದ ಮೊದಲ ಹೆಜ್ಜೆ ಮಾತ್ರ. ಜಗತ್ತಿನ ಲಕ್ಷ್ಯವನ್ನು ಇತ್ತ ಸೆಳೆಯುವಲ್ಲಿ ನಾವು ಯಶಸ್ವಿಯಾಗಿದ್ದೇವೆ. ಅದೇ ನಮ್ಮ ಉದ್ದೇಶವಿತ್ತು" ಎಂದು ಡೆಲ್ಗ್ಯಾಡೋ ಹೇಳಿದರು. ಹಡಗು ಬಂಡಾಯಗಾರರಿಗೆ ದಕ್ಕಲಿಲ್ಲ. ಆದರೆ ಪೋರ್ತುಗಾಲ್‌ನಲ್ಲಿ ಸರ್ವಾಧಿಕಾರ ನಡೆದಿದೆ, ಅದರ ವಸಾಹತುಗಳಲ್ಲಿ ನಿರ್ದಯ ಆಳಿಕೆ ನಡೆದಿದೆ ಎಂಬುದು ಜಗತ್ತಿನ ಗಮನಕ್ಕೆ ಬಂತು. ✶

ಕಳಕಳಿಯಿಂದ ಕೆಲಸಮಾಡುವವನೆಂದರೆ ನಮ್ಮ ದರ್ಜಿ ಒಬ್ಬನೆ. ನನ್ನನ್ನು ಕಂಡಾಗಲೊಮ್ಮೆ ಬಟ್ಟೆಗಾಗಿ ನನ್ನ ಅಳತೆ ನೋಡುತ್ತಾನೆ. ಉಳಿದೆಲ್ಲ ಆಳತೆಗಳು ಎಂದೂ ಬದಲಾಗುವುದಿಲ್ಲ. ಆದರೆ ಬಟ್ಟೆಗೆ ಮಾತ್ರ ಪ್ರತಿ ಸಲ ಹೊಸ ಅಳತೆ ನೋಡದೆ ಗತಿ ಇಲ್ಲ.

— ಬರ್ನಾರ್ಡ್ ಶಾ

* *

ಕಣ್ಣು ಕಳೆದುಕೊಂಡವನು ನಿಜವಾದ ಕುರುಡನಲ್ಲ. ತನ್ನ ದೋಷಗಳನ್ನು ಮುಚ್ಚಬಯಸುವವನು ನಿಜವಾದ ಕುರುಡನು.

— ಗಾಂಧೀಜಿ

ಹಿಂದಿನ ಜನ್ಮದ ನೆನಪು ಅವನನ್ನು
ಕೊಲೆಗೆ ಪ್ರೇರೇಪಿಸಿತು

ದೇವರಿಲ್ಲವೆ?

ಅನು: ಬಳ್ಳೂರು ಸುಬ್ರಾಯ ಅಡಿಗ



ಕಾಲಕೇತು' ದಿನಪತ್ರಿಕೆಯಲ್ಲಿ ಪ್ರಕಟವಾದ ಸಮಾಚಾರ ಇಂತಿದೆ:

"ನಿನ್ನೆ ಬೆಳಿಗ್ಗೆ ಕಲಕತ್ತೆಯ ದುರ್ಗಾಚರಣ ಬ್ಯಾನರ್ಜಿ ಗಲ್ಲಿಯಲ್ಲಿ ಭಯಂಕರ ಕೊಲೆಯೊಂದು ನಡೆಯಿತು. ಅಂಗಡಿ ಯಜಮಾನ ಗುಲಾಮ್ ಕಾದರ್ ಎಂದಿನಂತೆಯೇ ಮಾಂಸ ಮಾರುತ್ತಿದ್ದ. ಕೆಲ ಯುರೋಪಿಯನ್ ಹಾಗೂ ಮುಸಲ್ಮಾನ ಗಿರಾಕಿಗಳು ಅಲ್ಲಿ ಬಂದಿದ್ದರು. ಆಗಲೇ ಅಪರಿಚಿತ ಯುರೋಪಿಯನ್ ಒಬ್ಬನು ಮಾಂಸ ಕೊಳ್ಳಲು ಬಂದ.

"ಅವನನ್ನು ಕಾಣುತ್ತಲೇ ಗುಲಾಮ್ ಕಾದರನು ಜೋರಾಗಿ ಕಿರಿಚಿಕೊಂಡು ಮಾಂಸ ಕತ್ತರಿಸುವ ಚೂರಿ ಹಿಡಿದು ಅವನ ಮೇಲೆರಗಿದ. ಆಕ್ರಾಂತ ವ್ಯಕ್ತಿ ನೆಲಕ್ಕುರುಳಿದ. ಆಗ ಗುಲಾಮ್ ಕಾದರನ ಅವನು ದೇಹವನ್ನು ಚೂರಿಯಿಂದಿರಿಯುತ್ತ ಪ್ರತಿಯೊಂದು ಇರಿತಕ್ಕೂ "ವಾಸ್ಕೋ ಡಿ ಗಾಮಾ, ಇದು ನನ್ನ ಹೆಂಡತಿಗಾಗಿ, ಇದು ನನ್ನ ಮಗಳಿಗಾಗಿ; ಇದು ನನ್ನ ಮುದಿ ತಂದೆಗಾಗಿ!" ಎಂದು ಉದ್ಗರಿಸುತ್ತಿದ್ದ.

"ಅಂಗಡಿಯಲ್ಲಿ ಸ್ತಬ್ಧರಾಗಿ ನಿಂತಿದ್ದ ಜನರಲ್ಲಿ ಕೆಲವರು ಓಡಿಹೋಗಿ ಪೋಲೀಸರಿಗೆ ದೂರಿತ್ತರು. ಪೋಲೀಸರು ಸೆರೆ ಹಿಡಿಯಲು ಬಂದಾಗಲೂ ಅವನು ಆ ವ್ಯಕ್ತಿಯನ್ನು ಚೂರಿಯಿಂದಿರಿಯುತ್ತಿದ್ದ. ಮತ್ತು ಮೊದಲಿನಂತೆಯೇ ಗೊಣಗುತ್ತಿದ್ದ.

ಶರದಿಂದು ವಂದ್ಯೋಪಾಧ್ಯಾಯರ ಬಂಗಾಲಿ ಕಥೆ

"ಗುಲಾಮ್ ಕಾದರನಿಗೆ ಅಕಸ್ಮಾತ್ ಹುಚ್ಚು ಹಿಡಿದಿರಬೇಕೆಂದು ಊಹಿಸಲಾಗುತ್ತಿದೆ. ಏಕೆಂದರೆ ಕೊಲೆಗೀಡಾದ ಆ ವ್ಯಕ್ತಿಯ ಪರಿಚಯ ಅವನಿಗಿರಲಿಲ್ಲ. ಗುಲಾಮ್ ಕಾದರನಿಗೆ ಹೆಂಡತಿ ಮಕ್ಕಳಾಗಲೀ ತಂದೆಯಾಗಲೀ ಇರಲಿಲ್ಲ. ಹತವ್ಯಕ್ತಿಯು ಪೋರ್ತುಗೀಸನಾಗಿದ್ದು ಕೆಲ ದಿನಗಳ ಹಿಂದೆ ಗೋವಾದಿಂದ ವ್ಯಾಪಾರಕ್ಕಾಗಿ ಕಲ್ಕತ್ತೆಗೆ ಬಂದು ಹೋಟೆಲಿನಲ್ಲಿ ಇಳಿದುಕೊಂಡಿದ್ದ. ಅವನ ಹೆಸರು 'ಗಬ್ರಿಯಲ್ ಡಿ ರೋಜಾ' ಎಂದಿತ್ತು.

"ಗುಲಾಮ್ ಕಾದರ್ ಸೆರೆಮನೆಯಲ್ಲಿದ್ದಾನೆ; ಮತ್ತು ಡಿ ರೋಜಾನ ಶವವನ್ನು ಪರೀಕ್ಷೆಗಾಗಿ ಆಸ್ಪತ್ರೆಗೆ ಸಾಗಿಸಲಾಗಿದೆ."

ಘಟನಾಸ್ಥಳದ ಸಮೀಪದಲ್ಲೇ ನನ್ನ ಮನೆಯಿತ್ತು. ನಾನು ಗುಲಾಮ್ ಕಾದರನನ್ನು ಚೆನ್ನಾಗಿ ಬಲ್ಲೆ. ಆದ್ದರಿಂದ ಈ ಘಟನೆ ನನ್ನನ್ನು ವಿಶೇಷವಾಗಿ ಆಕರ್ಷಿಸಿತು. ಅದಕ್ಕಿಂತ ಹೆಚ್ಚಾಗಿ ವಾಸ್ಕೋ ಡಿ ಗಾಮಾನ ಹೆಸರು ನನ್ನ ಕುತೂಹಲವನ್ನು ಕೆರಳಿಸಿತು.

ಕೆರಳಿದ ಕುತೂಹಲವನ್ನು ಶಾಂತಗೊಳಿಸಲೆಂದು ಕೋರ್ಟಿನಲ್ಲಿ ಈ ಮೊಕದ್ದಮೆ ವಿಚಾರಣೆಗೆ ಬಂದ ದಿನ ನಾನು ವೇಳೆಗಿಂತ ತುಸು ಮೊದಲೇ ಕೋರ್ಟಿಗೆ ಹೋದೆ. ನ್ಯಾಯಾಧೀಶರು ಬಂದಿರಲಿಲ್ಲ. ಆದರೆ ಅಪರಾಧಿಯನ್ನು ಅಲ್ಲಿಗೆ ತರಲಾಗಿತ್ತು. ನನ್ನನ್ನು ನೋಡಿ ಅವನು ಗುರುತಿಸಿದ ಮತ್ತು ಕೋಳ ಹಾಕಿದ ಕೈಗಳನ್ನೆತ್ತಿ ನಮಸ್ಕರಿಸಿದ. ಅವನಲ್ಲಿ ಹುಚ್ಚಿನ ಯಾವ ಕುರುಹೂ ಕಾಣಿಸಲಿಲ್ಲ. ಮೊಗದ ಮೇಲೆ ಹೆದರಿಕೆಯಾಗಲೀ ಉತ್ತೇಜನೆಯಾಗಲೀ ತೋರಿಬರಲಿಲ್ಲ.

ವಿಚಾರಣೆ ಆರಂಭವಾಯಿತು. ಮೊದಲು ಡಾಕ್ಟರರು ಸಾಕ್ಷಿಯಿತ್ತರು. ಹೆಣದ ಮೇಲೆ ಒಟ್ಟು ಚೂರಿಯ ೫೭ ಇರಿತಗಳಿದ್ದವು.

ಆ ಬಳಿಕ ಮ್ಯಾಥ್ಯೂಸ್ ಎಂಬ ದೇಶೀಯ ಕ್ರೈಸ್ತನೊಬ್ಬನು ಬಂದ. ವಕೀಲ ಹಾಗೂ ನ್ಯಾಯಾಧೀಶರ ಪ್ರಶ್ನೆಗಳಿಗೆ ಅವನು ಈ ರೀತಿ ಉತ್ತರವಿತ್ತ: "೧೦ ವರ್ಷಗಳಿಂದ ನಾನು ಗುಲಾಮ್ ಕಾದರನಿಂದಲೇ ಮಾಂಸಕೊಳ್ಳುತ್ತಿದ್ದೇನೆ. ಅವನು ಸ್ವಭಾವತಃ ಬಹು ಶಾಂತನೂ ಸುಸ್ವಭಾವಿಯೂ ಆಗಿದ್ದಾನೆ. ಎಂದೂ ಈ ರೀತಿ ಅವನು ಸಿಟ್ಟಿಗೆದ್ದುದನ್ನು ಕಂಡಿಲ್ಲ. ಹತವ್ಯಕ್ತಿಯು ಅಂಗಡಿಗೆ ಬರುವ ವರೆಗೆ ಅವನು ಎಲ್ಲರೊಡನೆಯೂ ಸಹಜ ಭಾವದಿಂದಲೇ ಮಾತಾಡುತ್ತಿದ್ದ. ಹತವ್ಯಕ್ತಿಯ ಪರಿಚಯು ಅವನಿಗಿದ್ದಂತೆ ತೋರಿತು. ಆದರೆ ಅವನ ನಿಜವಾದ ಹೆಸರು ಹೇಳದೆ 'ವಾಸ್ಕೋ ಡಿ ಗಾಮಾ' ಎಂದು ಕರೆದಿದ್ದ. ಆಕ್ರಮಣಕ್ಕೊಳಗಾದಾಗಲೂ ಡಿ ರೋಜಾ ಏನೂ ನುಡಿಯಲಿಲ್ಲ. ಕೊಲೆಗಾರನು ಅಮಲು ಪದಾರ್ಥಗಳನ್ನು ಎಂದೂ ಸೇವಿಸುತ್ತಿರಲಿಲ್ಲ. ಅಂದೂ ಅವನು ಅಮಲಿನಲ್ಲಿರಲಿಲ್ಲ. ಕೊಲೆಗಾರನ ಹೆಂಡತಿ, ಮಗಳು, ಹಾಗೂ ಮುದಿ ತಂದೆಯ ಮೇಲೆ ಡಿ ರೋಜಾ ಯಾವುದೋ ಅತ್ಯಾಚಾರವೆಸಗಿರಬೇಕೆಂದು ಕೊಲೆಗಾರನ ಮಾತು ಹಾಗೂ ಮುಖಭಾವದಿಂದ ಅನಿಸಿತು."

ಇನ್ನೂ ಕೆಲವು ಸಾಕ್ಷಿಗಳ ಹೇಳಿಕೆ ಮುಗಿದ ಬಳಿಕ ಡಿಪ್ಟೀ ಕಮಿಶನರ್ ತಮ್ಮ ಹೇಳಿಕೆ ನೀಡುತ್ತಾ ಹೀಗೆಂದರು — "ಡಿ ರೋಜಾ ಗೋವಾದ ಒಬ್ಬ ಸಾಧಾರಣ ವ್ಯಾಪಾರಿಯಾಗಿದ್ದನೆಂದು ಗೋವಾದಿಂದ ವರದಿ ಬಂದಿದೆ. ಅವನೆಂದೂ ಗೋವೆ ಬಿಟ್ಟು ಹೊರಹೊರಟಿರಲಿಲ್ಲ. ಕಲಕತ್ತೆಗೂ ಅವನು ಮೊದಲ ಬಾರಿ ಬಂದಿದ್ದ. ಆರೋಪಿಗೋ ಹೆಂಡತಿ ಮಕ್ಕಳಾರೂ ಇಲ್ಲ. ಇವನು ಕಳೆದ ಮೂವತ್ತು ವರ್ಷಗಳಿಂದ ಕಲಕತ್ತೆಯಿಂದ ಹೊರಗೆ ಹೋಗಿಲ್ಲ. ಇವನಿಗೆ ೪೭ ವರ್ಷ ವಯಸ್ಸು ಮತ್ತು ಡಿ ರೋಜಾನಿಗೆ ೪೨ ವರ್ಷ ಪ್ರಾಯ. ಆದ್ದರಿಂದ ಡಿ ರೋಜಾನಿಗೂ ಆರೋಪಿಗೂ ಹಿಂದೆಲ್ಲಾದರೂ ಭೇಟಿಯಾಗಿರಬಹುದೆಂಬ ಊಹನೆ ನಿರಾಧಾರ

ವಾದುದು."

ಇದು ವರೆಗೂ ಮೌನವಾಗಿದ್ದ ಆರೋಪಿ— "ಡಿ ಗಾಮಾನನ್ನು ನಾನು ಹಲವು ಬಾರಿ ಕಂಡಿದ್ದೆ" ಎಂದ.

ನ್ಯಾಯಾಲಯ ನಿಶ್ಶಬ್ದವಾಯಿತು. ಡೆಪ್ಯೂಟಿ ಕಮಿಶನರರನ್ನು ಸುಮ್ಮನಿರುವಂತೆ ಸೂಚಿಸಿ ನ್ಯಾಯಾಧೀಶರು ಆರೋಪಿಯೊಡನೆ— "ಡಿ ರೋಜಾನ ಪರಿಚಯ ಮೊದಲಿನಿಂದಲೂ ನಿನಗಿತ್ತೆ?" ಎಂದರು.

"ಇವನನ್ನು ನಾನೆಂದೂ ಕಂಡಿಲ್ಲ; ನಾನು ವಾಸ್ಕೋ ಡಿ ಗಾಮಾನನ್ನು ಮಾತ್ರ ಚೆನ್ನಾಗಿ ಬಲ್ಲೆ. ಅವನೇ ಛದ್ಮವೇಷದಿಂದ ನನ್ನ ಅಂಗಡಿಗೆ ಮಾಂಸಕೊಳ್ಳಲು ಬಂದಿದ್ದ."

"ಒಳ್ಳೇದು; ವಾಸ್ಕೋ ಡಿ ಗಾಮಾನನ್ನು ನೀನು ಎಲ್ಲಿ ನೋಡಿದ್ದೆ ? "

"ಮೊದಲು ಕಲ್ಲಿಕೋಟೆಯ ಬಂದರದಲ್ಲಿ; ಮತ್ತೆ ಕೊನೆಯ ಬಾರಿ ಸಮುದ್ರದ ಮೇಲೆ....." ಎನ್ನುತ್ತಾ ಎನ್ನುತ್ತಾ ಅವನು ಛಕ್ಕನೆ ಮಾತು ನಿಲ್ಲಿಸಿದ. ಅವನ ಮೋರೆಯಿಡೀ ಒಮ್ಮೆಲೇ ಕೆಂಪಾಯಿತು. ತುಂಬಿ ಬಂದ ಕೊರಳಿನಿಂದ 'ಯಾ ಖುದಾ !' ಎಂದು ಉದ್ಗರಿಸಿ ಎರಡೂ ಕೈಗಳಿಂದ ಮುಖಮುಚ್ಚಿ ಕುಳಿತುಕೊಂಡ. ಮತ್ತೇನೂ ನುಡಿಯಲಿಲ್ಲ.

"ಕ್ಷಣಿಕ ಉನ್ಮಾದಕ್ಕೊಳಗಾಗಿ ಗುಲಾಮ್ ಕಾದರನು ಡಿ ರೋಜಾನನ್ನು ಕೊಲೆಗೈದಿದ್ದಾನೆ" ನ್ಯಾಯಾಧೀಶರು ಅಭಿಪ್ರಾಯಪಟ್ಟರು.

ಕೋರ್ಟಿನಿಂದ ಹೊರಹೊರಟಾಗ ನನ್ನ ತಲೆ ತಿರುಗುತ್ತಿತ್ತು. ಕಲ್ಲಿಕೋಟೆ ! ಸಮುದ್ರದ ಮೇಲೆ ...!! ಇವೇನು ಅಸಂಬದ್ಧ ಪ್ರಲಾಪ ! ಅಥವಾ ರಹಸ್ಯಪೂರ್ಣ ಘಟನೆಯೇನಾದರೂ ಈ ಕಟುಕನ ಹೃದಯದಲ್ಲಿ ಹುದುಗಿಕೊಂಡಿದೆಯೆ ?

ಮೊಕದ್ದಮೆ ಹೈಕೋರ್ಟಿಗೆ ಹೋಯಿತು. ಜಡ್ಜರು ಆರೋಪಿಯನ್ನು ಒಂದು ತಿಂಗಳ ತನಕ ಡಾಕ್ಟರರ ವಶ ಒಪ್ಪಿಸಿದರು. ಗುಲಾಮ್ ಕಾದರ್ ಸ್ವಸ್ಥನಿದ್ದಾನೆಂದೂ ಅವನಲ್ಲಿ ಹುಚ್ಚಿನ ಯಾವ ಲಕ್ಷಣವೂ ಇಲ್ಲವೆಂದೂ ಡಾಕ್ಟರರ ರಿಪೋರ್ಟ್ ಬಂತು. ಮತ್ತೆ ಮೊಕದ್ದಮೆ ನಡೆಯಿತು. ತನ್ನ ವಕೀಲರ ಸಲಹೆಯನ್ನು ನಿರಾಕರಿಸಿ ಗುಲಾಮ್ ಕಾದರ್ ಸ್ಪಷ್ಟವಾಗಿ ಹೀಗೆಂದ– "ನಾನು ಕೊಲೆ ಮಾಡಿದ್ದೇನೆ. ಮತ್ತೆ ಅವನೆಲ್ಲಾದರೂ ಕಾಣಸಿಕ್ಕಿದರೆ ಪುನಃ ಹೀಗೆಯೇ ಕೊಲೆ ಮಾಡುವೆ." ಉಪಾಯವಿಲ್ಲದೆ ಹೈಕೋರ್ಟು ಅವನಿಗೆ ಫಾಶೀ ಶಿಕ್ಷೆ ವಿಧಿಸಿತು.

ನಿಟ್ಟುಸಿರಿಡುತ್ತಾ ನಾನು ಕೋರ್ಟಿನಿಂದ ಹೊರಬಿದ್ದೆ. ತೀರ್ಮಾನ ಸರಿಯಾಗಿಲ್ಲವೆಂದೂ ಯಾವುದೋ ಒಂದು ಅಗತ್ಯದ ರುಜುವಾತು ತಪ್ಪಿಹೋಗಿದೆಯೆಂದೂ ಮನಸ್ಸು ಒಡನುಡಿಯುತ್ತಿತ್ತು. ಆಗಲೇ ಪೋಲೀಸರು ಆರೋಪಿಯನ್ನು ಹೊರತಂದರು. ಅವನು ಸಂಕೇತದಿಂದ ನನ್ನನ್ನು ಬಳಿಗೆ ಕರೆದು ಹೀಗೆಂದ— "ನನ್ನ ಮೊಕದ್ದಮೆಯಲ್ಲಿ ನೀವು ಮೊದಲಿನಿಂದಲೂ ಭಾಗವಹಿಸಿರುವುದನ್ನು ಕಂಡಿದ್ದೇನೆ. ನಾನೀಗ ಹೊರಟೆ. ಆದರೆ ಜೈಲಿನಲ್ಲೊಮ್ಮೆ ನೀವು ಭೇಟಿಯಾಗುತ್ತೀರಾ ? ಒಂದೆರಡು ಮಾತು ಹೇಳಲಿಕ್ಕಿದೆ."

ಫಾಶೀ ಶಿಕ್ಷೆಗೆ ಎರಡು ದಿನ ಮೊದಲು ಬಹು ಕಷ್ಟದಿಂದ, ಅವನನ್ನು ಭೇಟಿಯಾಗಲು ಅನುಮತಿ ದೊರೆಯಿತು. ಆಗ ಅವನು ಹೇಳಿದ ಕತೆಯನ್ನು ಅವನ ಮಾತಿನಲ್ಲೇ ಇಲ್ಲಿ ಕೊಡುತ್ತಿದ್ದೇನೆ:

ನನ್ನ ಕತೆಯನ್ನು ನಂಬಿರಿ— ಬಿಡಿರಿ— ಆದರೆ ನಾನು ಹುಚ್ಚನಲ್ಲವೆಂಬುದನ್ನು ನೀವೂ ಬಲ್ಲಿರಿ. ನಾನೇನು ಓದುಬರಹ ಕಲಿತವನಲ್ಲ. ಯಾವಾಗಲೂ ಮಾಂಸ ಮಾರುತ್ತ ಇದ್ದೆ. ಕತೆ ಕಟ್ಟಿ ಹೇಳುವ ಸಾಮರ್ಥ್ಯ ನನಗಿಲ್ಲ. ನಾನಿಂದು ಹೇಳುತ್ತಿರುವ ಘಟನೆ ನನ್ನ ಕಣ್ಣಾರೆ ನಡೆದುದು. ಆದರೆ ಅದು ನನ್ನ ಈ ಜೀವನದಲ್ಲಿ ನಡೆದುದಲ್ಲ– ಕೆಲವು ಶತಮಾನಗಳ ಹಿಂದೆ ಜರುಗಿದುದು.

ನಾನೀಗ ಆರಂಭದಿಂದಲೇ ತಿಳಿಸುತ್ತೇನೆ.

೧೫-೧೬ ವರ್ಷಗಳ ಹಿಂದೆ ಹೆರಿಗೆಯ ವೇಳೆ ನನ್ನ ಹೆಂಡತಿ ಸತ್ತುಹೋದಳು. ಹುಟ್ಟಿದ ಹೆಣ್ಣು ಕೂಸು ತೀರಿಕೊಂಡಿತು. ಅವರಿಬ್ಬರೂ ಏಕೆ ಸತ್ತರೆಂಬುದನ್ನು ನಾನರಿಯೆ. ಆದರೆ ಅವರಿಬ್ಬರನ್ನೂ ಯಾವನೋ ಶತ್ರುವು ಕೊಲೆಗೈದಿರಬೇಕೆಂಬ ವಿಚಾರ ನನ್ನ ಮನದಲ್ಲಿ ಬೇರೂರಿತು. ನನ್ನ ಅಂತಃಕರಣವು ಕ್ರೋಧ ಪ್ರತಿಹಿಂಸೆಗಳಿಂದ ತುಂಬಿಹೋಯಿತು. ಆ ಅಜ್ಞಾತ ಶತ್ರುವು ಎಲ್ಲಾದರೂ ಕಾಣಸಿಕ್ಕಿದನೆಂದರೆ ಸೇಡು ತೀರಿಸಿಕೊಳ್ಳಬೇಕೆಂಬ ಭಾವನೆ ಬಲವಾಯಿತು.

ಮೆಲ್ಲಮೆಲ್ಲನೆ ದುಃಖ ಮರೆಯುತ್ತಾ ಹೋಯಿತು. ಆ ದಿನ ಆ ಮನುಷ್ಯ ಕಾಣಿಸಿಕೊಳ್ಳದಿರುತ್ತಿದ್ದರೆ ನನ್ನ ಜೀವನ ಸಹಜ ರೀತಿಯಲ್ಲೇ ಕೊನೆಗೊಳ್ಳುತ್ತಿತ್ತು. ನೀರಿನಲ್ಲಿ ಮುಳುಗಿ ಸತ್ತರೆ ಪುನರ್ಜನ್ಮದಲ್ಲಿ ಗತ ಜನ್ಮದ ಘಟನೆಗಳು ನೆನಪಿರುತ್ತವೆಂದು ಕೇಳಿದ್ದೇನೆ. ಆ ಮನುಷ್ಯನನ್ನು ಕಂಡಾಗ ಹಾಗೆಯೇ ಆಯಿತು. ಕ್ಷಣಕಾಲದಲ್ಲಿ ನಾನವನನ್ನು ಗುರುತಿಸಿಬಿಟ್ಟೆ. ಅವನು ನನ್ನ ಹೆಂಡತಿ, ಮಗಳು ಹಾಗೂ ತಂದೆಯನ್ನು ಕೊಲೆಗೈದಿದ್ದ. ಮುಳುಗುತ್ತಿದ್ದ ಹಡಗಿನಿಂದ ಮರಣೋನ್ಮುಖ ಯಾತ್ರಿಕರ ಕರುಣ ಹಾಹಾಕಾರವು ನನ್ನ ಕಿವಿಗಳಲ್ಲಿ ಮೊಳಗಿತು. ಮತ್ತು ವಾಸ್ಕೋ ಡಿ ಗಾಮನ ಬೀಭತ್ಸ ಮುಖಮಂಡಲವು ನನ್ನ ಕಣ್ಣೆದುರು ಸುಳಿದಾಡಿತು.

ಆಗ ನಾನು ಮಿರ್ಜಾ ದಾವೂದನಾಗಿದ್ದೆ. ಕಲ್ಲಿಕೋಟೆಯ ಹೆಸರು ಕೇಳಿರಬಹುದು ನೀವು. ಮಲಬಾರ್ ಸಮುದ್ರತೀರದಲ್ಲಿ ಕಿರುರತ್ನದಂತೆ ಹೊಳೆಯುವ ಸಣ್ಣ ನಗರ ಅಸಂಖ್ಯ ವ್ಯಾಪಾರಿ ಹಡಗುಗಳು ದಿನಾಲೂ ಅಲ್ಲಿ ಬಂದು ಹೋಗುತ್ತಿದ್ದವು.

ದೇಶವಿದೇಶಗಳ ಜನ ಅಲ್ಲಿ ಬಂದು ತಂಗುತ್ತಿದ್ದರು. ಎಲ್ಲರೂ ಪರಸ್ಪರ ಸಮಾನಭಾವನೆಯಿಂದ ವರ್ತಿಸುತ್ತಿದ್ದರು. ಪೌರಸ್ತ್ಯ ದೇಶಗಳ ಸಾಮಗ್ರಿಗಳು ಇಲ್ಲಿ ಬಂದು ರಾಶಿ ಬೀಳುತ್ತಿದ್ದವು. ತುರ್ಕ, ಪಾರಸಿ, ಅರಬಿ ಹಾಗೂ ಮೂರ್ ವ್ಯಾಪಾರಿಗಳು ಚಿನ್ನವನ್ನು ಕೊಟ್ಟು ಆ ಸಾಮಗ್ರಿಗಳನ್ನು ಒಯ್ಯುತ್ತಿದ್ದರು. ಮತ್ತು ಪಾಶ್ಚಾತ್ಯ ದೇಶಗಳಿಗೆ ಮಾರಿ ಹೇರಳ ಹಣ ಸಂಪಾದಿಸುತ್ತಿದ್ದರು. ಕಲ್ಲಿಕೋಟೆಯ ರಾಜಾ ಸಾಮರೀ ವ್ಯಾಪಾರಿ ನೌಕೆಗಳಿಂದ ಕಂದಾಯ ಪಡೆದು ರಾಜ್ಯದ ಖರ್ಚನ್ನು ನಡೆಸುತ್ತಿದ್ದ.

ಮಿರ್ಜಾ ದಾವೂದ ಕಲ್ಲಿಕೋಟೆಯ ಬಹು ದೊಡ್ಡ ವ್ಯಾಪಾರಿ. ಅವನ ಬಳಿ ೨೧ ವ್ಯಾಪಾರೀ ಹಡಗುಗಳಿದ್ದವು. ಅವು ಚೀನದಿಂದ ಇಜಿಪ್ತ ದೇಶದ ವರೆಗೆ ಸಂಚರಿಸುತ್ತಿದ್ದವು. ಅವನು ಮೂರ್ ಜನಾಂಗಕ್ಕೆ ಸೇರಿದ್ದ. ತಂದೆ ಬಹು ದೂರದ ಮೊರೋಕ್ಕೋದಲ್ಲಿದ್ದ. ಆದರೆ ಇವನು ಮಾತ್ರ ಕಲ್ಲಿಕೋಟೆಯನ್ನೇ ತನ್ನ ಮಾತೃಭೂಮಿಯನ್ನಾಗಿ ಮಾಡಿಕೊಂಡಿದ್ದ. ಅವನಿಗೆ ಒಬ್ಬಳೇ ಪತ್ನಿಯಿದ್ದಳು. ಮಗಳು ಹುಟ್ಟಿದಾಗ ಅವನು ಒಂದು ಸಾವಿರ ತೊಲೆ ಬಂಗಾರವನ್ನು ಹಂಚಿದ್ದ. ಅವನಷ್ಟು ಜನಪ್ರಿಯನೂ ಸನ್ಮಾನಿತನೂ ಆದ ವ್ಯಕ್ತಿ ಆ ನಗರದಲ್ಲೇ ಬೇರಾರೂ ಇರಲಿಲ್ಲ. ರಾಜಾ ಸಾಮರಿಯು ಸ್ವತಃ ಅವನನ್ನು ಗೆಳೆಯನಂತೆ ಕಾಣುತ್ತಿದ್ದ.

ಸೆಕೆಗಾಲದ ವೇಳೆ ಒಂದು ದಿನ ಸಂಜೆ ನಗರದ ನರನಾರಿಯರು ಬಂದರಿನಲ್ಲಿ ವಾಯುಸೇವನೆಗೆಂದು ನೆರೆದಿದ್ದರು. ಮಿರ್ಜಾ ದಾವೂದ ತೀರದಲ್ಲೇ ಇದ್ದ. ಆ ವೇಳೆ ಅಲ್ಲಿ ಯಾವ ವ್ಯಾಪಾರಿ ಹಡಗೂ ಇರಲಿಲ್ಲ. ಸೂರ್ಯನು ಮುಳುಗುವುದರಲ್ಲಿದ್ದ. ಆಗಲೇ ದೂರದಲ್ಲಿ ಮೂರು ಹಡಗುಗಳು ಬಂದರದ ಕಡೆ ಬರುತ್ತಿರುವುದು ಕಾಣಿಸಿತು.

ಕತ್ತಲು ಓಸರಿಸುವುದರೊಳಗೇ ಅಲೆಗಳ ಆಘಾತದಿಂದ ಜರ್ಜರಿತವಾಗಿ ಚಿಂದಿ ಚಿಂದಿಯಾದ ಹಾಯಿಗಳಿಂದ ಕೂಡಿದ ಮೂರು ಹಳೇ ಹಡಗುಗಳು ಕಲ್ಲಿಕೋಟೆಯ ಬಂದರಿಗೆ ಬಂದಿಳಿದವು. ಜನರು ವಿದೇಶೀಯರನ್ನು ಮುತ್ತಿನಿಂತರು.

ಮಿರ್ಜಾ ದಾವೂದನು ಅತ್ತ ಸರಿಯುತ್ತಲೇ ಜನ ಆದರದಿಂದ ಅವನಿಗೆ ದಾರಿಬಿಟ್ಟರು.

'ಇಲ್ಲಾರಿಗಾದರೂ ಪೋರ್ತುಗೀಸ್ ಭಾಷೆ ತಿಳಿದಿದೆಯೆ ? ನಾನು ಜಮೋರಿನನನ್ನು ಭೇಟಿಯಾಗಬಯಸುತ್ತೇನೆ'— ಒಬ್ಬನೆಂದ.

ಮಿರ್ಜಾ ದಾವೂದ ಪ್ರಶ್ನಕರ್ತನನ್ನೂ ಅವನ ಸಂಗಾತಿಗಳನ್ನೂ ಒಮ್ಮೆ ನಖಶಿಖಾಂತ ನೋಡಿ 'ನನಗೆ ಪೋರ್ತುಗೀಸ್ ಭಾಷೆ ಬರುತ್ತಿದೆ' ಎಂದ.

ವಿದೇಶಿಯು ಅವನನ್ನು ನಿಟ್ಟಿಸಿ ತಿರಸ್ಕಾರದಿಂದ— 'ನೀನು ಮೂರನಲ್ಲವೆ?' ಎಂದ. 'ಹೌದು, ನಾನು ಮೂರ. ನೀವು ಜಲದಸ್ಯುಗಳೆಂದು ಕುಖ್ಯಾತರಾದ ಪೋರ್ತುಗೀಸರು. ನಿಮಗೂ ನಮಗೂ ಇದೇನೂ ಪ್ರಥಮ ಪರಿಚಯವಲ್ಲ. ಆದರೆ ನಿಮ್ಮ ಮೇಲೆ ನಮಗೆ ಎಳ್ಳಷ್ಟೂ ಸದ್ಭಾವವಿಲ್ಲ!'

'ಮೂರ್ ನಾಯಿಗಳ ಮೇಲೆ ನಮಗೂ ಸದ್ಭಾವವಿಲ್ಲ. ಮೂರರನ್ನು ಅಳಿಸುವುದೇ ನಮ್ಮ ಧರ್ಮ'— ಎಂದ ಒಬ್ಬ ಯುವಕ ಪೋರ್ತುಗೀಸ. ಮರುಕ್ಷಣವೇ ಮಿರ್ಜಾನ ಚೂರಿ ಹೊರಬಂತು. ಆದರೆ ವಿದೇಶೀಯರ ಮುಖಂಡನು ಅವನನ್ನು ತಡೆಯುತ್ತ ನಮ್ರತೆಯಿಂದ— 'ಮಹಾಶಯರೆ, ಈ ಮೂರ್ಖನನ್ನು ಕ್ಷಮಿಸಿರಿ. ನಾವು ಪೋರ್ತುಗೀಸರು ಮತ್ತು ನೀವು ಮೂರರು. ಬೇರೆ ಕಡೆಗಳಲ್ಲಿ ನಮ್ಮಿಬ್ಬರ ಸಂಬಂಧ ಹೇಗೇ ಇರಲಿ- ಇಲ್ಲಿ ಮಾತ್ರ ನಮ್ಮೊಳಗೆ ಜಗಳಾಟವಿಲ್ಲ. ನಿಮ್ಮನ್ನು ಸಂತುಷ್ಟಗೊಳಿಸಿಯೇ ನಾವು ಕೃತಾರ್ಥರಾಗುತ್ತೇವೆ' ಎಂದ.

ತನ್ನ ಯುವಕ ಸಂಗಾತಿಯನ್ನು ಗದರಿಸುತ್ತಾ ಅವನೆಂದ— 'ಪೆಡ್ರೋ, ಎಚ್ಚರಿಕೆ! ಮುಂದೆಂದಾದರೂ ನಿನ್ನ ಬಾಯಿಯಿಂದ ಇಂಥ ಅಪಶಬ್ದ ಹೊರಟಿತೆಂದರೆ ನಿನ್ನನ್ನು ಚೂರು ಚೂರು ಮಾಡಿಬಿಡುತ್ತೇನೆ!' ಮತ್ತು ನಗುತ್ತಾ ಮಿರ್ಜಾನೊಡನೆ—'ಸುಳ್ಳುಗಾರರಿಗೆ ಶಿಕ್ಷೆ ಕೊಡುವುದು ಧಾರ್ಮಿಕರ ಕರ್ತವ್ಯ.... ಈಗ ನೀವು ದಯೆಮಾಡಿ ನಮ್ಮೊಡನೆ ಜಮೋರಿನನ ಬಳಿ ಬನ್ನಿರಿ. ಮತ್ತು ನಮ್ಮ ಪ್ರಾರ್ಥನೆಯನ್ನು ಅವರಿಗೆ ತಿಳಿಯಹೇಳಿರಿ. ನಾವು ನಿಮಗೆ ಸದಾ ಕೃತಜ್ಞರಾಗಿ ಉಳಿಯುವೆವು!'—ಎನ್ನುತ್ತಾ ಅವನು ತಲೆಬಾಗಿ ದಾವೂದನನ್ನು ವಂದಿಸಿದ.

ಮಿರ್ಜಾ ದಾವೂದ ಈ ವಿದೇಶಿಯ ಸವಿಮಾತಿಗೆ ಮೋಸಹೋಗಲಿಲ್ಲ.... 'ಫಿರಂಗೀ, ನೀನು ಮಹಾಧೂರ್ತ, ಕ್ರಿಸ್ತಾನರಾದ ನಿಮ್ಮ ಪರಿಚಯ ನನಗೆ ಚೆನ್ನಾಗಿದೆ. ಜಗಳ ನಿಮ್ಮ ಉದ್ಯೋಗವಾದರೆ ಲೋಭ ನಿಮ್ಮ ಧರ್ಮ. ಪರಸಂಪತ್ತಿಹರಣವು ನಿಮ್ಮ ಸ್ವಭಾವ. ಈ ರಾಜ್ಯದಲ್ಲಿ ಜಗಳ ಗೊಂದಲಗಳೇನೂ ಇಲ್ಲ. ಹಿಂದೂ, ಬೌದ್ಧ, ಮುಸಲ್ಮಾನ, ಯಹೂದಿ, ಪಾರಸಿ - ಎಲ್ಲರೂ ಶಾಂತಿಯಿಂದ ವ್ಯಾಪಾರ ಮಾಡುತ್ತಾರೆ. ನಿಜ ಹೇಳು; ಸಾಮರಿಯ ಈ ರಾಜ್ಯಕ್ಕೆ ನೀನು ಯಾವ ಮನೋಭಾವದಿಂದ ಕಾಲಿಟ್ಟಿರುವಿ?'

ಕ್ಷಣಕಾಲ ಫಿರಂಗಿಯ ಕಣ್ಣುಗಳು ಕ್ರೋಧ ಹಾಗೂ ಹಿಂಸಾಭಾವದಿಂದ ಕೆಂಪಾದವು. ಆದರೆ ಮರುಕ್ಷಣವೇ ಸಾವರಿಸಿಕೊಂಡು ಕೊರಳಿನಲ್ಲಿ ತೂಗುತ್ತಿದ್ದ ಕ್ರಾಸನ್ನು ಕೈಯಲ್ಲಿ ಹಿಡಿದು ಹೀಗೆಂದ— 'ಎಲ್ಲರ ಮೇಲೂ ಸದ್ಭಾವವಿಟ್ಟು ವ್ಯಾಪಾರ ಮಾಡುವುದೇ ನನ್ನ ಉದ್ದೇಶ ಹೊರತು ಬೇರಾವ ದುರ್ಭಾವನೆಯೂ ಇಲ್ಲವೆಂದು ಈ ಕ್ರಾಸ್ ಹಿಡಿದು ಶಪಥ ಮಾಡುತ್ತೇನೆ.'

ಆ ಬಳಿಕ ಮಿರ್ಜಾನೊಂದಿಗೆ ವಿದೇಶೀಯರು ಸಾಮರಿಯ ಅರಮನೆಗೆ ಸಾಗಿದರು. ಅಲ್ಲಿ ಮುಖಂಡನು ಸಾಮರಿಯೆದುರು ಮೊಣಕಾಲೂರಿ ನಮಸ್ಕರಿಸಿ - 'ನನ್ನ ಹೆಸರು ವಾಸ್ಕೋ ಡಿ ಗಾಮಾ. ನಾನು ಪೋರ್ತುಗಲ್ಲಿನ ರಾಯಭಾರಿ. ಕಲ್ಲಿಕೋಟೆಯಲ್ಲಿ ವ್ಯಾಪಾರ ನಡೆಸಲು ಅನುಮತಿಕೊಡಬೇಕೆಂದು ನಿಮ್ಮನ್ನು ಪ್ರಾರ್ಥಿಸು

ತ್ತೇನೆ'- ಎಂದು ತಾನು ಪೋರ್ತುಗೀಸ್ ರಾಜನಿಂದ ತಂದಂತಹ ಬೆಲೆಬಾಳುವ ಕಾಣಿಕೆಗಳನ್ನು ಎದುರಿಗಿಟ್ಟ.

ತೋರಿಕೆಗೆ ಈ ಬಿಳಿಯರು ಏನೇ ಹೇಳಿದ್ದರೂ ಮಿರ್ಜಾನ ಮನಸ್ಸಿನಿಂದ ಸಂದೇಹ ಅವಿಶ್ವಾಸಗಳು ದೂರಾಗಲಿಲ್ಲ. ಅವನು ಫಿರಂಗಿಗಳನ್ನು ಚೆನ್ನಾಗಿ ಗುರುತಿಸುತ್ತಿದ್ದ. ಅವನೇ ಏಕೆ?— ಪ್ರತಿಯೊಬ್ಬ ಮೂರನೂ ಗುರುತಿಸಬಲ್ಲ. ಹಣದ ವಾಸನೆ ಬಡಿಯಿತೆಂದರೆ ಧಾವಿಸಿ ಶತ್ರುಮಿತ್ರರೆಂಬ ಭೇದ ಭಾವವಿಲ್ಲದೆ ಎಲ್ಲರನ್ನೂ ಬಗ್ಗುಬಡಿದು ಸ್ವಾರ್ಥಸಿದಿ ಮಾಡಿಕೊಳ್ಳುವ ನೀಚ ಜನಾಂಗವದು.

ಪೋರ್ತುಗೀಸರು ಕಲ್ಲಿಕೋಟೆಯಲ್ಲಿದ್ದು ಸಾಧಾರಣ ವಸ್ತುಗಳನ್ನೂ ಇಮ್ಮಡಿ ಮುಮ್ಮಡಿ ಬೆಲೆಗೆ ಕೊಂಡುಕೊಂಡು ತಮ್ಮ ನಾವೆ ತುಂಬಿಸುತ್ತಿದ್ದರು. ಇದರಿಂದ ಸಾಮಾನ್ಯ ಜನರು ತುಂಬ ಸಂತುಷ್ಟರಾಗಿದ್ದರೂ ಮಿರ್ಜಾ ದಾವೂದ ಹಾಗೂ ಇತರ ದೂರದರ್ಶಿ ವ್ಯಾಪಾರಿಗಳ ಸಂದೇಹ ಬಲಿಯುತ್ತ ಹೋಯಿತು. ಏಕೆಂದರೆ ವ್ಯಾಪಾರಿಗಳು ಹೆಚ್ಚು ಹಣ ಕೊಟ್ಟು ವ್ಯಾಪಾರ ಮಾಡುವುದಿಲ್ಲ. ಆದ್ದರಿಂದ ಇವರ ಮನದಲ್ಲಿ ಬೇರೇನೋ ದುರುದ್ದೇಶ ಹುದುಗಿರಬೇಕೆಂದು ಅವರು ಲೆಕ್ಕ ಹಾಕಿದರು.

ಶರತ್ಕಾಲ ಬಂದಾಗ ಬಂದರಕ್ಕೆ ಬಂಗಾಳದ ಪ್ರಭಾಕರ ಸೇಠನ ಎರಡು ಹಡಗುಗಳು ಬಂದು ಸೇರಿದವು. ಪ್ರತಿವರ್ಷವೂ ಒಂದು ಲಕ್ಷ ಮೊಹರುಗಳಿಗಿಂತಲೂ ಹೆಚ್ಚಿನ ಸಾಮಗ್ರಿಗಳೊಡನೆ ಅವನು ಇಲ್ಲಿ ಬರುತ್ತಿದ್ದ. ಅವನು ತರುವಂತಹ ಉತ್ಕೃಷ್ಟ ವಸ್ತ್ರಗಳು ಬೇರೆಲ್ಲೂ ಸಿಗುತ್ತಿರಲಿಲ್ಲ. ಆದ್ದರಿಂದ ಅವನಿಗೆ ಅಷ್ಟು ಖ್ಯಾತಿಯಿತ್ತು. ಅವನ ವಾಕ್ಚಾತುರ್ಯವೂ ವಿನೋದಪ್ರಿಯತೆಯೂ ಎಲ್ಲರ ಮೆಚ್ಚುಗೆ ಗಳಿಸಿದ್ದವು. ಅವನು ತೀರಕ್ಕೆ ಬರುವ ಮೊದಲೇ ನಗರದ ದೊಡ್ಡ ದೊಡ್ಡ ವ್ಯಾಪಾರಿಗಳು ಅಲ್ಲಿ ಗುಂಪುಗೂಡಿದರು. ಪ್ರಭಾಕರನು ಎಲ್ಲರನ್ನೂ ವಂದಿಸಿದ. ಆಗ ಮಿರ್ಜಾ ದಾವೂದನು ಅವನೊಡನೆ- 'ಪ್ರಭಾಕರ, ಏನೇನು ತಂದಿರುವಿ ?' ಎಂದ.

'ಈ ಬಾರಿ ತಂದಿರುವಷ್ಟು ಶ್ರೇಷ್ಠವಾದ ಮಲ್‌ಮಲ್ ಬಟ್ಟೆಯನ್ನು ನೀವು ಹಿಂದೆಂದೂ ಕಂಡಿರಲಾರಿರಿ. ಜೇಡನ ಬಲೆಗಿಂತಲೂ ಹಗುರವಾದುದು. ೧೫೦ ಗಜ ಬಟ್ಟೆ ಒಂದು ಮುಷ್ಟಿಯೊಳಗೆ ಹಿಡಿಸೀತು. ಆದರೆ ಥಾನೊಂದಕ್ಕೆ ೫ ತೊಲೆ ಚಿನ್ನಕ್ಕಿಂತ ಕಡಿಮೆ ಬೆಲೆಗೆ ಕೊಡಲಾರೆ. ನಾಲ್ಕು ತೊಲೆಗೆ ಕೊಚ್ಚಿಯವರು ಕೇಳಿದರೂ ಕೊಡಲಿಲ್ಲ. ೫ ಕ್ಕಿಂತ ಕಡಿಮೆಗೆ ಮಾರಿದರೆ ಮನೆಯಿಂದ ಹೆಂಡತಿ ಒಡಿಸಿಬಿಟ್ವಾಳು !'

"ಓಡಿಸಿದರೆ ಒಳ್ಳೇದಾಯಿತು, ಬಿಡು' ಎಂದು ನಗುತ್ತಾ ಮಿರ್ಜಾನೆಂದ— 'ಮೊದಲು ಆ ಬಟ್ಟೆ ತೋರಿಸು, ನೋಡೋಣ.'

ಒಮ್ಮೆಲೇ ಬೆಚ್ಚಿ ಬಿದ್ದು ಪ್ರಭಾಕರನೆಂದ— 'ಇವರಾರಪ್ಪಾ! ಇವರನ್ನು ಹಿಂದೆಂದೂ ಕಂಡಿಲ್ಲ. ಈ ಜನ ಎಲ್ಲಿಂದ ಬಂದಿದ್ದಾರೆ ?'

ಮಿರ್ಜಾ ದಾವೂದ ತಿರುಗಿ ನೋಡಿದ. ವಾಸ್ಕೋ ಡಿ ಗಾಮಾ ಇಬ್ಬರು ಸಂಗಾತಿಗಳೊಂದಿಗೆ ಬರುತ್ತಿದ್ದ. ಮೊದಲ ಭೇಟಿಯ ಬಳಿಕ ಒಂದೆರಡು ಬಾರಿ ಬಂದರಿನಲ್ಲಿ ಕಾಣಸಿಕ್ಕಿದ್ದರೂ ಇಬ್ಬರ ಮುಖದ ಮೇಲೂ ಗೆಳೆತನದ ಕುರುಹು ತೋರಿ ಬರದುದರಿಂದ ಮಾತುಕತೆ ನಡೆದಿರಲಿಲ್ಲ. ಇಬ್ಬರೂ ಶಕ್ಯವಿದ್ದಷ್ಟು ದೂರವಾಗಿಯೇ ಇರುತ್ತಿದ್ದರು. ಪ್ರಭಾಕರನ ಪ್ರಶ್ನೆಗೆ ಮಿರ್ಜಾ ಇಷ್ಟೇ ಹೇಳಿದ— 'ಇವರು ಪೋರ್ತುಗೀಸರು; ಮೆಲ್ಲಮೆಲ್ಲನೆ ತಾನಾಗಿಯೇ ಪರಿಚಯವಾಗುವುದು !'

ಇಷ್ಟರೊಳಗೆ ಪ್ರಭಾಕರನ ಸಾಮಗ್ರಿಗಳ ಮಾದರಿಗಳೆಲ್ಲ ದಡಕ್ಕೆ ಬಂದುಬಿದ್ದವು. ವ್ಯಾಪಾರಿಗಳೆಲ್ಲ ಗುಂಪುಗಟ್ಟಿ ನೋಡುತ್ತಿದ್ದರು. ಡಿ ಗಾಮಾ ಕೂಡ ಬಂದುನಿಂತ. ಮಲ್‌ಮಲ್‌ನ ಮಾದರಿಯನ್ನು ನೋಡಿ ಮಿರ್ಜಾನೆಂದ—

'ನಿನ್ನ ಮಾತು ನಿಜ ಪ್ರಭಾಕರ, ಬಹು ಉತ್ತಮ ವಸ್ತು. ಎಷ್ಟು ತಂದಿರುವೆ ?'

'ಒಂದು ಹಡಗು ತುಂಬ ತಂದಿದ್ದೇನೆ'— ಪ್ರಭಾಕರ ಅಭಿಮಾನದಿಂದ ಹೇಳಿದ. ಆ ಬಟ್ಟೆಯೆಲ್ಲವೂ ತನಗಿರಲೆಂದು ಮಿರ್ಜಾ ಹೇಳಿಬಿಟ್ಟ.

ಆಗಲೇ ಡಿ ಗಾಮಾ ಅತ್ತ ಲಕ್ಷ್ಯಹರಿಸಿದ. ಇಷ್ಟು ಸೂಕ್ಷ್ಮವಸ್ತ್ರವನ್ನು ಅವನು ಕಂಡೇ ಇರಲಿಲ್ಲ. ಪೋಪ್ ಹಾಗೂ ತನ್ನ ರಾಜನಿಗೆ ಕಾಣಿಕೆ ನೀಡಲು ಅತ್ಯುತ್ತಮ ವಸ್ತುವಾಗಿ ತೋರಿತವನಿಗೆ. 'ಈ ಮಲ್‌ಮಲ್ ನಾನು ಕೊಳ್ಳುತ್ತೇನೆ'— ಎಂದನವ.

'ಈಗ ಉಪಾಯವಿಲ್ಲ; ನಾನಿದನ್ನು ಕೊಂಡುಬಿಟ್ಟೆ!'— ಮುಗುಳ್ನಗುತ್ತಾ ದಾವೂದನೆಂದ.

ಡಿ ಗಾಮಾ ಪ್ರಭಾಕರನತ್ತ ತಿರುಗಿ— 'ಇಮ್ಮಡಿ ಬೆಲೆ ಕೊಡುವೆ'— ಎಂದ. 'ಇಮ್ಮಡಿಯೇಕೆ? ನೂರು ಪಾಲಷ್ಟು ಹಣ ಕೊಟ್ಟರೂ ಇದು ಸಿಗಲಾರದು!'— ಮಿರ್ಜಾ ಸಹಜ ಭಾವದಿಂದ ಹೇಳಿದ.

'ಮೂರ್, ಸುಮ್ಮನಿರು. ನಾನು ಬಟ್ಟೆಯ ಒಡೆಯನೊಡನೆ ಮಾತಾಡುತ್ತಿದ್ದೇನೆ'— ಡಿ ಗಾಮಾ ಮಿಂಚಿನಂತೆ ಮಿರ್ಜಾನ ಕಡೆ ತಿರುಗಿ ಕರ್ಕಶ ಧ್ವನಿಯಲ್ಲಿ ನುಡಿದ.

ಪ್ರಭಾಕರ ಬುದ್ಧಿವಂತನಿದ್ದ. ಮಿರ್ಜಾ ಅವನ ಹಳೆಯ ಗಿರಾಕಿ. ಈ ಹೊಸ ಮನುಷ್ಯನ ಪರಿಚಯವೂ ಅವನಿಗಿರಲಿಲ್ಲ. 'ಮಹಾಶಯರೇ! ಅವರೇ ಈಗ ಬಟ್ಟೆಯ ಒಡೆಯರು. ಅವರೇ ಬೇಕಿದ್ದರೆ ನಿಮಗೆ ಮಾರಬಹುದು!'— ಎಂದ.

ಡಿ ಗಾಮಾನ ಅಸಭ್ಯ ವರ್ತನೆಯಿಂದ ದಾವೂದನ ಮೋರೆ ಕೆಂಪೇರಿತ್ತು. 'ಡಿ ಗಾಮಾ, ನಿನ್ನ ನಿಜವಾದ ಉದ್ದೇಶವೇನೆಂಬುದನ್ನು ನಾನು ಮೊದಲೇ ಅರಿತಿದ್ದೆ. ಇಂದು ಅದು ಬಹಿರಂಗವಾಯಿತು. ವ್ಯಾಪಾರ ನಿನಗೊಂದು ನೆವ ಮಾತ್ರ.... ನೀನೊಬ್ಬ ಕಳ್ಳ...... ಅಲ್ಲದಿದ್ದರೆ ಅನುಚಿತ ಬೆಲೆಕೊಟ್ಟು ವ್ಯಾಪಾರವನ್ನು ನಷ್ಟಪಡಿಸಿಕೊಳ್ಳುತ್ತಿದ್ದಿಯಾ?'— ಸಿಡುಕಿನಿಂದ ದಾವೂದನೆಂದ.

ಗಾಯಗೊಂಡ ಸಿಂಹದಂತೆ ಗರ್ಜಿಸಿ ಡಿ ಗಾಮಾ ಖಡ್ಗವನ್ನು ಹೊರತೆಗೆದು ಹಲ್ಲು ಕಡಿಯುತ್ತ—'ಅಹಂಕಾರಿ ಮೂರನೇ, ಇಂದು ನಿನ್ನ ರಕ್ತದಿಂದ ನನ್ನ ಖಡ್ಗದ ಕೊಳೆಯನ್ನು ಹೋಗಲಾಡಿಸುವೆ'— ಎಂದ.

'ಬರ್ಬರ, ಇಂದು ನಿನ್ನನ್ನು ನರಕಕ್ಕೆ ಕಳುಹಿಸುವೆ'— ಮಿರ್ಜಾನೂ ಖಡ್ಗ ಹಿರಿದು ಸಿದನಾದ.

ಕ್ಷಣಕಾಲ ಇಬ್ಬರೂ ಪರಸ್ಪರ ನೋಡಿಕೊಂಕೊಂಡರು. ಮರುಕ್ಷಣವೇ ಬಿರುಗಾಳಿಯಂತೆ ಡಿ ಗಾಮಾ ಆಕ್ರಮಣ ಮಾಡಿದ. ಆದರೆ ಅವನ ಉದ್ದನ್ನ ಖಡ್ಗ ಮಿರ್ಜಾನ ದೇಹವನ್ನು ಸ್ಪರ್ಶಿಸುವ ಮೊದಲೇ ಮಿರ್ಜಾ ಮಿಂಚಿನಂತೆ ಬದಿಗೆ ಸರಿದು ತನ್ನ ಖಡ್ಗದಿಂದ ಎದುರಾಳಿಯ ಕಾಲಿಗೆ ಹೊಡೆದ. ಮಿರ್ಜಾ ಖಡ್ಗ ಯುದ್ಧದಲ್ಲಿ ನಿಪುಣನೆಂದು ಡಿ ಗಾಮಾನಿಗೆ ತಿಳಿಯಿತು. ತನ್ನ ವೈರಿಯೂ ಅಸಿಕೌಶಲದಲ್ಲಿ ತನಗೆ ಸರಿಸಮಾನನೆಂಬುದನ್ನು ದಾವೂದನೂ ಅರಿತ.

ಹಾವು ಮುಂಗುಸಿಗಳ ಕಾದಾಟದಂತೆ ಇವರಿಬ್ಬರ ಯುದ್ಧವೂ ನಡೆಯಿತು. ಮಿರ್ಜಾ ಕಾದುತ್ತಿರುವಾಗಲೇ ಡಿ ಗಾಮಾನನ್ನು ವಾಗ್ಬಾಣಗಳಿಂದ ಗಾಸಿಗೊಳಿಸುತ್ತಿದ್ದ. ಡಿ ಗಾಮಾ ಸುಮ್ಮನಿದ್ದ. ಮೆದುಳಿನ ಸಮತೋಲನವನ್ನು ತಪ್ಪಿಸುವ ಪ್ರಯತ್ನ ಇದೆಂಬುದು ಅವನಿಗೆ ತಿಳಿದು ಹೋಗಿತ್ತು. ಮೆಲ್ಲಮೆಲ್ಲನೆ ಕದನವು ಉಗ್ರವಾಗುತ್ತ ಹೋಯಿತು.

ತಾನು ತಿರುಗುತ್ತ ತಿರುಗುತ್ತ ನೀರಿನ ಹತ್ತಿರಕ್ಕೆ ಬಂದಿರುವುದು ಡಿ ಗಾಮಾನ ಗಮನಕ್ಕೆ ಬಂತು. ಒಂದು ಹೆಜ್ಜೆ ಹಿಂದೆ ಸರಿದರೆ ತಾನು ನೀರಿಗೆ ಬೀಳುತ್ತೇನೆಂದು ಅರಿವಾಯಿತು. ಅವನು ಗಾಬರಿಯಾಗಿ ಕಾಡುಕೋಣದಂತೆ ಮಿರ್ಜಾನ ಮೇಲೆರಗಿದ. ಈಗ ಮಿರ್ಜಾ ಅವನನ್ನು ಸುಲಭ

ವಾಗಿ ಕೊಲ್ಲಬಹುದಿತ್ತು. ಆದರೆ ಹಾಗೆ ಮಾಡದೆ ತನ್ನ ಖಡ್ಗದ ಹಿಂಬದಿಯಿಂದ ಅವನ ಮುಷ್ಟಿಯ ಮೇಲೆ ಪ್ರಹಾರ ಮಾಡಿದ. ಡಿ ಗಾಮಾನ ಖಡ್ಗ ಕೈತಪ್ಪಿ ದೂರ ಸಿಡಿದು ಬಿತ್ತು. ಶಸ್ತ್ರಹೀನನಾಗಿ ಅವನು ಗಾಬರಿಯಾದ.

ಮಿರ್ಜಾ ಖಡ್ಗದ ಬಾಯಿಯನ್ನು ಅವನ ಕೊರಳ ಮೇಲಿಟ್ಟು—'ಡಿ ಗಾಮಾ! ಮೊಣಕಾಲೂರು; ಇಲ್ಲದಿದ್ದರೆ ಕೊಂದುಹಾಕುವೆ'—ಎಂದ. ಅವನು ಕೈ ಕಟ್ಟಿಕೊಂಡು ವಿಕಾರವಾಗಿ ನಗುತ್ತ-'ಶಸ್ತ್ರಹೀನರನ್ನು ಕೊಲ್ಲುವುದು ನಿನ್ನ ಹುಟ್ಟುಗುಣವಲ್ಲವೆ?'—ಎಂದ.

'ಒಳ್ಳೇದು; ನಿನ್ನನ್ನು ಬಿಟ್ಟುಬಿಡುವೆ! ಆದರೆ ಒಂದು ವಾರದೊಳಗೆ ನಿನ್ನ ಪಂಗಡದವರು ಇಲ್ಲಿಂದ ಹೊರಟುಹೋಗಬೇಕು; ಮತ್ತೆಂದೂ ಇಲ್ಲಿಗೆ ಬರಬಾರದು; ಪ್ರತಿಜ್ಞೆ ಮಾಡು.'

'ಮೂರನೇ, ಪ್ರತಿಜ್ಞೆ ಮಾಡಲಾರೆ. ನನ್ನ ರಕ್ತದಿಂದ ಕಲ್ಲಿಕೋಟೆಯ ಮಣ್ಣು ಒದ್ದೆಯಾಯಿತೆಂದರೆ ಹಿಂದುಸ್ಥಾನದಲ್ಲಿ ಪೋರ್ತುಗೀಸರ ವಿಜಯಧ್ವಜ ಸುಲಭವಾಗಿ ಹಾರಾಡುವುದು!'

..'ಇಂದು ನಿನ್ನ ಉದ್ದೇಶ ನಿನ್ನ ಬಾಯಿಯಿಂದಲೇ ಹೊರಹೊರಟಿತು. ಆದರೆ ನೀಚ, ಆ ಉದ್ದೇಶ ಈಡೇರಲು ನಾನು ಬಿಡಲಾರೆ. ಕಲ್ಲಿಕೋಟೆ ಭೂಮಂಡಲದ ಎಲ್ಲಾ ಜನಾಂಗದವರೂ ಮೈತ್ರಿಯಿಂದ ಇರುವಂಥ ಸ್ಥಳ. ಮುಂದೆಯೂ ಹಾಗೆಯೇ ಉಳಿಯುವುದು.. ಹೂಂ; ಬೇಗ ಪ್ರತಿಜ್ಞೆ ಮಾಡು.. ಇಲ್ಲದಿದ್ದರೆ..'

ಡಿ ಗಾಮಾ ಸ್ತಬ್ಧನಾದ. ಬಳಿಕ ಸಿಟ್ಟಿನಿಂದ ನಡುಗುತ್ತಾ ಅವನು ಎಂತೆಂತೋ ಪ್ರತಿಜ್ಞೆ ಮಾಡಿದ—'ಒಂದು ವಾರದೊಳಗೆ ಈ ದೇಶ ಬಿಟ್ಟು ಹೊರಡುವೆ; ಮುಂದೆಂದೂ ಇಲ್ಲಿಗೆ ಕಾಲಿಡುವುದಿಲ್ಲ!'

ಐಳನೇ ದಿನ ಸಂಗಾತಿಗಳೊಂದಿಗೆ ಡಿ ಗಾಮಾ ತನ್ನ ಹಡಗುಗಳನ್ನೇರಿ ಹೊರಟುಹೋದ.

'ಡಿ ಗಾಮಾ, ಪ್ರತಿಜ್ಞೆ ನೆನಪಿರಲಿ'—ಎಂದು ದಾವೂದ್ ಕೂಗಿ ಹೇಳಿದ. 'ಪ್ರತಿಜ್ಞೆ? ಬೇಗನೆ ಭೇಟಿಯಾಗುವುದು ದಾವೂದ್'—ಕಂಗಳಿಂದ ಕಿಡಿಕಾರುತ್ತಾ ಡಿ ಗಾಮಾನೆಂದ.

ನಾಲ್ಕು ವರ್ಷಗಳುರುಳಿದವು.

ಮಿರ್ಜಾ ದಾವೂದ್ ಹೆಂಡತಿ, ಮಗಳು ಹಾಗೂ ಮುದಿ ತಂದೆಯೊಂದಿಗೆ ಮಕ್ಕಾ ಯಾತ್ರೆ ಮುಗಿಸಿ ಮರಳುತ್ತಿದ್ದ. ಅವನ ಹಡಗು ಬಹು ದೊಡ್ಡದಿತ್ತು. ಆದ್ದರಿಂದ ಇನ್ನೂ ಹಲವಾರು ಯಾತ್ರಿಕರು ಅದರಲ್ಲಿ ಕುಳಿತು ಬರುತ್ತಿದ್ದರು. ಆ ದಿನ ಶುಕ್ರವಾರವಾಗಿತ್ತು. ಮಧ್ಯಾಹ್ನದ ನಮಾಜನ್ನು ಹಡಗಿನ ಮೇಲ್ಭಾಗದಲ್ಲೇ ಮುಗಿಸಿ ಎಲ್ಲರೂ ವಿಶ್ರಮಿಸುವ ಸಿದ್ಧತೆಯಲ್ಲಿದ್ದರು. ಎಲ್ಲಡೆಯಲ್ಲೂ ನೀರವತೆ ಹಬ್ಬಿತ್ತು. ಫಕ್ಕನೆ ತೋಪಿನ ಭೀಕರ ದನಿ ಕೇಳಿಸಿತು. ಎಲ್ಲರೂ ಬೆಚ್ಚಿ ಬಿದ್ದು ದೃಷ್ಟಿ ಹರಿಸಿದಾಗ ನಾಲ್ಕೈದು ಹಡಗುಗಳು ವೇಗವಾಗಿ ಬರುತ್ತಿದ್ದವು.

'ಇಂದು ಉಳಿಗಾಲವಿಲ್ಲ; ತೋಪು ಹಾರಿಸಿ ತಮ್ಮ ಆಗಮನವನ್ನು ಇವರು ಸೂಚಿಸುತ್ತಿದ್ದಾರೆ. ಇಂದು ಇವರೇನೂ ನಮ್ಮ ಮೇಲೆ ಕರುಣೆ ತೋರಲಾರರು. ಮೂರನ ನೆತ್ತರಿನಿಂದ ಹಿಂಸೆ ತೀರಿಸಿಕೊಳ್ಳುವ ಸುಯೋಗವೀಗ ಇವರಿಗೆ ಸಿಕ್ಕಿದೆ. ಇಂಥ ಘಟನೆ ಈ ಅರಬೀ ಸಮುದ್ರದಲ್ಲಿ ಹಿಂದೆಂದೂ ಘಟಿಸಲಿಲ್ಲ'—ಮಿರ್ಜಾ ಯೋಚಿಸಿದ.

ಆಗಲೇ ಆ ಐದೂ ಹಡಗುಗಳು ಗುಂಡಿನ ಸುರಿಮಳೆಗಾರಂಭಿಸಿದವು. ಒಂದು ಗುಂಡು ದೊಡ್ಡ ಹಡಗನ್ನು ತೂತು ಮಾಡಿ ನೀರಿಗೆ ಬಿತ್ತು. ಯಾತ್ರಿಕರೆಲ್ಲಾ ಕಂಗಾಲಾದರು. ಮಕ್ಕಳೂ ಹೆಂಗಸರೂ ಹಾಹಾಕಾರಕ್ಕಾರಂಭಿಸಿದರು. ಆಗಲೇ ಮಿರ್ಜಾನ ನಾಲ್ಕು ವರ್ಷದ ಹುಡುಗಿ ಏದುತ್ತೇದುತ್ತ ಮೇಲೆ ಬಂದು—'ಅಮ್ಮ ಕರೆಯುತ್ತಿದ್ದಾಳೆ' ಎಂದು ಅಳತೊಡಗಿದಳು. ಮಿರ್ಜಾ ಅವಳನ್ನೆತ್ತಿ ಅಪ್ಪಿಕೊಂಡು-

'ಹಾರೂನಾ; ಅಳಬೇಡ. ನೀನು ಮೂರ್ ಕನ್ನೆ. ನಿನಗೇತರ ಭಯ? ಇಂದು ನಾವೆಲ್ಲ ಒಟ್ಟಿಗೇ ಸ್ವರ್ಗಕ್ಕೆ ಹೋಗುವೆವು' ಎಂದು ಕೆಳಗೆ ಹೆಂಡತಿಯ ಬಳಿ ಬಂದ. ಅವಳ. ಕೈಗೆ ತನ್ನ ಕಠಾರಿಯನ್ನು ಕೊಡುತ್ತ—'ಸಾಲೆಹಾ, ಇಂದು ಕೊನೆಗಾಲ ಬಂದಿದೆಯೆಂದು ತೋರುತ್ತದೆ. ಫಿರಂಗಿಗಳು ಹಡಗಿನ ಮೇಲೆ ಕಾಲಿಟ್ಟರೆ ನೀನು ಈ ಕಠಾರಿಯನ್ನು ನಿನ್ನ ಮೇಲೆ ಪ್ರಯೋಗಿಸಿಕೋ. ನಾನೀಗ ಹೊರಟೆ'— ಎಂದು ಮರಳಿ ಮೇಲೆ ಬಂದ.

ಬಿಳಿಯರ ಹಡಗುಗಳು ಇಷ್ಟರೊಳಗೆ ಮಿರ್ಜಾನ ಹಡಗನ್ನು ಅರ್ಧ ಚಂದ್ರಾಕಾರವಾಗಿ ಮುತ್ತಿಬಿಟ್ಟಿದ್ದವು. ಪ್ರತಿಯೊಂದು ತೋಪೂ ತನ್ನ ಹಡಗಿನ ಕಡೆಗೇ ಮುಖ ಮಾಡಿರುವುದನ್ನು ಮಿರ್ಜಾ ನೋಡಿದ. ಮಿರ್ಜಾನ ಮುದಿತಂದೆ ಮಗನೊಡನೆ—'ದಾವೂದ್, ಈಗೇನೂ ಉಪಾಯವಿಲ್ಲ. ಆದರೆ ಫಿರಂಗಿಗಳಿಗೆ ಹಣವೆಂದರೆ ಪಂಚಪ್ರಾಣ. ಹಣ ಕೊಟ್ಟು, ಹೆಂಗಸರು ಮಕ್ಕಳನ್ನು ಬದುಕಿಸಲು ಪ್ರಯತ್ನಿಸು'— ಎಂದ. ಆಗಲೇ ಒಂದು ಹಡಗಿನಿಂದ ತೋಪು ಗರ್ಜಿಸಿತು. ಮರುಕ್ಷಣವೇ ಇವರ ಹಡಗಿನ ದೊಡ್ಡ ಕೂವೆಮರ ಮುರಿದು ಕೆಳಗೆ ಬಿತ್ತು. ಹಾಯಿಯ ಬಟ್ಟೆರಾಶಿ ಬೆಂಕಿ ಹತ್ತಿ ಧಗಧಗನೆ ಉರಿಯತೊಡಗಿತು.

ಇದು ತನಕ ಹೆಂಗಸರು ನಾಚಿಕೆಯಿಂದ ಕೆಳಗೇ ಇದ್ದರು. ಆದರೀಗ ನಾಚಿಕೆ ಅವರನ್ನು ತಡೆಯದಾಯಿತು. ಅವರೆಲ್ಲ ಜೋರಾಗಿ ಬೊಬ್ಬಿಡುತ್ತ ಮೇಲ್ಭಾಗಕ್ಕೆ ಬಂದರು. ಇತ್ತ ಬೆಂಕಿ ಇಡೀ ಹಡಗಿಗೇ ಹಬ್ಬತೊಡಗಿತು. ಆಗಲೇ ಒಂದು ಫಿರಂಗಿ ಹಡಗು ಇವರ ಹಡಗನ್ನು ಸಮೀಪಿಸಿ ಗುಂಡು ಹೊಡೆಯಲು ಅಣಿ ಮಾಡಿತು. ಮಿರ್ಜಾ ಸನ್ನೆಯಿಂದ ತಡೆದು—'ಗುಂಡು ಹಾರಿಸಬೇಡ; ನಾವು ಆತ್ಮಸಮರ್ಪಣ ಮಾಡುತ್ತೇವೆ' ಎಂದ..

'ಆಯುಧಗಳನ್ನೆಲ್ಲ ಸಮುದ್ರಕ್ಕೆಸೆ; ಇಲ್ಲದಿದ್ದರೆ ಗುಂಡು ಹಾರಿಸುತ್ತೇವೆ.'

'ನಮ್ಮ ಬಳಿ ಆಯುಧಗಳೇನೂ ಇಲ್ಲ. ಇದು ಯಾತ್ರಿಕರ ಹಡಗು. ನಮ್ಮಲ್ಲಿರುವ ಸಂಪತ್ತನ್ನೆಲ್ಲ ನಿಮಗೆ ಕೊಡುತ್ತೇವೆ; ಬಿಟ್ಟುಬಿಡಿ.'

ಈ ರೀತಿ ಮಾತುಕತೆ ನಡೆಯುತ್ತಿದ್ದಾಗಲೇ ವಿಶಾಲ ದೇಹಿಯೊಬ್ಬನು ಆ ಹಡಗದಿಂದ ಮೇಲೆ ಬಂದ. ಅವನನ್ನು ಕಾಣುತ್ತಲೇ ದಾವೂದನ ರಕ್ತ ಹೆಪ್ಪುಗಟ್ಟಿತು. ವಾಸ್ಕೋ ಡಿ ಗಾಮಾ! ಅವನ ಮೋರೆಯ ಮೇಲೆ ಸೇಡಿನ ಭಾವನೆ ತಾಂಡವವಾಡುತ್ತಿತ್ತು. ಮಿರ್ಜಾನನ್ನು ಕಂಡು ಡಿ ಗಾಮಾ ಅಟ್ಟಹಾಸಗೈದ: 'ನಮಸ್ಕಾರಗಳು, ಮಿರ್ಜಾ ದಾವೂದರೇ; ಶೀಘ್ರವೇ ಭೇಟಿಯಾಗುವುದೆಂದು ಹೇಳಿದ್ದ ಮಾತು ನೆನಪಿದೆಯೆ ನಿಮಗೆ?'

ದಾವೂದನ ಬಾಯಿಯಿಂದ ಮಾತು ಹೊರಡಲಿಲ್ಲ. ಡಿ ಗಾಮಾ ಕಪ್ತಾನರ ಮುಖಂಡನ ಕಡೆ ತಿರುಗಿ, ಕಠೋರ ಸ್ವರದಲ್ಲಿ- 'ತೋಫು ಅದೇಕೆ ಮೌನವಾಗಿದೆ? ನನ್ನ ಅಪ್ಪಣೆ ಮರೆತೆಯಾ?' ಎಂದ.

'ಅವರು ತಮ್ಮ ಸಂಪತ್ತನ್ನೆಲ್ಲ ಕೊಟ್ಟು ಜೀವವುಳಿಸಬೇಕೆಂದು ಪ್ರಾರ್ಥಿಸಿದ್ದಾರೆ.'

'ಮೂರ, ಹಣ ಕೊಟ್ಟು ಜೀವ ಭಿಕ್ಷೆ ಬೇಡುತ್ತಿದ್ದೀಯಾ?'— ಎಂದು ವ್ಯಂಗ್ಯಮಿಶ್ರಿತ ಕಟುಸ್ವರದಲ್ಲಿ ಡಿ ಗಾಮಾ ಪ್ರಶ್ನಿಸಿದ.

'ನಾನೇನೂ ನನ್ನ ಜೀವಭಿಕ್ಷೆ ಬೇಡುವುದಿಲ್ಲ. ಹಣ ಪಡೆದು ಮಕ್ಕಳು, ಹೆಂಗಸರು ಹಾಗೂ ಮುದುಕರನ್ನು ಬಿಟ್ಟುಬಿಡು.'

'ಅದರಿಂದ ನಮಗೇನು ಲಾಭ? ಅದಕ್ಕಿಂತ ನಿಮ್ಮಲ್ಲಿಯ ತರುಣಿಯರನ್ನೆಲ್ಲಾ ಇಲ್ಲಿಗೆ ಕಳುಹಿಸಿಕೊಡು'— ಅಟ್ಟಹಾಸಗೈಯುತ್ತ ಡಿ ಗಾಮಾ ನೆಂದ.

ಸಿಟ್ಟಿನಿಂದ ಮಿರ್ಜಾನ ಮುಖ ಬಣ್ಣಗೆಟ್ಟಿತು... 'ಡಿ ಗಾಮಾ; ಹಣ ಪಡೆದು ಇವರನ್ನು ಬಿಟ್ಟುಬಿಡು. ಇಲ್ಲದಿದ್ದರೆ ಏನೂ ಸಿಗಲಾರದು'.

‘ ಏನೂ ಸಿಗಲಾರದು ಹೇಗೆ ? ’— ಹುಬ್ಬೇರಿಸಿ ಪ್ರಶ್ನಿಸಿದ ಡಿ ಗಾಮಾ.

‘ ತಳದ ಹಲಗೆ ಕಿತ್ತು ಹಡಗನ್ನೇ ಮುಳುಗಿಸಿ ಬಿಡುವೆ. ’

ಡಿ ಗಾಮಾ ಕ್ಷಣಕಾಲ ಯೋಚಿಸಿ ಹೇಳಿದ. ‘ಒಳ್ಳೇದು; ನಿನ್ನ ಹಡಗಿನಲ್ಲಿರುವ ಸಂಪತ್ತನ್ನೆಲ್ಲ ದೋಣಿಯಲ್ಲಿ ತುಂಬಿಸಿ ಇತ್ತ ಕಳುಹಿಕೊಡು! ’

‘ಮತ್ತೆ ಬಿಡುವಿಯಲ್ಲವೆ ? ’

‘ ಹೌದು; ನಾನೇನೂ ಸುಳ್ಳು ಹೇಳುವುದಿಲ್ಲ!’

‘ಸುಳ್ಳುಗಾರ ! ಇನ್ನೆಂದೂ ಹಿಂದೂ ದೇಶಕ್ಕೆ ಕಾಲಿಡುವುದಿಲ್ಲವೆಂದು ಪ್ರತಿಜ್ಞೆಮಾಡಿ ಮತ್ತೆ ಬಂದೆಯಲ್ಲ ! ’— ಮಿರ್ಜಾ ಗರ್ಜಿಸಿದ.

‘ ಹಿಂದೂದೇಶದಲ್ಲಿ ಇನ್ನೂ ಕಾಲಿಟ್ಟಿಲ್ಲ. ಸಮುದ್ರದಲ್ಲೇ ಇದ್ದೇನಲ್ಲ’— ನಗುತ್ತ ಅವನೆಂದ.

ಮಿರ್ಜಾ ತನ್ನ ಹಡಗಿನಲ್ಲಿದ್ದ ಎಲ್ಲ ಹಣವನ್ನೂ ಹೆಂಗಸರ ಮೈಮೇಲಿದ್ದ ಎಲ್ಲಾ ಆಭರಣಗಳನ್ನೂ ಒಂದು ದೋಣಿಯಲ್ಲಿ ತುಂಬಿಸಿ ಪೋರ್ತುಗೀಸರ ಹಡಗಿಗೆ ಕಳುಹಿಸಿ ಕೊಟ್ಟ. ಡಿ ಗಾಮಾ ಮತ್ತೊಮ್ಮೆ ಅಟ್ಟಹಾಸ ಗೈದು — ‘ ಯುವತಿಯರನ್ನು ಕಳುಹಿಸುವುದಿಲ್ಲವೆ? ಒಳ್ಳೇದು! ’- ಎಂದು ಕಪ್ತಾನನ ಕಡೆ ತಿರುಗಿ- ‘ಹಾರಿಸು ತೋಪುಗಳನ್ನು; ಇಂದು ಈ ಮೂರ್ ನಾಯಿಗಳನ್ನು ಸುಟ್ಟು ಬೂದಿಮಾಡುವೆ’ -ಎಂದ.

‘ಸೈತಾನ್. . ಸೈತಾನ್. . ಸೈತಾನ್ ! ’- ಎಂದು ಕೂಗಿದ ದಾವೂದ್.

ತೋಪುಗಳು ಒಂದೇ ಸವನೆ ಗುಂಡುಗಳ ಮಳೆಗರೆಯತೊಡಗಿದವು ಪ್ರತಿಯೊಂದು ಹೊಡೆತಕ್ಕೂ ಯಾರಾದರೂ ಉರುಳಿಬೀಳುತ್ತಿದ್ದರು.

ದಾವೂದನ ಮುದಿ ತಂದೆ ಕಿರಿ ಹಾರೂನಾಳನ್ನು ಎದೆಗವಚಿಕೊಂಡು ನಡುಗುತ್ತ ನಡುಗುತ್ತ ಮಗನ ಬಳಿ ಬಂದು ನಿಂತ. ‘ದಾವೂದ್’- ಎಂದು ತುಂಬಿದ ಕೊರಳಿನಿಂದ ಒಮ್ಮೆ ಉಚ್ಚರಿಸಿದ. ನಾಚಿಕೆಯನ್ನು ಬದಿಗೊತ್ತಿ ಸಾಲೆಹಾ ಕೂಡ ಅಲ್ಲಿ ಬಂದು ಪತಿಯ ಕೈಹಿಡಿದು ನಿಂತಳು.

ದಾವೂದ ತುಂಬಿದ ಕಂಗಳಿಂದ ಒಮ್ಮೆ ಮೂವರನ್ನೂ ನೋಡಿದ. ಆ ಬಳಿಕ ದುಃಖ ತುಂಬಿದ ದನಿಯಲ್ಲಿ - ‘ಅಪ್ಪಾ ದೇವರಿಲ್ಲವೆ ?’ ಎಂದ. ಫಕ್ಕನೆ ಹಾರೂನಾ ಚೀತ್ಕರಿಸಿ ಕೆಳಕ್ಕೆ ಜೋಲಿಹೊಡೆದಳು. ಗುಂಡು ಅವಳ ಎದೆಯಲ್ಲಿ ನಟ್ಟಿತ್ತು. ಮತ್ತೆ ಹೆಂಡತಿಯೂ ತಂದೆಯೂ ನೆಲಕ್ಕುರುಳಿ ಒದ್ದಾಡತೊಡಗಿದರು. ವಾಸ್ಕೋ ಡಿ ಗಾಮಾ ಸ್ವತಃ ಬಂದೂಕು ಹಿಡಿದು ಗುಂಡುಹಾರಿಸಿ ಪಿಶಾಚಿಯಂತೆ ಕ್ರೂರವಾಗಿ ನಗುತ್ತಿದ್ದ.

ಆಗಲೇ ಐದೂ ಹಡಗುಗಳಿಂದ ಒಮ್ಮೆಲೆ ತೋಪುಗಳು ಗರ್ಜಿಸಿದವು. ಮಿರ್ಜಾನ ಹಡಗು ನಡುಗಿತು. ನೋಡನೋಡುತ್ತಿದ್ದಂತೆಯೇ ಬೆಂಕಿ ನೀರುಗಳೊಳಗೆ ಎಲ್ಲವೂ ಮುಗಿದು ಹೋಯಿತು. ! *

ಸಮ್ಯಕ್ ದೃಷ್ಟಿ, ಸದ್ಧರ್ಮ, ಮತ್ತು ಪ್ರಾಮಾಣಿಕ ಉಪಜೀವಿಕೆ — ಇವುಗಳಿಂದಲೇ ಮನಃಶುದ್ಧಿಯಾಗುತ್ತದೆ, ಕುಲ- ಧರ್ಮಗಳಿಂದಲ್ಲ ಎಂಬುದನ್ನು ಮರೆಯದಿರಿ.

—ಮಜ್ಝಿಮನಿಕಾಯ

ನಿರುತ್ಸಾಹಿ, ದೀನ ಮತ್ತು ಶೋಕಾಕುಲನಾಗಿ ಇರುವವನಿಂದ ಯಾವ ಕೆಲಸವೂ ಆಗಲಾರದು. ಆತ ದೊಡ್ಡ ವಿಪತ್ತಿನಲ್ಲಿ ಸಿಗುವುದು ಮಾತ್ರ ಖಂಡಿತ.

—ವಾಲ್ಮೀಕಿ

ಮರೆವು ಯಾರನ್ನೂ ಬಿಟ್ಟಿದ್ದಲ್ಲ

ಎಂ. ವಿ. ನಾಗರಾಜ

ಸ್ಮರಣಶಕ್ತಿಗೂ ಮೇಧಾವಿತನಕ್ಕೂ ಸಂಬಂಧ ಕಲ್ಪಿಸುವುದು ಸರಿಯಾಗಲಾರದು. ಅನೇಕ ಮಹಾಪುರುಷರೂ ಮರೆವಿನ ಶಿಕಾರಿಗಳಾಗಿದ್ದರು.

ವಿಜ್ಞಾನಿ ಥಾಮಸ್ ಎಡಿಸನ್ ವೈಜ್ಞಾನಿಕ ಸಮಸ್ಯೆಯನ್ನು ಕುರಿತು ವಿಚಾರ ಮಥನ ಮಾಡುತ್ತ ತೆರಿಗೆಯ ಕಛೇರಿಗೆ ಹಣಕಟ್ಟಲು ಹೋದ. ಸ್ವಲ್ಪ ಕಾಲ ಆತ 'ಕ್ಯೂ'ನಲ್ಲಿ ನಿಲ್ಲಬೇಕಾಯಿತು. ತನ್ನ ಸರದಿ ಬಂದಾಗ ಹಣ ಸಲ್ಲಿಸಿದ. ಆದರೆ ತನ್ನ ಹೆಸರೇ ಅವನಿಗೆ ಮರೆತು ಹೋಗಿತ್ತು! ಆಗ ಅವನ ಪಕ್ಕದಲ್ಲಿದ್ದಾತ "ನಿಮ್ಮ ಹೆಸರು ಥಾಮಸ್ ಎಡಿಸನ್ ಎಂದಲ್ಲವೇ?" ಎಂದು ಜ್ಞಾಪಿಸಿದಾಗ ಅವನಿಗೆ ಅಪಾರ ಆನಂದವಾಯಿತು! ಆಂಗ್ಲ ಸಾಹಿತಿ ಸರ್ ವಾಲ್ಟರ್ ಸ್ಕಾಟಗೆ ತುಂಬಾ ಮರೆವು. ಒಮ್ಮೆ ಆತ ತಾನೇ ಬರೆದ ಕವನವನ್ನು ಕುರಿತು ಬಹುವಾಗಿ ಪ್ರಶಂಸೆ ಮಾಡಿದ; ಆ ಕವನ ಲಾರ್ಡ್ ಬೈರನ್ ಬರದದ್ದೆಂದು ಆತ ತಿಳಿದಿದ್ದ!

ಜೋಸೆಫ್ ಜೆಫರಸನ್ ಎಂಬ ಪ್ರಸಿದ್ಧ ನಟ, ೧೨ ವರ್ಷ ಕಾಲ "ರಿಪ್‌ವ್ಯಾನ್ ವಿಂಕಲ್" ಪಾತ್ರವನ್ನು ಅಭಿನಯಿಸುತ್ತಿದ್ದರೂ ಆ ಪಾತ್ರದ ಸಂಭಾಷಣೆ ಅವನಿಗೆ ನೆನಪು ಬರುತ್ತಿರಲಿಲ್ಲ !

*

ಥಾಮಸ್ ಹಕ್ಸ್ಲಿ ಮರೆವಿನ ಮಹಾ ಪುರುಷರಾಗಿದ್ದರು. ಇವರು ಒಮ್ಮೆ ಕ್ಷೌರದ ಸೆಲೂನಿಗೆ ಹೋಗಿದ್ದಾಗ ಯಾವುದೋ ಸಮಸ್ಯೆಯಲ್ಲಿ ತಲ್ಲೀನರಾಗಿದ್ದುದರಿಂದ, ಕೇಶಮುಂಡನ ಮುಗಿದರೂ ಸೆಲೂನಿನಲ್ಲಿ ಕುಳಿತಿದ್ದರು! ಮಹಾಪುರುಷ ಹಕ್ಸ್ಲಿ ನಿದ್ರಿಸುತ್ತಿರಬಹುದೆಂದು ಭಾವಿಸಿದ ಸೆಲೂನಿನ ಮಾಲೀಕ "ನಿದ್ರಿಸುತ್ತಿರುವಿರಾ ಸಾರ್?" ಎಂದು ಪ್ರಶ್ನಿಸಿದ.

"ಖಂಡಿತವಾಗಿಯೂ ಇಲ್ಲ! ನಾನು ಕನ್ನಡಕವನ್ನೇ ತೆಗೆದಿಟ್ಟಿದ್ದುದರಿಂದ, ಕನ್ನಡಿಯಲ್ಲಿ ನನ್ನ ನೆರಳೂ ಕಾಣಿಸಲಿಲ್ಲ! ಆದ್ದರಿಂದ ಮನೆಯಲ್ಲೇ ಇದ್ದೇನೆಂದು ನಾನು ಭಾವಿಸಿದ್ದೆ!" ಎಂದು ಉತ್ತರವಿತ್ತರು.

*

ಎಡಿಸನ್ ೧೮೭೧ ರಲ್ಲಿ ಕುಮಾರಿ ಸ್ಟಿಲ್‌ವೆಲ್ಲಳನ್ನು ಮದುವೆಯಾದ ದಿನ, ಯಾವುದೋ ಸಂಶೋಧನೆಯಲ್ಲಿ ಮಗ್ನರಾಗಿದ್ದುದರಿಂದ, ನವ ಮಡದಿಯಿಂದ ಐದು ನಿಮಿಷ ಕಾಲ ಬಿಡುವು ದೊರಕಿಸಿ ಬಂದವರೇ ಮಧ್ಯರಾತ್ರಿಯವರೆಗೂ ಸಂಶೋಧನೆಯಲ್ಲಿ ತಲ್ಲೀನರಾದರು. ಆಗ ಆಪ್ತಗೆಳೆಯನೊಬ್ಬ "ಮನೆಗೆ ಹಿಂದಿರುಗಿ ಹೋಗು ಎಡಿಸನ್, ಮೇರಿ ನಿನಗಾಗಿ ದಾರಿ ನೋಡುತ್ತಿರುತ್ತಾಳೆ! ನೀನು ಇಂದು ವಿವಾಹವಾದೆಯೆಂಬುದೂ ನೆನಪಿಲ್ಲವೇ ?" ಎಂದು ಪ್ರಶ್ನಿಸಿದ.

ಆಗ ಎಡಿಸನ್ನನ ಮುಖದಲ್ಲಿ ಕಾಂತಿ ಮಿನುಗಿತು "ನಿಜ! ನಾನಿಂದು ಮದುವೆಯಾದೆ!" ಎಂದು ಜ್ಞಾಪಿಸಿಕೊಳ್ಳುತ್ತ ಮನೆಗೆ ಹಿಂದಿರುಗಿದ!

*

ಚೆಸ್ಟರ್‌ಟನ್ನನ ಮರೆಯುವಿಕೆ ಇನ್ನೂ ಮೋಜಿನದು. ಅವನ ಜೀವನದ ಕೊನೆಗಾಲದಲ್ಲಿ ಮುಖ್ಯ ಕಾರ್ಯಕ್ರಮವೊಂದಕ್ಕೆ ಒಪ್ಪಿಕೊಂಡಿದ್ದ.

ಚೆಸ್ಟರ್‌ಟನ್ನನ ಮರೆವು ಪತ್ನಿಗೆ ಗೊತ್ತಿದ್ದುದರಿಂದ, ಆಕೆ ಗಂಡನ ಕೋಟಿಗೆ ಕಾರ್ಯಕ್ರಮ ಚೀಟಿಯನ್ನು ಅಂಟಿಸಿದ್ದಳು! ಚೆಸ್ಟರ್‌ಟನ್ ಆ ಕೋಟನ್ನು ಧರಿಸುವುದನ್ನೇ ಮರೆತ! ಮತ್ತೊಮ್ಮೆ ಬರ್ಮಿಂಗ್‌ಹ್ಯಾಂಗೆ ಹೋಗುವ ರೈಲಿನಲ್ಲಿ ಕುಳಿತಿದ್ದವನು 'ಸ್ನೇಹಿಲ್' ನಿಲ್ದಾಣದಲ್ಲಿಳಿದು ಅಲ್ಲಿನ ಅಂಚೇ ಕಛೇರಿಗೆ ಹೋಗಿ ಹೆಂಡತಿಗೆ ಟೆಲಿಗ್ರಾಂ ಕಳುಹಿಸಿದ: "ನಾನು ಈಗ ಬರ್ಮಿಂಗ್‌ಹ್ಯಾಂನಲ್ಲಿದ್ದೇನೆ. ನಾನು ಎಲ್ಲಿಗೆ ಹೋಗಬೇಕಾಗಿದೆ ಎಂಬುದನ್ನು ಶೀಘ್ರವೇ ತಿಳಿಸು!"

*

ಜರ್ಮನ್ ಲೇಖಕ ಲೆಸ್ಸಿಂಗ್, ತಾನೇತಕ್ಕೆ ತಿರುಗಾಡಲು ಬಂದೆನೆಂಬುದನ್ನೂ ತಿಳಿಯದೆ ಸುತ್ತಾಡುತ್ತಿದ್ದ. ಒಂದು ದಿನ ರಾತ್ರಿ ಬೀದಿಯಲ್ಲಿ ದಿಕ್ಕುಗಾಣದೆ ಅಲೆಯುತ್ತಿದ್ದ. ತನ್ನ ಮನೆಯ ಬಾಗಿಲಿನ ಮುಂದೆ ಬಂದು ನಿಲ್ಲುವವರೆಗೂ ತಾನು ರಚಿಸುತ್ತಿದ್ದ ಕೃತಿಯ ಬಗ್ಗೆ ಆಲೋಚಿಸುತ್ತಿದ್ದ. ಬೀಗದ ಕೈಗಾಗಿ ಹುಡುಕಾಡಿದ. ಅದು ಸಿಗದಿದ್ದಾಗ ಬಾಗಿಲು ತಟ್ಟಿದ. ಹೊಸದಾಗಿ ಕೆಲಸಕ್ಕೆ ಬಂದಿದ್ದ ಮನೆಯ ಆಳು, ಮಹಡಿಯ ಮೇಲಿನ ಕಿಟಿಕಿಯಿಂದ ಕೆಳಗೆ ನಿಂತಿದ್ದ ವ್ಯಕ್ತಿ ತನ್ನ ಒಡೆಯನೆಂಬುದನ್ನು ಮರೆತು "ಪ್ರೊಫೆಸರ್ ಮನೆಯಲ್ಲಿಲ್ಲ!" ಎಂದುತ್ತರಿಸಿದ.

"ಓ ಹಾಗಾದರೆ ಸರಿ! ನಾನು ಮತ್ತೊಮ್ಮೆ ಬಂದು ಅವರನ್ನು ಭೇಟಿಯಾಗುವೆ!" ಎಂದು ಹೇಳಿ ಮತ್ತೆ ಅಲೆದಾಟ ಆರಂಭಿಸಿದ!

*

ಸೈನ್ಯಾಧಿಕಾರಿಗಳು ಸಾಮಾನ್ಯವಾಗಿ ಮರವೆಯ ಸ್ವಭಾವದವರಲ್ಲ. ಆದರೆ ಗ್ರೀಸಿನ ಜನರಲ್ ಮೆಟಾಕ್ಸಸ್ ಈ ಹೇಳಿಕೆಗೆ ಅಪವಾದದಂತಿದ್ದ. ಈತ ಮೆಡಿಟರೇನಿಯನ್ ಸಮುದ್ರದಲ್ಲಿದ್ದ ವಾಯುಕೇಂದ್ರವೊಂದರ ಪರಿಶೀಲನೆಗಾಗಿ ವಿಮಾನದಲ್ಲಿ ಹೊರಟಿದ್ದಾಗ, ವಿಮಾನ ನಿಲ್ದಾಣ ಹತ್ತಿರವಾದಂತೆ ಜನರಲ್ಲರು ಭೂಮಿಯ ಮೇಲೆ ವಿಮಾನವಿಳಿಸಲು ಯತ್ನಿಸುತ್ತಿರುವುದನ್ನು ವಿಮಾನ ಚಾಲಕ ಪರಿಶೀಲಿಸಿದ.

"ದಯವಿಟ್ಟು ಕ್ಷಮಿಸಿ ಜನರಲ್! ಈ ವಿಮಾನವನ್ನು ಸಮುದ್ರದ ಮೇಲೆ ಇಳಿಸಬೇಕು" ಎಂದು ಎಚ್ಚರಿಕೆಯಿತ್ತ.

"ನಿನಗೆ ಧನ್ಯವಾದ" ಎಂದು ಹೇಳಿ ವಿಮಾನ ಇಳಿಸಿದ ಮೆಟಾಕ್ಸಸ್ ಚಾಲಕನಿಗೆ ಹೇಳಿದರು: "ನಿನ್ನ ಕಾರ್ಯಶ್ರದ್ಧೆಯನ್ನು ಬಹುವಾಗಿ ಮೆಚ್ಚುವೆ. ಇಲ್ಲದಿದ್ದರೆ ನಾನು ಮಹಾಪರಾಧ ಮಾಡುತ್ತಿದ್ದೆ. ನಿನ್ನನ್ನು ನಾನೆಂದಿಗೂ ಮರೆಯುವುದಿಲ್ಲ"— ಹೀಗೆ ಹೇಳಿ ಚಾಲಕನ ಕೊಠಡಿಯ ಬಾಗಿಲಿನಿಂದ ಹೊರಬಂದು ಸಮುದ್ರದ ಮೇಲೆ ನಡೆಯುವ ಜಾಣತನ ಪ್ರದರ್ಶಿಸಿದರು!

*

ಸರ್ ಜೇಮ್ಸ್ ಬ್ಯಾರಿ ಕಸದ ಬುಟ್ಟಿಗೆ ಎಸೆಯುವ ಕಾಗದಗಳನ್ನೆಲ್ಲ, ಜೇಬಿನಲ್ಲಿ ಇಟ್ಟುಕೊಂಡಿರುತ್ತಿದ್ದ! ಈ ರೀತಿ ಒಮ್ಮೆ ಯಾವುದೋ ಕಾಗದದ ತುಂಡಿನಿಂದ 'ಸಿಗಾರ್' ಹತ್ತಿಸಿಕೊಂಡ. ಆ ಕಾಗದದ ಚೂರು ೧೦೦ ಪೌಂಡ್ ಚೆಕ್ ಆಗಿತ್ತು!

*

ಲಂಡನ್ ನ್ಯಾಯಾಲಯದಲ್ಲಿ ಆಪಾದಿತನಾಗಿದ್ದ ಕ್ರಾಟನನ್ನು ನ್ಯಾಯಾಧೀಶರು ಪ್ರಶ್ನಿಸಿದರು: "ನೀನು ಕೇವಲ ಮರವೆಯಿಂದ ನಿನ ಹೆಂಡತಿಯನ್ನು ಕಿಟಕಿಯಿಂದಾಚೆ ಎಸೆದೆಯೇನು?"

"ಹೌದು ಪ್ರಭು! ನಾನು ಮಹಡಿಯಿಲ್ಲದ ಮನೆಯಲ್ಲಿ ವಾಸವಾಗಿರುವೆನೆಂಬ ಭ್ರಮೆಯಿಂದ ಹಾಗೆ ಮಾಡಿದೆ!" ಎಂದು ಅಪರಾಧಿ ಉತ್ತರಿಸಿದ!

*

ಗುರುವನ್ನು ಸೋಲಿಸಿ ಆತ ಪ್ರಸಿದ್ಧಿಗೆ ಬಂದ

ಕಿಂಗ್ ಕಾಂಗನ ಆತ್ಮಕಥನ



ಮೂಲ: ಶ್ರೀಧರ ಪಾಠಕ
ಅನುವಾದ: ರಾ. ನಾ. ರತನ್

ಫ್ರೀ ಸ್ಟೈಲ್ ಕುಸ್ತಿಯ ವಿಶ್ವವಿಖ್ಯಾತ ಮಲ್ಲ ಕಿಂಗ್‌ಕಾಂಗನು ತನ್ನ ಯೌವನದಲ್ಲಿ ಅತ್ಯಂತ ಬಲಿಷ್ಠ ಮತ್ತು ಸುಂದರನಾಗಿದ್ದನೆಂಬುದರಲ್ಲಿ ಸಂದೇಹವಿಲ್ಲ. ಇಂದು ಅವನಿಗೆ ೪೯ ವರ್ಷಗಳು ತುಂಬಿವೆ. ಆದರೂ ಅವನ ಬಲ ವಿಕ್ರಮವೇನೂ ಕುಗ್ಗಿಲ್ಲ. ಅವನು ಸದಾ ಸಂತೋಷಚಿತ್ತನಾಗಿರುತ್ತಾನೆ ಮತ್ತು ಜನರೊಡನೆ ಬಹು ಬೇಗ ಬೆರೆತುಹೋಗುವ ಸ್ವಭಾವವುಳ್ಳವನು. ಅವನಾಡುವ ಮಾತುಗಳೂ ಅಷ್ಟೇ ; ಬಹು ಬೇಗ ಮನಸ್ಸನ್ನಾಕರ್ಷಿಸುತ್ತವೆ. ಇಂತಹ ಅಪ್ರತಿಮ ರಣಮಲ್ಲನ ಜೀವನದ ಬಗ್ಗೆ ತಿಳಿದುಕೊಳ್ಳಬೇಕೆಂಬ ಹಂಬಲ ಯಾರಿಗೆ ತಾನೇ ಇರುವುದಿಲ್ಲ ! ಇಗೋ ಅವನ ಆತ್ಮಕಥೆಯನ್ನು ಅವನ ಬಾಯಿಂದಲೇ ಕೇಳಿ :

"ಮೂವತ್ತೆರಡು ವರ್ಷಗಳಿಂದ ನಾನು ಫ್ರೀ-ಸ್ಟೈಲ್ ಕುಸ್ತಿಗಳನ್ನಾಡುತ್ತಿದ್ದೇನೆ. ಈ ಮಧ್ಯೆ ಒಟ್ಟು ಸುಮಾರು ನಾಲ್ಕೂವರೆ ವರ್ಷಗಳ ಕಾಲ ನಾನು ಆಸ್ಪತ್ರೆಗಳಲ್ಲಿರಬೇಕಾಯಿತು. ಕುಸ್ತಿಯಾಟದಲ್ಲಿ ಎರಡು ಸಲ ನನ್ನ ಬಲಗಾಲಿನ ಮೂಳೆ ಮುರಿದುಹೋಯಿತು. ಒಂದು ಸಲ ಎಡಗಾಲಿನದು. ಆದ ಕಾರಣ ಈಗ ನಾನು ಸ್ವಲ್ಪ ಕುಂಟಿಕೊಂಡು ನಡೆಯುತ್ತೇನೆ; ಬಹುಶಃ ಆ ಎಡಗಾಲಿನ ಮೂಳೆ ಸರಿಯಾಗಿ ಕೂಡಲಿಲ್ಲವೆಂದು ತೋರುತ್ತದೆ. ಬೆನ್ನೆಲುಬುಗಳು ಅನೇಕ ಸಾರಿ ಮುರಿದುಹೋಗಿವೆ. ಅಷ್ಟು ಮಾತ್ರವಲ್ಲ! ಇಗೋ ನೋಡಿ, ಮುಷ್ಟಿಪ್ರಹಾರದಿಂದ ನನ್ನ ಅರ್ಧದಷ್ಟು ಹಲ್ಲುಗಳೆಲ್ಲಾ ಕಿತ್ತುಹೋಗಿವೆ. ಮತ್ತು ಬಲ ಕಿವಿ ಮಾವಿನ ಕಾಯಿಯ ಗೊರಟೆ (ಬೀಜ) ರೂಪ ತಳೆದಿದೆ. ಇದು ಕಿವುಡಾಗಿ ಬಿಟ್ಟಿದೆ. ನನ್ನ ಭುಜ ಮತ್ತು ಮೊಣಕಾಲಿನ ಮೂಳೆ ಎಷ್ಟು ಸಲ ಜಾರಿ ಹೋಗಿದೆಯೋ ಲೆಕ್ಕವೇ ಇಲ್ಲ. ಶರೀರದಲ್ಲಾಗುವ ಉಳು

ಹಿಂದೀ 'ಧರ್ಮಯುಗ' ದಿಂದ

ಕಂತೂ ಈಗ ನನಗೆ ನಿತ್ಯದ ಮಾತಿನಂತಾಗಿದೆ. ಇಷ್ಟಾದರೂ ಈ ಕುಸ್ತಿಪಂದ್ಯವನ್ನೇನೂ ನಾನು ಬಿಟ್ಟಿಲ್ಲ. ಇದೇ ನನ್ನ ಜೀವನ. ನನ್ನ ಹೆಸರು ಎಮಿಲ್ ಸಾಯಾ. ಗಾಬರಿಪಡಬೇಡಿ! ನಿಮ್ಮ ಹಾಗೆಯೇ ಬಹಳ ಜನರಿಗೆ ನನ್ನ ನಿಜವಾದ ಹೆಸರು ಗೊತ್ತಿಲ್ಲ. ನಾನು ಖ್ಯಾತಿ ಗಳಿಸಿರುವುದು 'ಕಿಂಗ್-ಕಾಂಗ್' ಎಂಬ ಹೆಸರಿನಿಂದ. ಇದರ ದೊಂದು ಆಕರ್ಷಕ ಕಥೆಯಿದೆ.

ನನ್ನ ಬಗ್ಗೆ ಇಷ್ಟೊಂದು ಕುತೂಹಲದಿಂದ ನೀವು ಕೇಳುತ್ತಿದ್ದೀರಿ. ಹೇಳಲು ನಾನು ಸಿದ್ಧ ನಾಗಿಯೇ ಕುಳಿತಿರುವಾಗ ಎಲ್ಲವನ್ನೂ ಮೊದ ಲಿಂದಲೇ ನಿಮಗೆ ತಿಳಿಸಿಬಿಡುತ್ತೇನೆ. ಜುಲೈ ೨೨,೧೯೧೧ ರಲ್ಲಿ ಹಂಗೇರಿಯ ಬುಡಾಪೆಸ್ಟಿನಲ್ಲಿ ಹಳೆ ಸಂಪ್ರಾದಯದ ಪ್ರೊಟೆಸ್ಟೆಂಟ್ ಕ್ರೈಸ್ತರ ಮನೆಯಲ್ಲಿ ನನ್ನ ಜನನವಾಯಿತು. ಒಂದು ಮಾತು ನನಗೆ ಚೆನ್ನಾಗಿ ನೆನಪಿನಲ್ಲಿದೆ. ಆಗ ನನಗೆ ಹತ್ತು ವರ್ಷ ಕೂಡ ತುಂಬಿರಲಿಲ್ಲ. ನನ್ನ ತಂದೆ, ಜಾರ್ಜ್ ಸಾಯಾರವರು 'ದೊಡ್ಡವನಾದ ಮೇಲೆ ನೀನು ಏನು ಮಾಡಬೇಕೆಂದಿರುವೆ?' ಎಂದು ಕೇಳಿದರು. ಅದು ಮೂಕ ಚಲಚಿತ್ರಗಳ ಕಾಲ. ನನ್ನ ತಂದೆಯವರು ತಿಂಗಳಿಗೊಮ್ಮೆ ಮೂಕ ಚಿತ್ರಕ್ಕೆ ನನ್ನನ್ನು ಕರೆದುಕೊಂಡು ಹೋಗುತ್ತಿದ್ದರು. ಈ ಚಲಚ್ಚಿತ್ರಗಳು ಬಹಳ ವಾಗಿ ಹೊಡೆದಾಟದ್ದೇ ಆಗಿರುತ್ತಿದ್ದವು. ಗೂಳಿ-ಕಾಳಗ ಮತ್ತು ಮಲ್ಲಯುದ್ಧದಿಂದ ಕೂಡಿದ ಮೂಕ ಚಿತ್ರಗಳು ನನ್ನನ್ನು ಹೆಚ್ಚಾಗಿ ಪ್ರಭಾವಿತಗೊಳಿಸಿದ್ದವು. ಆದ್ದರಿಂದ ನಾನು ಬಲಶಾಲಿ ಯಾಗಬೇಕೆಂಬುದೇ ನನ್ನಿಚ್ಛೆಯಾಗಿತ್ತು. ನನ್ನ ಮನಸ್ಸಿನಲ್ಲಿದ್ದ ಬಯಕೆಯನ್ನು ಹೊರಗೆಡಹಿದೆ. ಅವರು ಬಹಳ ಕೋಪಗೊಂಡರು. ನನ್ನ ತಾಯಿ ಯವರೂ ಕೂಡ ಇವನು ಭವಿಷ್ಯದಲ್ಲಿ ಗೂಂಡಾ ಗಳ ಪಟ್ಟಿಯಲ್ಲಿ ತನ್ನ ಹೆಸರನ್ನು ದಾಖಲ್ಮಾಡಿಸು ತ್ತಾನೆಂದು ತಿಳಿದು ಬಹುವಾಗಿ ಅತ್ತರು. ತುಂಬ ಕಷ್ಟದಿಂದ ಅವರನ್ನು ಸಮಾಧಾನಪಡಿಸಿದೆ. ಅಲ್ಲದೆ ಅವರ ದುಃಖವೂ ಅರ್ಥರಹಿತವಾದ ದ್ದಿತ್ತು. ಏಕೆಂದರೆ ಬಲಿಷ್ಠನಾದ ಮಾತ್ರಕ್ಕೆ ಯಾರೂ ಗೂಂಡಾನಾಗುವುದಿಲ್ಲ. ಕೊನೆಗೆ ನನ್ನ ಅಭೀಷ್ಟ ನನ್ನ ತಾಯಿಯವರಿಗೂ ಹಿಡಿಸಿತು. ಮತ್ತು ಅವಳ ಇಚ್ಛೆಯಂತೆ ನನ್ನ ತಂದೆಯವರು ನನ್ನನ್ನು ಒಂದು ಗರಡಿ ಮನೆಗೆ ಸೇರಿಸಿಯೇ ಬಿಟ್ಟರು.

ಇಂದು ನನ್ನ ತಾಯಿ ಬದುಕಿದ್ದರೆ ಎಷ್ಟು ಸಂತೋಷಪಡುತ್ತಿದ್ದಳೋ! ತನ್ನ ಮಗ ಬಲಿಶಾಲಿ ಯಾದುದು ಮಾತ್ರವಲ್ಲದೆ ಸ್ವಲ್ಪ ಬುದ್ಧಿವಂತನೂ ಆಗಿದ್ದಾನೆ. ಅವನು ಗೂಂಡಾಗಿರಿಯಲ್ಲಲ್ಲ, ಮಲ್ಲವಿದ್ಯೆಯಲ್ಲಿ ಖ್ಯಾತಿ ಗಳಿಸಿದ್ದಾನೆ ಎಂದು ಎಷ್ಟೊಂದು ಹಿಗ್ಗುತ್ತಿದ್ದಳೋ! ನನಗೆ ೯ ಭಾಷೆ ಗಳು ಬರುತ್ತವೆ. ಅವುಗಳಲ್ಲಿ ನಾನು ಚೆನ್ನಾಗಿ ಬರೆಯ-ಓದಬಲ್ಲೆ. ಇವುಗಳಲ್ಲಿ ಮೊದಲನೆ ಯದು ನಿಸ್ಸಂದೇಹವಾಗಿ ನನ್ನ ಮಾತೃಭಾಷೆ ಯಾದ ಹಂಗೇರಿಯನ್. ನಂತರ ಇಂಗ್ಲೀಷ್, ಜರ್ಮನ್, ಫ್ರೆಂಚ್, ರಶಿಯನ್, ಬಲ್ಗೇರಿಯನ್ ಇಟಾಲಿಯನ್, ಯುಗೋಸ್ಲಾವಿಯನ್ ಮತ್ತು ಸ್ಯಾಕ್ಸನ್ ಭಾಷೆಗಳ ಕ್ರಮ. ಜೊತೆಗೆ ಮಲ ಯಾದ ಭಾಷೆ, ಅರಬಿ, ಉರ್ದು ಮತ್ತು ಹಿಂದಿ ಭಾಷೆಗಳ ವ್ಯಾವಹಾರಿಕ ಜ್ಞಾನವೂ ಇದೆ. ಮಲ್ಲಯುದ್ಧದ ಜೊತೆಗೆ ಇನ್ನೆರಡು ವಿಷಯಗಳಲ್ಲಿ ನನಗೆ ಹೆಚ್ಚು ಅಭಿರುಚಿಯಿದೆ—ಪುಸ್ತಕಗಳ ನ್ನೋದುವುದು ಮತ್ತು ಡ್ರೈವ್ ಮಾಡುವುದು.

ಸರಿ, ಇನ್ನೀ ಆತ್ಮಪ್ರಶಂಸೆ ಸಾಕು. ಅಂದ ಹಾಗೆ ನನ್ನ ಗರಡಿಮನೆಯ ಗುರುವಿನ ಮುಖ ಅವರ ಹೆಸರಿಗೆ ತಕ್ಕಂತೆ ಇತ್ತು. ಅವರ ಹೆಸರು ಅರ್ದೇಕ್ ಎಂದು. ಅಂದರೆ ದೆವ್ವ ಎಂದರ್ಥ. ಗರಡಿಮನೆಗೆ ಹೋಗಿ ಮೂರು ವರ್ಷಗಳು ಕಳೆದಿರಬಹುದು. ಒಂದು ದಿನ ನಮ್ಮ ಗುರುಗಳು ಇತರ ಎಲ್ಲ ಶಿಷ್ಯರ ಮುಂದೆ, ನನ್ನನ್ನು ಕರೆದು ನಾನು ಅವರ ಸೇವೆ ಏನು ಮಾಡಬಲ್ಲೆ ಎಂದು ಕೇಳಿದರು. ಆಗ ನಾನು ಹದಿಮೂರರ ಹಸುಳೆ

ತಾನೇ? ಈ ಪ್ರಶ್ನೆಯಿಂದ ದಿಕ್ಕು ತೋಚದವನಾಗಿ ಶ್ರದ್ಧೆಯಿಂದ ಅವರ ಕೈಗಳಿಗೆ ಮುತ್ತಿಟ್ಟೆ. ಇದನ್ನು ಕಂಡು ಅವರು ಎತ್ತಿ ನನ್ನ ಕಪಾಳಕ್ಕೆ ನಾಲ್ಕು ಬಾರಿಸಿ ಮತ್ತೆ ಹಾಗೆಯೇ ಪ್ರಶ್ನಿಸಿದರು. ನನ್ನ ಆರ್ತಸ್ವರವನ್ನು ಕೇಳಿ ಅವರು ಪುನಃ ನನ್ನನ್ನು ಹಾಗೆಯೇ ಪ್ರಶ್ನಿಸುತ್ತಾ ಮತ್ತೆ ನಾಲ್ಕೈದು ಬಿಗಿದರು. ಕಡೆಗೆ ನಾನು ಒಬ್ಬ ಆಜ್ಞಾಪಾಲಕ ಶಿಷ್ಯನಂತೆ ಅವರೆದುರಿನಲ್ಲಿ ನನ್ನ ಮೊಣಕಾಲೂರಿ ಕುಳಿತುಬಿಟ್ಟೆ. ಅವರ ಮನಸ್ಸಿನಲ್ಲೇನಿತ್ತೋ ಗೊತ್ತಿಲ್ಲ. ಅವರು ನನ್ನ ಬೆನ್ನಿನ ಮೇಲೆ ಎಷ್ಟು ಬಲವಾಗಿ ಮುಷ್ಟಿ ಪ್ರಹಾರ ಮಾಡಿದರೆಂದರೆ ನೋವಿನಿಂದ ನಾನು ಒದ್ದಾಡಿದೆ. ಮರುಕ್ಷಣದಲ್ಲಿ ಏನಾಯಿತೋ ಗೊತ್ತಿಲ್ಲ. ಆವೇಶದಿಂದ ಎದ್ದು ನಿಂತು ಅವರ ನಡು ಹಿಡಿದು ಎತ್ತಿ ಒಗೆದುಬಿಟ್ಟೆ. ಎರಡು ಸಲ ಅವರು ಮೇಲಕ್ಕೆದ್ದರು. ಎರಡು ಸಲವೂ ಎತ್ತಿ ಅಪ್ಪಳಿಸಿಬಿಟ್ಟೆ. ನಂತರ ಮೇಲುಸಿರಿಡುತ್ತಾ ಒಂದು ಕಡೆ ಹೋಗಿ ನಿಂತುಕೊಂಡೆ.

ನನ್ನ ಇತರ ಸಂಗಡಿಗರು ಬಹಳ ಹೆದರಿ ನಿಶ್ಶಬ್ದವಾಗಿ ನಿಂತಿದ್ದರು. ಗುರುಗಳು ನಾಲ್ಕನೆಯ ಸಲ ಎದ್ದು ನಿಂತು ಕೆಂಗಣ್ಣುಗಳಿಂದ, ನನ್ನನ್ನು ಹಾಗೆಯೇ ನುಂಗಿ ಬಿಡುವಂತೆ, ಬಹಳ ಹೊತ್ತಿನ ತನಕ ದುರುಗಟ್ಟಿ ನೋಡುತ್ತಿದ್ದರು. ಕೋಪವು ತಣ್ಣಗಾದ ನಂತರ ಅವರು ಮುದ್ದಿನಿಂದ ನನ್ನ ತಲೆಯನ್ನು ಸವರಿದರು. ಅವರ ಮನಸ್ಸಿನಲ್ಲಿ ಬೇರೆಯೇ ಒಂದು ಯೋಚನೆ ಸುಳಿದಾಡುತ್ತಿತ್ತು. ಮುಂದಿನ ಮೂರು ವರ್ಷಗಳ ಪರ್ಯಂತ ಅವರು ನನಗೆ ಅತ್ಯಂತ ಉತ್ತಮವಾದ ಶಿಕ್ಷಣವನ್ನಿತ್ತರು. ಮತ್ತು ೧೯೨೮ ರ ಆಮ್‌ಸ್ಟರ್ಡಮ್‌ನ ಒಲಂಪಿಕ್ಸನಲ್ಲಿ ರೋಮ್—ಗ್ರೀಕ್ ರೀತಿಯ ಕುಸ್ತಿ ಅಖಾಡಾದಲ್ಲಿ ನನ್ನನ್ನು ಇಳಿಸಿಯೇ ಬಿಟ್ಟರು! ಸರಿ, ಇಲ್ಲಿಂದಲೇ ಫ್ರೀಸ್ಟೈಲಿನ ಪ್ರೊಫೆಶನಲ್ ಮಲ್ಲಯುದ್ಧದ ನನ್ನ ಜೀವನ ಪ್ರಾರಂಭವಾಗುತ್ತದೆ. ಸುಮಾರು ಹದಿನೇಳರ ವಯಸ್ಸಿನಲ್ಲಿ ನಾನು ಈ ಕುಸ್ತಿಯಲ್ಲಿ ಸ್ವರ್ಣ ಪದಕವನ್ನು ಗಳಿಸಿದೆ. ನಂತರ ನನ್ನ ಅದೃಷ್ಟ ಪರೀಕ್ಷೆಗೆಂದು ಪ್ಯಾರಿಸಿಗೆ ಹೊರಟುಹೋದೆ.

ಆಗ ನನ್ನ ತೂಕ ಕೇವಲ ೧೭೫ ಪೌಂಡುಗಳಷ್ಟು ಇತ್ತು. ಆದರೆ ಅಸಾಧಾರಣ ಬಲ-ವಿಕ್ರಮದಿಂದ ತುಂಬಿ ತುಳುಕುತ್ತಿದ್ದೆ. ನನ್ನ ಸ್ಫೂರ್ತಿ, ಶಕ್ತಿ ಮತ್ತು ವರಸೆಯುಕ್ತ ಚಮತ್ಕಾರಗಳನ್ನು ಕಂಡು ಎದುರಾಳಿ ಮಲ್ಲರು ಥರ್ರನ್ನುತ್ತಿದ್ದರು. ನನಗೆ ಜರ್ಮನಿಯಲ್ಲಿ ಪೋಲೆಂಡಿನ ಹೆನರಿಚ್ ದೇಕಮನ್ ಎಂಬ ಯಹೂದಿಯೊಬ್ಬ ಸಿಕ್ಕಿದ. ಅವನ ಬುದ್ಧಿ ಬಹು ಚುರುಕು. ನನ್ನನ್ನು ಖ್ಯಾತಿ ಶಿಖರವನ್ನೇರುವಂತೆ ಮಾಡುವುದರಲ್ಲಿ ಅವನದು ಹೆಗ್ಗಳಿಕೆ. ಅವನನ್ನು ನನ್ನ ಮ್ಯಾನೇಜರ್ ಆಗಿ ಮಾಡಿಕೊಂಡೆ. ಮುಂದೆ ಅವನು ನನಗೆ ಭಾರಿ ಕೈ ಕೊಟ್ಟ. ಆದ್ದರಿಂದಲೇ ನಾನು ಈಗ ಮ್ಯಾನೇಜರುಗಳನ್ನು ಡ್ಯಾಮೇಜರುಗಳೆಂದು ಕರೆಯುತ್ತೇನೆ. ಇವರು ನನ್ನ ಮ್ಯಾನೇಜರುಗಳಾಗಿರಲಿ ಡ್ಯಾಮೇಜರುಗಳಾಗಿರಲಿ ಇವರನ್ನು ನಾನು ನನ್ನ ತಮ್ಮಂದಿರಂತೆ ಪ್ರೀತಿಸುತ್ತೇನೆ.

ಸರಿ, ಹೆನರಿಚ್‌ನ ಸಂಗಡ ನಾನು ಯುರೋಪನ್ನು ಸುತ್ತಾಡಿದೆ. ೧೯೩೩ ರ ಸುಮಾರಿಗೆ ನಾವು ಈಜಿಪ್ಟಿನಲ್ಲಿದ್ದೆವು. ಒಂದು ದಿನ ಅವನು ನನ್ನ ಮುಂದೆ ಒಂದು ವಿಚಿತ್ರ ಪ್ರಸ್ತಾಪವನ್ನಿಟ್ಟನು. ಏನೆಂದರೆ ೬ ತಿಂಗಳ ಕಾಲ ನಾವೆಲ್ಲಾದರೂ ತಲೆ ಮರೆಸಿಕೊಂಡಿರಬೇಕು. ಈ ಮಧ್ಯೆ ನಾನು ನನ್ನ ತೂಕವನ್ನು ಹೆಚ್ಚಿಸಿಕೊಂಡು ಗಡ್ಡ ಬಿಡಬೇಕು. ನಂತರ ಚಲಚ್ಚಿತ್ರದಲ್ಲಿ 'ಏಪ್‌ಮನ್'ನ ಪಾತ್ರ ವಹಿಸಲು ಅಮೇರಿಕಾಕ್ಕೆ ನನ್ನನ್ನು ಕರೆದುಕೊಂಡು ಹೋಗುತ್ತೇನೆಂದು ಹೇಳಿದನು. ಮೊದಮೊದಲು ನಾನು ಇದನ್ನು ಒಪ್ಪದೆ ಹುಚ್ಚನಂತೆ ಕೂಗಾಡಿದೆ. ನನ್ನ ಸಾಧನೆ ಸಿದ್ಧಿಸುತ್ತಿದ್ದ ಮತ್ತು ಸಂಪತ್ತು-ಖ್ಯಾತಿಯನ್ನು ದೋಚುತ್ತಿದ್ದ ಈ ಸುಸಮಯದಲ್ಲಿ ಇವನಿಗೆ

ಇದೇನು ಹೊಳೆಯಿತು? ಎಂದುಕೊಂಡೆ. ಆದರೆ ಹಲವು ದಿನಗಳ ತನಕ ಅವನು ಈ ವಿಷಯವಾಗಿ ನನ್ನ ಬೆನ್ನು ಹತ್ತಿದ. ನಾನು ಅವನನ್ನು ಬೆದರಿಸಿದರೂ ಫಲಕಾರಿಯಾಗಲಿಲ್ಲ. ಕಡೆಗೆ ನಾನು ಒಪ್ಪಿಕೊಂಡೆ. ಆರು ತಿಂಗಳ ಅವಧಿಯಲ್ಲಿ ಅವನು ಹೇಳಿದಂತೆ ನಾನು ನನ್ನ ತೂಕವನ್ನು ೧೭೫ ಪೌಂಡುಗಳಿಂದ ೨೪೦ ಪೌಂಡುಗಳಿಗೆ ಹೆಚ್ಚಿಸಿಕೊಂಡೆ ಮತ್ತು ಗಡ್ಡವನ್ನೂ ಬೆಳೆಸಿಕೊಂಡೆ.

ಈಗ ಹೆನರಿಚ್‌ನು ಅಮೇರಿಕಾದ ಫಿಲ್ಮ್-ಸಂಸ್ಥೆಗಳೊಡನೆ ಪತ್ರವ್ಯವಹಾರದಲ್ಲಿ ತೊಡಗಿದ. ಅದೇ ಸಮಯದಲ್ಲಿ ಅಲ್ಲಿಯ 'ಮೆಟ್ರೋ ಗೋಲ್ಡ್‌ವಿನ್ ಮೇಯರ್' ಫಿಲ್ಮ್‌ಸಂಸ್ಥೆಯು 'ಕಿಂಗ್‌ಕಾಂಗ್' ಚಲಚ್ಚಿತ್ರ ನಿರ್ಮಾಣ ಕಾರ್ಯದಲ್ಲಿ ತೊಡಗಿತ್ತು. ಅದಕ್ಕೆ ಒಂದು ದೊಡ್ಡ ಗೋರಿಲ್ಲಾದ ಅವಶ್ಯಕತೆಯಿತ್ತು. ಅದನ್ನು ಎಲ್ಲಿಂದ ತರುವುದೆಂಬ ಸಮಸ್ಯೆ ಅವರನ್ನು ಕಾಡುತ್ತಿತ್ತು. ಹೆನರಿಚನ ಉಪಾಯ ಅವರ ಸಮಸ್ಯೆಗೆ ಪರಿಹಾರ ನೀಡಿತು. ನನ್ನನ್ನು ಗೋರಿಲ್ಲಾ ಕಪಿ 'ಕಿಂಗ್‌ಕಾಂಗ್' ಆಗಿ ಮಾಡಿದರು. ಈ ಚಿತ್ರವು ಇಡೀ ಜಗತ್ತಿನಲ್ಲಿ ಒಂದು ದೊಡ್ಡ ಕೋಲಾಹಲವನ್ನೇ ಉಂಟುಮಾಡಿಬಿಟ್ಟಿತೆಂಬುದನ್ನು ಬಹುಶಃ ನೀವು ಮರೆತಿರಲಾರಿರಿ. ಈ ಚಿತ್ರವು ಪ್ರದರ್ಶಿತವಾದ ಕಡೆಗಳಲ್ಲೆಲ್ಲಾ ಜನರು ಸಾಗರೋಪಾದಿಯಲ್ಲಿ ಬಂದು ನೋಡತೊಡಗಿದರು. ಚಿತ್ರಪರದೆಯ ಮೇಲೆ ಯಾವ ವಿಶಾಲಕಾಯ ಕಪಿಯನ್ನು ಕಂಡು ನೀವು ದಿಗ್ಭ್ರಾಂತರಾಗುತ್ತಿದ್ದಿರೋ ಅದೇ ನಾನು. ನನ್ನ "ಮೇಕಪ್" ಒಂದು ವಿಶೇಷ ಸಜ್ಜಿನಿಂದ ಕೂಡಿತ್ತು. ಅದೆಷ್ಟು ಚಮತ್ಕಾರಿಕವಾಗಿತ್ತೆಂದರೆ ಗೋರಿಲ್ಲಾ ಮತ್ತು ನನ್ನನ್ನು ನೋಡಿದರೆ ಯಾವ ಭೇದವೂ ದೃಗ್ಗೋಚರವಾಗುತ್ತಿರಲಿಲ್ಲ. ಈ ಅಪೂರ್ವ ಅಭಿನಯಕ್ಕೋಸ್ಕರ ಫಿಲ್ಮ್ ಸಂಸ್ಥೆಯು ನನಗೆ ಏಳೂವರೆ ಲಕ್ಷ ಡಾಲರ್ ಕೊಟ್ಟಿತು. ಈ ಭಾರಿ ಮೊತ್ತವನ್ನು ನಾನು ಅಲ್ಲೇ ಬ್ಯಾಂಕೊಂದರಲ್ಲಿ ಇಟ್ಟೆ. ಈ ಧನರಾಶಿಯ ಗತಿ ಏನಾಯಿತು ಎಂಬುದನ್ನು ಆಮೇಲೆ ಹೇಳುತ್ತೇನೆ. ಈ ವೇಳೆಗೆ ಜನರು ಎಮಿಲ್ ಸಾಯಾ ನನ್ನು ಮರೆತುಬಿಟ್ಟರು ಮತ್ತು 'ಕಿಂಗ್‌ಕಾಂಗ್' ಎಂಬ ಹೆಸರಿನಿಂದ ಖ್ಯಾತಿಯು ನನ್ನನ್ನು ಹಿಂಬಾಲಿಸಿತು.

ಈ ಹೊಸ ನಾಮಕರಣವು ನನ್ನ ದೇಹದಲ್ಲಿ ಗೋರಿಲ್ಲಾ ಶಕ್ತಿಯನ್ನು ತುಂಬಿತು. ಹೆನರಿಚ್‌ನ ಜೊತೆಗೂಡಿ ನಾನು ಮಲ್ಲವಿದ್ಯಾ ವಿಶಾರದರ ಮಾನಮರ್ದನ ಮಾಡುತ್ತಾ ವಿಶ್ವಪರ್ಯಟನೆ ಕೈಕೊಂಡೆ. ಇಡೀ ಅಮೇರಿಕಾವನ್ನು ಸುತ್ತಿ ಯುರೋಪಿಗೆ ಹೋದೆ. ಇದೇ ಸಮಯದಲ್ಲಿ ಹೆನರಿಚ್‌ನು ಪ್ರತಿಯೊಂದು ಮಾತಿನಲ್ಲೂ ನನಗೆ ಮೋಸ ಮಾಡುತ್ತಿದ್ದಾನೆಂದು ತಿಳಿದುಬಂತು. ನನ್ನ ಮ್ಯಾನೇಜರನ ರೂಪದಲ್ಲಿ ಅವನು ನನ್ನ ಬಳಿ ಬರುವ ಪ್ರತಿಯೊಬ್ಬರಿಂದಲೂ ಹಣವನ್ನು ಕಸಿದುಕೊಳ್ಳುತ್ತಿದ್ದ. ನನ್ನ ಪ್ರತಿಯೊಂದು ಕಾರ್ಯದಲ್ಲಿ ಎದುರು ಪಾರ್ಟಿಯವರಿಂದ ಕಮಿಷನ್ ಪಡೆಯುತ್ತಿದ್ದ, ನನಗೆ ಗೊತ್ತಾಗದಂತೆ. ಅನೇಕ ವರ್ಷಗಳ ನಂತರ ಅವನ ಈ ಮೋಸಗಾರಿಕೆಯ ಅರಿವಾಯಿತು ನನಗೆ. ನಾನು ಅವನಿಗೆ ಬುದ್ಧಿ ಹೇಳಿದೆ, ಎಚ್ಚರಿಕೆ ಕೊಟ್ಟೆ. ಆದರೂ ಅವನು ಬಗ್ಗಲಿಲ್ಲ. ಕಡೆಗೆ ನಾನು ಅವನನ್ನು ಓಡಿಸಿಬಿಟ್ಟೆ.

೧೯೩೭ರಲ್ಲಿ ನಾನು ಭಾರತಕ್ಕೆ ಬಂದೆ. ಕಲ್ಕತ್ತೆಯ ಕುಸ್ತಿ ಪಂದ್ಯ ಆಯೋಜಕನೊಬ್ಬನು, ಮೊಟ್ಟಮೊದಲನೇ ಬಾರಿಗೆ ಭಾರತದಲ್ಲಿ ಫ್ರೀ-ಸ್ಟೈಲ್ ಕುಸ್ತಿಗಳನ್ನೇರ್ಪಡಿಸುವ ಉದ್ದೇಶದಿಂದ ಆರು ತಿಂಗಳ ಕರಾರಿನಿಂದ ನನ್ನನ್ನು ಇತ್ತ ಆಹ್ವಾನಿಸಿದನು.

ಮಲ್ಲರನ್ನು ಗೌರವಾದರದಿಂದ ಕಾಣುವ ಈ ದೇಶವನ್ನು ನಾನು ಪ್ರೀತಿಸತೊಡಗಿದೆ. ಈ ದೇಶವನ್ನು ಕಂಡು ಮನಸೋತುಹೋದೆ. ಒಂದು

ರೀತಿಯಲ್ಲಿ ನಾನು ಇಲ್ಲೇ ಇದ್ದುಬಿಟ್ಟೆ; ಆದರೂ ಕುಸ್ತಿಗಾಗಿ ಆಗಾಗ ವಿದೇಶಗಳಿಗೆ ಹೋಗುತ್ತಿದ್ದೆ. ಈ ಮಧ್ಯೆ ನಾನು ಕೋಲಂಬೋದಲ್ಲಿ ಜರ್ಮನ್ ತರುಣಿಯೊಬ್ಬಳನ್ನು ವಿವಾಹವಾದೆ. ಇವಳಿಂದ ಮೂರು ಗಂಡು ಮಕ್ಕಳು ಹುಟ್ಟಿದರು. ಇವರು ಈಗ ದೊಡ್ಡವರಾಗಿದ್ದಾರೆ ಮತ್ತು ಆಸ್ಟ್ರೇಲಿಯಾದ ಸಿಡ್ನಿಯಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ಇವರಲ್ಲಿ ಯಾರೂ ನನ್ನ ವೃತ್ತಿಯನ್ನು ಅವಲಂಬಿಸಿಲ್ಲ. ಈ ವೃತ್ತಿಗೆಳೆಯಲು ನನಗೂ ಇಷ್ಟವಿಲ್ಲ. ದೊಡ್ಡವನು ಇಂಜನಿಯರಿಂಗ್ ಶಿಕ್ಷಣಕ್ಕೆ ತಯಾರಾಗುತ್ತಿದ್ದಾನೆ. ೧೯೪೪ ರಲ್ಲಿ ಹಂಗೆರಿಯಲ್ಲಿ ಬಾಂಬುಗಳ ಸುರಿಮಳೆಯಾದಾಗ ನನ್ನವಳು ಸದಾಕಾಲಕ್ಕೂ ನನ್ನನ್ನು ತೊರೆದು ಹೊರಟುಹೋದಳು. ೧೯೫೮ ರಲ್ಲಿ ಸಿಂಗಾಪುರದಲ್ಲಿ ಬಲ್ಗೇರಿಯಾದ ನನ್ನ ವಯಸ್ಸಿಗೆ ಹೊಂದಿಕೊಳ್ಳುವ ಸುಂದರಿಯನ್ನು ಮದುವೆಯಾದೆ. ಅವಳು ನನ್ನ ಮಕ್ಕಳೊಂದಿಗೆ ಸಿಡ್ನಿಯಲ್ಲಿದ್ದಾಳೆ.

ಎರಡನೇ ಮಹಾಯುದ್ಧದ ಪ್ರಾರಂಭದೊಡನೆ ನನ್ನ ಭವಿಷ್ಯವೂ ಅಂಧಕಾರಮಯವಾಗಿ ಹೋಯಿತು. ಭಾರತದಲ್ಲಿ ಆಂಗ್ಲೇಯರ ಸರಕಾರವು ಶತ್ರುರಾಷ್ಟ್ರಗಳ ಎಲ್ಲ ಜನರನ್ನು ಹಿಡಿದು ಶಿಬಿರಗಳಲ್ಲಿ ಬಂಧಿಸಿಟ್ಟಿತು. ನನ್ನನ್ನು ಮೊದಲು ದೇವಲಾಲಿಯ ಯುದ್ಧ ಶಿಬಿರದಲ್ಲಿ ಬಂದಿಯಾಗಿಟ್ಟಿದ್ದರು. ಸ್ವಲ್ಪ ಕಾಲಾನಂತರ ಡೆಹರಾಡೂನಿನ ಯುದ್ಧ ಶಿಬಿರಕ್ಕೆ ಕರೆದೊಯ್ದರು. ಈ ಶಿಬಿರದಲ್ಲಿ ಏಳು ತರಹದ ಕೈದಿಗಳಿಗೋಸ್ಕರ ಏಳು ಮಂಡಲಗಳಿದ್ದವು. ಪ್ರಥಮ ಮಂಡಲದಲ್ಲಿ ನಾಜಿ ಜರ್ಮನಿಯವರಿದ್ದರು. ಎರಡನೆಯದು ನಾಜಿ ವಿರೋಧಿ ವಿದೇಶೀಯರಿಗೆ, ಮೂರನೆಯದು ಇಟಾಲಿಯನ್ ಯುದ್ಧಕೈದಿಗಳಿಗಾಗಿ, ನಾಲ್ಕನೆಯದು ಅಂತಾರಾಷ್ಟ್ರೀಯ ಅರಾಜನೈತಿಕ ವಿದೇಶಿ ಬಂದಿಗಳಿಗೆಂದು, ಐದನೆಯದು ಶತ್ರುರಾಷ್ಟ್ರಗಳ ಭಾರತದಲ್ಲಿರುವ ಪಾದರಿಗಳಿಗಾಗಿ, ಆರನೆಯದು ಭಾರತದಲ್ಲಿ ನೆಲೆಸಿರುವ ಜಾವಾ ನಿವಾಸಿಗಳಿಗೆ ಮತ್ತು ಏಳನೆಯದು ಯುದ್ಧದಲ್ಲಿ ಬಂಧಿಸಲ್ಪಟ್ಟ ಸೇನಾಧಿಕಾರಿಗಳಿಗೆಂದು ವಿಂಗಡಿಸಲ್ಪಟ್ಟಿತ್ತು.

ನನಗೆ ಮಾಲಿಶ್ ವಿದ್ಯೆ ಚೆನ್ನಾಗಿ ಗೊತ್ತು. ಈ ವಿದ್ಯೆಯು ಆಪತ್ತಿನ ಸಮಯದಲ್ಲಿ ನನಗೆ ಬಹುಮಟ್ಟಿಗೆ ನೆರವಾಯಿತು. ಶಿಬಿರದ ಮೇಲ್ವಿಚಾರಣಾಧಿಕಾರಿಗಳು ನನ್ನ ಈ ವಿದ್ಯೆಯನ್ನರಿತ ಬಳಿಕ ನನ್ನನ್ನು ಕರೆಯತೊಡಗಿದರು. ಅವರ ಅನುಗ್ರಹ ನನ್ನ ಮೇಲಿತ್ತು ಮತ್ತು ಇದರಿಂದ ಒಂದು 'ಕೋಳಿ ಸಾಕುವ ಫಾರಂ' ತೆರೆಯಲು ನನಗೆ ಅನುಮತಿಯನ್ನಿತ್ತರು. ನಾಲ್ಕೂವರೆ ವರ್ಷಗಳ ವರೆಗೆ ನಾನು ಶಿಬಿರದಲ್ಲಿ ಬಂದಿಯಾಗಿದ್ದೆ. ಈ ಮಾಲಿಶ್ ಉದ್ಯೋಗದ ಫಲವಾಗಿ ನಾನು ಮುಂಜಾನೆ ನಾಲ್ಕು ಘಂಟೆಯಿಂದ ಒಂದೇ ಸಮನೆ ರಾತ್ರಿಯವರೆಗೆ ಶ್ರಮಪಡಬೇಕಾಯಿತು. ಆದರೆ ಒಂದು ಸಂತಸದ ಸುದ್ದಿಯೇನೆಂದರೆ ಸಂಪಾದನೆ ಚೆನ್ನಾಗಿ ಆಗುತ್ತಿತ್ತು. ಸಾವಿರ ರೂಪಾಯಿ ತಿಂಗಳಿಗೆ. ಹಾಗೂ ಹೀಗೂ ನಾನು ಧೈರ್ಯವಾಗಿಯೇ ಕಾಲಹರಣ ಮಾಡುತ್ತಿದ್ದೆ. ಆದರೆ ಈ ಮಧ್ಯೆ ದೊರೆತ ಎರಡು ಸಮಾಚಾರಗಳು ನನ್ನ ಮನಸ್ಸನ್ನು ಭಗ್ನಗೊಳಿಸಿದವು ಮತ್ತು ನನ್ನ ತೂಕವೂ ಬಹಳ ಇಳಿದುಹೋಯಿತು. ಮೊದಲನೆಯ ಸುದ್ದಿ ಅಮೇರಿಕಾ ಸರಕಾರವು ಅಲ್ಲಿನ ಬ್ಯಾಂಕುಗಳಲ್ಲಿಟ್ಟಿದ್ದ ನನ್ನ ಇಡೀ ಸಂಪತ್ತನ್ನು — ಎಂಟು ಲಕ್ಷದ ಅರವತ್ತು ಸಾವಿರ ಡಾಲರ್‌ನ ಐಶ್ವರ್ಯವನ್ನು-ಮುಟ್ಟುಗೋಲು ಹಾಕಿಕೊಂಡಿತು. ಅಮೇರಿಕಾದಲ್ಲಿ ನಾನು ಸಂಪಾದಿಸಿದ ಹಣವನ್ನೆಲ್ಲ ಅಲ್ಲೇ ಸೇರಿಸಿಟ್ಟಿದ್ದೆ. ಇದರಲ್ಲಿ ಒಂದು ಡಾಲರ್ ಸಹ ನನಗೆ ಹಿಂತಿರುಗಿ ಸಿಗಲಿಲ್ಲ. ಎರಡನೆಯ ಸಮಾಚಾರ ಹಂಗೆರಿಯಲ್ಲಾದ ಬಾಂಬು ಸುರಿಮಳೆಯ ಕಾರಣ ನನ್ನ ತಂದೆ ಮತ್ತು ಪತ್ನಿ ಅಸು ನೀಗಿದರು.

ಯುದ್ಧಾನಂತರ ೧೯-೩-೧೯೪೫ ರಂದು

ನನ್ನನ್ನು ಮುಕ್ತಗೊಳಿಸಿದರು. ಶಿಬಿರವನ್ನು ಬಿಡುವಾಗ ಮಾಲಿಶ್ ವಿದ್ಯೆಯಿಂದ ಗಳಿಸಿದ ೨೦ ಸಾವಿರ ರೂಪಾಯಿಗಳು ನನ್ನ ಬಳಿ ಇದ್ದವು. ಆ ಸಮಯದಲ್ಲಿ ನನ್ನ ಫಾರಂನಲ್ಲಿ ೫೦೦ ಕೋಳಿಗಳು, ೧೫೦ ಬಾತುಗಳು, ೨೦೦ ಮೊಲಗಳು, ೨೦ ಕುರಿಗಳು ಮತ್ತು ೧೦ ಹಂದಿಗಳಿದ್ದವು. ಇವೆಲ್ಲವನ್ನೂ ನಾನು ಕೇವಲ ೬೦ ರೂಪಾಯಿಗಳಿಗೆ ನನ್ನ ದೇಶದವನೇ ಆದ ಒಬ್ಬನಿಗೆ ಮಾರಿಬಿಟ್ಟೆ. ಅಲ್ಲಿಂದ ಲಾಹೋರಿಗೆ ತೆರಳಿ ಅಲ್ಲಿ ಸ್ವಲ್ಪ ದಿನವಿದ್ದು, ನಂತರ ಬೆಂಗಳೂರಿಗೆ ಬಂದು ನೆಲಸಿದೆ. ಬೆಂಗಳೂರಿನಲ್ಲಿ ನಾನು ಒಂದು ಲಕ್ಷಕ್ಕೆ ಒಂದು ಬಂಗಲೆಯನ್ನು ಕೊಂಡುಕೊಂಡಿದ್ದೆ; ಆದರೆ ಅದನ್ನು ೧೪ ಸಾವಿರಗಳಿಗೆ ಮಾರಿ ಇದ್ದಕ್ಕಿದ್ದಂತೆ ಅಲ್ಲಿಂದ ಹೊರಟುಬಿಟ್ಟೆ. ಬೆಂಗಳೂರಿನಲ್ಲಿ ನನ್ನ ಗಾಢ ಮಿತ್ರನೊಬ್ಬನಿದ್ದ. ಜಾನ್ ಪೀಟರಸನ್, ಮುನಿಸಿಪಲ್ ಇಂಜನಿಯರ್. ಅವನಿಗೆ ಕೆಲವು ರಾಜನೈತಿಕ ವಿರೋಧಿಗಳಿದ್ದರು. ನನ್ನ ಕಣ್ಣು ಮುಂದೆ ಅವರು ನನ್ನ ಈ ಮಿತ್ರನನ್ನು ಕೊಲೆ ಮಾಡಿದರು. ಮತ್ತು ನಾನು ಪ್ರಯತ್ನಪಟ್ಟರೂ ಅವನನ್ನು ರಕ್ಷಿಸಲಾಗಲಿಲ್ಲ. ನನ್ನ ಮನಸ್ಸು ಅಲ್ಲಿ ಒಗ್ಗಲಿಲ್ಲ. ಸಿಂಗಾಪುರಕ್ಕೆ ಹೊರಟು ಹೋದೆ. ಈಗ ನಾನು ಅಲ್ಲಿಯ ನಾಗರಿಕನಾಗಿದ್ದೇನೆ.

ಭಾರತದಲ್ಲಿ ನಾನು ಪ್ರಖ್ಯಾತ ಮಲ್ಲರಾದ ನಿಜಾಮ ಮತ್ತು ಸರದಾರ್‌ಖಾನ್‌ರವರಿಂದ ಭಾರತೀಯ ರೀತಿ ಕುಸ್ತಿಯಾಟವನ್ನು ಕಲಿತೆ. ರಾವಲ್ಪಿಂಡಿಯಲ್ಲಿ ಗೂಂಗಾ ಮಲ್ಲನೊಡನೆ ೯೦ ನಿಮಿಷಗಳ ವರೆಗೆ ಸೆಣೆಸಿದ ೧೯೪೦ ರ ಆ ದಿನ ಇನ್ನೂ ನೆನಪಿದೆ. ವಾಸ್ತವವಾಗಿ ಈ ಕುಸ್ತಿ ಇದ್ದುದು ೩೦ ನಿಮಿಷಗಳ ವರೆಗೆ ಮಾತ್ರ, ಆದರೆ ಇಷ್ಟು ಅಲ್ಪ ಸಮಯದಲ್ಲಿ ಸೋಲು ಗೆಲುವಿನ ನಿರ್ಣಯವಾಗಲಿಲ್ಲ. ಆಗ ಇನ್ನೂ ೩೦ ನಿಮಿಷಗಳ ಸಮಯ ಹೆಚ್ಚಿಸಲ್ಪಟ್ಟಿತು. ಉತ್ಸಾಹಗೊಂಡು ದರ್ಶಕರೂ ಕಿರುಚಲಾರಂಭಿಸಿದರು. ೬೦ ನಿಮಿಷಗಳ ಕಾದಾಟವೂ ಜಯಲಕ್ಷ್ಮಿ ಯಾರನ್ನೊಲಿದಳು ಎಂಬುದನ್ನು ತೀರ್ಮಾನಿಸಲಾರದಾಯಿತು! ಅಖಾಡಾದಿಂದ ಹೊರಬರುವುದು ದುಸ್ಸಾಧ್ಯವಾಯಿತು. ನಾವು ಇನ್ನೂ ೩೦ ನಿಮಿಷಗಳ ತನಕ ಹುಚ್ಚರಂತೆ ಕಾದಾಡುತ್ತಿದ್ದೆವು. ಇಬ್ಬರೂ ಬಳಲಿ ಬೆಂಡಾಗಿ ಹೋಗಿದ್ದೆವು, ಆದರೂ ಸೆಣಸಾಡುತ್ತಲೇ ಇದ್ದೆವು. ನಾನು ಅವನನ್ನಾಗಲಿ, ಅವನು ನನ್ನನಾಗಲಿ ಸೋಲಿಸುವ ಶಕ್ತಿಯಿರಲಿಲ್ಲ. ನಮ್ಮಲ್ಲಿ ಕುಸ್ತಿ ಸಮವಾಯಿತು. ಆದರೆ ಎರಡು ವಾರಗಳ ತನಕ ನನ್ನ ಕೈಬೆರಳುಗಳು ಊದಿಕೊಂಡು ಮರದಂತೆ ಗಟ್ಟಿಯಾಗಿಬಿಟ್ಟದ್ದವು. ಮತ್ತು ಇಡೀ ಶರೀರದಲ್ಲೆಲ್ಲಾ ನೋವಾಗುತ್ತಿತ್ತು.

ಇಲ್ಲಿಯತನಕ ನಾನು ಸಾವಿರಕ್ಕೂ ಮಿಗಿಲಾಗಿ ಕುಸ್ತಿಗಳನ್ನಾಡಿದ್ದೇನೆ. ಇವುಗಳಲ್ಲಿ ೧೯೩೩ ರಲ್ಲಿ ಜರ್ಮನಿಯಲ್ಲಿ ರಷ್ಯಾದ ಮಲ್ಲ ಪೀಟರ್ ಫೆರೆಸ್ತಾನೋವಿನೊಡನೆ ನಡೆದ ಆ ಮಲ್ಲಯುದ್ಧವನ್ನು ಮರೆಯಲಾರೆ. ನಾನೇನಾದರೂ ಸರಿಯಾಗಿ ರಕ್ಷಿಸಿಕೊಳ್ಳದೆ ಹೋಗಿದ್ದಲ್ಲಿ, ನನ್ನಲ್ಲಿ ಶಕ್ತಿಯಿಲ್ಲದೆ ಹೋಗಿದ್ದಲ್ಲಿ ಬಹುಶಃ ನಾನು ಸತ್ತೇಹೋಗುತ್ತಿದ್ದೆ. 'ವಿಶ್ವವಿಜೇತ ಮಲ್ಲ'ನ ಪ್ರಶಸ್ತಿಗಾಗಿ ನಾನು ಎರಡು ಸಲ ಪ್ರಯತ್ನಿಸಿದೆ. ಮೊದಲು ಸಲ ೧೯೩೪ ರಲ್ಲಿ ಜೀನ್ ಘಾಂಡಸ್‌ನ ಸಂಗಡ ಮತ್ತು ಎರಡನೇ ಸಲ ೧೯೫೦ ರಲ್ಲಿ ಲಾನ್ ಲೈಜ್‌ನೊಡನೆ ಕುಸ್ತಿಯಾಡಿದೆ. ಎರಡು ಸಲವೂ ಭಾಗ್ಯಲಕ್ಷ್ಮಿ ನನಗೆ ನೆರವು ನೀಡಲಿಲ್ಲ.


ನನ್ನ ಊಟದ ಬಗ್ಗೆ ಕೇಳುತ್ತೀರಾ? ಈ ಪ್ರಶ್ನೆಯನ್ನು ನನ್ನ ತುಂಬುಯೌವನದ ಸಮಯದಲ್ಲಿ ಕೇಳಿದ್ದರೆ ಒಂದು ತರಹ ಸಂತೋಷವಾಗುತ್ತಿತ್ತು. ಆಗ ನಾನು ೩೬ ಮೊಟ್ಟೆಗಳ ರಸವನ್ನು ಚೆನ್ನಾಗಿ ಬೆರಸಿ ಅದಕ್ಕೆ ಮೆಣಸನ್ನು ಸೇರಿಸಿ ಕುಡಿದುಬಿಡುತ್ತಿದ್ದೆ. ಸುಮಾರು ೬ ಗಂಟೆ ಕಾಲ

ವ್ಯಾಯಾಮ, ಮಾಲಿಶ್ ಮತ್ತು ಸ್ನಾನ ಮಾಡಿದ ನಂತರ ೨ ಸೇರು ಬಿಸಿ ಹಾಲು ಕುಡಿಯುತ್ತಿದ್ದೆ. ಮಧ್ಯಾಹ್ನದ ಭೋಜನದಲ್ಲಿ ೬ ಬೇಯಿಸಿದ ಕೋಳಿಗಳು, ಒಂದು ಪೌಂಡು ಬೆಣ್ಣೆ, ನಾಲ್ಕು ಪೌಂಡು ಸಲಾಡ್ ಮುಂತಾದವು ಮತ್ತು ೬ ಪೌಂಡು ತಾಜಾ ಹಣ್ಣುಗಳಿರುತ್ತಿದ್ದವು ; ಬ್ರೆಡ್ ಮತ್ತು ತರಕಾರಿ-ಸೊಪ್ಪು ಸಾಕಾದಷ್ಟು ಇರುತ್ತಿತ್ತು. ಸಾಯಂಕಾಲ ಎರಡು ಸೇರು ಹಾಲಿಗೆ ಒಂದು ಪೌಂಡು ಬದಾಮಿ ಬೆರೆಸಿ ಕುಡಿದುಬಿಡುತ್ತಿದ್ದೆ. ರಾತ್ರಿ ವೇಳೆ ೩ ಬೇಯಿಸಿದ ಬಾತುಗಳು, ಮತ್ತು ಮೂರು-ನಾಲ್ಕು ಪೌಂಡು ತಾಜಾ ಹಣ್ಣುಗಳು ; ಬ್ರೆಡ್-ಬೆಣ್ಣೆ ಮತ್ತು ಕಾಯಿ-ಪಲ್ಯ ಎಷ್ಟು ಬೇಕೋ ಅಷ್ಟು. ರಾತ್ರಿ ಮಲಗುವ ವೇಳೆಯಲ್ಲಿ ೨ ಸೇರು ತಣ್ಣಗಿರುವ ಹಾಲನ್ನು ಕುಡಿಯುತ್ತಿದ್ದೆ. ೪೯ ಇಂದಿನ ಈರ ವಯಸ್ಸಿನಲ್ಲೂ ಕೂಡ ನಾನು ಎರಡು ಗಂಟೆ ಕಾಲ ಕಸರತ್ ಮಾಡುತ್ತೇನೆ ಆದರೆ ಆಹಾರ-ಪ್ರಮಾಣ ಇಳಿದುಹೋಗಿದೆ. ಈಗ ನಾನು ಸಾಕಷ್ಟು ಬ್ರೆಡ್ ಮತ್ತು ಕಾಯಿಪಲ್ಲೆಗಳ ಜೊತೆಗೆ ಒಟ್ಟು ಸೇರಿ ಕೇವಲ ಒಂದು ಡಜನ್ ಹಸಿ ಮೊಟ್ಟೆ, ಮೆಣಸಿನಸಂಗಡ, ೬ ಸೇರು ಹಾಲು, ೨ ಬೇಯಿಸಿದ ಕೋಳಿ, ಅರ್ಧ ಸೇರು ಬದಾಮಿ, ಒಂದು ಪೌಂಡು ಬೆಣ್ಣೆ ಮತ್ತು ಸುಮಾರು ೧೦ ಪೌಂಡು ತಾಜಾ ಹಣ್ಣುಗಳನ್ನು ಅರಗಿಸಿಕೊಳ್ಳುತ್ತೇನೆ. ಒಂದು ಕಾಲದಲ್ಲಿ ನನ್ನ ತೂಕ ೪೮೫ ಪೌಂಡುಗಳಷ್ಟಿತ್ತು. ಈಗ ಕುಸಿದು-ಕುಸಿದು ಅದು ೪೧೦ ಕ್ಕೆ ಇಳಿದುಹೋಗಿದೆ. ನನ್ನ ಎತ್ತರ ೬ ಅಡಿ ಮತ್ತು ಎದೆಯ ಸುತ್ತಳತೆ- ೬೦ ಇಂಚು ಭರ್ತಿ.

ಸೋಲುವ ಸ್ಥಿತಿ ಬಂದೊದಗಿದಾಗ ನಾನು ಮನ ಬಂದಂತೆ ವರ್ತಿಸುತ್ತೇನೆ ಮತ್ತು ತಪ್ಪು ಮಾರ್ಗವನ್ನು ಅನುಸರಿಸುತ್ತೇನೆಂದು ಜನರು ನನ್ನ ಮೇಲೆ ದೋಷ ಹೊರಿಸುತ್ತಾರೆ. ಇದಕ್ಕೇ-ನೆಂದು ಉತ್ತರಿಸಲಿ ? ಎದುರಾಳಿಯನ್ನು ಮುದ್ದಿಸುವುದಕ್ಕೇನೂ ನಾನು ಮೈದಾನದಲ್ಲಿ ಇಳಿಯು-ವುದಿಲ್ಲವಲ್ಲ! ಅವನನ್ನು ಸೋಲಿಸುವುದೇ ನನ್ನ ಗುರಿ. ಎದುರಾಳಿ 'ಫೌಲ್' ಆಡುವಂತೆ ನನ್ನನ್ನು ವಿವಶಗೊಳಿಸದ ಹೊರತು ನಾನು 'ಫೌಲ್' ಆಡುವುದಿಲ್ಲ. 'ಫೌಲ್' ಅಂದರೆ ನನಗೆ ಆಗುವುದಿಲ್ಲ.

ಇದೇನು ? ಫ್ರೀ ಸ್ಟೈಲ್ ಕುಸ್ತಿಗಳು ನಕಲಿ ಕುಸ್ತಿಗಳೆಂದು ಹೇಳುತ್ತಿದ್ದೀರಿ! ಸ್ವಾಮಿ ! ಇದುವರೆಗೆ ನಾನು ಹೇಳಿರುವ ಸಮಾಚಾರಗಳಿಂದ ಸತ್ಯ ವಿಷಯವು ಮುಂದೆ ಬಂದು ಬಿಡಬೇಕು. ಒಂದು ಸಲ ಹತ್ತಿರದಿಂದ ನನ್ನ ಕುಸ್ತಿಯನ್ನು ಕಂಡು ನನ್ನ ಮಾತಿನ ಸತ್ಯಾಸತ್ಯತೆಯ ಬಗ್ಗೆ ನೀವೇ ನಿರ್ಣಯಿಸಿಕೊಳ್ಳಿರಿ.

ಇಲ್ಲಿಂದ ಹೊರಡುವ ಮುನ್ನ ಇನ್ನೆರಡು ಮಾತುಗಳನ್ನು ಕೇಳಿಕೊಳ್ಳಿ. ಅಖಾಡಾದ ಹೊರಗೆ ನಾನು ಎಲ್ಲರ, ನನ್ನ ಎದುರಾಳಿಗಳಿಗೂ ಕೂಡ ಮಿತ್ರನಾಗಿದ್ದೇನೆ; ಆದರೂ ನನಗೆ ಅನೇಕ ಕಟು ಅನುಭವಗಳಾಗಿವೆ. ಸೌಜನ್ಯ ಎಂದುಕೊಂಡು ನಾನು ಅನೇಕ ಸಲ ಲೂಟಿಯಾಗಿದ್ದೇನೆ; ಮೋಸದ ವಿಷಜಾಲಕ್ಕೆ ಸಿಲುಕಿ ನಾನು ಬೇಸತ್ತು ಹೋಗಿದ್ದೇನೆ. ಇವೆಲ್ಲಾ ಸಾಕು ಸಾಕಾಗಿದೆ. ಈಗ ಇರುವುದೊಂದೇ ಇಚ್ಛೆ; ಏನೆಂದರೆ ಈ ಉದ್ಯೋಗವನ್ನು ಬಿಟ್ಟು, ಸಿಂಗಾಪುರದಲ್ಲಿ ಒಂದು ಭವ್ಯ ಕಾಫಿ ಬಾರನ್ನು ಇಟ್ಟುಕೊಂಡು ಮಿಕ್ಕ ಜೀವನವನ್ನು ಶಾಂತಿಪೂರ್ವಕವಾಗಿ ಕಳೆಯಬೇಕೆಂಬುದೇ ಆ ಇಚ್ಛೆ." ★



ಹಾಗಲಕಾಯಿ ಮತ್ತು ಮಧುಮೇಹ


ಸ್ಟೇಟ್ಸ್‌ಮನ್ ಆಧಾರದಿಂದ

ಹಾಗಲಕಾಯಿ ಒಂದು ಘನರೋಗಕ್ಕೆ ಔಷಧವೆಂಬ ಅಂಶ ಇದೀಗ ಹೊಸದಾಗಿ ಹೊರಬಿದ್ದಿದೆ. ಮಧುಮೇಹದಮೇಲೆ ಅದನ್ನು ಯಶಸ್ವಿಯಾಗಿ ಪ್ರಯೋಗಿಸಲಾಗಿದೆ. ಇಂಜಕ್ಶನ್‌ಗಳ ಅಗತ್ಯವಿಲ್ಲದೆ ಅದು ರೋಗವನ್ನು ಹತೋಟಿಯಲ್ಲಿಡಬಲ್ಲದೆಂದು ಸಿದ್ಧವಾಗಿದೆ.

ಭಾರತೀಯ ಫಾರ್ಮಸ್ಯುಟಿಕಲ್ ಅಸೋಸಿಯೇಶನ್ (ಮಹಾರಾಷ್ಟ್ರ ಶಾಖೆ), ಭಾರತೀಯ ಮೆಡಿಕಲ್ ಅಸೋಸಿಯೇಶನ್ (ಮುಂಬಯಿ ಶಾಖೆ) ಮತ್ತು ಮುಂಬಯಿ ಮೆಡಿಕಲ್ ಯೂನಿಯನ್‌ನವರು ಸಂಯುಕ್ತವಾಗಿ ಏರ್ಪಡಿಸಿದ ಒಂದು ವಿಚಾರ ಸಂಕಿರಣದಲ್ಲಿ ಮುಂಬಯಿಯ ಪಳಗಿದ ಡಾಕ್ಟರರಾದ ಬಿ. ಜಿ. ವಾಡ್ ಇವರು ಮಧುಮೇಹ (ಸಿಹಿ ಮೂತ್ರ) ರೋಗ ಚಿಕಿತ್ಸೆಯಲ್ಲಿ ಹಾಗಲ ಕಾಯಿಯ ಉಪಯೋಗವನ್ನು ಕುರಿತು ತಾವು ಮಾಡಿದ ಪ್ರಯೋಗಗಳ ಪ್ರಾಥಮಿಕ ವರದಿಯನ್ನು ಒಪ್ಪಿಸಿದ್ದಾರೆ.

ಮುಂಬಯಿ ರಾಜ್ಯದ ಅತಿ ಹಳೆಯ ಎಂ. ಡಿ. ಗಳಲ್ಲೊಬ್ಬರೂ ಇಂಡಿಯನ್ ಮಿಲಿಟರಿ ಹಾಸ್ಪಿಟಲ್‌ನಲ್ಲಿ ಕರ್ನಲ್ ಪದವಿಯ ಗೌರವ ವೈದ್ಯರಾಗಿದ್ದವರೂ ಹಲಕಾಲ ಗ್ರಾಂಟ್ ಮೆಡಿಕಲ್ ಕಾಲೇಜಿನಲ್ಲಿ ಔಷಧಿಶಾಸ್ತ್ರದ ಪ್ರೊಫೆಸರರಾಗಿ ದುಡಿದವರೂ ಆದ ವಾಡರು ಮುಂಬಯಿ ನಗರದಲ್ಲೂ ಹೊರಗೂ ಅತಿ ಗೌರವಾರ್ಹರಾಗಿರುವ ಡಾಕ್ಟರರು. ಅವರು ಹಾಗಲಕಾಯಿಯ ರಸವನ್ನು ೨೦೦ ಕ್ಕೂ ಹೆಚ್ಚು ಮಧುಮೇಹರೋಗಿಗಳಿಗೆ ಕೊಟ್ಟರು. ಅವರಲ್ಲಿ ಸೇಕಡಾ ೮೦ ರಷ್ಟು ಜನ ಮಧುಮೇಹ ರೋಗಿಗಳಿಗೆ ಸಾಮಾನ್ಯವಾಗಿ ಕೊಡುವ ಇನ್‌ಸುಲಿನ್ ಮೊದಲಾದ ಇಂಜಕ್ಶನ್‌ಗಳನ್ನಾಗಲಿ ಇತರ ಔಷಧಗಳನ್ನಾಗಲಿ ಕೊಡದೇನೇ ರೋಗವನ್ನುಹಿಡಿತಕ್ಕೆ ತರಲು ಸಮರ್ಥರಾದರು. ಇನ್‌ಸುಲಿನ್‌ನಂತೆ ಇದೂ ರಕ್ತದಲ್ಲಿರುವ ಸಕ್ಕರೆ ಪ್ರಮಾಣವನ್ನು ಇಳಿಸುತ್ತಿರುವುದು ಕಂಡುಬಂತು.

ಹಾಗಲಕಾಯಿ ರಸ ತೆಗೆದುಕೊಂಡ ಇತರ ಸೇಕಡಾ ೨೦ ಜನರಲ್ಲಿ ೫ ಜನರಿಗೆ ಅದರಿಂದ ಏನೂ ಪ್ರಯೋಜನವಾಗಲಿಲ್ಲ. ಉಳಿದ ೧೫ ಜನರಿಗೆ ಇದರೊಡನೆ ಸಾಮಾನ್ಯ ಔಷಧಗಳೂ



ಅಗತ್ಯವಾದವು. ಆದರೆ ಅವು ಕಡಿಮೆ ಪ್ರಮಾಣದಲ್ಲಿ ಸಾಕಾದವು.

ಹಾಗಲಕಾಯಿಯಲ್ಲಿ ಸಾಧಾರಣವಾಗಿ ಎರಡು ಬಗೆಗಳಿವೆ. ಒಂದು ಉದ್ದನ್ನ, ದೀರ್ಘ ವೃತ್ತಾಕಾರವಾದ, ತಿಳಿಹಸಿರು ಬಣ್ಣದಕಾಯಿ; ಇನ್ನೊಂದು ಚಿಕ್ಕ ಕಡುಹಸಿರು ಬಣ್ಣದ ಜಾತಿ. ಇವುಗಳಲ್ಲಿ ಡಾ. ವಾಡರು ಉಪಯೋಗಿಸಿದ್ದು ಎರಡನೆಯ ಜಾತಿ.

ಹಾಗಲಕಾಯಿಯ ಪ್ರಯೋಗಕ್ಕೆ ರೋಗಿಗಳನ್ನು ಆರಿಸಿಕೊಳ್ಳುವಾಗ ಡಾ. ವಾಡರು ಮೂತ್ರ ಪರೀಕ್ಷೆಯಿಂದ ಮಧುಮೇಹವಿದ್ದುದು ಖಂಡಿತವಾಗಿ ಸಿದ್ಧವಾದವರನ್ನೇ ಆರಿಸಿಕೊಂಡಿದ್ದರು. ಈ ರೋಗಿಗಳಲ್ಲಿ ಪಥ್ಯ ಮೂಲಕ ರೋಗ ಹತೋಟಿಗೆ ಬರುವುದಿಲ್ಲೆಂಬುದನ್ನೂ ಖಚಿತಪಡಿಸಿಕೊಂಡಿದ್ದರು. ಚಿಕಿತ್ಸಾಕಾಲದಲ್ಲಿ ಅವರನ್ನು ಕ್ರಮವಾಗಿ ರಕ್ತ ಮತ್ತು ಇತರ ಪರೀಕ್ಷೆಗಳಿಗೆ ಒಳಪಡಿಸಲಾಗುತ್ತಿತ್ತು.

ಈ ಪ್ರಯೋಗಗಳಲ್ಲಿ ಪ್ರತಿ ರೋಗಿಗೆ ದಿನಕ್ಕೆ ಮೂರು-ನಾಲ್ಕು ಔಂಸ್ ಹಾಗಲಕಾಯಿ ರಸವನ್ನು ಎರಡು ಅಥವಾ ಮೂರು ಭಾಗ ಮಾಡಿ ಊಟಕ್ಕೆ ಮೊದಲು ಕೊಡಲಾಯಿತು. ಕಹಿ ರಸ ಸೇರಿಕೆಯಾಗದವರಿಗೆ ಹಾಗಲಕಾಯಿ ರಸದಿಂದ (ಈಚೆಗೆ ಒಂದು ಕಂಪೆನಿಯು 'ಕಾರ್ಲಿನ್, ಎಂಬ ವ್ಯಾಪಾರಿ ಹೆಸರಿನ ಈ ಗುಳಿಗೆಗಳನ್ನು ಮುಂಬಯಿಯ ಸಿಗ್ಮಾ ಲಿಬೊರೆಟರೀಸ್‌ನವರು ತಯಾರಿಸುತ್ತಿದ್ದಾರೆ.) ತಯಾರಿಸಿದ ಗುಳಿಗೆಗಳನ್ನು ಕೊಟ್ಟರು.

ಹಾಗಲಕಾಯಿ ಮಧುಮೇಹಕ್ಕೆ ಹಿತಕರವೆಂಬಂಶ ಬಹಳ ಕಾಲದಿಂದ ಭಾರತೀಯ ವೈದ್ಯರಿಗೆ ಗೊತ್ತಿದೆ. ಹಾಗಲಕಾಯಿ ಮತ್ತು ಕಹಿ ಪಡುವಲಕಾಯಿಯನ್ನು ಮಧುಮೇಹ ರೋಗಿಗಳಿಗೆ ಕೊಡಬಹುದೆಂದೂ ಅದರಿಂದ ರೋಗಿಗೆ ಪಿತ್ಥವಾಗದಿದ್ದರೆ ರೋಗಕ್ಕೆ ಅದು ನಾಟುತ್ತಿದೆಯೆಂದು ತಿಳಿದುಕೊಳ್ಳಬೇಕೆಂದೂ ಆಯುರ್ವೇದ ವೈದ್ಯಕ ಹೇಳುತ್ತದೆ. ಪಿತ್ಥವಾದರೆ ರೋಗಿಗೆ ರೋಗ ವಾಸಿಯಾಗಿದೆಯೆಂದು ಇಲ್ಲವೆ ನಿಜವಾಗಿ ಮಧುಮೇಹ ಆಗಿಲ್ಲವೆಂದು ವೈದ್ಯರು ಭಾವಿಸುತ್ತಾರೆ. ಕೆಲಕಾಲದಿಂದ ಅಮೇರಿಕ, ಜರ್ಮನಿ, ಭಾರತಗಳಲ್ಲಿ ಇಲಿ ಮತ್ತು ಮೊಲಗಳ ಮೇಲೆ ನಡೆಸಿದ ಪ್ರಯೋಗಗಳು ಹಾಗಲಕಾಯಿಯ ರಸದಲ್ಲಿ ರಕ್ತದಲ್ಲಿರುವ ಶರ್ಕರಾಂಶವನ್ನಿಳಿಸುವ ಗುಣವಿದೆಯೆಂದು ದೃಢಪಡಿಸಿವೆ.

ಹಾಗಲ ರಸದಲ್ಲಿರುವ ಯಾವ ಸಾರ ಪದಾರ್ಥವು ರಕ್ತಶರ್ಕರಾ ಪ್ರಮಾಣವನ್ನಿಳಿಸುತ್ತದೆ ಎಂಬಂಶ ಇನ್ನೂ ತಿಳಿದಿಲ್ಲ. ಭಾರತ, ಮಲಯ, ಸಿಂಹಳ ಮತ್ತು ಆಫ್ರಿಕದ ಉಷ್ಣಕಟಿಬಂಧ ಪ್ರದೇಶಗಳಲ್ಲಿ ಮಾತ್ರ ಹಾಗಲ ಬಳ್ಳಿ ಬೆಳೆಯುವುದರಿಂದ ಪಾಶ್ಚಾತ್ಯ ದೇಶಗಳಲ್ಲಿ ಪ್ರಯೋಗಗಳನ್ನು ಮುಂಬರಿಸಲು ಕಷ್ಟವಾಗಿದೆ. ಈ ಸಾರವಾವುದೆಂದು ತಿಳಿದರೆ ಅದನ್ನು ಭಟ್ಟಿಯಿಳಿಸಿ ಸುಲಭ ಸೇವ್ಯವಾಗುವಂತೆ ರೋಗಿಗಳಿಗೆ ಒದಗಿಸಬಹುದು. ಅದು ಯಾವ ರೀತಿಯಲ್ಲಿ ಶರೀರದ ಮೇಲೆ ಪರಿಣಾಮ ಮಾಡುತ್ತದೆಂಬುದನ್ನೂ ಶೋಧಿಸಬೇಕಾಗಿದೆ. ಇನ್‌ಸುಲಿನ್‌ನಂತೆ ನೇರವಾಗಿ ರಕ್ತದ ಮೇಲೆ ಪರಿಣಾಮ ಮಾಡುವುದೋ ಅಥವಾ ಶರೀರದಲ್ಲಿ ಇನ್‌ಸುಲಿನ್ ಸ್ರಾವವಾಗುವಂತೆ ಉತ್ತೇಜನ ಕೊಡುವುದೋ ಇಲ್ಲವೇ ಇನ್‌ಸುಲಿನ್ ಕ್ರಿಯೆಯನ್ನು ತಡೆಗಟ್ಟಲು ಕಾರಣವಾದ ಮೂತ್ರಪಿಂಡದಿಂದ ಹೊಮ್ಮುವ ಇನ್‌ಸುಲಿನೇಸ್ ಎಂಬ ಪದಾರ್ಥವನ್ನು ನಿಷ್ಕ್ರಿಯಗೊಳಿಸುವ ಮೂಲಕ ಸಕ್ಕರೆ ಅರಗಲು ಸಹಾಯ ಮಾಡುವುದೋ ಎಂಬ ಬಗ್ಗೆ ಸಂಶೋಧನೆಗಳಾಗಬೇಕು.

ಹೇಗಿದ್ದರೂ ಹಿತ್ತಿಲಲ್ಲೇ ಬೆಳೆಸಬಹುದಾದ ಹಾಗಲಕಾಯಿ, ವಿಶೇಷವಾಗಿ ಹಳ್ಳಿಗಾಡಿನಲ್ಲಿ ಮಧುಮೇಹ ರೋಗಿಗಳಿಗೆ ವರದಾನವಾಗಿ ಪರಿಣಮಿಸಬಹುದು. *

ಇದುವೆ ಜೀವ, ಇದು ಜೀವನ

ನಮ್ಮ ಮನೆಯ ಮಾಳಿಗೆಯ ಮೇಲಿನ ಕೊಠಡಿಯನ್ನು ಒಬ್ಬ ಯುವಕ ನೌಕರನಿಗೆ ಬಾಡಿಗೆಗೆ ಕೊಟ್ಟಿದ್ದೆವು. ಆತ ಮುಂಜಾನೆ ಕೊಠಡಿಯನ್ನು ಬಿಟ್ಟರೆ ಮತ್ತೆ ಬರುತ್ತಿದ್ದುದು ರಾತ್ರಿ ಹತ್ತು ತಾಸಿನ ನಂತರವೆ. ಆದರೆ ತುಂಬ ಸಂಭಾವಿತ.

ಆತನ ಕೊಠಡಿಗೆ ಮನೆಯ ಹೊರಗಡೆಯಿಂದ ಮೆಟ್ಟಿಲುಗಳ ಮೂಲಕ ನೇರ ಪ್ರವೇಶವಿತ್ತು. ದಿನವೂ ರಾತ್ರಿ ವೇಳೆ ಆತನು ಮೆಟ್ಟಿಲುಗಳನ್ನೇರಿ ಕೊಠಡಿಗೆ ಹೋಗುವಾಗ ಆತನ ಬೂಟುಗಳ ದಡ ದಡ ಶಬ್ದ ಕೇಳಿಸಿ, ನಂತರ ಆತನು ಬೂಟುಗಳನ್ನು ಟಪ್, ಟಪ್, ಎಂದು ಒಗೆಯುವುದು ಕೇಳಿಸಿ ನಂತರ ವಾತಾವರಣವು ನೀರವವಾಗುತ್ತಿತ್ತು. ಇದರಿಂದ ನಮ್ಮ ತಂದೆಯವರಿಗೆ ಮಾತ್ರ ಎಚ್ಚರವಾಗಿ ತೊಂದರೆಯಾಗುತ್ತಿತ್ತು.

ಕೆಲವು ದಿನಗಳ ವರೆಗೆ ತಂದೆಯವರು ಇದನ್ನು ಸಹಿಸಿದರು. ಅನಂತರ ಒಂದು ದಿನ ಆ ಯುವಕನಿಗೆ ನಿಶ್ಶಬ್ದವಾಗಿ ಮಾಳಿಗೆ ಏರಬೇಕೆಂದೂ ಇಲ್ಲವಾದರೆ ನಿದ್ರಿಸುವವರಿಗೆ ಅಡಚಣೆಯಾಗುವುದೆಂದೂ ತಿಳಿಸಿದರು. ಆತ ಕ್ಷಮೆ ಕೋರಿ 'ಆಗಲಿ' ಎಂದೊಪ್ಪಿಕೊಂಡ.

ಮಾರನೆಯ ದಿನ ರಾತ್ರಿ ಅದೇ ಶ್ರುತಿ, ಬಿರುಸಾದ ದಡ ದಡ ಶಬ್ದ. ತಕ್ಷಣವೇ ಅಭ್ಯಾಸ ಬಲದಿಂದ ತಂದೆಯವರಿಗೆ ಎಚ್ಚರವಾಯ್ತು. ಎದ್ದು ಕುಳಿತರು. ಒಂದು ಬೂಟ್ ಕಳಚಿ ಒಗೆಯುವ 'ಟಪ್' ಶಬ್ದವಾಯಿತು. ಅವರು ಎರಡನೆ ಟಪ್ ಶಬ್ದಕ್ಕಾಗಿ ಕಾಯುತ್ತಾ ಕುಳಿತರು.

ಕಾದೇ ಕಾದರು. ಅರ್ಧ ಘಂಟೆಯಾಯ್ತು, ಒಂದಾಯ್ತು. ಶಬ್ದವೇ ಕೇಳಿ ಬರಲಿಲ್ಲ. ಮಲಗೋಣವೆಂದರೆ ಮನ ಒಪ್ಪದು, ಏಕೆಂದರೆ ಮತ್ತೆ ಆ ಶಬ್ದದಿಂದ ಇವರ ನಿದ್ರಾಭಂಗವಾಗುವ ಸಂಭವವಿತ್ತು. ಆದ್ದರಿಂದ ಅವರೇ ಎದ್ದು ಆತನ ಕೊಠಡಿಯವರೆಗೆ ಹೋಗಿ ನೋಡಿದರು. ಆ ಯುವಕ ನಿಶ್ಚಿಂತೆಯಿಂದ ಮಲಗಿದ್ದಾನೆ, ಒಂದು ಕಾಲಿನಲ್ಲಿರುವ ಬೂಟನೊಡನೆ.

ಆದದ್ದಿಷ್ಟೇ. ಅಭ್ಯಾಸಬಲದಿಂದ ಆತ ದಡ ದಡ ಶಬ್ದ ಮಾಡುತ್ತ ಎಂದಿನಂತೆ ಮಹಡಿ ಏರಿದ್ದ. ಒಂದು ಬೂಟನ್ನು ಕಳೆದೊಗೆದಿದ್ದ. ಅಷ್ಟರಲ್ಲಿ ಅವನಿಗೆ ಮುಂಜಾನೆಯ ಪ್ರಸಂಗ ಮತ್ತು ತಾನು ಸದ್ದು ಮಾಡುವವುದಿಲ್ಲೆಂದು ಮಾತು ಕೊಟ್ಟದ್ದು ನೆನಪಿಗೆ ಬಂದು ಪಶ್ಚಾತ್ತಾಪವಾಗಿತ್ತು. ತನ್ನ ಮರವೆಯನ್ನು ಹಳಿಯುತ್ತ ಮಲಗಿದವನು ಹಾಗೇ ನಿದ್ದೆಹೋಗಿದ್ದ.

— ಸೂರ್ಯನಾರಾಯಣ

ಯಾರೋ ಬಾಗಿಲು ಬಡಿದಾಗ ನನಗೆ ಬಹಳ ಆಶ್ಚರ್ಯವಾಯಿತು. ಬೆಳಗಿನ ಏಳು ಗಂಟೆಗಾಗಲೇ ಈ ಅತಿಥಿ ಯಾರಿರಬಹುದೆಂದು ಯೋಚಿಸುತ್ತ ಹಾಗೇ ಮಲಗಿದ್ದೆ. ಹನ್ನೊಂದು ಗಂಟೆಗೆ ಆಫೀಸಿರುವುದರಿಂದ ಹಾಸಿಗೆ ಬಿಟ್ಟೇಳುವುದೇ ಎಂಟು ಗಂಟೆ. ಈ ಗಿರಾಕಿ ಎಲ್ಲೋ ತಪ್ಪಿ

ಇಲ್ಲಿಗೆ ಬಂದಿರಬಹುದೆಂದು ಸುಮ್ಮನಾದೆ. ಮತ್ತೆ ಬಾಗಿಲು ಬಡಿತ. ನಾನು ಗೃಹಸ್ಥನೂ ಅಲ್ಲ, ಮುಸುರೆಯುವರ ಅಥವಾ ಹಾಲಿನವರ ಸಂಪರ್ಕವಿದೆಯೆನ್ನುವುದಕ್ಕೆ. ಅಂತಹುದರಲ್ಲಿ ಯಾರಿರಬಹುದು? ವಿಧಿಯಿಲ್ಲದೇ ಎದ್ದು ಬಾಗಿಲು ತೆಗೆದೆ.

ಎದುರಿಗೆ ಸುಂದರ ಯುವಕನೊಬ್ಬ ಕಂಕುಳಲ್ಲಿ ಒಂದು ರಿಜಿಸ್ಟರನ್ನು ಹಿಡಿದು ನಿಂತಿದ್ದ ನಗುತ್ತಾ. ನನ್ನನ್ನು ನೋಡಿ "ಏನ್ಸಾರ್ ಎಲ್ಲರೂ ಆರೋಗ್ಯಾನಾ?'' ಎಂದ, ಬಹಳ ಪರಿಚಯದವನಂತೆ. ನನಗೋ ಆಶ್ಚರ್ಯವೋ ಆಶ್ಚರ್ಯ. ವ್ಯಕ್ತಿಯನ್ನು ಎಲ್ಲೂ ಕಂಡಂತಿರಲಿಲ್ಲ. ಹಾಳಾದ್ದು ಮರೆತೆನೋ ಏನೋ ಎಂದು ನನ್ನ ಮರೆವನ್ನು ನಾನೇ ಹಳಿದೆ. ತಲೆ ಕೆರೆದೆ. ಕೈ ಕೊಸರಿಕೊಂಡೆ. ನೆಲ ನೋಡಿದೆ. ಮತ್ತೆ ತಲೆ ಎತ್ತಿ ಒಂದು ಕ್ಷಣ ಅವನ ಮುಖವನ್ನೇದಿಟ್ಟಿಸಿದೆ. ಉಹೂ.. ನೆನಪೇ ಇಲ್ಲ. ''ಯಾರೋ? ಗುರುತು ಮರೆತೆ. ಕ್ಷಮಿಸಿ'' ಎಂದೆ ಬಹಳ ತಪ್ಪು ಮಾಡಿದವನಂತೆ.

''ಆ! .... ಯಾರೂ ಇಲ್ಲಾ ಸಾರ್. ನಾನು ಆಂಟಿ-ಮಲೇರಿಯಾ ಸಂಸ್ಥೆಗೆ ಸೇರಿದವನು ಸಾರ್. ಇದೇ ತಾನೇ ನಮ್ಮ ಕೆಲಸ. ಎಲ್ಲರ ಮನೆ ಆರೋಗ್ಯಾನೂ ವಿಚಾರಿಸುವುದು. ಬಳ್ಳೇದು ಸಾರ್. ಎಲ್ಲಾ ಆರೋಗ್ಯ ಹಾಗಾದರೆ. ಬರ್ತೇನೆ'' ಎಂದು ನಡೆದೇಬಿಟ್ಟ.

—ಶಾಸ್ತ್ರಿ

ಮಣಿಪಾಲದ ಮುದ್ದಣಮಂಟಪದಲ್ಲಿ ೪೨ನೆಯ ಕನ್ನಡ ಸಾಹಿತ್ಯಸಮ್ಮೇಳನ. ಕವಿಗೋಷ್ಠಿ ಮುಗಿದುದಷ್ಟೆ. ಉತ್ಸಾಹಿತ ಸಾಹಿತ್ಯಪ್ರೇಮಿಗಳು ಹಸ್ತಾಕ್ಷರ ಸಂಗ್ರಹದಲ್ಲಿ ಓಡಾಡುತ್ತಿದ್ದರು. ನಮ್ಮಲ್ಲಿ ಒಬ್ಬೊಬ್ಬರಿಗೂ ಅದರ ಹುಚ್ಚು. ಅವರು ವೇದಿಕೆಯುತ್ತ ನುಗ್ಗಿ ಅಂದಿನ ಅಧ್ಯಕ್ಷರಾದ ಶ್ರೀ ಬೇಂದ್ರೆಯವರ ಬಳಿ ಸಾರುವ ಪ್ರಯತ್ನ ಮಾಡುತ್ತಿದ್ದರು. ಅಷ್ಟರಲ್ಲಿ ನಮ್ಮ ಗುಂಪಿನಲ್ಲಿ ನಿಂತಿದ್ದ ಒಬ್ಬ ಮೆಲುದನಿಯುಲ್ಲಿ ಉದ್ಗಾರವೆಳೆದು ಅಂಗಿಯ ಚುಂಗನ್ನು ಹಿಡಿದೆಳೆದ—"ಏಯ್! ಬೆಟಗೇರಿ ಕೃಷ್ಣಶರ್ಮ- ಆನಂದಕಂದಾ ಕಣೋ!" ನಾವು ಆಶ್ಚರ್ಯ, ಸಂತೋಷ, ಉದ್ವೇಗಗಳಿಂದ ತಿರುಗಿ ನೋಡಿದೆವು. ಬಿಳಿಯ ಧೋತ್ರ, ಬಿಳಿಯ ಜುಬ್ಬ ಧರಿಸಿ ಶಲ್ಯ ಹೊದ್ದುಕೊಂಡು, ಹಣ್ಣು ಕೂದಲಿನ ನಡುವೆ ಬೈತಲೆ ತೆಗೆದ ಕ್ರಾಪಿನ ಗಂಭೀರ ಮೊಗದ ವ್ಯಕ್ತಿ. ತಲೆ ಬಗ್ಗಿಸಿ ತಮ್ಮ ಚಪ್ಪಲಿಗಳನ್ನು ಹುಡುಕುತ್ತಿದ್ದರು. ನಮ್ಮ ಗುಂಪಿನಲ್ಲಿನ ಒಬ್ಬ, ದೂರದಲ್ಲಿದ್ದ ಹಸ್ತಾಕ್ಷರ ಪುಸ್ತಕ ತರಲು ಓಡಿದ. ಉಳಿದವರು ಇವರನ್ನು ಸುತ್ತು ಹಾಕಿದೆವು. "ಯಾಕೆ ಏನು?" ಎಂದು ವಿನೀತರಾಗಿ ಅವರು ಕೇಳಿದರು. ''ಆಟೊಗ್ರಾಫ್" ಎನ್ನುವುದಕ್ಕಿಂತ ಹೆಚ್ಚು ಮಾತು ಯಾರಿಗೂ ಮಾತನಾಡಲಾಗಲಿಲ್ಲ. ಪುಸ್ತಕ ಬಂತು. ಪೆನ್ನು ತೆಗೆದುಕೊಂಡು ಅವರೆಂದರು-"ಇಂಗ್ಲೀಷ್ ಬರೋದಿಲ್ಲ- ಏನೋ ಕನ್ನಡದಲ್ಲಿ ಒಂದೆರಡು ಅಕ್ಷರ..." "ಪರವಾಯಿಲ್ಲ ಸರ್" ಎಂದ ಒಬ್ಬ. "ಎಷ್ಟು ಕನ್ನಡ ಪ್ರೇಮ" ಎಂದುಸುರಿದ ಇನ್ನೊಬ್ಬ. ಆಗ ಪುಸ್ತಕದಲ್ಲಿ ಬರೆಯುತ್ತ ಅವರೆಂದರು- 'ಹೆಚ್- ಅಂದರೆ ಹಂಪನಕಟ್ಟೆ-ತಕ್ಕೊಳ್ಳಿ-ಹಂಪನಕಟ್ಟೆ.. ಭಟ್.. ಮಂಗಳೂರು..೨. ಏನೋ ಕನ್ನಡದಲ್ಲಿ ಸೇವೆ ಮಾಡೋಣ ಅಂತ ಆಸೆ.. ಈಗಾಗಲೇ ಒಂದೆರಡು ಪುಸ್ತಕ ಬಂದಿವೆ.. ಸದ್ಯದಲ್ಲಿ ಇನ್ನೊಂದು ಕೃತಿ.. "

—ರಾಘವ ಜವಳಿ, ತೀರ್ಥಹಳ್ಳಿ

ಅಲ್ಲಿ ವಿಶ್ವವಿದ್ಯಾಲಯುಗಳು ಗಾಂಧೀ ತತ್ವದ
ಅಭ್ಯಾಸ ಏರ್ಪಡಿಸಿವೆ

ಅಮೇರಿಕದಲ್ಲಿ ಗಾಂಧೀಜಿ

(೨)

ರಂಗನಾಥ ದಿವಾಕರ

೧೯೬೦ ರ ಅಗಸ್ಟ- ನವೆಂಬರ ತಿಂಗಳುಗಳಲ್ಲಿ ನಾನು ಯುರೋಪ್-ಅಮೇರಿಕಾ ದೇಶಗಳಿಗೆ ಹೋಗಿದ್ದೆನಷ್ಟೆ. ಆಗ ಅಲ್ಲಲ್ಲಿ ಆಗಾಗ್ಗೆ ಖಾಸಗಿ ಹಾಗೂ ಸಾರ್ವಜನಿಕವಾಗಿ ಗಾಂಧಿಯವರ ಬಗ್ಗೆ ಮಾತಾಡಬೇಕಾಗುತ್ತಿತ್ತು. ಆ ಸಂದರ್ಭದಲ್ಲಿ 'ಗಾಂಧೀ ತತ್ವಜ್ಞಾನ ಹಾಗೂ ತಂತ್ರ' (ಗಾಂಧಿಯನ್ ಫಿಲಾಸಫಿ ಆ್ಯಂಡ್ ಟೆಕ್‌ನಿಕ್) ಇವುಗಳಿಗೆ ದಿವ್ಯ ಭವ್ಯ ಭವಿಷ್ಯವಿದೆ, ಎಂದು ನಾನು, ಹೇಳುತ್ತಿದ್ದೆ. ಇಷ್ಟೇ ಅಲ್ಲ, 'ಈ ತತ್ವಜ್ಞಾನ ನಮ್ಮಲ್ಲಿ ಹುಟ್ಟಿದ್ದರೂ ನಿಮಗೊಮ್ಮೆ ಅದು ಒಗ್ಗಿದರೆ ಅದನ್ನು ನೀವೇ ಹೆಚ್ಚು ಬೆಳೆಸಬಲ್ಲಿರಿ. ಯಾಕಂದರೆ ನಿಮ್ಮಲ್ಲಿ ನವದೃಷ್ಟಿ, ಉತ್ಸಾಹ ಹಾಗೂ ಸಂಘಟನಾಸಾಮರ್ಥ್ಯ ಇವು ಹೆಚ್ಚಾಗಿವೆ,' ಎಂದು ಹೇಳುತ್ತಿದ್ದೆನು.

ಈ ಮಾತಿನ ಪ್ರತೀತಿಗಾಗಿಯೇ ಏನೋ ಎನ್ನುವಂತೆ ಈಚೆಗೆ ಅಮೇರಿಕೆಯ ಸಂಯುಕ್ತ ಸಂಸ್ಥಾನಗಳ ರಾಜಧಾನಿಯಾದ ವಾಶಿಂಗ್‌ಟನ್ನಿನಲ್ಲಿ, ಹಾವರ್ಡ್ (ಹಾರವರ್ಡ ಅಲ್ಲ) ವಿಶ್ವವಿದ್ಯಾಲಯದಲ್ಲಿ ಗಾಂಧೀ ತತ್ವಜ್ಞಾನ ಹಾಗೂ ತಂತ್ರ ಇವುಗಳನ್ನು ಕುರಿತು ಅಭ್ಯಾಸಕ್ರಮ ಏರ್ಪಡಿಸಲಾಗಿದೆ. ನಾಳೆ ನಮ್ಮ ಭಾರತದ ವಿದ್ಯಾರ್ಥಿಗಳು ಗಾಂಧೀ ವಿಷಯವಲ್ಲಿ ಉಚ್ಚ ಶಿಕ್ಷಣ ಪಡೆದು ಪದವಿಗಳನ್ನು (ಡಿಗ್ರಿಗಳು) ಹೊಂದಬೇಕಾದರೆ ಅಮೇರಿಕನ್ ವಿಶ್ವವಿದ್ಯಾಲಯುಗಳಿಗೆ ಹೋಗುವ ಪ್ರಸಂಗ ಬಂದರೆ ಆಶ್ಚರ್ಯವಲ್ಲ! ಯಾಕಂದರೆ ನಮ್ಮಲ್ಲಿಯ ಯಾವ ವಿಶ್ವವಿದ್ಯಾಲಯುದವರೂ ಈ ದೂರದೃಷ್ಟಿಯನ್ನು ತೋರಿಲ್ಲ. ಮೇಲಾಗಿ ಶಂಖದೊಳಗಿಂದ ಹಾಯ್ದು ಬಂದ ನೀರೇ 'ತೀರ್ಥ' ಎನಿಸುವಂತೆ ವಿದೇಶಿ ವಿಶ್ವವಿದ್ಯಾಲಯಗಳ ಪದವಿಗಳಿಗೇ ನಮ್ಮಲ್ಲಿ ಹೆಚ್ಚು ಮನ್ನಣೆಯಿದೆ. ಇನ್ನೂ ಕೂಡ ಸಂಸ್ಕೃತ, ವೇದ, ಇಂಡಾಲಜಿ (ಭಾರತದ ಬಗ್ಗೆ ಜ್ಞಾನ), ಭಾರತದ ಇತಿಹಾಸ ಇವುಗಳ ಉಚ್ಚಶಿಕ್ಷಣ ಪಡೆಯಲು ನಾವು ನಮ್ಮ ಮಕ್ಕಳನ್ನು ಪರದೇಶಗಳಿಗೇ ಕಳಿಸುತ್ತಿರುವೆವು.

೧೯೧೪-೧೬ ರ ಮಾತು. ನಾವು ಪುಣೆಯ ಫರ್ಗ್ಯುಸನ್ ಕಾಲೇಜದಲ್ಲಿ ಬಿ. ಏ. ವರ್ಗದಲ್ಲಿ ವೇದ, ಆಚಾರ್ಯರ ಭಾಷ್ಯ (ವೇದಾಂತ) ಮುಂತಾದವುಗಳನ್ನೂ ಕಲಿಯುತಿದ್ದೆವು. ಅವುಗಳನ್ನು ಕಲಿಸಲು ಜರ್ಮನ್ ವಿಶ್ವವಿದ್ಯಾಲಯದ ಪದವೀಧರರಾದ ಪ್ರೊ. ಗುಣೆ ಎಂಬವರೇ ಇದ್ದರು. ಹಳೇ ಪದ್ಧತಿಯಿಂದ ಕಲಿತ ಅಭ್ಯಂಕರ

ಶಾಸ್ತ್ರಿ ಎಂಬವರೂ ಒಬ್ಬರಿದ್ದರು. ಆದರೆ ಅವರಿಗೆ ತಕ್ಕ ಮನ್ನಣೆ ಇರಲಿಲ್ಲ. ಈಗಲೂ ಈ ಪರಿಸ್ಥಿತಿಯಲ್ಲಿ ವಿಶೇಷ ಬದಲಾವಣೆ ಆಗಿದೆ ಎಂದು ಹೇಳಲಿಕ್ಕಾಗುವುದಿಲ್ಲ.

ಇದಕ್ಕೆ ಕಾರಣವಿಲ್ಲದಿಲ್ಲ. ಪಾಶ್ಚಾತ್ಯರು ಪ್ರತಿಯೊಂದು ವಿಷಯದಲ್ಲಿಯೂ ಅತ್ಯಂತ ತೀವ್ರವಾದ ಜಿಜ್ಞಾಸೆಯನ್ನಿಟ್ಟುಕೊಂಡಿದ್ದಾರೆ; ವೈಜ್ಞಾನಿಕ ದೃಷ್ಟಿಯನ್ನು (ಸಾಯೆಂಟಿಫಿಕ್ ಅವುಟ್ ಲುಕ್) ಚಿಕಿತ್ಸಾಬುದ್ಧಿಯನ್ನು ಬೆಳೆಸಿಕೊಂಡು ಬಂದಿದ್ದಾರೆ; ಸಂಗೃಹೀತವಾದ ಜ್ಞಾನಕ್ಕೆ ವ್ಯವಸ್ಥಿತವಾದ ರೂಪವನ್ನು ಕೊಟ್ಟು ವರ್ಗೀಕರಿಸಿದ್ದಾರೆ. ಆದುದರಿಂದ ಭಾರತದ ವಿಷಯಗಳನ್ನು ಅಭ್ಯಸಿಸಬೇಕಾದರೂ ನಾವು ಅವರ ಭಾಷೆಯನ್ನು ಕಲಿಯಬೇಕಾಗುವುದು, ಅವರನ್ನೆ ಅವಲಂಬಿಸಬೇಕಾಗುವುದು. ಚಿನ್ನ ನಮ್ಮದಿದ್ದರೂ ಅದರ ಉಪಯೋಗವನ್ನು ನಾವು ಮಾಡಬೇಕಾಗಿದ್ದರೆ ಅಕ್ಕಸಾಲಿಗನ ಕಡೆಗೆ ಹೋಗೇ ತೀರಬೇಕು. ಅಲಂಕಾರ ಸಣ್ಣದಿರಲಿ ದೊಡ್ಡದಿರಲಿ, ಅಕ್ಕಸಾಲಿಗನು ಅವಶ್ಯ !

ವೇದಗಳು ನಮ್ಮವು, ಅವು 'ಅಪೌರುಷೇಯ' ಎಂದು ಹೇಳಿದರೆ ನಮ್ಮ ಕೆಲಸವಾಯಿತು ಎಂದು ಅನೇಕರು ತಿಳಿದಿದ್ದಾರೆ ! ಆದರೆ 'ಅಪೌರುಷೇಯ' ಅಂದರೇನು ? ಅವು ಆಕಾಶದಲ್ಲಿ ಒಡಮೂಡಿದವೊ, ದೇವತೆಗಳು ಋಷಿಗಳು ಮಗ್ಗುಲಲ್ಲಿ ತಂದು ಅವುಗಳನ್ನು ಮಡಗಿದರೊ, ಆದದ್ದಾದರೂ ಏನು ? ಅವುಗಳ ದೇಶ ಕಾಲ ಪರಿಸ್ಥಿತಿ ಏನು ? 'ಮಂತ್ರದರ್ಶನ' ಅಂದರೇನು ? ಇವುಗಳನ್ನೆಲ್ಲವನ್ನು ಪರಿಶೀಲಿಸುವುದು ಅವಶ್ಯ. ಇವೆಲ್ಲವನ್ನೂ ಪಾಶ್ಚಾತ್ಯರು ಮಾಡುವರು; ಇದು ಅವರ ಪದ್ಧತಿಯೇ ಆಗಿದೆ. ಕದಾಚಿತ್ ಗೋಕರ್ಣದ ಬ್ರಹ್ಮಶ್ರೀ ದೈವರಾತರ ಪರಿಚಯು ಪಾಶ್ಚಾತ್ಯ ಪಂಡಿತರಿಗೆ ಆದರೆ, ಅವರು ದರ್ಶಿಸಿದ ಋಕ್ಕುಗಳ ಅಭ್ಯಾಸವನ್ನು ಅವರು ಮಾಡಿದರೆ 'ಮಂತ್ರದರ್ಶನ' ದ ರಹಸ್ಯದ ಬಗ್ಗೆ ಅವರೊಂದು ದೊಡ್ಡ ಗ್ರಂಥವನ್ನೆ ಬರೆದುಬಿಡುವರು. ಪರಮಹಂಸ ರಾಮಕೃಷ್ಣರು ದಕ್ಷಿಣೇಶ್ವರದ ಒಬ್ಬ ಹುಚ್ಚ ಸಾಧು ! ಆದರೆ ಅವರ ಭಾವಾವೇಶ ಹಾಗೂ ಸಮಾಧಿಸ್ಥಿತಿ ಇವುಗಳನ್ನು ನೋಡಿ ಮಿಶನರಿಯವರು ಅವರ ಮಹತ್ವವನ್ನು ಜನಜನಿತವಾಗಿ ಹೇಳಿ ಹರಡಿದರು. ರಮಣ ಮಹರ್ಷಿಗಳ ಪರಿಚಯುವನ್ನು ಪಾಶ್ಚಾತ್ಯರಿಗೆ ಮಾಡಿಕೊಟ್ಟವನು ಪಾಲ್ ಬ್ರಂಟನ್. ಇರಲಿ.

ನಾನು ವಾಶಿಂಗ್ಟನ್ನಿನಲ್ಲಿದ್ದಾಗ ಹಾವರ್ಡ್ ವಿಶ್ವವಿದ್ಯಾಲಯಕ್ಕೆ ಭೆಟ್ಟಿ ಕೊಟ್ಟೆನು. ಅಲ್ಲಿ ನಿಗ್ರೋ ಜನರ ಪ್ರಾಬಲ್ಯವಿದೆ. ಸುಮಾರು ಐದು ಸಾವಿರ ವಿದ್ಯಾರ್ಥಿಗಳು ಅಲ್ಲಿ ಅಭ್ಯಾಸ ಮಾಡುತ್ತಿರುವರು. ಅಮೇರಿಕೆಯ ಫೆಡರಲ್ (ಕೇಂದ್ರ) ಸರಕಾರದವರೇ ಹೆಚ್ಚುಕಡಿಮೆ ಆ ವಿಶ್ವವಿದ್ಯಾಲಯಕ್ಕೆ ಬೇಕಾದ ಹಣವನ್ನು ಪೂರೈಸುತ್ತಿರುವರು. ಆ ವಿಶ್ವವಿದ್ಯಾಲಯದಲ್ಲಿ ಮೊದಲಿನಿಂದಲೂ ಗಾಂಧೀಜಿಯವರ ಬಗ್ಗೆ ಆದರಭಾವವಿದೆ. ಅದರ ಅಧ್ಯಕ್ಷರಾದ ಡಾ. ಮೊಡಿಕಾಯ್ ಜಾನ್ಸನ್ ಎಂಬವರು ೧೯೪೯ ರಲ್ಲಿ ದಿಲ್ಲಿ ಹಾಗೂ ಸೇವಾಗ್ರಾಮದಲ್ಲಿ ನಡೆದ ಜಾಗತಿಕ ಶಾಂತಿ ಸಮ್ಮೇಲನಕ್ಕೆ (ಪ್ಯಾಸಿಫಿಸ್ಟ್ ಕಾನ್‌ಫರನ್ಸ್) ಆಗಮಿಸಿದ್ದರು. ಆಗ ನಾನು ಅವರನ್ನು ಭೆಟ್ಟಿಯಾಗಿದ್ದೆ. ಒಂದು ಚಿಕ್ಕ ಗುಂಪಿನ ಸಭೆಯಲ್ಲಿ (ಗ್ರೂಪ್ ಮಿಟಿಂಗ್) ಅವರು ಅಂದದ್ದೇನಂದರೆ, 'ಗಾಂಧೀಜಿಯವರ ವ್ಯಕ್ತಿಮತ್ವದ ಮಹತ್ವವನ್ನು ತಿಳಿದುಕೊಳ್ಳಲು ಮೂರು ಮಾತುಗಳು ಸಾಕು: ೧) ಅವರು ಲಕ್ಷ್ಮಿ ಎಂಬ ಅಸ್ಪೃಶ್ಯ ಮಗುವನ್ನು ಮಗಳಾಗಿ ಸಾಕಿದ್ದು; ೨) ಭಾರತದ ಸಂವಿಧಾನದ ಕರಡನ್ನು ತಯಾರಿಸಲು ಕೇಂದ್ರ ಮಂತ್ರಿ ಡಾ. ಅಂಬೇಡಕರರನ್ನು (ಅಸ್ಪೃಶ್ಯ) ನೇಮಿಸಿದ್ದು ; ೩) ಸಂವಿಧಾನದಲ್ಲಿ ಅಸ್ಪೃಶ್ಯತಾ ನಿವಾರಣೆಗೆ ಮುಖ್ಯ ಸ್ಥಾನವನ್ನು ಕೊಡಬೇಕೆಂದು ನಿಶ್ಚಯಿಸಿದ್ದು.

ಅದೇ ಆ ಹಾವರ್ಡ್ ಯುನಿವರ್ಸಿಟಿಗೆ ಈಗ ಡಾ. ವಿಲಿಯಮ್ ಸ್ಟುವರ್ಟ್ ನೆಲ್ಸನ್ ಎಂಬವರು ಡೀನರಾಗಿದ್ದಾರೆ (ಕಾರ್ಯಾಧ್ಯಕ್ಷರು). ಅವರು ಅದರ ಉಪಾಧ್ಯಕ್ಷರೂ ಹೌದು. ಅವರು ಮೂರು ಸಾರೆ (ಗಾಂಧೀಜಿಯವರಿದ್ದಾಗ ೧೯೪೬ ರಲ್ಲಿ) ಭಾರತಕ್ಕೆ ಬಂದು ಅವರೊಡನೆ ಕೆಲಸ ಮಾಡಿ ಹೋಗಿರುವರು. ೧೯೫೮ ರಲ್ಲಿ ಮೂರು ತಿಂಗಳು ಅವರು ಇಲ್ಲಿದ್ದರು. ಗಾಂಧೀಸ್ಮಾರಕ ನಿಧಿಯವರು ಅಭ್ಯಾಸಕ್ಕಾಗಿ ಅವರಿಗೆ ಅವಶ್ಯವಿದ್ದ ಸೌಕರ್ಯಗಳನ್ನು ಒದಗಿಸಿಕೊಟ್ಟರು. ಅವರು ಹಾಗೂ ನಾನು ದಿಲ್ಲಿಯಲ್ಲಿ ಹಲವು ಕಾಲ ಒತ್ತಟ್ಟಿಗೆ ಇದ್ದುದಲ್ಲದೆ ಕೇರಳದ ಹಳ್ಳಿಗಳಲ್ಲಿ ಕೂಡಿ ಸಂಚರಿಸಿದ್ದುಂಟು, ಒಂದೇ ವೇದಿಕೆಯಿಂದ ಮಾತಾಡಿದ್ದುಂಟು. ಅವರು ಈಗ ಗಾಂಧೀ ತತ್ವಜ್ಞಾನವನ್ನು ಕುರಿತು ಒಂದು ಗ್ರಂಥವನ್ನು ಬರೆಯುತ್ತಿರುವರು.

ಹಾವರ್ಡ್ ವಿಶ್ವವಿದ್ಯಾಲಯವನ್ನು ಎರಡು ಸಾರೆ ಸಂದರ್ಶಿಸಿದಾಗ ನಾನು ಡಾ. ನೆಲಸನ್ನ್ ಇವರೊಡನೆ ಸುಮಾರು ಎರಡು ಗಂಟೆ ಕಾಲ ವಿಚಾರ ವಿನಿಮಯ ಮಾಡಿದೆನು. ಭಾರತದಲ್ಲಿ ಹಲವು ವಿದ್ಯಾರ್ಥಿಗಳು ಗಾಂಧೀ ತತ್ವಜ್ಞಾನದ ಅಭ್ಯಾಸ ಮಾಡುತಿರುವುದನ್ನು, ವಿಶ್ವವಿದ್ಯಾನಿಲಯಗಳಲ್ಲಿ ಗಾಂಧೀಭವನಗಳ ನಿರ್ಮಾಣದ ಕಾರ್ಯಕ್ರಮವನ್ನು, ಮತ್ತು ಗಾಂಧಿ ಶಾಂತಿಪ್ರತಿಷ್ಠಾನದ (ಗಾಂಧಿ ಪೀಸ್ ಫಾವುಂಡೇಶನ್) ಸ್ಥಾಪನೆಯ ವಿಚಾರವನ್ನು ಅವರಿಗೆ ವಿವರಿಸಿ ಹೇಳಿದೆನು. ನಿಮ್ಮ ವಿಶ್ವವಿದ್ಯಾಲಯದಲ್ಲಿ ಗಾಂಧೀ ಅಭ್ಯಾಸಕ್ಕೆ ಯಾವ ಸ್ಥಾನ ಕೊಡುವುದು ಸಾಧ್ಯ ಎಂದು ನೋಡಬಹುದು ಎಂದು ಸಹಜವಾಗಿ ನುಡಿದೆನು. ಆಗ ಅವರು ಹೆಚ್ಚು ಮಾತಾಡದೆ, ನೋಡುವ, ಎಂದು ಮಾತ್ರ ಅಂದರು. ಅವರ ಸ್ವಭಾವವೆ ಹಾಗೆ ಇರುವುದೋ ಏನೋ. ಭಾರತದ ಭವಿಷ್ಯದ ಬಗ್ಗೆ ಹ್ಯಾರಿಸನ್ ಇವರು ಬರೆದ ಹೊಸ ಪುಸ್ತಕವವನ್ನು ನೀವು ಓದಿರುವಿರೊ ಎಂದು ನನ್ನನ್ನು ಕೇಳಿದರು. ನೋಡಿದ್ದೇನೆ, ಓದಿಲ್ಲ, ನಾನು ಕೊಳ್ಳಬೇಕಾಗಿದೆ, ಎಂದೆನು. ಅವರು ನೋಡುವ, ಎಂದರು. ನಾನು ಹೊಟೆಲ್ಲಿಗೆ ಬಂದು ಮುಟ್ಟುವಷ್ಟರಲ್ಲಿ ಆ ಪುಸ್ತಕ ನನ್ನ ಮೇಜಿನ ಮೇಲೆ ಬಂದುಬಿಟ್ಟಿತ್ತು.

ಹಾವರ್ಡ್ ವಿಶ್ವವಿದ್ಯಾಲಯದ 'ಧರ್ಮ ವಿಭಾಗ'ದ ಗ್ರಾಜ್ಯುಯೇಟ್ ಅಭ್ಯಾಸಕ್ರಮದಲ್ಲಿ 'ಗಾಂಧೀ ತತ್ವಜ್ಞಾನ ಹಾಗೂ ತಂತ್ರ' ಎಂಬುದು ಸೇರಿಸಲ್ಪಟ್ಟಿದೆ. ಇದನ್ನು ಪ್ರಾರಂಭಿಸುವ ಉದ್ದೇಶವೇನು, ಎಂದು 'ವಾಶಿಂಗಟನ್ ಪೋಸ್ಟ್' ಎಂಬ ಪ್ರಸಿದ್ಧ ಪತ್ರಿಕೆಯವರು ಕೇಳಿದಾಗ ಡಾ. ನೆಲ್ಸನ್ ಇವರು ಹೇಳಿದ್ದೇನಂದರೆ, ಗಾಂಧೀಜಿ ಒಂದು ಹೊಸ ಮಾರ್ಗದಿಂದ ತಮ್ಮ ದೇಶಕ್ಕೆ ಸ್ವಾತಂತ್ರ್ಯವನ್ನು ಗಳಿಸಿಕೊಟ್ಟದ್ದಲ್ಲದೆ, ಸಾಮಾಜಿಕ ಆರ್ಥಿಕ ಅನ್ಯಾಯಗಳನ್ನು ತೊಡಕು-ತೊಂದರೆಗಳನ್ನು ಆ ಮಾರ್ಗದಿಂದಲೆ ಬಿಡಿಸಬಹುದೆಂಬುದನ್ನು ಅವರು ತೋರಿಸಿಕೊಟ್ಟಿದ್ದಾರೆ. ಅಲ್ಲದೆ ನುಕ್ರುಮಾ ಇವರು ಇದೇ ಮಾರ್ಗದಿಂದ ಘಾನಾಕ್ಕೆ ಸ್ವಾತಂತ್ರ್ಯವನ್ನು ದೊರಕಿಸಿಕೊಟ್ಟರು. ದ. ಆಫ್ರಿಕೆಯ ಜನರು ಇದೇ ರೀತಿ ಈಗ ಅಲ್ಲಿಯ ಸರಕಾರದ ವರ್ಣದ್ವೇಷದ ನೀತಿಯ ವಿರುದ್ಧ ಹೋರಾಡುತಿರುವರು. ಅಮೇರಿಕೆಯ ಮೊಂಟಗೋಮರಿಯಲ್ಲಿ ಡಾ. ಕಿಂಗ್ ಇವರು ಇದೇ ನೀತಿಯನ್ನು ಅನುಸರಿಸಿ ಅಲ್ಲಿಯ ಸಾರ್ವಜನಿಕ ಬಸ್ಸುಗಳಲ್ಲಿದ್ದ ವರ್ಣಪಕ್ಷಪಾತವನ್ನು ತೊಡೆದು ಹಾಕಿದರು. ಗ್ರೀನ್ಸ್‌ಬರೋ ಎಂಬಲ್ಲಿಯ ಸಾರ್ವಜನಿಕ ಸ್ಟೋರಿನಲ್ಲಿದ್ದ ವರ್ಣಪಕ್ಷಪಾತವನ್ನು ವಿದ್ಯಾರ್ಥಿಗಳು ಇದೇ ಮಾರ್ಗದಿಂದ ಅಳಿಸಿದರಲ್ಲದೆ ಪರಿಣಾಮತಃ ಈಗ ನೂರಾರು ಸ್ಟೋರುಗಳವರು ತಮ್ಮ ಪಕ್ಷಪಾತ ಬುದ್ಧಿಯನ್ನು ಬಿಟ್ಟುಬಿಟ್ಟಿದ್ದಾರೆ. ಮೇಲಾಗಿ ಈ ನೀತಿಯು ಕ್ರಿಶ್ಚನ್ ಬಾಯ್‌ಬಲ್ಲಿನಲ್ಲಿಯ 'ಸರ್‌ಮನ್ ಆನ್ ದಿ ಮೌಂಟ್'ನ ನೀತಿಯನ್ನೆ ಸಮರ್ಥಿಸುವುದು.

ಅಲ್ಲದೆ, ಟಾಲಸ್ಟಾಯ್, ಥೋರೊ ಮುಂತಾದವರು ಇದನ್ನೆ ಪ್ರತಿಪಾದಿಸಿದರು. ಆದುದರಿಂದ ಇದರ ಅಭ್ಯಾಸವು ಈಗ ಅತ್ಯವಶ್ಯ.'

ಡಾ. ನೆಲ್ಸನ್ ಇವರು ಏರ್ಪಡಿಸಿದ ಅಭ್ಯಾಸಕ್ರಮವು ಕೂಡ ಬಹಳ ವ್ಯಾಪಕವಿರುವುದು. ಅದರಲ್ಲಿಯ ವಿಷಯಗಳು ಸಾಮಾನ್ಯತಃ ಹೀಗೆ ಇವೆ: -

೧. ವೇದೋಪನಿಷತ್ತು, ಬುದ್ಧ ಮೊದಲು ಮಾಡಿಕೊಂಡು ಬಾಯ್‌ಬಲ್ಲನ್ನೊಳಗೊಂಡು, ಥೋರೋ ಮುಂತಾದವರ ವರೆಗೆ ಗಾಂಧೀಜಿಯವರ ಮನಸಿನ ಮೇಲೆ ಆದ ಸಂಸ್ಕಾರಗಳು; ೨. ನಾನ್-ವ್ಹಾಯೋಲನ್ಸ್ (ಅಹಿಂಸೆ) ಇದರ ಅರ್ಥವ್ಯಾಪಕತೆ; ೩. ಇದರ ರೂಪಗಳು ಹಾಗೂ ಆಚರಣೆ; ೪. ಆರ್ಥಿಕ ಸಾಮಾಜಿಕ ಅನ್ಯಾಯಗಳನ್ನು ತೊಡೆದು ಹಾಕಲು ಇದರ ಉಪಯೋಗ; ೫. ಕಾಯದೆ ಕಾನೂನುಗಳಿಂದ ಅಥವಾ ಬಲವಂತದಿಂದ ಆಗಲಾರದ ಸಾಮಾಜಿಕ ಸುಧಾರಣೆಗಳನ್ನು ಮಾಡುವ ಶಕ್ಯಾಶಕ್ಯತೆ ಇತ್ಯಾದಿ ಇತ್ಯಾದಿ.

ಈ ವಿಷಯದ ಮಟ್ಟಿಗೆ ಇದೊಂದು ಅತ್ಯಂತ ವ್ಯಾಪಕ ಉಪಕ್ರಮ ಎಂದೇ ನಾವು ಹೇಳಬೇಕಾಗುವುದು. ★

ಆಲಸ್ಯಮೀಮಾಂಸೆ

ನನಗೆ ಅತ್ಯಂತ ಪ್ರಿಯವಾದ, ಮಡದಿಯೆಂಬ ಬಂಗಾರ ಭಾವನೆಗಿಂತ ಪ್ರಿಯವಾದ ಒಂದು ಕರ್ಮವಿಶೇಷವಿದೆ. ಅದು ಯಾವುದೆಂದು ಹೇಗೆ ಹೇಳಲಿ? ಹೇಳಲೇಬೇಕು. ಅದೇ ಮೈಗಳ್ಳತನ! ಕೆಲಸ ಮಾಡುವುದು ನನ್ನ ಆಸೆ; ಅದೇ ನನ್ನ ಗುರಿ. ಆದರೆ ಆದನ್ನು ನಡೆಯಗೊಡದ ಭಾವನೆಗಳು ನನ್ನ ರಕ್ಷಣೆಗೆ ಸದಾ ಬೆಂಬಲವಾಗಿವೆ. ಅಲ್ಲಿ ನನ್ನ 'ಕೈಯಲ್ಲಾಗ'ದ ಎಂಬ ಆರೋಪ ಸದಾ ನಿಷಿದ್ಧ. ಹಾಗೆ ಕೇಳಿದರೆ ನನ್ನ ಕೈಯಲ್ಲಾಗದ್ದೆಂಬುದು ಯಾವುದೂ ಇಲ್ಲ. ನನ್ನ ಸಾಮರ್ಥ್ಯ ಅಂತಹದು. ಆದರೆ ಆದನ್ನು ಮಾಡದಿರುವ ಸಂಯಮವಿಶೇಷವೇ ನನ್ನ ಪೌರುಷ! ಮಾಡಲಾಗದ ಪರಿಸ್ಥಿತಿಯ ಭೀಕರ ಅನಿವಾರ್ಯತೆಯೇ ನನ್ನ ಬಲ. ಮಾಡಬೇಕಾದುದನ್ನು ಮಾಡಿ ಮುಗಿಸಿ ಕೈಚೆಲ್ಲಿ ಕುಳಿತಿರಬಾರದೆಂಬುದೇ ನನ್ನ ಹಂಬಲ. ಈ ನಿಷ್ಕರ್ಮ ಶಿಶುವನ್ನು ನನ್ನ ಬಾಹುದ್ವಯದಲ್ಲಿ ಸಾಕಿಸಲಹಿ, ಬೆಳೆಸಿಕೊಂಡು, ಸದಾ ಜಾಗ್ರತನಾಗಿ, ನೆಪಗಳನ್ನು ಸೃಷ್ಟಿಸುತ್ತ ಅವುಗಳಿಂದ ದಣಿದೂ ಕರ್ಮಕುಶಲಿಯಾಗಿ ಆದನ್ನು ಪಾಲಿಸುವುದು, ವಿಮುಖಕರ್ಮಿಯಾಗಿರುವುದು — ನನ್ನ ಜೀವನದ ಅರ್ಥವಿಶೇಷ. ಮುಗಿವು ಎಂಬುದು ಈ ಮೈಗಳ್ಳತನಕ್ಕೆ ಎಂದೂ ಬರಬಾರದ್ದೆಂದೇ ನನ್ನ ಚಡಪಡಿಕೆ. 'ಸಾವು' ಎಂಬ ಒಂದೇ ಕ್ರಿಯೆಯಿಂದ ನನ್ನ ಈ ನಿಷ್ಕರ್ಮಯೋಗವು ಕೊನೆಗಂಡೀತು!

ನನ್ನನ್ನು ನಾನು ಅರಿತ ಒಂದೇ ಒಂದು ಮುಖ ಈ ಮೈಗಳ್ಳತನ. ಒಂದು ಕೆಲಸಕ್ಕೆ ಸನ್ನದ್ಧನಾಗುತ್ತೇನೆ, ಅದನ್ನು ತಡೆಯಲು ವಿಧಿ ಧಾವಿಸಲಿ— ಎಂದು ಆರಾಧನೆ ಗೈಯುತ್ತೇನೆ. ನನ್ನ ಶ್ರದ್ಧೆ ಅಚಲ— ಪರಿಶುದ್ಧವಾಗಿರುವುದರಿಂದ ಅಂಥ ಕಾರ್ಯಕಾರಣಗಳು ಕೂಡಲೆ ಧಾಳಿಗೈಯುತ್ತವೆ. ನನ್ನ ಗುರಿ ಸಿದ್ಧಿಸುತ್ತದೆ. ಇದರಿಂದ ಬಾಳು ಸವೆಯದೆ ನವೋನವಾಗಿ ನಳನಳಿಸುತ್ತದೆ. ಸಾವು ಸಾವಿರ ಮೈಲು ದೂರ ಸರಿಯುತ್ತದೆ.

— ದ. ಬಾ. ಕುಲಕರ್ಣಿ

ಮಾತಿನ ಪ್ರವಾಹದಲ್ಲಿ ಮಸೂದೆಗಳು ಕೊಚ್ಚಿ ಹೋಗುತ್ತವೆ.

ಫಿಲಿಬಸ್ಟರ್ ಅಂದರೇನು?



ಜಿ. ಜಿ. ಹೆಗಡೆ

ನೀವು ಸಂಸತ್ತಿನ ಅಥವಾ ವಿಧಾನ ಸಭೆಯ ಒಬ್ಬ ಸದಸ್ಯರು. ಸಭೆಯ ಮುಂದೆ ಒಂದು ವಿಧೇಯಕ ಬಂದಿದೆ. ಸಭೆಯ ಬಹುಸಂಖ್ಯಾಕ ಸದಸ್ಯರು ಅದಕ್ಕೆ ಅನುಕೂಲರಾಗಿರುವುದರಿಂದ ಅದು ಪಾಸಾಗುವ ಸಂಭವ ಕಾಣಿಸುತ್ತದೆ. ಆದರೆ ನಿಮಗೆ ಆ ಮಸೂದೆ ಇಷ್ಟವಿಲ್ಲ. ನೀವೇನು ಮಾಡುವಿರಿ? ಅದನ್ನು ವಿರೋಧಿಸಿ ಮಾತಾಡುವಿರಿ. ನಿಮ್ಮ ವಾಗ್ವೈಖರಿಯನ್ನೆಲ್ಲ ಉಪಯೋಗಿಸಿ, ಅದನ್ನು ಪಾಸು ಮಾಡಿದರೆ ಲೋಕವೇ ತಲೆಕೆಳಗಾದೀತೆಂದು ವಾದಿಸುವಿರಿ. ಮಾತಾಡುತ್ತಲೇ ಹೋಗುವಿರಿ. ಆದರೆ ಸಭಾಧ್ಯಕ್ಷರು ಗಂಟೆ ಬಾರಿಸುವರು. ನಿಮಗೆ ಕೊಟ್ಟ ಸಮಯ ತೀರಿತೆಂದು ಸೂಚಿಸಿ ಭಾಷಣಕ್ಕೆ ತಡೆಹಾಕುವರು. ಬಹುಮತವು ವಿಧೇಯಕಕ್ಕೆ ಅನುಕೂಲವಾಗಿದ್ದರೆ ಅದನ್ನು ಪಾಸಾಗದಂತೆ ಮಾಡಲು ನಿಮ್ಮ ಹತ್ತಿರ ಏನೂ ಉಪಾಯವಿಲ್ಲ.

ಆದರೆ ಅಮೇರಿಕದಲ್ಲಿ ಹಾಗಲ್ಲ. ನಿಮಗೆ ಬಹುಮತದ ಬೆಂಬಲವಿಲ್ಲದಿದ್ದರೂ ನಿಮಗೆ ಬೇಡವಾದ ವಿಧೇಯಕವು ಪಾಸಾಗದಂತೆ ತಡೆಯಲು ಅಥವಾ ಕನಿಷ್ಠ ಪಕ್ಷ ಅದರ ಪ್ರಗತಿಯನ್ನು ತಡೆಯಲು ಸಾಧ್ಯವಿದೆ. ನೀವು "ಫಿಲಿಬಸ್ಟರ್" ತಂತ್ರವನ್ನುಪಯೋಗಿಸಿದರೆ ತೀರಿತು. ಇದಕ್ಕೆ ಬೇಕಾದದ್ದೆಂದರೆ ದೃಢ ನಿರ್ಧಾರ, ಬಲವಾದ ಕಂಠ ಮತ್ತು ಶ್ವಾಸಕೋಶಗಳು ಮತ್ತು ಗಟ್ಟಿಯಾದ ಕಾಲುಗಳು ಇಷ್ಟೇ. ನೀವು ಎದ್ದು ನಿಂತು ಭಾಷಣ ಮಾಡತೊಡಗುತ್ತೀರಿ. ಮಾತಾಡುತ್ತಲೇ ಹೋಗುತ್ತೀರಿ. ತಾಸುಗಳು ಕಳೆಯುತ್ತವೆ. ರಾತ್ರಿಯಾಗುತ್ತದೆ. ಭಾಷಣ ಮುಗಿಯುವುದಿಲ್ಲ. ಸದಸ್ಯರಿಗೆ ಸಾಕಾಗುತ್ತದೆ. ಇತರ ಮಹತ್ವದ ವಿಧೇಯಕಗಳೂ ವ್ಯವಹಾರಗಳೂ ತಡೆದುಬೀಳುತ್ತವೆ. ಕೆಲ ವೇಳೆ ಚರ್ಚಾಸ್ಪದವಾದ ವಿಧೇಯಕ ಅಥವಾ ಗೊತ್ತುವಳಿ ಹಾಗೆಯೆ ಉಳಿದುಹೋಗುತ್ತದೆ.

೧೮೯೧ ನೇ ಇಸವಿ. ಅಮೇರಿಕದ ಸಂಸತ್ತಾದ ಕಾಂಗ್ರೆಸ್‌ನ ಚುನಾವಣೆಗಳನ್ನು ಕೇಂದ್ರ ಸರ

ಕಾರದ ಮೇಲ್ವಿಚಾರಣೆಯಲ್ಲಿ ನಡೆಸಬೇಕೆಂಬ ಒಂದು ವಿಧೇಯಕ ಅಮೇರಿಕನ್ ಸಿನೇಟಿನ ಮುಂದೆ ಬಂದಿತ್ತು. ಇದರಿಂದ ಕೇಂದ್ರದ ಚುನಾವಣೆಗಳ ಮೇಲೆ ರಾಜ್ಯ ಸರಕಾರಗಳ ಕೈವಾಡ ನಡೆಯದಂತಾಗುತ್ತಿತ್ತು. ಆದರೆ ನಿಗ್ರೋಗಳ ಮತಾಧಿಕಾರವನ್ನು ಏನಾದರೊಂದು ನೆವದಿಂದ ಕಸಿದುಕೊಳ್ಳುತ್ತಿದ್ದ ದಕ್ಷಿಣದ ರಾಜ್ಯಗಳಿಂದ ಬಂದ ಸದಸ್ಯರಿಗೆ ಈ ಮಸೂದೆ ಮೆಚ್ಚಿಕೆಯಾಗಲಿಲ್ಲ. ಕೇಂದ್ರ ಸರಕಾರ ಚುನಾವಣೆ ನಡೆಸಿದರೆ ನಿಗ್ರೋಗಳು ಮತ ಕೊಡಬಹುದೆಂದು ಅವರಿಗೆ ಅಂಜಿಕೆಯಾಯಿತು. ಪಶ್ಚಿಮ ವರ್ಜೀನಿಯದಿಂದ ಆರಿಸಿ ಬಂದ ಸಿನೇಟರ್ ಚಾರ್ಲಸ್ ಫಾಕ್ನರರು ಅವರ ನಾಯಕತ್ವ ವಹಿಸಿದರು. ವಿಧೇಯಕದ ಮೇಲೆ ಅವರು ಫಿಲಿಬಸ್ಟರ್ ತಂತ್ರ ಪ್ರಯೋಗಿಸಿದರು. ಅವರು ಅದರ ಬಗ್ಗೆ ಹನ್ನೊಂದೂವರೆ ಗಂಟೆಗಳವರೆಗೆ ಮಾತಾಡಿದರು. ಅನಂತರ ಅವರು ಅಣಿಗೊಳಿಸಿದ್ದ ಫಿಲಿಬಸ್ಟರ್ ತಂಡದವರಲ್ಲಿ ಒಬ್ಬೊಬ್ಬರೇ ವೇದಿಕೆಯನ್ನೇರಿ ಭಾಷಣ ಕುಟ್ಟಿದರು. ಒಂದು ತಿಂಗಳ ವರೆಗೆ ಫಿಲಿಬಸ್ಟರ್ ಸಾಗಿತು. ಕೊನೆಗೂ ವಿಧೇಯಕ ಪಾಸಾಗಲೇ ಇಲ್ಲ!

ಫಿಲಿಬಸ್ಟರ್ ಎಂಬುದು ಅಮೇರಿಕನ್ ರಾಜಕಾರಣಿಯ ಬತ್ತಳಿಕೆಯಲ್ಲಿರುವ ಅತಿ ಭಯಂಕರ ಮತ್ತು ಪ್ರದರ್ಶನಾತ್ಮಕವಾದ ಒಂದು ಅಸ್ತ್ರ. ಅದರ ಕೊನೆಯಿರದ ಮಾತಿನ ಪ್ರವಾಹದಲ್ಲಿ ಎಷ್ಟೋ ಮಹತ್ವದ ವಿಧೇಯಕಗಳು ತೇಲಿ ಹೋಗಿವೆ, ಎಷ್ಟೋ ವಿನಿಯೋಗಗಳು ತಡೆದು ಬಿದ್ದಿವೆ, ಎಷ್ಟೋ ಸಲ ಅದರಿಂದಾದ ವಿಲಂಬದಿಂದ ವಿಶೇಷ ಅಧಿವೇಶನಗಳನ್ನು ಕರೆಯಬೇಕಾಗಿ ಬಂದಿದೆ. ಅದು ವಿಧಾನ ವ್ಯವಹಾರವನ್ನು ಒಂದು ಗೊಂದಲಪುರವಾಗಿ ಮಾಡಿದೆ.

"ಫಿಲಿಬಸ್ಟರ್" ಶಬ್ದ ಸ್ಪಾನಿಶ್ ಮೂಲದ್ದು. ಅದರ ಮೂಲಾರ್ಥ ದರೋಡೆ ಎಂದು. ಅನಂತರ ಅದಕ್ಕೆ ಒಟ್ಟಿನ ಮೇಲೆ ಸರಕಾರಕ್ಕೆ ಅಡ್ಡಿಯೊಡ್ಡುವುದೆಂಬ ಅರ್ಥ ರೂಢವಾಗಿ ಕೊನೆಗೆ ಮಾತುಮಾತು ಪ್ರಸಂಗದಿಂದ ಶಾಸನ ಕಾರ್ಯಕ್ಕೆ ಆತಂಕ ತರುವುದೆಂಬ ಅರ್ಥ ಅಮೇರಿಕದಲ್ಲಿ ಪ್ರಚಲಿತವಾಯಿತು.

ಫ್ರಾಂಕಿನ್ ರೂಜವೆಲ್ಟರು ಅಧ್ಯಕ್ಷರಾಗಿದ್ದಾಗಿನ ಅವಧಿಯಲ್ಲಿ ಅಮೇರಿಕದಲ್ಲಿ ಫಿಲಿಬಸ್ಟರಿನ ಹಬ್ಬವೇ ಹಬ್ಬವಾಗಿತ್ತು. ಅವರು ಮಂಡಿಸಿದ ಪ್ರಗತಿಪರ ಶಾಸನಗಳು ಸೇರದ ಅನೇಕ ಪ್ರತಿಗಾಮಿ ಸದಸ್ಯರು ಈ ತಂತ್ರವನ್ನು ಪ್ರಯೋಗಿಸುತ್ತಿದ್ದರು.

ಒಂದು ಐತಿಹಾಸಿಕ ಪ್ರಸಂಗ ೧೯೩೫ ರಲ್ಲಿ ನಡೆಯಿತು. ರೂಜವೆಲ್ಟರು ಪ್ರೇರಿಸಿದ ರಾಷ್ಟ್ರೀಯ ಔದ್ಯೋಗಿಕ ಪುನರುಜ್ಜೀವನ ವಿಧೇಯಕವನ್ನು ವಿರೋಧಿಸಲು, ತುಂಬಿದ ಸಿನೇಟ್ ಸಭೆಯಲ್ಲಿ ಲುಯಿಸಿಯಾನದ ಸದಸ್ಯ ಹ್ಯೂಯಿ ಲಾಂಗರು ಜೂನ್ ೧೨ ರಂದು ಮಧ್ಯಾಹ್ನ ೧೨-೧೫ ಕ್ಕೆ ವೇದಿಕೆಯ ಮೇಲೇರಿದರು. ಇತಿಹಾಸದಲ್ಲೇ ಅತಿ ಮಹಾನ್ ಭಾಷಣವನ್ನು ಮಾಡುವುದಾಗಿ ಸೂಚನೆ ಕೊಟ್ಟು ಅವರು ಭಾಷಣ ಪ್ರಾರಂಭಿಸಿದಾಗಲೇ ಬರಲಿರುವ ಅಗ್ನಿಪರೀಕ್ಷೆಯ ಕಲ್ಪನೆ ಸದಸ್ಯರಿಗೆ ಬಂತು. ಗಡಿಯಾರವು ಗಂಟೆಗಳನ್ನು ಗುರುತಿಸುತ್ತಾ ಹೋದಂತೆ ರಾತ್ರಿಯಾಯಿತು. ಲಾಂಗರ ಭಾಷಣ ನಿಲ್ಲಲಿಲ್ಲ. ಕೆಲ ಸದಸ್ಯರು ಕುಳಿತಲ್ಲೆ ತೂಕಡಿಸಿದರು, ಕೆಲವರು ಎದ್ದು ಹೋದರು. ಲಾಂಗರು ಒಂದೊಂದಾಗಿ ಹಾಲಿನ ಲೋಟಗಳನ್ನು ಬರಿದು ಮಾಡುತ್ತ ಗುಡುಗಿದರು.

ಅವರ ಭಾಷಣ ಒಟ್ಟು ೧೫ ಗಂಟೆ ೩೫ ನಿಮಿಷ ಸಾಗಿತು. ಆ ನಡುವೆ ೧೫ ಲೋಟ ಹಾಲು ಕುಡಿದು ೧,೫೦,೦೦೦ ಶಬ್ದಗಳನ್ನು ಅವರು ಮಾತಾಡಿದ್ದರು. ಅದನ್ನು ಮುದ್ರಿಸುವ ವೆಚ್ಚವೇ ರೂ. ೨೦,೦೦೦ ದಷ್ಟಾಯಿತು.

ಫಿಲಿಬಸ್ಟರ್ ಭಾಷಣಕಾರರು ಏನನ್ನು ಮಾತಾಡುತ್ತಾರೆ, ಅಷ್ಟುದ್ದಕ್ಕೆ? ಅಂಥ ವಿವೇಕದ ಮಾತನ್ನೇನೂ ಅವರು ಆಡುವುದಿಲ್ಲ. ಎಷ್ಟೋ ವೇಳೆ ವಿಷಯಕ್ಕೆ ಸಂಬಂಧಿಸದಿರುವ


ಹಳದಿ
LUX
Yellow
ಹಸುರು
LUX
Green
ನೀಲಿ
LUX
Blue
ನಸುಗೆಂಪು
LUX
Pink
ಕಾಮನಬಿಲ್ಲಿನ ನಾಲ್ಕು
ಬಣ್ಣಗಳಲ್ಲಿ ನನ್ನ ಲಕ್ಸ್
-ಹೌದು, ಬಿಳಿಬಣ್ಣದಲ್ಲಿ
ಕೂಡ ಇದೆ'
ಎಂದು ಅನ್ನುತ್ತಾಳೆ
ಎಂ. ಎನ್. ರಾಜಂ
LTS. 82-X29 KN
ಹಿಂದುಸ್ಥಾನ್ ಲೀವರ್ ಅವರ

ಪುಸ್ತಕಗಳ ಅವತರಣಿಕೆಗಳು, ಲೇಖಗಳು, ಕವಿತೆಗಳನ್ನು ಕೂಡ ಅವರು ಓದಿ ಕಾಲ ಕಳೆಯುತ್ತಾರೆ!

ಫಿಲಿಬಸ್ಟರ್ ಹೆಸರು ಹೊಸತಾದರೂ ತಂತ್ರ ಹೊಸದೆಂದಲ್ಲ. ಶಾಸನ ರಚನೆಯಲ್ಲಿ ಸದಸ್ಯರಿಗೆ ಅಪರಿಮಿತವಾದ ಚರ್ಚಾಸ್ವಾತಂತ್ರ್ಯವಿರಬೇಕೆಂಬ ತತ್ವದ ದುರುಪಯೋಗದಿಂದ ಹುಟ್ಟಿದ ಈ ತಂತ್ರವನ್ನು ಕ್ರಿಸ್ತ ಪೂರ್ವದಲ್ಲಿ ರೋಮನ್ ಸಿನೇಟಿನಲ್ಲಿ ಜೂಲಿಯಸ್ ಸೀಜರ್ ಉಪಯೋಗಿಸಿದ್ದುಂಟು. (ಅವನನ್ನು ಕೊನೆಗೆ ಸಭೆಯ ಕಾವಲುಗಾರರು ಒದ್ದು ಹೊರಗೋಡಿಸಿದರು!) ಜಗತ್ತಿನ ಬೇರೆ ಬೇರೆ ಪ್ರಜಾಸತ್ತೆಗಳಲ್ಲಿ ಈ ತಂತ್ರದ ಉಪಯೋಗ ಅತಿರೇಕಕ್ಕೆ ಹೋದಾಗ ಸಭಾನಿಯಮಗಳನ್ನು ಬಿಗಿಗೊಳಿಸಿ ಅದರ ಉಪಟಳವನ್ನು ನಿವಾರಿಸಲಾಯಿತು.

ಆದರೆ ಅಮೇರಿಕದಲ್ಲಿ ಹಾಗಾಗಲಿಲ್ಲ. ೧೯೧೭ ರಲ್ಲೊಮ್ಮೆ, ೧೯೪೯ ರಲ್ಲೊಮ್ಮೆ ಎರಡು ಸಲ ಸಿನೇಟಿನ ಸಭಾನಿಯಮಗಳನ್ನು ಬದಲಿಸಿ ಫಿಲಿಬಸ್ಟರ್ ಗತ್ತನ್ನು ತಡೆಗಟ್ಟುವ ಯತ್ನಗಳಾಗಿವೆ. ಆದರೆ ಇಂದಿಗೂ ದುರಂತ ಭಾಷಣವನ್ನು ಕೊನೆಗೊಳಿಸಬೇಕಾದರೆ ಎರಡು-ಮೂರಂಶ ಬಹುಮತ ಬೇಕೆಂಬ ನಿಯಮವಿರುವುದರಿಂದ ಫಿಲಿಬಸ್ಟರ್ ಅಬಾಧಿತವಾಗಿಯೆ ಸಾಗಿದೆ.

ಹೀಗಾಗಿ ಫಿಲಿಬಸ್ಟರ್ ಮಾತೆತ್ತಿದರೆನೇ ವಿಚಾರಪರರಾದ ಸಿನೇಟರರು ಹಣ್ಣಾಗುತ್ತಾರೆ. ತಾವು ಮಂಡಿಸಬೇಕೆಂದಿರುವ ಬೇರೆ ಮಹತ್ವದ ಮಸೂದೆ, ಸೂಚನೆಗಳ ಕಾಲನಿಯಾಮಕ ಪಟ್ಟಿಯೆಲ್ಲವೂ ಇದರಿಂದ ತಲೆಕೆಳಗಾದೀತೆಂದು ಹೆದರಿ ಅವರು ಬೇಗನೆ ಶರಣಾಗತರಾಗುತ್ತಾರೆ.

ಹೆದರತಕ್ಕದ್ದೇ. ಕೆಲ ಫಿಲಿಬಸ್ಟರ್ ತಂತ್ರಿಗಳು ತಾವೂ ನಿದ್ದೆ ಮಾಡರು, ಇತರರಿಗೂ ಬಿಡರು ಎಂಬ ಕಾಡುವ ದೈವಗಳಾಗಿರುತ್ತಾರೆ. ೧೯೦೮ ರಲ್ಲಿ ಹೊಸ ಚಲಾವಣೆ ಮಸೂದೆಯನ್ನು ಸೋಲಿಸಲು ೧೮ ಗಂಟೆ ೨೩ ನಿಮಿಷ ಫಿಲಿಬಸ್ಟರಿಸಿದ ಸಿನೇಟರ್ ಲಾ ಫೊಲೆಯವರು ತಮ್ಮ ರಾತ್ರಿ ಬೆಳಗಾಗುವ ವರೆಗಿನ ಭಾಷಣ ಕೇಳಿ ಕೇಳಿ ಸೋತು ಸಭಾಭವನದಿಂದ ಜಾರಿ ಪಕ್ಕದ ಕೋಣೆಗಳಲ್ಲಿ ನಿದ್ದೆ ಹೋದ ಸದಸ್ಯರಿಗೆ ಶಾಂತಿಯಿಲ್ಲದಂತೆ ಮಾಡಲು ಒಂದು ಗತ್ತು ಹೂಡುತ್ತಿದ್ದರು. ಸಭೆ ಖಾಲಿಯಾಗಿ ಕೋರಂ ಇಲ್ಲದಂತಾದೊಡನೆ ಅವರು "ಕೋರಂ" ಎಂದು ಕೂಗುತ್ತಿದ್ದರು. ಕೂಡಲೆ ಸಭಾಪಾಲಕ ಕೋಣೆಗಳನ್ನು ಹೊಕ್ಕು ಮಲಗಿದ್ದ ಸದಸ್ಯರನ್ನೆಬ್ಬಿಸುತ್ತಿದ್ದ. ಅವರು ಇದ್ದಕ್ಕಿದ್ದಂತೆ ಓಡಿಬರುತ್ತಿದ್ದರು. ಏಕೆಂದರೆ ಕೋರಂ ಇಲ್ಲದಾಗ ಭಾಷಣ ನಿಲ್ಲಿಸಿ ವಿಶ್ರಾಂತಿ ಪಡೆಯಲು ಫಿಲಿಬಸ್ಟರ್ ತಂತ್ರಿಗೆ ಸಭಾನಿಯಮವು ಅವಕಾಶವೀಯುತ್ತಿತ್ತು. ವಿಶ್ರಾಂತಿ ಸಿಕ್ಕಿದರೆ ಫಿಲಿಬಸ್ಟರರನಿಗೆ ಇನ್ನಷ್ಟು ಭಾಷಣ ಬೆಳಸಲವಕಾಶವಾಗುತ್ತಿತ್ತು.

ಒಮ್ಮೊಮ್ಮೆ ಫಿಲಿಬಸ್ಟರರಿಗೆ ಅವರ ತಂತ್ರವೇ ಮುಳುವಾಗುವ ಪ್ರಸಂಗಗಳೂ ಒದಗುವುದುಂಟು.

೧೯೩೫ ರಲ್ಲಿ ಫಿಲಿಬಸ್ಟರ್ ವಿಕ್ರಮ ಸ್ಥಾಪಿಸಿದ ಹ್ಯುಯಿ ಲಾಂಗರಿಗೆ ಹೀಗೇ ಆಯಿತು. ಅವರು ಭಾಷಣ ಪ್ರಾರಂಭಿಸಿದೊಡನೆ ರೂಜವೆಲ್ಟ್ ಪಕ್ಷದ ವಾಶಿಂಗ್ಟನ್‌ನ ಸಿನೇಟರ್ ಲುಯಿ ಶ್ವೆಲೆನ್‌ಬಾಕರು ತಮ್ಮ ತಂಡವನ್ನು ಕೂಡಿಸಿ ಸಭೆಯಲ್ಲಿ ಗಟ್ಟಿಯಾಗಿ ಕುಳಿತರು. ಅವರು ಯಾವ ನೆವದಿಂದಲೂ ಲಾಂಗರಿಗೆ ವೇದಿಕೆ ಬಿಟ್ಟುಹೊರಡಲಾಗದಂತೆ ಮಾಡಿದರು. ಕೋರಂ ಇರುವಂತೆ ಶ್ವೆಲೆನ್‌ಬಾಕರು ನೋಡಿಕೊಂಡಿದ್ದರಿಂದ ಮಾತು ನಿಲ್ಲಿಸಿ ಮೂತ್ರವಿಸರ್ಜನೆಗೆ ಕೂಡ ಭಾಷಣಕಾರರಿಗೆ ಹೊರಗೆ ಹೋಗಲು ಅವಕಾಶ ಸಿಗಲಿಲ್ಲ. (ಹೋದರೆ ವೇದಿಕೆಯ ಮೇಲಿನ ಅಧಿಕಾರವನ್ನು ಅವರು ಕಳೆದುಕೊಳ್ಳಬೇಕಾಗಿತ್ತು.)

ಲಾಂಗ್ ಮಾತಾಡುತ್ತಲೇ ಹೋದರು. ನಡನಡುವೆ ಸ್ಯಾಂಡ್‌ವಿಚ್‌ಗಳನ್ನು ಅವರು ಕಚ್ಚಿ ಕಡಿಯಬಹುದಾಗಿದ್ದರೂ ಅವರು ಮಾತು ನಿಲ್ಲಿ-

ಸುವಂತಿರಲಿಲ್ಲ. ಮಾತನಾಡುತ್ತಲೇ ಜಗಿದು ನುಂಗಬೇಕಾಗಿತ್ತು. ಹೊತ್ತು ಸಾಗಿದಂತೆ ಅವರ ಕಾಲು ಸೋತಿತು. ಅವರು ಒಂದು ಕಾಲಿನ ಮೇಲೆ ಕುಪ್ಪಳಿಸುತ್ತ ಮಾತಾಡಿದರು ಇತ್ತ ಕಣ್ಣಲ್ಲಿ ಎಣ್ಣೆ ಹಾಕಿಕೊಂಡು ಕಾಯುತ್ತ ಭಾಷ-ಣಕಾರರನ್ನು ಗೇಲಿ ಮಾಡುತ್ತಿತ್ತು ವಿರೋಧಿ ಗುಂಪು. ಕೊನೆಗೆ ನಾಲ್ಕು ಗಂಟೆಗೆ ಹತ್ತು ನಿಮಿ-ಷವಿರುವಾಗ ಲಾಂಗರು ಆಯಾಸದಿಂದ ಬಳಿಚಿಕೊಂಡು ಉರುಳುವ ಸ್ಥಿತಿಯಲ್ಲಿ, " ಸೋತೆ, ಭಾಷಣ ನಿಲ್ಲಿಸುತ್ತೇನೆ" ಎಂದು ವೇದಿಕೆಯಿಂದ ಪಲಾಯನ ಮಾಡಿದರು.

ಕಡೆಗೂ ಮರುದಿನ ಬೆಳಗ್ಗೆ ಸಭೆ ಮಸೂದೆಯನ್ನು ಪಾಸು ಮಾಡಿತು. ಲಾಂಗರ ಶ್ರಮವೆಲ್ಲ ಹೊಳೆಯಲ್ಲಿ ತೊಳೆದ ಹುಣಸೇಹಣ್ಣಾಯಿತು.

ಹ್ಯುಯಿ ಲಾಂಗರ ದುರವಸ್ಥೆಗೆ ಕಾರಣವಾದದ್ದು ಸಭೆಯ ಸುಧಾರಿಸಿದ ನಿಯಮಾವಳಿ. ಅದರ ಪ್ರಕಾರ ಫಿಲಿಬಸ್ಟರ್ ತಂತ್ರಿಯು ತೆರಪಿ-ಲ್ಲದೆ ಮಾತಾಡಬೇಕು, ಮಾತಾಡುವಾಗ ನಿಂತೇ ಇರಬೇಕು, ಯಾವುದಕ್ಕೂ ಆನಿಸಿಕೂಡ ನಿಲ್ಲುವ ಹಾಗಿಲ್ಲ. ಇಲ್ಲದಿದ್ದರೆ ಅವನು ವೇದಿಕೆಯ ಮೇಲೆ ನಿಲ್ಲುವ ಅಧಿಕಾರಕ್ಕೆರವಾಗುತ್ತಾನೆ. ಕಲ್ಲೆಣ್ಣೆಯನ್ನು ಕುರಿತು ರಾಜ್ಯ ಸರಕಾರಗಳಿಗಿರುವ ಹಕ್ಕಿಗೆ ಸಂಬಂಧಿಸಿದ ಒಂದು ವಿಧೇಯಕದ ಮೇಲೆ ೧೯೫೩ ರಲ್ಲಿ ೨೨ ಗಂಟೆ ೨೬ ನಿಮಿಷ ಮಾತಾಡಿ ಹಿಂದಿನ ಎಲ್ಲ ದಾಖಲೆಗಳನ್ನು ಮುರಿದ ವೇನ್ ಮೋರ್ಸರು ತಮ್ಮ ಭಾಷಣದ ನಡುವೆ ಬಸವಳಿದು ಒಂದು ಸ್ಟೂಲಿನ ಮೇಲೆ ಕಾಲಿಟ್ಟು ತೊಡಗೆ ಮೊಣಕೈಯೂರಿದಾಗ ವಿರೋಧಿ ಸದಸ್ಯರೊಬ್ಬರು " ನೆಟ್ಟಗೆ ನಿಂತು ಮಾತಾಡಯ್ಯ!" ಎಂದು ಕೂಗಿದ್ದರಿಂದ ಅವರು ಕಾಲನ್ನು ಕೆಳಗಿಡಬೇಕಾಯಿತು.

ಆದರೆ ಇಂಥ ನಿಯಮಗಳು ಫಿಲಿಬಸ್ಟರುಗಳನ್ನು ತಡೆಗಟ್ಟುವಲ್ಲಿ ಯಶಸ್ವಿಯಾಗಿಲ್ಲ. ೧೯೫೭ ರಲ್ಲಿ ನಿಗ್ರೋಗಳಿಗೆ ನಾಗರಿಕ ಹಕ್ಕು ದಯಪಾಲಿಸುವುದನ್ನು ವಿರೋಧಿಸಲು ದಕ್ಷಿಣ ಕೆರೋಲಿನಾದ ಸದಸ್ಯ ಸ್ಟ್ರಾಂ ಥರ್ಮಂಡರು ೨೪ ಗಂಟೆ ೧೮ ನಿಮಿಷ ಮಾತಾಡಿ ಹಿಂದಿನ ಎಲ್ಲ ದಾಖಲೆಗಳನ್ನು ಮುರಿದರು.

ಫಿಲಿಬಸ್ಟರ್ ದೆಸೆಯಿಂದ ದುರಂತಗಳೂ ಆಗಿವೆ. ೧೮೫೬ ರಲ್ಲಿ ಕನ್ಸಾಸ್ ರಾಜ್ಯಕ್ಕೆ ರಾಜ್ಯದ ಸ್ಥಾನಮಾನವೀಯುವ ವಿಧೇಯಕವನ್ನು ವಿರೋಧಿಸುತ್ತ ಸುದೀರ್ಘ ಭಾಷಣ ಮಾಡಿದ ಸಿನೇಟರ್ ಸುಮ್ನರರು ಕೆಲ ಸದಸ್ಯರನ್ನು ಕಟುವಾಗಿ ಟೀಕಿಸಿದ್ದರಿಂದ ರೊಚ್ಚಿಗೆದ್ದ ವಿರೋಧಿಗಳಲ್ಲೊಬ್ಬನು ಕೆಲ ದಿನಗಳ ನಂತರ ಸಿನೇಟಿನ ಕೋಣೆಯಲ್ಲಿ ಪತ್ರ ಬರೆಯುತ್ತ ಕುಳಿತಿದ್ದ ಸುಮ್ನರರ ತಲೆಗೆ ಬೆತ್ತದೇಟು ಕೊಟ್ಟನು. ಅವರು ಮೈಮರೆತು ರಕ್ತದ ಮಡುವಿನಲ್ಲಿ ಕೆಳಗುರುಳಿದರು. ಅವರು ಸಾಯದಿದ್ದರೂ ಜೀವಮಾನವೆಲ್ಲ ಅವರ ತಲೆಯಲ್ಲಿ ಆ ಗಾಯದ ಕಲೆ ಉಳಿದಿತ್ತು.

ಆದರೂ ಫಿಲಿಬಸ್ಟರನ್ನು ಸಂಪೂರ್ಣ ನಿರೋಧಿಸುವುದಕ್ಕೆ ಅಮೇರಿಕದ ಎರಡೂ ಪಕ್ಷಗಳು ಬೆಂಬಲವೀಯಲು ಸಿದ್ಧವಾಗಿಲ್ಲ. ಎರಡೂ ಪಕ್ಷಗಳಿಗೆ ಇದು ತಮಗೊಲ್ಲದ ಮಸೂದೆಗಳಿಗೆ ಅಡ್ಡಗಾಲು ಹಾಕಲು ಅನುಕೂಲ ಆಯುಧ ಎನಿಸಿರಬೇಕು. ಕೇಂದ್ರದ ವಿಧಾನಮಂಡಲದಲ್ಲಿ ಮಾತ್ರವಲ್ಲ, ರಾಜ್ಯಗಳಲ್ಲಿ ಕೂಡ ಫಿಲಿಬಸ್ಟರ್ ನೀತಿ ಉಪಯೋಗದಲ್ಲಿದೆ. ರ್‍ಹೋಡ್ ಐಲಂಡ್ ರಾಜ್ಯದಲ್ಲಿ ಮಾತ್ರ ಈಗ ೩೬ ವರ್ಷಗಳಿಂದ ಫಿಲಿಬಸ್ಟರ್ ನಿಂತುಹೋಗಿದೆ. ಸಂವಿಧಾನ ಸುಧಾರಣೆಯ ಮಸೂದೆಯೊಂದರ ಚರ್ಚೆಯಲ್ಲಿ ಒಬ್ಬ ಸದಸ್ಯ ತನ್ನ ಭಾಷಣವನ್ನು ೪೨ ಗಂಟೆ ಬೆಳಸಿ ಇನ್ನೂ ಮುಂದುವರಿಸುತ್ತಿದ್ದಾಗ ಸಭಾ ಭವನದಲ್ಲಿ ವಿಚಿತ್ರ ನಾತವೊಂದು ಹಬ್ಬಿತು. ಭಾಷಣಕಾರರನ್ನೊಳಗೊಂಡು ಎಲ್ಲರೂ ಹೊರಗೆ ಪಲಾಯನ ಮಾಡಿದರು. ಯಾವನೋ ತಮಾಷೆಗಾರ ಹೊಲಸು ಗಾಳಿಯ ಬಾಂಬು ಒಗೆದಿದ್ದ! ★

ಮೆದುಳಿನ ಸರ್ಜನ್ನರು ತಲೆಬುರುಡೆಯೊಳಗಿನ "ವಿಶ್ವ"ವನ್ನು ಪರಿಶೀಲಿಸುತ್ತಿದ್ದಾರೆ

ಮೆದುಳಿನ ಅದ್ಭುತ ಭೂಗೋಲ

ರೋಗಿ ಒಬ್ಬ ಕ್ರಿಶ್ಚನ್ ಪಾದ್ರಿ. ಅವನ ಕೈ ಒಮ್ಮೆಲೇ ನಿರ್ಬಲವಾಗಿ ಹೋಗಿತ್ತು. ಹೀಗಾದದ್ದು ಇದೇ ಮೊದಲ ಸಲವಾಗಿರಲಿಲ್ಲ. ಕೆಲ ತಿಂಗಳಿಂದ ಅವನಿಗೆ ಹಲವು ಸಲ ತನ್ನ ತೋಳಿನ ಮೇಲಿನ ಹತೋಟಿ ತಪ್ಪಿಹೋಗಿತ್ತು.

ಡಾಕ್ಟರರು ತೋಳನ್ನು ಪರೀಕ್ಷಿಸಿದರು. ಯಾವ ದೋಷವೂ ಕಾಣಿಸಲಿಲ್ಲ. ಮೆದುಳಿನಲ್ಲೇ ಯಾವುದೋ ದೋಷವಿರಬೇಕೆಂದು ಅವರಿಗೆ ಸಂಶಯ ಬಂತು. ಮೆದುಳಿನ ಎಕ್ಸ್-ರೇ ಫೋಟೋದಲ್ಲಾಗಲಿ ಮೆದುಳಿಂದ ಹೊರಡುವ ವಿದ್ಯುತ್ತರಂಗಗಳ ಪರೀಕ್ಷೆಯಿಂದಾಗಲಿ ಯಾವ ಸರಿಯಾದ ಇತ್ಯರ್ಥವೂ ಆಗದ್ದರಿಂದ ಅವರು ರೋಗಿಯ ಅನುಮತಿಯಿಂದ ಶಸ್ತ್ರಕ್ರಿಯೆಯನ್ನಾರಂಭಿಸಿದರು.

ಅವರು ರೋಗಿಯ ಸ್ಮೃತಿ ತಪ್ಪಿಸದೆ ಸ್ಥಾನಿಕ ವೇದನಾ ಪ್ರತಿಬಂಧದ ಇಂಜಕ್ಶನ್ ಕೊಟ್ಟು ಅವನ ನೆತ್ತಿಯ ಚಿಪ್ಪನ್ನು ಕಿತ್ತಿಟ್ಟು ಮೆದುಳಿನಲ್ಲಿ ಹುಡುಕತೊಡಗಿದರು. ಮೆದುಳನ್ನು ಮುಚ್ಚಿರುವ ಬೂದಿ ಬಣ್ಣದ ಹೊರ ಪದರಿನ ಮೇಲೆ ತೆಳ್ಳನ್ನ ವಿದ್ಯುತ್ ತಂತಿಯಿಂದ ಮೃದುವಾದ ವಿದ್ಯುತ್ ಆಘಾತಗಳನ್ನು ಅಲ್ಲಲ್ಲಿ ಕೊಡುತ್ತ ಹೊರಟರು.

ಒಂದು ಕಡೆ ವಿದ್ಯುತ್ತು ತಗಲಿದೊಡನೆ ರೋಗಿಯ ಕಣ್ಮುಂದೆ ನಿಜವಾಗಿ ಏನೂ ಇಲ್ಲದಿದ್ದರೂ ಅವನಿಗೆ ಸುಂದರ ತಾರೆಗಳು ಕಾಣತೊಡಗಿದವು. ಸ್ವಲ್ಪ ಮುಂದೆ ಸಾಗಿದಾಗ ತಾರೆಗಳು ಗರಗರನೆ ತಿರುಗತೊಡಗಿದವು. ಕೊನೆಗೆ ಅವು ಬೆಳ್ಳಿಯಂತೆ ಹೊಳೆಯತೊಡಗಿದವು. ಅದು

> ಭಾರತದಲ್ಲಿ ಮೆದುಳಿನ ಶಸ್ತ್ರಕ್ರಿಯೆಯನ್ನು ಕೈಕೊಳ್ಳುವ ಪ್ರಮುಖ ಆಸ್ಪತ್ರೆಯೆಂದರೆ ಮುಂಬಯಿಯ ಕಿಂಗ್ ಎಡ್ವರ್ಡ್ ಮೆಮೋರಿಯಲ್ ಆಸ್ಪತ್ರೆ. ೧೯೫೩ರಲ್ಲಿ ರೂಪಾಯಿ ೪,೫೦,೦೦೦ ಅನಾವರ್ತ ವೆಚ್ಚದಿಂದ ಪ್ರಾರಂಭವಾದ ವಿಶೇಷ ವಿಭಾಗದಲ್ಲಿ ಈ ಶಸ್ತ್ರಕ್ರಿಯೆಯನ್ನು ಅತ್ಯಂತ ದಕ್ಷರಾದ ಸರ್ಜನ್ನರು ನಡೆಸುತ್ತಾರೆ. ಮೆದುಳಿನಲ್ಲಾದ ಹುಣ್ಣು, ಬೊಕ್ಕೆ, ರಕ್ತಸ್ರಾವ, ಕ್ಯಾನ್ಸರ್ ಮೊದಲಾದವುಗಳ ಮೇಲೆ ಇಲ್ಲಿ ಶಸ್ತ್ರಕ್ರಿಯೆ ಕೈಕೊಳ್ಳಲಾಗುತ್ತಿದೆ. ಇಲ್ಲಿ ಚಿಕಿತ್ಸೆ ಉಚಿತವಾಗಿದೆ.
>
> ಕೆಲವ ಖಾಸಗಿ ನ್ಯುರೋ-ಸರ್ಜನ್ನರು ದೇಶದಲ್ಲಿ ಮೆದುಳಿನ ಶಸ್ತ್ರಕ್ರಿಯೆಯನ್ನು ಮಾಡುತ್ತಿದ್ದಾರೆ. ಕಠಿನವಾದ ಕೇಸಿಗೆ ಅವರು ರೂ. ೨,೦೦೦ ದಿಂದ ರೂ. ೧೦,೦೦೦ ವರೆಗೆ ಫೀ ತೆಗೆದುಕೊಳ್ಳಬಹುದು.

'ಕರ್ಮವೀರ'ದಿಂದ ಹೆಚ್ಚಿನ ವಿವರ ಸಹಿತ

ಅವನ ಮೆದುಳಿನ ದೃಷ್ಟಿಪ್ರದೇಶವಾಗಿತ್ತು. ಮುಂದೆ ಅವನ ಶ್ರವಣ ಪ್ರದೇಶ ಸಿಕ್ಕಿತು. ಅಲ್ಲಿ ವಿದ್ಯುತ್ತು ತಾಕಿದೊಡನೆ ರೋಗಿಗೆ ಏನೇನೊ ಗುಂಯ್ಗುಡುವ ಸದ್ದು ಕೇಳಿಸಿತು.

ಮುಂದೆ ಮುಂದೆ ಸಾಗಿದರು. ನೆತ್ತಿಯ ಸಮೀಪದ ಮೆದುಳಿಗೆ ವಿದ್ಯುತ್ತು ತಾಕಿದೊಡನೆ ರೋಗಿ ಚಟಕ್ಕೆಂದು ತೋಳನ್ನು ಎತ್ತಿದ.

"ಯಾಕೆಂದು ತೋಳೆತ್ತುತ್ತಿ?"

ಯಾಕೆಂದು ರೋಗಿಗೇ ಗೊತ್ತಿರಲಿಲ್ಲ.

ಅದು ಅವನ ಅಂಗಚಲನವನ್ನು ನಿರ್ದೇಶಿಸುವ ಪ್ರದೇಶವಾಗಿತ್ತು.

ಡಾಕ್ಟರರು ಹತ್ತಿರವೇ ಅವನ ಕಿವಿಯ ಮೇಲ್ಭಾಗದ ಮಿದುಳಿನ ಪದರಕ್ಕೆ ಬಂದರು. ಅಲ್ಲಿ ವಿದ್ಯುತ್ತು ಮುಟ್ಟಿದೊಡನೆ ಹೇಳಿದ ರೋಗಿ: "ಹಾಹಾ! ಇದೇ ನೋಡಿ! ನನ್ನ ತಾಯಿ ಕಾಣುತ್ತಾಳೆ. ಅವಳು ಹೊದ್ದ ದುಪ್ಪಟಿ ಎಷ್ಟು ವಿಚಿತ್ರವಾಗಿದೆ! ಈಗ, ಈಗ ಜೋ ಜೋ ಜೋ ಕಂದ ಎಂದು ಹಾಡುತ್ತಿದ್ದಾಳೆ. ಕೇಳಿಸುವುದಿಲ್ಲವೇ ನಿಮಗೆ?"

ಅಲ್ಲಿ ತಾಯಿಯೂ ಇರಲಿಲ್ಲ, ಹಾಡೂ ಇರಲಿಲ್ಲ. ಅದು ಅವನ ನೆನಪುಗಳ ಮತ್ತು ಕನಸುಗಳ ಪ್ರದೇಶವಾಗಿತ್ತು. ಅಲ್ಲಿ ವಿದ್ಯುತ್ತು ತಾಕಿದ್ದರಿಂದ ಆತ ಕನಸು ಕಾಣತೊಡಗಿದ್ದ. ತನ್ನ ತೋಳು ನಿರ್ಬಲವಾಗುವ ಮೊದಲು ಪ್ರತಿಸಲವೂ ತನಗಿದೇ ಎಚ್ಚರದ ಕನಸು ಬೀಳುತ್ತದೆ ಮತ್ತು ಆ ಮೇಲೆ ತೋಳು ಹೋಗುತ್ತದೆ ಎಂದನಾತ.

ಡಾಕ್ಟರರು ಅಲ್ಲೇ ಹುಡುಕಿದರು. ಒಂದು ಚಿಕ್ಕ ಹುಣ್ಣು ಸಿಕ್ಕಿತು. ಅದನ್ನು ತೆಗೆದು ಪುನಃ ನೆತ್ತಿಯ ಚಿಪ್ಪನ್ನಿಟ್ಟು ಹೊಲಿದರು. ಅಂದಿನಿಂದ ರೋಗಿಗೆ ಆ ಎಚ್ಚರಗನಸೂ ಬೀಳಲಿಲ್ಲ, ಕೈಯೂ ಸರಿಯಾಯಿತು. ಈ ಚಿಕಿತ್ಸೆಯಿಲ್ಲದಿದ್ದರೆ ಆತ ಖಂಡಿತ ಸಾಯುತ್ತಿದ್ದ.

ಕಳೆದ ಹತ್ತಿಪ್ಪತ್ತು ವರ್ಷಗಳಿಂದ ಕೆನಡ ಮತ್ತು ಅಮೇರಿಕದ ಸಂಯುಕ್ತ ಸಂಸ್ಥಾನಗಳಲ್ಲಿ ಕೆಲವೇ ಆಸ್ಪತ್ರೆಗಳಲ್ಲಿ ಇಂಥ ಮೆದುಳಿನ ಸಂಶೋಧನೆ ಮತ್ತು ಚಿಕಿತ್ಸೆ ನಡೆಯುತ್ತಿದೆ. ಎಲ್ಲ ರೋಗಿಗಳಿಗೂ ಗುಣವಾಗುತ್ತದೆಂದಲ್ಲ. ಕೆಲವರು ಸಾಯುವುದುಂಟು. ಆದರೆ ಅನೇಕರಿಗೆ ಗುಣವಾಗಿದೆ.


ಶಸ್ತ್ರಚಿಕಿತ್ಸೆಯಲ್ಲೇ ಹೊಸತೊಂದು ಯುಗವನ್ನು ಪ್ರವರ್ತಿಸುತ್ತಿರುವ ಈ ಸಂಶೋಧನೆಗಳು ಒದಗಿಸುತ್ತಿರುವ ಮನುಷ್ಯನ ಮೆದುಳಿನ ಚಿತ್ರ ಇನ್ನಷ್ಟು ಆಶ್ಚರ್ಯಕರವಾಗಿದೆ.

ಮೆದುಳಿನ ಮೇಲೆ ಶಸ್ತ್ರಕ್ರಿಯೆ ಹೊಚ್ಚ ಹೊಸದೇನೂ ಅಲ್ಲದಿದ್ದರೂ ಕಳೆದ ಶತಮಾನದಲ್ಲಿ ನಡೆದ ಕೆಲ ಅವಘಡಗಳ ದೆಸೆಯಿಂದ ಅದು ವೈದ್ಯವರ್ಗದಲ್ಲಿ ನಿಷಿದ್ಧವೆನಿಸಿತ್ತು. ಮೊದಲು ಮೆದುಳೆಂಬುದೊಂದು ಅಖಂಡ ವಸ್ತುವೆಂದೇ ನಂಬಲಾಗಿತ್ತು. ರೋಗಾಣುನಾಶಕ ಔಷಧಗಳ ಶೋಧವಾದ ಮೇಲೆ ಶಸ್ತ್ರಚಿಕಿತ್ಸಕರು ಸ್ವಲ್ಪ ಧೈರ್ಯದಿಂದಲೇ ಮುಂದುವರಿದರು. ಪರಿಣಾಮವಾಗಿ ಮೆದುಳಿನ ಎಡಭಾಗವು ಶರೀರದ ಬಲಭಾಗವನ್ನೂ ಬಲಭಾಗವು ಎಡಭಾಗವನ್ನೂ ನಿಯಂತ್ರಿಸುವುದೆಂದು ತಿಳಿದುಬಂತು. ಅಂತೆಯೆ ಮೆದುಳಿನ ಮುಂಭಾಗದ ಮೇಲ್ಪದರು ಅಂಗಾಂಗಗಳ ಚಲನೆಗೂ ಹಿಂಭಾಗದ್ದು ಸಂವೇದನೆಗಳಿಗೂ ಸಂಬಂಧಿಸಿವೆಯೆಂದು ಗೊತ್ತಾಯಿತು.

ಆದರೆ ಮೆದುಳಿನ ಅದ್ಭುತ "ಭೂಗೋಲದ" ಕಲ್ಪನೆ ಬರಲು ೫೦ ವರ್ಷಗಳ ಸಂಶೋಧನೆ ಬೇಕಾಯಿತು. ಮೆದುಳಿನ ಬೇರೆ ಬೇರೆ ಪ್ರದೇಶಗಳು ಶರೀರದ ಬೇರೆ ಬೇರೆ ಇಂದ್ರಿಯಗಳನ್ನೂ ಅಂಗಗಳನ್ನೂ ನಿಯಂತ್ರಿಸುತ್ತವೆಂದು ತೋರಿಸಲು ಅವರಿಗೆ ಸಾಧ್ಯವಾಗಿದೆ. ರೋಗಿಯನ್ನು ಸ್ಮೃತಿ ತಪ್ಪಿಸದೆ, ಅವನಿಗೆ ತಿಳಿಯುವಂತೆಯೇ ವೇದನಾರಹಿತ ಶಸ್ತ್ರಚಿಕಿತ್ಸೆ ಮಾಡುತ್ತಿರುವುದರಿಂದ ಮೆದುಳಿನ ಭೂಗೋಲವನ್ನರಿತುಕೊಳ್ಳಲು

ಹೆಚ್ಚು ಸಹಾಯವಾಗಿದೆ.

ಎಲ್ಲ ಮನುಷ್ಯರ ಮೆದುಳಿನ ಸಾಮಾನ್ಯ ಭೂಗೋಲ ಒಂದೇ. ಆದರೆ ಪ್ರತಿಯೊಬ್ಬನ ಮೆದುಳಿನ ವಿಶೇಷ ನಕಾಶೆಗಳನ್ನು ತಯಾರಿಸ ಬೇಕಾಗುತ್ತದೆ. ಉದಾಹರಣೆಗೆ ನೋಡುವುದಕ್ಕೆ ಸಂಬಂಧಿಸಿದ ಮೆದುಳಿನ ಭಾಗ ಸಾಧಾರಣ ಇಂಥಲ್ಲಿದೆಯೆಂದು ಗೊತ್ತಿದ್ದರೂ ಅದಕ್ಕೆ ಸಂಬಂಧಿಸಿದ ವಿಶಿಷ್ಟ ಕೇಂದ್ರಗಳು ಎಲ್ಲಿವೆಯೆಂದು ಆಯಾ ಮನುಷ್ಯನ ಮೆದುಳಿನ ಆ ಭಾಗಕ್ಕೆ ವಿದ್ಯುತ್ ಸ್ಪರ್ಶಗಳನ್ನು ಕೊಟ್ಟೇ



ಮಿದುಳಿನ ಮೇಲ್ಭಾಗದ ಒಂದಂಶದ ದೃಶ್ಯ: ಅಂಕೆಗಳಿಂದ ಸೂಚಿತವಾದ ಸ್ಥಾನಗಳಲ್ಲಿ ವಿದ್ಯುತ್‌ಸ್ಪರ್ಶವಾದಾಗ ಆಯಾ ಅಂಗಗಳು ಉತ್ತೇಜನೆಗೊಂಡವು:

೪. ಎಡಗಾಲು
೭. ಎಡಗೈ, ಎಡಮೊಳಗೈ
೮. ಎಡಗೈ
೧೦. ಎಡ ತೋಳು
೧೧. ಎಡ ಪಾದ
೧೩. ಬೆನ್ನಿನ ಎಡ ಭಾಗ
೧೪. ಕೆನ್ನೆ
೧೫. ಮೊಳಗೈ, ಹೆಬ್ಬೆರಳು
೨೨. ಹೆಬ್ಬೆರಳು, ತೋರು ಬೆರಳು
೨೪. ಹೆಬ್ಬೆರಳು
೨೫. ತುದಿನಾಲಗೆ
೨೭. ನಾಲಗೆಯ ಎಡಭಾಗ
೨೮. ಎಡ ಕೆಳದುಟಿ
೩೦. ಎಡಗಾಲಿನ ಹೆಬ್ಬೆರಳು
೩೨. ಎಡಗಾಲು
೩೩. ಎಡಗಾಲು
೩೪. ಎಡಗೈ, ಎಡಮೊಳಗೈ
೩೭. ಎಡಗಾಲು

ತಿಳಿಯಬೇಕಾಗುತ್ತದೆ. ಹೀಗೆ ಸ್ಪರ್ಶಗಳನ್ನಿತ್ತು ಅವನ ಪ್ರತಿಕ್ರಿಯೆಗಳನ್ನು ತಿಳಿದುಕೊಂಡು ಅಲ್ಲಲ್ಲಿಗೆ ನಂಬರು ಹಾಕಿದ ಚೀಟಿಗಳನ್ನು ತಗಲಿಸಿ ಅವನ ಮೆದುಳಿನ ನಕಾಶೆ ತಯಾರಿಸುತ್ತಾರೆ.

ದೃಷ್ಟೀಂದ್ರಿಯದ ಕೇಂದ್ರ ಮೆದುಳಿನ ಹಿಂಭಾಗದಲ್ಲಿದೆ. ಅಲ್ಲಿ ಒಂದು ವಿಶಿಷ್ಟ ಸ್ಥಾನಕ್ಕೆ ವಿದ್ಯುತ್ತನ್ನು ತಗಲಿಸಿದರೆ ಒಬ್ಬನಿಗೆ ಬಿಳಿ ಬೆಳಕು ಕಾಣಬಹುದು; ಇನ್ನೊಬ್ಬನಿಗೆ ಕೆಂಪು ಬಣ್ಣ, ಮತ್ತೊಬ್ಬನಿಗೆ ನಕ್ಷತ್ರ ಕಾಣಬಹುದು. ಆ ಭಾಗದ ಒಂದೊಂದು ಬಿಂದುವಿಗೂ ವಿದ್ಯುತ್ ಸ್ಪರ್ಶ ಕೊಡುತ್ತ ಹೋದಂತೆ ರೋಗಿ "ಇದೀಗ ಒಂದು ನೆರಳು ನನ್ನ ಮುಂದೆ ಹಾಯ್ದು ಹೋಯಿತು. ಈಗ ಕೆಂಪು, ಈಗ ಹಸಿರು, ಈಗ ಹಳದಿ ದೀಪ ಕಾಣಿಸುತ್ತದೆ. ಅಲಲಾ, ಚಕ್ರಗಳು ತಿರ್ರನೆ ತಿರುಗುತ್ತಿವೆ...." ಎಂದೆಲ್ಲ ಅನುಭವ ಕಥನ ಮಾಡುತ್ತ ಹೋಗುತ್ತಾನೆ.

ಒಂದು ಸ್ಥಾನವನ್ನು ಉತ್ತೇಜಿತಗೊಳಿಸಿದರೆ ನಿಮಗೆ ರಬ್ಬರು ಸುಟ್ಟ ವಾಸನೆ ಬಂದಂತಾದೀತು. ಅಲ್ಲಿದೆ ನಿಮ್ಮ ಘ್ರಾಣ ಕೇಂದ್ರ. ಅದು ನಿಮ್ಮ ಮೆದುಳಿನ ಕೆಳ ಭಾಗದ ಹೊರ ಪದರಿನಲ್ಲಿದೆ. ಮೆದುಳಿನ ಪಕ್ಕಗಳಲ್ಲಿನ ಪದರಿಗೆ ಉತ್ತೇಜನವಿತ್ತರೆ ಗುಂಯ್ಗುಟ್ಟಿದಂತೆ, ಬಡಿದಂತೆ, ಹಕ್ಕಿ ರೆಕ್ಕೆ ಬಡಿದಂತೆ ಸದ್ದು ಕೇಳಿದ ಹಾಗಾಗುತ್ತದೆ. ಒಬ್ಬಳಂತೂ "ನೋಡಿ ನೋಡಿ! ಯಾರೋ ಬಾಗಿಲು ಬಡಿಯುತ್ತಿದ್ದಾರೆ" ಎಂದು ಕೂಗಿದಳು.

ಮೆದುಳಿನ ಇನ್ನೊಂದು ಆಳವಾದ ಕಂದರವನ್ನು ಉತ್ತೇಜಿಸಿದರೆ "ಹೊಟ್ಟೆಯಲ್ಲೇನೋ ಜಗಿಯುತ್ತದೆ", "ಎದೆ ಗುದ್ದಿದಂತಾಗುತ್ತದೆ" ಅಥವಾ 'ಅಯ್ಯೋ ನಾನೆಲ್ಲೋ ದೂರ ಹೋಗುವಂತಿದೆಯಲ್ಲ' ಎಂದು ರೋಗಿ ಹೇಳಬಹುದು.

ಮೆದುಳಿನ ಮುಂಭಾಗ ಅವಯವಗಳ ಚಲನೆಗೆ ಸಂಬಂಧಿಸಿದೆ. ಅಲ್ಲಿ ಒಂದು ಸ್ಥಳಕ್ಕೆ ವಿದ್ಯುತ್ ಸ್ಪರ್ಶ ಕೊಡಿರಿ, ಕಾಲು ಚಲಿಸುತ್ತದೆ, ಇನ್ನೊಂದಕ್ಕೆ ಕೊಡಿರಿ, ನಾಲಿಗೆ, ಕಣ್ಣರೆಪ್ಪೆ, ಬೆರಳು ಅಥವಾ ತೋಳು ಚಲಿಸುತ್ತದೆ. ಒಂದು ವಿಶಿಷ್ಟ ಸ್ಥಾನದ ಉತ್ತೇಜನದಿಂದ ನಿಮ್ಮ ಕೈ ಮಡಿಚಬಹುದು. ಆಗ ನಿಮ್ಮ ಇಚ್ಛೆ ಮೀರಿ ಯಾವುದೋ ಶಕ್ತಿ ನಿಮ್ಮಿಂದ ಈ ಚಲನೆ ಮಾಡಿಸಿದಂತೆ ಅನಿಸೀತು. ನೀವೇ ಸ್ವಬುದ್ಧಿಯಿಂದ ಮಾಡಿದಂತೆ ಭ್ರಮೆ ಕೂಡ ಆಗುವುದಿಲ್ಲ.

ಕಿವಿಯ ಮೇಲ್ಗಡೆ ವಾಕ್ ಸ್ಥಾನ ಇದೆ. ಅಲ್ಲಿ ವಿದ್ಯುತ್ ಸ್ಪರ್ಶವಾದರೆ ನಿಮ್ಮ ಯತ್ನವಿಲ್ಲದೆ ಯಾವುದೊಂದು ಮಾತಾಡುತ್ತೀರಿ.

ಎಲ್ಲಕ್ಕೂ ದಂಗು ಬಡಿಸುವ ಪರಿಣಾಮಗಳು ಬೇಕಾಗಿದ್ದರೆ ಕಿವಿಯ ಮೇಲ್ಗಡೆ ಇರುವ "ಸ್ವಪ್ನ" ಕೇಂದ್ರಗಳನ್ನು ಉತ್ತೇಜಿತಗೊಳಿಸಬೇಕು. ಸಾಮಾನ್ಯವಾಗಿ ಮೆದುಳಿನ ರೋಗಗಳ ಮೂಲ ಇಲ್ಲಿಯೆ ಸಿಗುತ್ತಿದೆ. ಇಲ್ಲಿ ಉತ್ತೇಜನೆ ಕೊಟ್ಟಾಗ ರೋಗಿ ಕನಸು ಕಾಣತೊಡಗಿದರೆ (ಆ ಪಾದ್ರಿಯ ಹಾಗೆ) ಹತ್ತಿರದಲ್ಲೇ ಏನೋ ಬೊಕ್ಕೆಯೋ ಹುಣ್ಣೋ ಇರಬೇಕೆಂದು ಊಹಿಸಬಹುದು.

ಒಬ್ಬನಿಗೆ ಇಲ್ಲಿನ ಉತ್ತೇಜನದಿಂದ ತಾನೇ ದೂರ ನಿಂತು ತನಗಾಗುತ್ತಿರುವುದನ್ನೆಲ್ಲ ನೋಡುತ್ತಿರುವಂತೆ ಅನಿಸುತ್ತದೆ. ಎರಡು ಜೀವಗಳು ಅವನಲ್ಲಿರುವವೋ ಎಂಬಂತೆ.

ಇನ್ನೊಬ್ಬನಿಗೆ ಮುಂದಿದ್ದ ಚಿಕ್ಕ ವಸ್ತುಗಳು ದೊಡ್ಡವಾಗಿ ಕಾಣಬಹುದು; ಮತ್ತೊಬ್ಬನಿಗೆ ಚಿಕ್ಕ ಸಪ್ಪಳ ಅಸಾಧ್ಯ ಗಟ್ಟಿಯಾಗಿ ಕೇಳಬಹುದು. ಕೆಲವರಿಗೆ ಇಲ್ಲದ ವಸ್ತುಗಳು ಕಂಡಾವು, ಇಲ್ಲದ ಶಬ್ದಗಳು ಕೇಳಿಸಿಯಾವು. "ಅಕೋ ನನ್ನ ತಂದೆ ಬಂದಿದ್ದಾರೆ!"

ಒಬ್ಬಳಿಗೆ ತಾನು ಹಡೆಯುತ್ತಿರುವಂತೆ ತೋರಿತಂತೆ. ಹೆರಿಗೆಯ ಎಲ್ಲ ಅನುಭವಗಳೂ ಅವಳಿಗೆ ಮರುಕಳಿಸಿದವು. ಇನ್ನೊಬ್ಬ "ಅಕೋ ಮೇಘಮಲ್ಹಾರ ರಾಗ ಹಾಡುತ್ತಿದ್ದಾರೆ"

ಎನ್ನುವವನು. "ಯಾವ ರಾಗವಿದು? ಕೇಳಿದಂತಿದೆಯಲ್ಲ. ಆದರೆ ನಿರ್ಧರಿಸುವ ಮೊದಲೇ ಬದಲಾಗಿ ಬಿಡುತ್ತದೆ" ಎನ್ನುವವರು ಬೇರೆ ಕೆಲ ಜನರು.

ರಾತ್ರಿರಾತ್ರಿಯೂ ಬಿದ್ದ ಕನಸೇ ಬೀಳುವವರ ಮೆದುಳಿನ ಈ ಭಾಗದಲ್ಲೇನೋ ದೋಷವಿರುವ ಸಂಭವ ಹೆಚ್ಚು.

ಈ ಭಾಗದಲ್ಲಿ ಲಕ್ಷಗಟ್ಟಳೆ ನೆನಪುಗಳೂ ಕನಸುಗಳೂ ಸಂಗ್ರಹವಾಗಿ ಬಿದ್ದಿರುತ್ತವೆ. ಅದೇ ಆ ಸ್ಥಾನಗಳ ಉತ್ತೇಜನದಿಂದ ಆಯಾ ನೆನಪು ಕನಸುಗಳು ಉದ್ದೀಪ್ತವಾಗುತ್ತವೆ. ಇಲ್ಲಿ ಕನಸುಗಳ ಪುಸ್ತಕಗಳೇ ಇವೆಯೆಂದರೂ ಸರಿ. ಅವುಗಳ ಬುಡದಲ್ಲಿ ಉತ್ತೇಜನವಾದರೆ ಕನಸಿನ ಆರಂಭ ಮರುಕಳಿಸುತ್ತದೆ. ನಡುವೆ ಸ್ಪರ್ಶಿಸಿ ಕನಸನ್ನು ಪುಸ್ತಕವನ್ನು ಮಧ್ಯದಿಂದೋದಿದಂತೆ ಮಧ್ಯದಿಂದಲೂ ಪ್ರಾರಂಭಿಸಬಹುದು.

ಮೆದುಳಿನ ಭೂಗೋಲದಲ್ಲಿ ಕೆಲ ವೈಲಕ್ಷಣ್ಯಗಳಿವೆ. ನಿಮ್ಮ ಶರೀರದಲ್ಲಿ ಕಣ್ಣುಗಳು ಎಷ್ಟು ಚಿಕ್ಕವೆಂದು ನಿಮಗೆ ಗೊತ್ತು. ಆದರೆ ನಿಮ್ಮ ಮೆದುಳಿನಲ್ಲಿ ದೃಷ್ಟಿಗೆ ಸಂಬಂಧಿಸಿದ ಮೇಲ್ಪದರದ ಪ್ರದೇಶ ೨೯ ಚದರ ಸೆಂಟಿಮಿಟರಿನಷ್ಟಿದೆ. ಇದರೊಡನೆ ಹೋಲಿಸಿದರೆ ನಿಮ್ಮ ವಿಸ್ತಾರವಾದ ಕೈ ಮತ್ತು ಇಡೀ ಶರೀರದ ಸ್ಪರ್ಶ ಪ್ರದೇಶಕ್ಕೆಲ್ಲ ಸೇರಿ ಮೆದುಳಿನಲ್ಲಿ ೧೬ ಚದರ ಸೆಂಟೀಮಿ-ಟರ್ ಸ್ಥಳ ಮಾತ್ರ ಇದೆ. ದೃಷ್ಟಿಗೆ ಸಂಬಂಧಿಸಿದ ೧೦ ಲಕ್ಷ ಜ್ಞಾನತಂತುಗಳ ತುದಿಗಳು ಒಂದೊಂದು ಪಕ್ಕ (ಎಡ, ಬಲ)ದ ಮೆದುಳಿನಲ್ಲಿ ಹರಡಿದ್ದರೆ, ಸ್ಪರ್ಶಕ್ಕೆ ಸಂಬಂಧಿಸಿದ ೬,೫೦,೦೦೦ ತಂತು-ತುದಿಗಳು ಮಾತ್ರ ಅದರ ಪ್ರದೇಶದಲ್ಲಿವೆ. ಶ್ರವಣಕ್ಕೆ ಸಂಬಂಧಿಸಿದ ಮೆದುಳಿನ ಭಾಗ ಇನ್ನೂ ಚಿಕ್ಕದು-ಕೇವಲ ೩.೫ ಚದರ ಸೆಂಟಿಮಿಟರ್. ಅದಕ್ಕೆ ಸಂಬಂಧಿಸಿದ ಜ್ಞಾನ ತಂತು ತುದಿಗಳು ಪ್ರತಿ ಪಕ್ಕಕ್ಕೆ ಬರಿ ೩೦,೦೦೦.

ಅವಯವಗಳ ಚಲನವಲನಕ್ಕೆ ಸಂಬಂಧಿಸಿದ ಮೆದುಳಿನ ಮುಂಭಾಗದಲ್ಲಿ ಆಯಾ ಅವಯವಕ್ಕಿರುವ ಪ್ರದೇಶಗಳೂ ಹಾಗೆಯೆ. ಆಯಾ ಅಂಗದ ಗಾತ್ರಕ್ಕೂ ಮೆದುಳಿನಲ್ಲಿ ಅದಕ್ಕಿರುವ ಪ್ರದೇಶಕ್ಕೂ ಹೋಲಿಕೆಯಿಲ್ಲ. ನಿಮ್ಮ ಕೈ ಕಾಲುಗಳಲ್ಲಿ ಯಾವ ಭಾಗಕ್ಕೆ ಎಲ್ಲಕ್ಕೂ ಹೆಚ್ಚು ಪ್ರಾತಿನಿಧ್ಯ ಮೆದುಳಿನಲ್ಲಿದೆಯೆನ್ನುತ್ತೀರಿ? ಕೈಗೆ. ನಿಮ್ಮ ಐದು ಬೆರಳುಗಳಲ್ಲಿ ಕುಳ್ಳನ್ನ ಹೆಬ್ಬೆರಳಿನ ಚಲನೆಗೆ ಎಲ್ಲಕ್ಕೂ ಹೆಚ್ಚು ಪ್ರದೇಶ ಮೆದುಳಿನಲ್ಲಿ ಮೀಸಲಾಗಿದೆ. ಉಳಿದ ನಾಲ್ಕು ಬೆರಳುಗಳಿಗೆ ಹೆಚ್ಚು ಕಡಿಮೆ ಸಮ ಸಮ ಪ್ರದೇಶಗಳಿವೆ. ಅಂಗೈಗೆ ಬಹು ವಿಸ್ತಾರ ಸ್ಥಳವಿದೆ. ಕಾಲ್ಬೆರಳುಗಳಿಗೆ ಕೈ ಬೆರಳುಗಳಿಗಿಂತ ಅರ್ಧ ಸ್ಥಳ ಮಾತ್ರ ಮೀಸಲು.

ನಿಮ್ಮ ಮುಖದ ಚಲನೆಗೆ ಸಂಬಂಧಿಸಿದ ವಿವಿಧ ಭಾಗಗಳಿಗೆ ಮೆದುಳಿನಲ್ಲಿ ಮೀಸಲಾದ ಪ್ರದೇಶಗಳೂ ಹಾಗೆಯೆ. ನಿಮ್ಮ ಮೆದುಳಿನಲ್ಲಿ ಇಡೀ ಹಣೆಗಿರುವಷ್ಟೆ ಸ್ಥಳ ಎರಡು ಹುಬ್ಬುಗಳಿಗಿದೆ; ಕಣ್ಣುಗುಡ್ಡೆ ಮತ್ತು ರೆಪ್ಪೆಗಳ ಚಲನೆಯನ್ನು ಪ್ರಚೋದಿಸಲು ಅದಕ್ಕಿಂತ ಇಮ್ಮಡಿ ಪ್ರದೇಶವಿದೆ. ಕೊರಳು, ಹುಬ್ಬು, ಕಣ್ಣುಗುಡ್ಡೆ ಮತ್ತು ರೆಪ್ಪೆ, ಹಣೆ ಇವೆಲ್ಲವಕ್ಕೆ ಸೇರಿ ಇರುವಷ್ಟು ಪ್ರದೇಶ ನಿಮ್ಮ ಎರಡು ತುಟಿಗಳಿಗಿದೆ. ನೀವೆಷ್ಟೇ ವಾಚಾಳಿಗಳಿದ್ದರೂ ನಾಲಗೆಗೆ ಮೆದುಳಿನಲ್ಲಿ ಮೀಸಲಿರುವುದಕ್ಕಿಂತ ದವಡೆಗೆ ಹೆಚ್ಚು ಸ್ಥಳ ಮೀಸಲಿದೆ.

ವಾಸ್ತವಿಕವೆಂದರೆ, ಶರೀರದ ವಿವಿಧ ಅಂಗ ಮತ್ತು ಇಂದ್ರಿಯಗಳ ವಿಸ್ತಾರಕ್ಕೂ ಮೆದುಳಿನಲ್ಲಿ ಅವುಗಳಿಗಾಗಿ ಮೀಸಲಿರುವ ಪ್ರದೇಶದ ವಿಸ್ತಾರಕ್ಕೂ ಸಂಬಂಧವಿಲ್ಲ. ಯಾವುದಕ್ಕೆ ಹೆಚ್ಚು ಕೆಲಸವೋ ಅದರ ನಿಯಂತ್ರಣಕ್ಕೆ ಮೆದುಳು ಹೆಚ್ಚು ಸ್ಥಳವನ್ನು ಕಾದಿಟ್ಟಿದೆ. ಮಾನವ ಶರೀರದಲ್ಲೆಲ್ಲ ಕೈಗಳಿಗೆ ಹೆಚ್ಚು ಕೆಲಸ, ಹೆಚ್ಚು ಕೌಶಲ್ಯದ ಕೆಲಸ; ಅದರಿಂದಲೇ ಕೈ-

ಬೆರಳು ಸಹಿತ ಹಿಡಿದರೆ ಶರೀರದ ಮತ್ತಾವ ಚಲಿಸುವ ಅಂಗಕ್ಕಿಂತಲೂ ಹೆಚ್ಚು ಪ್ರದೇಶ ಮೆದುಳಿನಲ್ಲಿ ಕೈಗಳಿಗೆ ಮೀಸಲುಂಟು.

ಹಾಗೆಯೇ ಇಂದ್ರಿಯಗಳಿಗೆ ಕೂಡ. ದೃಷ್ಟಿಗೆ ಸಂಬಂಧಿಸಿದ ಪ್ರದೇಶ ಮೆದುಳಿನಲ್ಲಿ ಎಲ್ಲಕ್ಕೂ ಹೆಚ್ಚು; ಏಕೆಂದರೆ ನಮಗೆ ಬರುವ ಅನುಭವಗಳಲ್ಲಿ ಕಣ್ಣುಗಳಿಂದ ದೊರಕುವವೇ ಹೆಚ್ಚು.

ನಮ್ಮ ಭಾಷೆಗಳೂ ಅದನ್ನೇ ಪ್ರತಿಬಿಂಬಿಸುತ್ತವೆ. ಅವುಗಳಲ್ಲಿ ಕಣ್ಣುಗಳಿಂದ ಬರುವ ಅನುಭವಗಳಿಗೆ ಸಂಬಂಧಿಸಿ ಮತ್ತು ಕೈಗಳಿಂದ ಮಾಡುವ ಕೆಲಸಗಳಿಗೆ ಸಂಬಂಧಿಸಿ ಹುಟ್ಟಿಕೊಂಡ ಶಬ್ದಗಳೂ ಅವುಗಳ ಶಾಖೋಪಶಾಖೆಗಳೂ ಎಲ್ಲಕ್ಕೂ ಹೆಚ್ಚಾಗಿವೆ.

ಮೆದುಳಿನ ಭೂಗೋಲ ಸಂಶೋಧನದಿಂದ ಹಿಂದೆ ಅಸಾಧ್ಯವಾಗಿದ್ದ ರೋಗಗಳೂ ಅಪಘಾತ ಜನ್ಯವಾದ ವೈಕಲ್ಯಗಳೂ ಇಂದು ಸಾಧ್ಯಕೋಟಿಯಲ್ಲಿ ಬಂದಿವೆ. ಹಿಂದೆ ಹುಚ್ಚರ ಆಸ್ಪತ್ರೆ ಮತ್ತು ಮೃತ್ಯುವೇ ಗತಿಯಾಗಿದ್ದ ಪ್ರಕರಣಗಳಲ್ಲಿ ಕೆಲವಾದರೂ ಇಂದು ಪರಿಹರಿಸಲು ಸಾಧ್ಯವಾಗಿವೆ.

ಮೆದುಳಿನ ನಕಾಶೆಗಳಿಂದ ಒಳಗಿನ ಮತ್ತು ಹೊರಗಿನ ಅಪಘಾತಗಳಿಂದಾದ ಗಾಯಗಳು, ಹುಣ್ಣುಗಳು, ಬೊಕ್ಕೆಗಳು, ನುಗ್ಗಾದ ರಕ್ತನಾಳಗಳು ಗೊತ್ತುಹಚ್ಚಲ್ಪಟ್ಟಿವೆ. ಇವುಗಳಲ್ಲಿ ಕೆಲವು ಜನ್ಮಸಿದ್ಧವಾದವುಗಳೂ ಇದ್ದವು. ಇಂಥವುಗಳನ್ನು ಕತ್ತರಿಸಿ ತೆಗೆದು ಸರಿಪಡಿಸಿದಾಗ ಅನೇಕ ರೋಗಗಳು ಗುಣವಾಗಿವೆ. ಅನೇಕವೇಳೆ ಅನವಶ್ಯಕವಾದ ಪಕ್ಷಾಘಾತ, ಮೂಕತನ, ಕಿವುಡುತನಗಳಿಂದ ಕೂಡ ರೋಗಿಗಳನ್ನು ಉಳಿಸಲು ಸಾಧ್ಯವಾದದ್ದುಂಟು.

ಮೆದುಳಿನ ಭೂಗೋಲ ಇನ್ನೂ ವಿಜ್ಞಾನಿಗಳಿಗೆ ಪೂರ್ತಿಯಾಗಿ ತಿಳಿದಿದೆಯೆಂದಲ್ಲ. ಎಷ್ಟೋ ಅ-ಸಂಶೋಧಿತ ಪರ್ವತ-ಅರಣ್ಯಗಳು ಇನ್ನೂ ಉಳಿದಿವೆ. ಆದರೆ ಪ್ರಪಂಚದ ಅತಿ ಪ್ರಮುಖ ಮೆದುಳಿನ ಸಂಶೋಧನ ಸಂಸ್ಥೆಯಾದ ಮಾಂಟ್ರೀಲಿನ (ಕೆನಡಾ) ನ್ಯೂರೋಲಾಜಿಕಲ್ ಸಂಸ್ಥೆಯ ಡಾ. ಪೆನ್‌ಫೀಲ್ಡರು ಹೇಳಿದಂತೆ "ಮನುಷ್ಯನ ಆತ್ಮದ ವಿಚಾರ ನಮ್ಮ ಅಳವಿಗೆ ನಿಲುಕದಿರಬಹುದು. ಆದರೆ ಅವನ ಮನಸ್ಸಿನ ಯಂತ್ರವನ್ನು ಅರಿತುಕೊಳ್ಳುವ ದಾರಿ ನಮಗೆ ತೆರೆದಿದೆ." *



ಸಂಬಳ ಬಂದ ದಿನ ಸಂಬಳದ ಪೂರ್ತಿ ಹಣವನ್ನು ರಾಯರು ಹೆಂಡತಿಯ ಕೈಗೆ ಕೊಡುತ್ತಿದ್ದರು. ಅವರ ಸ್ವಂತ ಖರ್ಚಿಗೆಂದು ಅವಳು ಅವರಿಗೆ ೫ ರೂಪಾಯಿಗಳನ್ನು ಕೊಡುತ್ತಿದ್ದಳು.

ಒಂದು ದಿನ ರಾಯರು ಮನೆಗೆ ಬರುತ್ತಲೇ ಹರ್ಷಾತಿರೇಕದಿಂದ "ಏನೇ, ನಮಗೆ ಲಾಟರಿಯಲ್ಲಿ ಪ್ರಥಮ ಬಹುಮಾನ ೧೦,೦೦೦ ರೂಪಾಯಿಗಳು ಸಿಕ್ಕಿವೆ" ಎಂದರು.

ಆಗ ಹೆಂಡತಿ ಮುಖಗಂಟಿಕ್ಕಿ, "ಅದು ಸರಿ. ಲಾಟರಿ ತಿಕೀಟು ಕೊಳ್ಳಲು ನಿಮಗೆ ಹಣ ಎಲ್ಲಿಂದ ಬಂತು?" ಎಂದು ಕೇಳಿದಳು.

ನಗೆಮಲ್ಲಿಗೆ

ಓರ್ವ ಅಪರಿಚಿತ ಯುವಕ ರಸ್ತೆಯ ಬದಿಯಲ್ಲಿ ನಿಂತಿದ್ದ. ನಮ್ಮ ಕಿಲಾಡಿ ರಾಮುವಿನೊಡನೆ, ''ಕೋರ್ಟ್ ರೋಡಿಗೆ ಹೋಗುವ ದಾರಿ ಯಾವುದು ?'' ಎಂದು ಕೇಳಿದ.

''ಇಲ್ಲಿಂದ ನೇರವಾಗಿ ಅರ್ಧ ಮೈಲು ಮುಂದಕ್ಕೆ ಹೋಗಿ ಎಡಕ್ಕೆ ತಿರುಗಿ, ಆ ರಸ್ತೆಯ ಬಲಕ್ಕೆ ಮೂರನೆಯದಾಗಿ ಸಿಗುವ ಅಡ್ಡರಸ್ತೆಯಲ್ಲಿ ನೇರವಾಗಿ ನಡೆದು ಕೊಂಡು ಹೋಗಿ ನಂತರ ಸಿಗುವ ಮೈಲು ಕಲ್ಲಿನ ಬಳಿಯಲ್ಲಿ ಬಲಕ್ಕೆ ತಿರುಗಿ ಮುಂದಕ್ಕೆ ಸಿಗುವ ಮೊದಲನೇ ಟರ್ನಿಂಗಿನಲ್ಲೇ ಎಡಕ್ಕೆ ತಿರುಗಿಕೊಂಡು ನೇರವಾಗಿ ನಡೆದರೆ ಕೋರ್ಟ್ ರೋಡ್ ಸಿಗುತ್ತದೆ'' ಎಂದು ರಾಮು ನಿರ್ದೇಶಿಸಿದ.

ಆ ವ್ಯಕ್ತಿ ಇಷ್ಟನ್ನೆಲ್ಲಾ ವಿವರವಾಗಿ ಬರೆದುಕೊಂಡು ಹೊರಟು, ಸುಮಾರು ಮುಕ್ಕಾಲು ಗಂಟೆಯ ನಂತರ ಮೊದಲಿದ್ದ ಸ್ಥಳಕ್ಕೆ ತಿರುಗಿ ಬಂದಾಗ ರಾಮು ಮೊದಲಿದ್ದ ಸ್ಥಳದಲ್ಲೇ ನಿಂತುಕೊಂಡಿದ್ದ.

ಆ ವ್ಯಕ್ತಿ ರಾಮುವಿನೊಡನೆ, "ನೀವ್ಯಾಕೆ ನನಗೆ ತಪ್ಪು ದಾರಿ ಹೇಳಿಕೊಟ್ಟರಿ ?" ಎಂದು ನೋವಿನ ಧ್ವನಿಯಲ್ಲಿ ಕೇಳಿತು.

''ನೀವು ಕೋರ್ಟ್ ರೋಡಿಗೆ ಹೋಗುವ ದಾರಿ ಕೇಳಿದ್ದಲ್ಲವೇ ?" — ರಾಮು ಪ್ರಶ್ನಿಸಿದ.

" ಹೌದು.''

"ಹಾಗಾದರೆ ಇದೇ ಕೋರ್ಟ್ ರೋಡು" ಎಂದಾ ಭೂಪ ಉತ್ತರಿಸಿದ.

*

ರಾಮರಾಯರು ಪತ್ತೇದಾರಿ ಕಾದಂಬರಿಯನ್ನೋದುವುದರಲ್ಲಿ ತಲ್ಲೀನರಾಗಿ ಹೋಗಿದ್ದರು. ಆಗ ಅವರ ಮಗ ಬಂದು "ಅಪ್ಪಾ, ಹಿಮಾಲಯ ಎಲ್ಲಿದೆ ?" ಎಂದು ಕೇಳಿದ.

"ನಿನ್ನ ಅಮ್ಮನನ್ನು ಕೇಳು. ಸಾಮಾನುಗಳನ್ನು ಎಲ್ಲಿ ಬೇಕಲ್ಲಿ ಇಡುವವಳು ಅವಳೇ" ಎಂದರು ರಾಮರಾಯರು.

*

ಶಿಕ್ಷಕ : ದಾನ ಧರ್ಮ ಮಾಡದ ಮನುಷ್ಯರು ಎಲ್ಲಿಗೆ ಹೋಗುತ್ತಾರೆ ?

ವಿದ್ಯಾರ್ಥಿ: ಸಿನೇಮಾಕ್ಕೊ ಹೋಟೆಲ್ಲಿಗೊ ಹೋಗುತ್ತಾರೆ.

*

ಸರಕಾರಿ ವಕೀಲರು ಆರೋಪಿತಳ ಪಾಟೀಸವಾಲು ನಡೆಸಿದ್ದರು.

"ಚಹದಲ್ಲಿ ವಿಷ ಬೆರಸಿ ನಿನ್ನ ಗಂಡನ ಮುಂದಿಟ್ಟ ಮೇಲೆ ಅವನು ಅದನ್ನು ಕುಡಿಯಲು ಎತ್ತುತ್ತಿರುವುದನ್ನು ನೋಡಿ ನಿನಗೇನೂ ಅನಿಸಲಿಲ್ಲವೆ ? ದುಃಖ ? ಪಶ್ಚಾತ್ತಾಪ ? ದಯೆ ?''

" ಹೌದು, ಒಂದು ಕ್ಷಣದ ಮಟ್ಟಿಗೆ ಅಯ್ಯೋ ಪಾಪ ಅನಿಸಿತು.''

" ಯಾವಾಗ ?''

"ಇನ್ನೊಂದು ಕಪ್ಪು ಕೊಡು ಎಂದವರು ಬೇಡಿದಾಗ.''

*

ದರ್ಜಿ : ಸ್ವಾಮಿ, ನಿಮ್ಮ ಕೋಟಿಗೆ ಎಷ್ಟು ಕಿಸೆ ಇಡಲಿ ?

ಗಿರಾಕಿ : ಇಡದಿದ್ದರೂ ನಡೆಯುತ್ತದೆ. ಏಕೆಂದರೆ ನನ್ನ ಕಿಸೆ ಯಾವಾಗಲೂ ಖಾಲಿ ಇರುತ್ತದೆ.

ನಾಮಾಂತರಕರಣ

ಲಾಂಗೂಲಾಚಾರ್ಯ

ಹೆಸರೆಂಬುದು ಒಂದು ತರಹದ ಮುಖ—ಜನರಿಗೆ ಗುರುತು ಹಿಡಿಯುವುದಕ್ಕೆ" ಎಂದೊಬ್ಬ ಹೇಳಿದ್ದಾನೆ. ತಮ್ಮ ಮುಖ ಮೆಚ್ಚಿಕೆಯಾಗದವರು ಕೆಲವರಿದ್ದಾರೆ; ಹಾಗೆಯೆ ತಮ್ಮ ಹೆಸರು ಮನಸಿಗೆ ಬಾರದವರೂ ಇದ್ದಾರೆ. ನೀವು ನಿಮ್ಮ ಮುಖವನ್ನು ಪೌಡರಿಸಬಹುದು, ಸ್ನೋವಿಸಬಹುದು; ಅರಳಿಸಬಹುದು, ಮುದುರಿಸಬಹುದು—ಆದರೆ ಬದಲಿಸಲಾರಿರಿ. ಸುದೈವದಿಂದ ನಿಮ್ಮ ಹೆಸರನ್ನು ಬದಲಿಸಬಲ್ಲಿರಿ.

ಆದ್ದರಿಂದ ಜನರು ತಮ್ಮ ವೈಯಕ್ತಿಕ ನಾಮಮುಖಗಳನ್ನು ಮಾತ್ರವಲ್ಲ, ಜಾತಿವೃತ್ತಿಗಳ ಮುಖಗಳನ್ನು ಕೂಡ ಬದಲಿಸುವುದನ್ನು ನಾವಿಂದು ನೋಡುತ್ತೇವೆ. ಈ ಆಟವನ್ನು ಯಾರು ಆರಂಭಿಸಿದರೋ ಗೊತ್ತಿಲ್ಲ. ಬಹುಶಃ ಗಾಂಧೀಜಿ ಅದಕ್ಕೆ ಉತ್ತೇಜನ ಕೊಟ್ಟರು. ಅವರು ಅಸ್ಪೃಶ್ಯರಿಗೆ ಹರಿಜನರೆಂದು ನಾಮಾಂತರಕರಣಮಾಡಿದರು.

ಇತರರು ಗಾಂಧೀಜಿ ಅಥವಾ ಇನ್ನಾವ ಮಹಾತ್ಮರಿಗಾಗಿ ಕಾಯದೆ ತಾವಾಗಿ ತಮ್ಮ ಜಾತಿಗಳ ಹೆಸರುಗಳನ್ನು ಬದಲಿಸಿಕೊಳ್ಳಲು ಮುಂದಾಗಿದ್ದಾರೆ. ತಮ್ಮ ಜಾತಿ—ಅಥವಾ ವೃತ್ತಿ—ಯ ಹೆಸರಿನ ಮೇಲೆ ಮತ್ತಾರಿಗಿಂತಲೂ ಆಗ್ರಹ ತಾಳಿರುವವರೆಂದರೆ ಕ್ಷೌರಿಕರು. ಕೆಲ ವರ್ಷಗಳ ಹಿಂದೆ ಮುಂಬಯಿ ರಾಜ್ಯದ ಕ್ಷೌರಿಕರು ಸರಕಾರವನ್ನು ಒತ್ತಾಯಿಸಿ ತಮ್ಮನ್ನು "ಹಜಾಮ"ರ ಬದಲು "ನಾಯಿ"ಗಳೆಂದು ಕರೆಯುವಂತೆ ಮಾಡಿಸಿಕೊಂಡರು. ಆದರೆ ಕರ್ನಾಟಕದ ಕ್ಷೌರಿಕರು ದ್ವಿಪಾದ ನಾಯಿಗಳಾಗಲು ಇಷ್ಟಪಡದ್ದರಿಂದ ಆ ನೂತನ ನಾಮಕರಣ ಇಲ್ಲಿ ಜಾರಿಗೆ ಬರಲಿಲ್ಲ.

ಜಮ್ಮುವಿನ ಹಜಾಮರು ಕೂಡ ನಾಯಿಗಳಾಗಲು ಒಪ್ಪಲಿಲ್ಲ. ಅವರು ತಮ್ಮನ್ನು "ರತನ ರಜಪೂತರು" ಎಂದೀಗ ಕರೆದುಕೊಳ್ಳುತ್ತಿದ್ದಾರೆ. ರತ್ನಕ್ಕೂ ಕ್ಷೌರಕ್ಕೂ ಏನು ಸಂಬಂಧವೊ ಯಾರಿಗೂ ಗೊತ್ತಿಲ್ಲ. ಪ್ರಾಯಶಃ ರತ್ನಗಳ ವ್ಯಾಪಾರವೂ ಒಂದು ತರಹದ ಕ್ಷೌರವೇ ಆದುದರಿಂದ ಅವರು ಈ ಹೆಸರು ಗೊತ್ತುಪಡಿಸಿಕೊಂಡಿರಬಹುದು. ಆದರೆ ಅವರ ಹೊಸ ಹೆಸರಿನ ಉತ್ತರಪದವು ಗಂಭೀರವಾದ ಎಚ್ಚರಿಕೆಯನ್ನೊಳಗೊಂಡಿದೆ. ನೀವೇನಾದರೂ ಅವರನ್ನು ಹಳೇ ಹೆಸರಿನಿಂದ ಕರೆದಿರೆಂದರೆ ಅವರು ಹೇಳಿಕೇಳಿ ರಜಪೂತರು. ಈಗ ಅವರ

ಖಡ್ಗ ಕಾಲಮಹಿಮೆಯಿಂದ ಕುಳ್ಳಾಗಿರಬಹುದು; ಆದರೂ ಅದು ನಿಮ್ಮ ಕೂದಲಿಗಿಂತಲೂ ಆಳಕ್ಕೆ ಹೋಗಿ ತನ್ನ ವೀರಪರಂಪರೆಯನ್ನು ತೋರಿಸಬಲ್ಲಷ್ಟು ನಿಶಿತವಾಗಿದೆ!

ತಮ್ಮ ಜಾತಿ — ಅಥವಾ ವೃತ್ತಿಯ ಹೆಸರು ಬದಲಿಸುವವರಲ್ಲಿ ನಾಪಿತರು ಮೊದಲನೆಯವ-ರಲ್ಲ, ತೀರ ಈಚೆಗಿನವರು. ಅವರಿಗಿಂತ ಮುಂಚೆ ಕುಂಬಾರರಿಂದ ಕುಲಾಲರಾದವರಿದ್ದಾರೆ, ಲಮಾಣಿಗಳೀಗ "ಲವಣಿ"ಗಳೆಂದು ಕರೆಸಿಕೊಳ್ಳಲು ಬಯಸುತ್ತಾರೆ. ನನ್ನನ್ನು ಕೇಳಿದರೆ ಕ್ಷೌರಿಕರು ಶಿರೋವಿಶ್ವಕರ್ಮರೆಂದು ತಮ್ಮನ್ನು ಕರೆದುಕೊಳ್ಳಬೇಕು. ಅವರು ನಮ್ಮ ತಲೆಗಳ ಆರ್ಕಿಟೆಕ್ಟರು ತಾನೆ? ಅದರ ಒಳಗೇನಿದೆಯೋ ಯಾರಿಗೂ ಕಾಣಿಸುವುದಿಲ್ಲ. ಆದರೆ ಹೊರಗಿನ ಶಿಲ್ಪ ಕಾರ್ಯದಿಂದ ಅವರು ನಿಮ್ಮನ್ನು ಒಂದು ರೂಪಕ್ಕೆ ತರುತ್ತಾರೆ. ಅವರು ಮುನಿದರೆ ನೀವು ನಿಜವಾಗಿ "ವಿಶ್ವರೂಪ"ರೇ ಆಗಬಹುದು.

ಈ ವರೆಗೆ ತಮ್ಮ ಹೆಸರಿಗಾಗಿ ನಾಚಿಕೊಳ್ಳದೆ ಇರುವ ಜಾತಿಯೆಂದರೆ ಬ್ರಾಹ್ಮಣರು ಮಾತ್ರ. ಅದಕ್ಕೆ ಕಾರಣ ಅವರಿಗೆ ನಾಚಿಕೊಳ್ಳತಕ್ಕ-ದ್ದೇನೂ ಇಲ್ಲ ಎಂಬುದಕ್ಕಿಂತಲೂ ಹೊಸಹೊಸ ವರ್ಗಗಳು ಬ್ರಾಹ್ಮಣರೆಂದು ಕರೆದುಕೊಳ್ಳಲು ಹೆಮ್ಮೆಪಡುತ್ತಿರುವುದರಿಂದ ಬ್ರಾಹ್ಮಣ್ಯದಲ್ಲಿ ಏನೋ ಶ್ರೇಷ್ಠತ್ವವಿದೆಯೆಂಬ ಸಂಶಯ ಅವರಿಗೆ ಬಂದಿರುವುದಾಗಿರಬೇಕು.

ಹೆಸರು ಬದಲಾವಣೆಯಲ್ಲಿ ಎರಡು ಬಲವುಗಳು ಕೆಲಸ ಮಾಡುತ್ತಿವೆ (ಅಥವಾ ಮೊನ್ನೆ ಮೊನ್ನೆಯ ವರೆಗೆ ಮಾಡುತ್ತಿದ್ದವು) ಒಂದು ಸಂಸ್ಕೃತೀಕರಣ, ಇನ್ನೊಂದು ಆಂಗ್ಲೀಕರಣ. ಶ್ರೀನಿವಾಸನ್ನರು ಎಸ್. ವಾಸನ್ನರಾದೊಡನೆ ಇದೀಗ ಆಂಗ್ಲ ಸ್ವರ್ಗದಿಂದಿಳಿದು ಬಂದ ದೇವತೆಗಳಂತೆ ಕಾಣಿಸುತ್ತಾರೆ. ಈ ಆಂಗ್ಲೀಕರಣದ ಒಂದು ಸ್ವಾರಸ್ಯ ಪ್ರಕರಣ ಈ ಶತಮಾನದ ಆರಂಭದಲ್ಲಿ ನಡೆದುಹೋಯಿತಂತೆ. ಈಶ್ವರನ್ ಎಂಬ ದಾಕ್ಷಿಣಾತ್ಯರು ಇಂಗ್ಲಂಡಿಗೆ ಹೋ ತಮ್ಮ ಡಿಗ್ರಿಯೊಡನೆ ನಾಮಾಂತರವನು ಪಡೆದುಬಂದರು: "ಈ. ವಾರೆನ್" ಎಂದ ಪ್ರೊಫೆಸರರಾಗಿ ಅವರು ಕೆಲಸಪ್ರಾರಂಭಿಸಿದಾ ಅವರು ಯಾವನೋ ಕಾರ್ಕೋಟಕನಿಂದ ರಾತ್ರಿ ಬೆಳಕಾಗುವುದರೊಳಗೆ ಕಪ್ಪು ಬಣ್ಣಕ್ಕೆ ತಿರುಗಿ ಸಲ್ಪಟ್ಟ ಇಂಗ್ಲೀಷ್ ನಳನೋ ಎಂಬಂತೆ ವರ್ತಿ ಸುತ್ತಿದ್ದರು. ಅನಂತರ ಒಂದು ನಿಜವಾ ದುರ್ದೈವ ಅವರಿಗೆ ಪ್ರಾಪ್ತವಾಯಿತು. ಬರ್ನಾ ರ್ಡ್ ಶಾ ತನ್ನ "ಮಿಸೆಸ್ ವಾರೆನ್ಸ್ ಪ್ರೊಫೆ ಶನ್" ನಾಟಕವನ್ನು ಪ್ರಕಟಿಸಿದರು. ಅದ ನಾಯಿಕೆ ಶ್ರೀಮತಿ ವಾರೆನ್ ಸಂಶಯಾಸ್ಪ ಸತೀತ್ವದ ವ್ಯಕ್ತಿಯಾಗಿದ್ದಾಳೆ. ಪ್ರೊಫೆಸರ್ ಈ ವಾರೆನ್ನರ ವಿದ್ಯಾರ್ಥಿಗಳು ಮಿಸೆಸ್ ವಾರೆನ್ನ ಉದ್ಯೋಗವನ್ನು ಕುರಿತು ಚರ್ಚಿಸತೊಡಗಿ ದಾಗ ಅವರಿಗೆ ತಮ್ಮ ಎರಡನೆಯ ಹೆಸರು ಮೊ ಲನೆಯದಕ್ಕಿಂತಲೂ ಕಪ್ಪಾಗಿ ಕಾಣಿಸಿತು ಆದರೆ ಅವರು ತಮ್ಮ ಇಂಗ್ಲೀಷ್‌ತನವನ್ನು ಕಡೆಗೂ ಬಿಡಲಿಲ್ಲ. ಅವರು ಈ. ಡಬ್ಲ್ಯೂ. ರೆನ್ ಆದರು!

ಇಂಗ್ಲಂಡಿನಲ್ಲಿಯೂ ೧೯೩೯ ರಲ್ಲಿ ನಾಮಾಂತ ರದ ಗಾಳಿ ಬೀಸಿತು. ಹಿಟ್ಲರನ ಧೂಮಕೇತು ಸದೃಶ ಉಚ್ಛ್ರಾಯದ ಕಾಲದಲ್ಲಿ ಕೆಲವರು ತಮ್ಮ ಅಡ್ಡ ಹೆಸರನ್ನು "ಹಿಟ್ಲರ್" ಎಂದು ಬದಲಾಯಿಸಿಕೊಂಡಿದ್ದರು. ಜರ್ಮನಿಗೂ ಇಂಗ್ಲಂಡಿಗೂ ಯುದ್ಧಾರಂಭವಾದಾಗ ಈ ಸ್ವಯಂನಿರ್ಮಿತ ಹಿಟ್ಲರರು ಅವಸರವಸರವಾಗಿ ಸ್ಮಿತ್ತರೋ ಮತ್ತೇನೋ ಆಗಿ ರೂಪಾಂತರಿಸಿ ದರು. ಜಾನ್ ಗೋಬೆಲ್‌ನೆಂಬವನು ಗೋವಿನ ಹಗ್ಗ ಹರಿದು ಬೆಲ್ಲವನ್ನಷ್ಟೇ ಇಟ್ಟುಕೊಂಡನು. ಈ ಸಮಯದಲ್ಲೇ ಒಬ್ಬಾನೊಬ್ಬ ಇಂಗ್ಲೀಷನು ರಶಿಯದೊಡನೆ ಇಂಗ್ಲೀಷರ ಮೈತ್ರಿಯನ್ನು ದೃಢೀಕರಿಸುವುದಕ್ಕಾಗಿ ಸ್ಟಾಲಿನ್ನನಾಗಿದ್ದನು. ತನ್ನ ಅವಸರಕ್ಕಾಗಿ ಪಶ್ಚಾತ್ತಾಪಪಡುವ

ಕಾಲ ಅವನಿಗೆ ಬೇಗನೇ ಬಂತು. ಅವನು ಜೋಸ್ವಾಲಿನ್ನತನದಿಂದ ಮುಕ್ತನಾಗಿ ಸರಳ ಇಂಗ್ಲೀಷ್ ಹೆಸರಿಗೇ ಶರಣು ಹೋಗಬೇಕಾಯಿತು.

ಆದರೆ ಆಂಗ್ಲೀಕರಣ ಈಗ ತುಸು ಅ-ಜನಪ್ರಿಯವಾಗಿದೆ. ನಾವು ಸಂಸ್ಕೃತೀಕರಣದತ್ತ ಭರದಿಂದ ಸಾಗುತ್ತಿದ್ದೇವೆ. ನಮ್ಮ ಕಲ್ಲ, ಮಲ್ಲ, ಯಲ್ಲ ಮೊದಲಾದವು ಹೋಗಿ ವಸಂತಕುಮಾರ, ನಳಿನೀಪತಿ, ಶರತ್ ಮೊದಲಾದ ಹೆಸರುಗಳು ಬರುತ್ತಿವೆ. ಜಾತಿಗಳೂ ಸಂಸ್ಕೃತೀಕೃತವಾಗುತ್ತಿವೆ.

ಹೆಸರುಗಳ ಸಂಸ್ಕೃತೀಕರಣದಿಂದ ಅಗಾಧ ಆತ್ಮವಿಶ್ವಾಸ ಬರುತ್ತದೆಂದು ತೋರುತ್ತದೆ. ಕಲ್ಲವ್ವನನ್ನು ನೀವು ಶಿಲಾವತಿಯೆಂದು ಕರೆದರೆ ಅವಳು ಬೇರೆಯೆ ಮನುಷ್ಯಳಾಗಿಬಿಡಬಹುದು. ಅರ್ಥ ಒಂದೇ ಆದರೂ ಸಂಸ್ಕೃತದ ಕಲ್ಲು ಕನ್ನಡದಕ್ಕಿಂತ ಮೆದುವಾಗಿ ಕಾಣುವುದು. ಸಂಸ್ಕೃತದಲ್ಲಿ ಎಲ್ಲವೂ ಚಂದವೇ! ವೈದಿಕ ಋಷಿಗಳಾದ ಶುನಶ್ಶೇಪ, ಶುನಃಪುಚ್ಛ, ಶುನೋಲಾಂಗೂಲರ ಹೆಸರುಗಳ ಅರ್ಥವನ್ನು ನೀವೇ ಬೇಕಾದರೆ ನಿಘಂಟುವಿನಲ್ಲಿ ನೋಡಿಕೊಳ್ಳಿ. ಅವರಾರೂ ತಮ್ಮ ಹೆಸರನ್ನು ಬದಲು ಮಾಡಿಕೊಳ್ಳಲಿಲ್ಲ.

ತದ್ವಿರುದ್ಧವಾಗಿ, ಒಬ್ಬನನ್ನು ತುಚ್ಛೀಕರಿಸಬೇಕೆಂದಿದ್ದರೆ ಅವನ ಹೆಸರನ್ನು ಕನ್ನಡಕ್ಕೆ ಅನುವಾದಿಸಿ ಹೇಳಿರಿ. ಬ್ರಾಹ್ಮಣರ ಹೆಮ್ಮೆಯನ್ನು ಹೇಳಿದೆನಲ್ಲ. ಅವರನ್ನು ಹಾರುವರೆಂದು ಕರೆದು ನೋಡಿರಿ. ಹಾರುವ ಶಬ್ದಕ್ಕೆ ಕಂಡವ— ಋಷಿ ಎಂದರ್ಥವಿದ್ದರೂ ಬ್ರಾಹಣರಿಗೆ ಅದು ಬೇಕಿಲ್ಲ. ಕನ್ನಡ ಕವಿಗಳು ಯಾರ ಬಾಯಿಂದಾದರೂ ಬಾಹ್ಮಣರನ್ನು ತುಚ್ಛವಾಗಿ ಮಾತಾಡಿಸಬೇಕಾದರೆ ಅವರನ್ನು "ಹಾರುವ" ಎಂದು ಹೇಳಿಸುತ್ತಾರೆ. ಬ್ರಾಹ್ಮಣ ಹಾರುವನಾದರೆ ಅವನ ಹೆಮ್ಮೆಯೆಲ್ಲ ಕಂದಿಹೋಗಿ ಅವನು ನೀರಿನಲ್ಲಿ ಮುಳುಗಿಸಿದ ಬೆಕ್ಕಿನಂತಾಗುತ್ತಾನೆ. ನನ್ನ ಹೆಸರು "ಲಾಂಗೂಲಾಚಾರ್ಯ" ಎಂಬುದರ ಬದಲಾಗಿ "ಬಾಲದಯ್ಯ" ಎಂದಿದ್ದರೆ ನಾನು ಬರೆಯುತ್ತಿದ್ದಿಲ್ಲ. ಬರೆದಿದ್ದರೆ ನೀವು ಓದುತ್ತಲೂ ಇದ್ದಿಲ್ಲ.

ಇದೆಲ್ಲವನ್ನು ನೋಡಿ ನನಗೀಗ ಖಂಡಿತವಾಗಿದೆ—ನಾಳೆ ನೀವು ಕತ್ತೆಯನ್ನು "ಗಾರ್ಧಭ" ಎಂದು ಕರೆಯತೊಡಗಿದರೆ ಅದರ ರಾಗ ಸುಧಾರಿಸೀತೋ ಇಲ್ಲವೊ ಹೇಳಲಾರೆ; ಆದರೆ ಅದು ನಿಶ್ಚಯವಾಗಿ ನಿಮ್ಮ ಅಗಸನ ಗಂಟು ಹೊರಲು ನಿರಾಕರಿಸುವುದು. *



೧೮೫೭ ರ ಸ್ವಾತಂತ್ರ್ಯ
ಸಮರದ ಕರ್ಣಧಾರನ
ಜೀವನದ ಕೊನೆಯ ಅಂಕ

ನಾನಾ ಸಾಹೇಬನ
ಕೊನೆಯ ದಿನಗಳ

ಅನುವಾದ : **ಕೆ. ಎನ್. ಭಟ್**

ನಗರ ಸೇಠಜಿಯವರ ಮನೆಯಲ್ಲಿ ಅಂದು ಎಲ್ಲರೂ ಚಿಂತಾಕ್ರಾಂತರಾಗಿದ್ದರು. ಅಲ್ಲಿಯ ವಾತಾವರಣವೆಲ್ಲ ದುಃಖಮಯವಾಗಿತ್ತು. ದೊಡ್ಡ ದೊಡ್ಡ ವೈದ್ಯರುಗಳೆಲ್ಲ ಅಲ್ಲಿ ಬಂದು ಸೇರಿದ್ದರು. ನಗರ ಸೇಠಜಿಯವರ ಪತ್ನಿಯ ಸ್ಥಿತಿಯು ಚಿಂತಾಜನಕವಾಗಿತ್ತು. ವೈದ್ಯರು ಎಲ್ಲ ಪ್ರಯತ್ನಗಳನ್ನೂ ಮಾಡಿ ಮುಗಿಸಿ, ನಿರಾಶರಾಗಿ— "ಈಕೆ ಇನ್ನು ಬದುಕುವ ಆಸೆಯಿಲ್ಲ!" ಎಂದು ಮನಗಂಡಿದ್ದರು. ಅದೇ ವೇಳೆಯಲ್ಲಿ ಕಾವೀ ವಸ್ತ್ರಧಾರಿಯಾದ ಓರ್ವ ಪುರುಷನು ಅನಿರೀಕ್ಷಿತವಾಗಿ ಅಲ್ಲಿಗೆ ಬಂದನು. ಅಂಗ-ಸಾಧನೆಯಿಂದ ದೃಢಕಾಯನಾದ ಆ ವ್ಯಕ್ತಿಯು ಮಹಾತೇಜಸ್ವಿಯಂತೆ ತೋರುತ್ತಿದ್ದನು.

ಅಗಲವಾದ ಆತನ ಹಣೆಯಲ್ಲಿ ತಿಲಕವು ಶೋಭಿಸುತಿತ್ತು. ಕಣ್ಗಳು ಕಾಂತಿಯಿಂದ ಕೂಡಿದ್ದು ನೋಡಿದವರ ಮನಸ್ಸಿನ ಮೇಲೆ ಆತನ ದಿವ್ಯ ಪ್ರಭಾವವು ಅಚ್ಚೊತ್ತಿದಂತಾಗಿ "ಈತ ಯಾರೋ ಮಹಾತ್ಮನಾಗಿರಬೇಕು" ಎಂದೆನಿಸುತ್ತಿತ್ತು. ಬಂದಿದ್ದ ಆ ಮಹಾತ್ಮರು ಮುಂದೆ ಬರಲು ನಗರಸೇಠಜೀಯವರು ಎದ್ದು ನಿಂತು ಭಕ್ತಿಯಿಂದ ನಮಸ್ಕಾರ ಮಾಡಿದರು. ಆ ಮಹಾತ್ಮರು, ಶೋಚನೀಯಾವಸ್ಥೆಯಲ್ಲಿದ್ದ ರೋಗಿಯ ಕಡೆಗೆ ತಮ್ಮ ದೃಷ್ಟಿಯನ್ನು ಬೀರಿ ಹೇಳಿದರು—

"ಮಹಾಶಯರೇ...... ನೀವು ಹೀಗೇಕೆ ದುಃಖಿಸುವಿರಿ? ಏನೂ ಗಾಬರಿಯಿಲ್ಲ! ಈ ರೋಗಕ್ಕಾಗಿ ನೀವೇನೂ ಚಿಂತೆ ಮಾಡಬೇಡಿ. ಧೈರ್ಯವಾಗಿರಿ! ನಾನೀಗ ಒಂದು ಮದ್ದು ಹೇಳುತ್ತೇನೆ, ಅದನ್ನು ಬೇಗನೆ ತರಿಸಿಕೊಡಿ!" ಎಂದೊಡನೆಯೇ ನೌಕರರು ಓಡಿ, ಸ್ವಲ್ಪ ಹೊತ್ತಿನಲ್ಲಿಯೇ ಆ ವನಸ್ಪತಿ ಮದ್ದನ್ನು ತೆಗೆದುಕೊಂಡು ಬಂದರು. ಒಡನೆಯೇ ಆ ಮಹಾತ್ಮರು ಸ್ವತಃ ಔಷಧಿಯನ್ನು ತಯಾರು ಮಾಡಿ ರೋಗಿಗೆ ಕುಡಿಸಿದರು! ಸ್ವಲ್ಪ ಹೊತ್ತಿನಲ್ಲೇ ಆ ಔಷಧದ ಪ್ರಭಾವ ಕಂಡುಬರುತ್ತಿರಲು, ಅಲ್ಲಿದ್ದವರೆಲ್ಲರೂ ಆಶ್ಚರ್ಯಭರಿತರಾದರು.

"ರಾಷ್ಟ್ರಮತ" ದಿಂದ

ಎಷ್ಟೋ ಮಂದಿ ವೈದ್ಯರ ಮೂರು ದಿನಗಳ ಸರ್ವ ಪ್ರಯತ್ನವೂ ಫಲಕಾರಿಯಾಗದಿದ್ದು, ಇದೀಗ ಮಹಾತ್ಮರ ಒಂದೇ ಸಲದ ಔಷಧಿಯಿಂದ, ರೋಗಿಯು ಚೇತನ ಹೊಂದುತ್ತಿರುವುದನ್ನು ಕಂಡ ಎಲ್ಲರೂ ಹರ್ಷಗೊಂಡರು. ಸೇಠಜಿಯವರ ಪತ್ನಿಯ ಆ ವ್ಯಾಧಿಯು ತುಸು ಹೊತ್ತಿನಲ್ಲೇ ಪೂರ್ಣ ಗುಣವಾಗಿ ಅವರು ಮೃತ್ಯುವಿನ ದವಡೆಯಿಂದ ಪಾರಾದರು! ಎಲ್ಲರೂ ಭಯ-ಭಕ್ತಿಗಳಿಂದ ಆ ಮಹಾತ್ಮರನ್ನು ವಂದಿಸಿದರು. ಪರಮಾತ್ಮನೇ ಈ ದಿವ್ಯರೂಪಧಾರಿಯಾಗಿ ಬಂದಿರುವನೆಂದು ತಿಳಿದುಕೊಂಡ ಸೇಠಜಿಯವರು ಆ ಮಹಾಪುರುಷನ ಮುಂದೆ ನಿಂತು, ವಿನಯದಿಂದ ಅರಿಕೆ ಮಾಡಿದರು.

"ಸ್ವಾಮೀ . . . ತಾವು ಸಾಕ್ಷಾತ್ ಭಗವಂತನಂತೆ ಆಪತ್ಕಾಲದಲ್ಲಿ ಬಂದು ಜೀವದಾನ ಮಾಡಿದಿರಿ! ತಮ್ಮ ಈ ಮಹದುಪಕಾರಕ್ಕಾಗಿ. . ." ಎಂದು ಹೇಳುತ್ತಿರುವಾಗ ಅವರನ್ನು ತಡೆದು, ಆ ಮಹಾತ್ಮರು- "ನಾವು ಸಾಧು ಸಂನ್ಯಾಸಿಗಳು. ನಮ್ಮ ಇಚ್ಛೆ ಯಾವುದೂ ಇಲ್ಲ! ಎಲ್ಲವೂ ಪರಮಾತ್ಮನ ಇಚ್ಛೆಯಂತೆ ನಡೆಯುವುದು" ಎಂದು ಹೇಳುತ್ತ ಮುಂದೆ ಹೊರಡಲುದ್ಯುಕ್ತ-ರಾದರು.

ಆದರೆ, ತನ್ನ ಪತ್ನಿಯ ಭಯಂಕರವಾದ ಹೊಟ್ಟೆ ನೋವನ್ನು ನಿಲ್ಲಿಸಿ, ಪ್ರಾಣವುಳಿಸಿ ಉಪಕಾರಗೈದ ಆ ಮಹಾತ್ಮನನ್ನು ಸೇಠ್‌ಜಿಯವರು ಹೇಗೆ ತಾನೆ ಅಂತೆಯೇ ಹೋಗಗೊಡಬಲ್ಲರು? ಸೇಠ್‌ಜಿಯವರು ಕರಗಳನ್ನು ಜೋಡಿಸಿ, ಗದ್ಗದಿತರಾಗಿ ಪ್ರಾರ್ಥಿಸಿದರು: "ಸ್ವಾಮೀ . . . ತಾವು ಮಹಾತ್ಮರು! ತಾವು ಇಲ್ಲೇ ಇದ್ದುಕೊಂಡು ನಮ್ಮ ಸೇವೆಯನ್ನಾದರೂ ಸ್ವೀಕರಿಸಬೇಕು. ತಮಗೆ ಬೇಕಾದ ವಸತಿಯ ಮತ್ತು ಊಟಉಪಚಾರದ ಏರ್ಪಾಡು, ಎಲ್ಲವನ್ನೂ ನಾನು ಯೋಗ್ಯ ರೀತಿಯಿಂದ ಮಾಡಿ ಕೊಡುತ್ತೇನೆ. ತಾವು ಇಲ್ಲೇ ಇದ್ದು ಅನುಗ್ರಹಿಸಬೇಕು!" ಎಂದು ಕೇಳಿಕೊಂಡರು.

ಆಗ ಅವರು "ಆಗಲಿ. ಆದರೆ ನಾನಿಲ್ಲಿ ನಿಲ್ಲಬೇಕಾದರೆ, ನಮ್ಮ ಕೆಲವು ನಿಬಂಧನೆಗಳಿವೆ. ನೀವೆಲ್ಲರೂ ಈ ನಿಬಂಧನೆಗೊಳಪಟ್ಟಿರಬೇಕಾ-ಗುವುದು" ಎಂದು ಗಂಭೀರವಾಗಿ ಹೇಳಿದರು. ಸೇಠ್‌ಜಿಯವರು- "ಆಗಬಹುದು—ಅಗತ್ಯವಾಗಿ ಹೇಳಬೇಕು-" ಎಂದರು.

"ನಮ್ಮ ಮೊದಲನೆಯ ನಿಬಂಧನೆ ಏನೆಂದರೆ— ನಮ್ಮ ವಿಚಾರವಾಗಿ ಯಾವುದೊಂದು ಪ್ರಶ್ನೆಯನ್ನಾಗಲೀ ನಮ್ಮ ಹೆಸರನ್ನಾಗಲೀ ಯಾರೂ ಕೇಳಕೂಡದು. ಎರಡನೆಯ ನಮ್ಮ ನಿಬಂಧನೆಯೆಂದರೆ.- ನಾವು ಎರಡೂವರೆ ಸೇರು ಹಿಟ್ಟಿನ ಒಂದು ರೊಟ್ಟಿ ಮತ್ತು ಚಟ್ನಿಯನ್ನು ಮಾತ್ರ ದಿನಕ್ಕೆ ಒಂದು ಸಲ ನಮ್ಮ ಆಹಾರವಾಗಿ ತೆಗೆದುಕೊಳ್ಳುತ್ತೇವೆ. ಇದರ ಹೊರತು ಬೇರೆ ಆಹಾರಪಾನೀಯಗಳ ಬಗ್ಗೆ ಯಾರೂ ನಮ್ಮನ್ನು ಬಲವಂತಪಡಿಸಬಾರದು . . ."

ನಗರ ಸೇಠಜಿಯವರಿಗೆ ಈ ನಿಬಂಧನೆಗಳೇನೂ ಕಠಿಣವಾಗಿ ತೋರಲಿಲ್ಲ. ಅವರು ಉತ್ಸಾಹದೊಡನೆ ತಮ್ಮ ಮನೆಯ ಒಂದು ಕೋಣೆಯಲ್ಲೇ ಆ ಮಹಾತ್ಮರಿಗೆ ಯೋಗ್ಯ ವ್ಯವಸ್ಥೆಯನ್ನು ಮಾಡಿಕೊಟ್ಟರು. ಅವರು ಅಲ್ಲೇ ವಾಸ ಮಾಡತೊಡಗಿದರು.

*

೧೮೫೭ ರ ಸ್ವಾತಂತ್ರ್ಯ ಸಂಗ್ರಾಮವು ಕಳೆದು ಹೆಚ್ಚು ದಿನಗಳಾಗಿರಲಿಲ್ಲ. ಇಂಗ್ಲೀಷರ ವಿಜ-ಯೋತ್ಸಾಹದ ವಾರ್ತೆ ಎಲ್ಲೆಲ್ಲೂ ಪ್ರತಿಧ್ವನಿಸುತ್ತಿತ್ತು. ಇಂಗ್ಲೀಷರ ಆಕ್ರಮಣ ಮತ್ತು ವಿಜಯದ ವಾರ್ತೆಯನ್ನು ಕೇಳುತ್ತಿದ್ದ ಆ ಮಹಾತ್ಮರಿಗೆ, ಆ ವಾರ್ತೆ ಕೇಳಿದೊಡನೆಯೇ ಮುಖ ವೀರಾವೇಶದಿಂದ ಕಳೆಯೇರುತ್ತಿತ್ತು. ಇಂತಹ ವಾರ್ತೆ ಅವರ ಕಿವಿಗೆ ಬಿದ್ದಾಗ ಅವರು ಊಟ ಮಾಡುತ್ತಿದ್ದರೂ ಸರಿಯೆ, ಧ್ಯಾನಾಸಕ್ತರಾಗಿದ್ದರೂ ಸರಿಯೆ, ಒಡನೆಯೇ ಉದ್ವಿಗ್ನರಾಗಿ

ಮೇಲೆದ್ದುಬಿಡುತ್ತಿದ್ದರು. ಅವರ ಈ ವರ್ತನೆ ನೋಡಿ ಎಲ್ಲರಿಗೂ ಆಶ್ಚರ್ಯವಾಗುತ್ತಿತ್ತು. ಆದರೂ ಯಾರೂ ಏನನ್ನೂ ಕೇಳುವಂತಿರಲಿಲ್ಲ. ಆದರೆ ಆಗಿನ ಅವರ ಸ್ಥಿತಿಯನ್ನು ನೋಡಿದಾಗ ಏನೋ ಒಂದು ಮನೋವೇದನೆ ಅವರ ಹೃದಯ ದಲ್ಲಡಗಿದೆ, ಎಂದು ಯಾರಿಗೂ ತಿಳಿಯುವಂತಿದ್ದಿತು.

ಒಂದು ಸಲ ಒಬ್ಬ ಮಹಾಶಯರು ಅವ-ರೊಡನೆ, "ತಮ್ಮ ಮೈ ಕೈಗಳ ಮೇಲೆ ಇಷ್ಟೊಂದು ಗಾಯಗಳಿವೆಯಲ್ಲ? ಈ ಗಾಯ ಗಳು ಹೇಗಾದುವು ಸ್ವಾಮಿ?" ಎಂದು ಕೇಳಿದರು. ಆಗ ಅವರು ಅದಕ್ಕೆ ಸಂಕ್ಷೇಪವಾಗಿ ಉತ್ತರ ಕೊಟ್ಟರು:— "ಒಂದು ಸಲ ನಾನು ಯುದ್ಧ ಭೂಮಿಯಲ್ಲಿ ಯುದ್ಧ ಮಾಡುತ್ತಿದ್ದಾಗ-ನನ್ನ ಎಡಗೈಯ ಮೂರು ಬೆರಳುಗಳೂ ತುಂಡಾದುವು! ಆಗಲೇ ಈ ಗಾಯಗಳೆಲ್ಲ ಆಗಿವೆ."

ದಿನಗಳುರುಳಿದುವು. ವರ್ಷ ಕಳೆಯಿತು. ಮೂರು ವರ್ಷಗಳು ಸಂದುವು. ಮತ್ತೊಂದು ದಿನ ಆ ಮಹಾತ್ಮರು ಸೇಠಜಿಯವರಲ್ಲಿಂದ ಬಿಡಾರ ತೆಗೆದರು. ಆದರೆ ದೂರ ಹೋಗಲಿಲ್ಲ. ಹತ್ತಿರದ ಭವಾನಿಯ ಮಂದಿರದಲ್ಲೇ ವಾಸ ಮಾಡತೊಡಗಿದರು. ಕೆಲವೇ ದಿನಗಳಲ್ಲಿ ಅವರ ಆರೋಗ್ಯವೂ ಕೆಡಲಾರಂಭಿಸಿತು. ಒಂದು ದಿನ ಅವರು ಬಹಳ ಅಸ್ವಸ್ಥರಾಗಿ ಮಲಗಿದರು. ಆ ದಿನ, ಅವರು ಸೇಠಜಿಯವರನ್ನೂ ಠಾಕೂರ್ ಸಾಹೇಬರನ್ನೂ ತಾವಿದ್ದಲ್ಲಿಗೆ ಬರಮಾಡಿಕೊಂಡರು. ಸೇಠಜಿಯವರೂ ಠಾಕೂರರೂ ಬಂದು, ಮಹಾತ್ಮಾಜಿಯವರ ಪಕ್ಕದಲ್ಲೇ ಕುಳಿತುಕೊಂಡರು. ಮಹಾತ್ಮರು ಮಲಗಿದ್ದರು. ಅವರ ಶ್ವಾಸೋಚ್ಛ್ವಾಸವು ತೀವ್ರಗತಿಯಿಂದ ನಡೆಯುತ್ತಿತ್ತು. ಮಾತು ನಿಧಾನವಾಗಿ ಹೊರಡುತ್ತಿತ್ತು. ಆ ಕೊನೆಯ ಗಳಿಗೆಯಲ್ಲಿ, ತಮ್ಮ ಯಾವುದೋ ಒಂದು ರಹಸ್ಯ ವಿಚಾರವನ್ನು ಹೇಳಬೇಕೆಂದು, ಅವರು ತೀವ್ರ ಅಪೇಕ್ಷೆಯು-ಳ್ಳವರಾಗಿದ್ದರು. ಅವರು ಕಾತರರಾಗಿ ನಾಲ್ಕೂ ಕಡೆಗಳಿಗೆ ದೃಷ್ಟಿಯನ್ನು ಹೊರಳಿಸುತ್ತ ಸಣ್ಣ ಧ್ವನಿಯಲ್ಲಿ ಹೇಳಿದರು—

"ಸೇಠಜೀ . . . ನೀವು ನನಗೆ ಇದುವರೆಗೆ ಆಶ್ರಯವನ್ನಿತ್ತು ಮಹದುಪಕಾರ ಮಾಡಿರುವಿರಿ. ಇದಕ್ಕಾಗಿ ನಾನು ಕೃತಜ್ಞನಾಗಿದ್ದೇನೆ. ಈ ದಿನ ಬೆಳಗಿನಿಂದ ನನ್ನ ದೇಹ ಸ್ಥಿತಿ ಕೆಟ್ಟಿದೆ. ಇನ್ನು ನಾನು ಜೀವಿಸಿರುವುದು ಭರವಸೆಯಿಲ್ಲ. ಈ ಲೋಕದಲ್ಲಿ ಇನ್ನು ಜೀವಿಸಿ ಇರಬೇಕೆಂಬ ಇಚ್ಛೆಯೂ ನನಗಿಲ್ಲ."

ಮಹಾತ್ಮರ ಮಾತುಗಳನ್ನು ಕೇಳಿದ ಸೇಠಜಿಯವರು ದುಃಖಿತರಾದರೂ ತೋರಗೊಡದೆ, "ಸ್ವಾಮೀ . . . . ತಾವು ಹೀಗೆ ನಿರಾಶರಾಗ ಬೇಡಿರಿ. ಈಗ ತಮ್ಮ ಆರೋಗ್ಯವು ಕೆಟ್ಟಿದೆ. ನಾಳೆಗೆ ಸ್ವಲ್ಪ ಸುಧಾರಿಸಬಹುದು" ಎಂದು ಆಶೆಯ ನಾಲ್ಕು ಮಾತುಗಳನ್ನು ಹೇಳಿದರು.

ಮಹಾತ್ಮರು ದೃಢಸ್ವರದಿಂದ ಹೇಳಿದರು— "ನನ್ನ ಮರಣ ಕಾಲವು ಸನ್ನಿಹಿತವಾಗಿದೆ. ಅದನ್ನು ನಾನು ತಿಳಿದುಕೊಳ್ಳಬಲ್ಲೆ. ಸಾಯುವ ಮೊದಲು ನನ್ನ ನಿಜವಾದ ಪರಿಚಯವನ್ನು ನಿಮ ಗೆಲ್ಲರಿಗೆ ಮಾಡಿಕೊಡಬೇಕು ಎಂಬ ಅಪೇಕ್ಷೆಯಿಂದ ನಿಮ್ಮನ್ನು ಇಲ್ಲಿಗೆ ಕರೆಸಿದೆ. ಇಂಗ್ಲೀಷರು ಹಲವು ಕಾಲದಿಂದ ಓರ್ವ ವ್ಯಕ್ತಿಯನ್ನು ಸೆರೆ ಹಿಡಿಯಲು ಪ್ರಯತ್ನಿಸುತ್ತಿದ್ದಾರೆ. ಅಷ್ಟು ಮಾತ್ರವಲ್ಲ; ಹಿಡಿದುಕೊಟ್ಟವರಿಗೆ ಸಾವಿರಾರು ರೂಪಾಯಿಗಳ ಇನಾಮು ಕೊಡುವುದಾಗಿಯೂ ಘೋಷಿಸಿದ್ದಾರೆ! ಇಷ್ಟಾದರೂ ಯಾರ ಕೈಗೂ ಸಿಕ್ಕದ ಆ ವ್ಯಕ್ತಿ ನಾನೇ ಆಗಿದ್ದೇನೆ. ಪೇಶ್ವೆಯವರ ವಂಶದ ಅಂತಿಮ ಪುರುಷ ನಾನಾ-ಸಾಹೇಬ್ ಪೇಶ್ವೆ ನಾನು."

ಮಹಾತ್ಮರ ನಿಜ ಪರಿಚಯ ತಿಳಿದ ಮೇಲೆ, ಸೇಠಜಿಯವರೂ ಠಾಕೂರರೂ ವಿಸ್ಮಿತರಾದರು. ನಾನಾಸಾಹೇಬ್ ಪೇಶ್ವೆಯವರು ಮತ್ತೂ ಹೇಳ ತೊಡಗಿದರು—

"ಸಿಂಧಿಯಾ ಮತ್ತು ಹೋಳ್ಕರರೆ ನಮಗೆ ವಿಶ್ವಾಸಘಾತ ಮಾಡಿ ಮೋಸ ಮಾಡಿದರು. ಆದರಿಂದಾಗಿ ನಮಗೆ ಅಪಜಯ ಪ್ರಾಪ್ತವಾಯಿತು! ನಾವು ಅಲ್ಲಿಂದ ಕಾಲ್ದೆಗೆಯಬೇಕಾಯಿತು. ಝಾನ್ಸೀ ಲಕ್ಷ್ಮಿ ವೀರನಾರಿಯನ್ನು ಕೊಂದೂ ಹಾಕಿದರು! ಧೀರ ತಾತ್ಯಾ ಟೋಪಿಯನ್ನು ಫಿರಂಗಿಯ ಬಾಯಿಗೆ ಕೊಟ್ಟು ಕೊಲೆಗೈದರು. ಇಷ್ಟೆಲ್ಲವನ್ನೂ ಇಂಗ್ಲೀಷರು ಮಾಡಿಯೇ ಬಿಟ್ಟರು. ನಾನು ಅಲ್ಲಿಂದ ಹೊರಟವನು ಎಷ್ಟೋ ದಿನಗಳ ಬಳಿಕ ಇಲ್ಲಿಗೆ ಬಂದು ಸೇರಿದೆ. ನಾನು ನನ್ನ ಈ ಜೀವಮಾನದಲ್ಲಿ ಇದು ವರೆಗೆ, ಹದಿನೆಂಟು ಯುದ್ಧಗಳಲ್ಲಿ ಭಾಗವಹಿಸಿದ್ದೇನೆ. ನನ್ನ ಅಂಗಾಗಗಳಲ್ಲಿ ತೋರುವ ಈ ಗಾಯಗಳು ಆ ಯುದ್ಧ ಕಾಲದಲ್ಲೇ ಆಗಿವೆ. ಇಂತು, ನನ್ನ ಸಂಕ್ಷಿಪ್ತ ಪರಿಚಯವನ್ನು ನಿಮಗೆ ಕೊಟ್ಟಿದ್ದೇನೆ... ಇನ್ನು ನೀವು ಆ ಇಂಗ್ಲೀಷರಿಗೂ ತಿಳಿಸಿಬಿಡಿ! ವೃಥಾ ಅವರು ನನ್ನನ್ನು ಹುಡುಕಿಸುತ್ತ ಕಷ್ಟ ಪಡುವ ಅಗತ್ಯವಿಲ್ಲ." ಇದಿಷ್ಟನ್ನು ಹೇಳುವಾಗ ಪೇಶ್ವೆಯವರ ಉಸಿರು ಒಂದು ಸಲ ಮೇಲೆ ಬಂದಂತಾಯಿತು. ಒಂದು ಗಳಿಗೆ ಅವರು ಕಣ್ಣು ಮುಚ್ಚಿ ಸ್ತಬ್ಧರಾಗಿ ಮತ್ತೆ ಮೆಲ್ಲಗೆ ಹೇಳತೊಡಗಿದರು :

"ನನ್ನ ಜೀವನದ ಮಹತ್ವಾಕಾಂಕ್ಷೆಗಳೆಲ್ಲವೂ ಮಣ್ಣುಗೂಡಿದವು! ಅದನ್ನಿನ್ನು ನೆನೆದು ಫಲವಿಲ್ಲ! ಇನ್ನು ನನ್ನ ಮರಣದ ಈ ಕೊನೆಯ ಗಳಿಗೆಯಲ್ಲಿ ನನ್ನ ಒಂದೇ ಒಂದು ಇಚ್ಛೆ ಬಾಕಿ ಉಳಿದಿದೆ. ನೀವು ನನ್ನೀ ಸದಿಚ್ಛೆಯನ್ನು ಪೂರೈಸಿ ಕೊಡಬಹುದೆಂಬ ದೃಢ ವಿಶ್ವಾಸ ನನಗಿದೆ." ಎನ್ನುತ್ತಿರಲು ಸೇಠಜಿಯವರು ಉತ್ಸುಕರಾಗಿ ಹೇಳಿದರು—

"ಸ್ವಾಮೀ, ತಮ್ಮ ಯಾವ ಇಚ್ಛೆಯಿದ್ದರೂ ಸಂಕೋಚವಿಲ್ಲದೆ, ಈ ಸೇವಕನಲ್ಲಿ ಹೇಳಬೇಕು. ತಮ್ಮಿಂದ ನಾನು ಹೊಂದಿದ ಉಪಕಾರವನ್ನು ಎಂದೂ ಮರೆಯಲಾರೆ."

ವೀರ ನಾನಾಸಾಹೇಬ್ ಪೇಶ್ವೆಯವರು ತಮ್ಮ ಅಂತಿಮ ಇಚ್ಛೆಯನ್ನು ತಿಳಿಸಿದರು—

"ನನ್ನ ಕೊನೆಯುಸಿರನ್ನು ಎಳೆದು ಬಿಡಲು ಇನ್ನು ಹೆಚ್ಚು ಹೊತ್ತು ಉಳಿದಿಲ್ಲ. ನಾನು ಮೃತಪಟ್ಟೊಡನೆ, ನನ್ನ ಅಗ್ನಿ ಸಂಸ್ಕಾರ ಮತ್ತು ಉತ್ತರ ಕ್ರಿಯೆಗಳನ್ನು ರಾಜನೀತಿಗನುಸಾರವಾಗಿ ಮಾಡಿಸಿರಿ. ಮತ್ತು ನೂರಒಂದು ಮಂದಿ ಬ್ರಾಹ್ಮಣರ ಸಂತರ್ಪಣೆಯನ್ನು ಮಾಡಿಸಿ ತೃಪ್ತಿಪಡಿಸಿರಿ, ಇದೇ ನನ್ನ ಅಂತಿಮ ಅಭಿಲಾಷೆ!"

ನಗರ ಸೇಠಜೀಯವರಿಗೂ ಠಾಕೂರರಿಗೂ ತಡೆಯದೆ ದುಃಖವುಕ್ಕಿತು. ಆದರೂ ತುಸು ಸಾವರಿಸಿಕೊಂಡು, ಪೇಶ್ವೆಯವರ ಅಂತಿಮ ಅಭಿಲಾಷೆಯನ್ನು ಪೂರೈಸಿಕೊಡುವುದಾಗಿ ಸೇಠಜೀಯವರು ವಾಗ್ದಾನಮಾಡಿದರು.

ಮತ್ತೆ ಸ್ವಲ್ಪ ಹೊತ್ತು ಮಾತ್ರ ಕಳೆಯಿತು. ರಾಷ್ಟ್ರಸೇವಕ, ಸ್ವಾತಂತ್ರ್ಯ ವೀರಯೋಧ ಶ್ರೀ ನಾನಾಸಾಹೇಬ್ ಪೇಶ್ವೆಯವರು ತಮ್ಮ ಕೊನೆಯ ಉಸಿರನ್ನೆಳೆದು—ಅನಂತ ನಿದ್ರಾಧೀನರಾದರು.

೧೮೫೭ ರ ಸ್ವಾತಂತ್ರ್ಯ ವೀರಯೋಧ ಶ್ರೀ ನಾನಾಸಾಹೇಬ್ ಪೇಶ್ವೆಯವರು ಎಲ್ಲಾದರೂ ಅರಣ್ಯ ಬೆಟ್ಟ ಗುಡ್ಡಗಳಲ್ಲಿ, ಮರಣಹೊಂದಿರಬಹುದೆಂದು ಇತಿಹಾಸವು ಸಾರುತ್ತದೆ. ಇತಿಹಾಸದ ಎಲ್ಲಾ ಪಂಕ್ತಿಗಳನ್ನೂ ಸತ್ಯವೆಂದೇ ನಂಬಲಾಗುವದಿಲ್ಲ. ಇತಿಹಾಸವು ಏನೇ ಹೇಳಲಿ, ಆದರೆ ಈ ಮೇಲಿನ ಘಟನೆ ಮಾತ್ರ, ಪೂರ್ಣ ಸತ್ಯವಾದುದು ಎಂಬುದಕ್ಕೆ ಸಂದೇಹವಿಲ್ಲ. ಶ್ರೀ ನಾನಾಸಾಹೇಬ್ ಪೇಶ್ವೆಯವರು, ಸೌರಾಷ ಪ್ರದೇಶದ "ಮೋರವಿ" ಎಂಬಲ್ಲಿ ಮೃತಪಟ್ಟಿರುವರೇ ಹೊರತ ಅರಣ್ಯ, ಬೆಟ್ಟಗುಡ್ಡಗಳಲ್ಲಿ ಅಲ್ಲ. ಯಾರಿಗಾದರೂ ಸೌರಾಷ್ಟ್ರಕ್ಕೆ ಹೋಗುವ ಸಂದರ್ಭ ಒದಗಿದರೆ ಅವರು ನಾನಾಸಾಹೇಬ್ ಪೇಶ್ವೆಯವರು ಮೃತಪಟ್ಟ

"ಮೋರವಿ" ಎಂಬಲ್ಲಿಗೆ ಹೋಗಬೇಕು. ಆಗ ಈ ಘಟನೆಯು ತಿಳಿವಳಿಕೆಯಾದೀತು.

"ಮೋರವಿ" ಯಲ್ಲಿ ಈಗಲೂ ಸಹ, ನಗರ ಸೇಠಜಿಯವರ ಮನೆ ಇದೆ. ಈಗ ನಗರ ಸೇಠಜಿಯವರು ಜೀವಂತರಾಗಿಲ್ಲ. ಆದರೆ, ಮನೆಯಲ್ಲಿ ಅವರ ಪುತ್ರರು ಇದ್ದಾರೆ. ಅವರಿಗೂ ಸಹ ವಯಸ್ಸಾಗಿ ವೃದ್ಧಾಪ್ಯ ಬಂದಿದೆ.

೧೮೫೭ ರ ಮೇಲಿನ ಘಟನೆಗೆ ಸಂಬಂಧಪಟ್ಟ ಕಾಗದ ಪತ್ರಗಳೂ ವಿವರಗಳೂ ಇಂದು ಸಹ ಸೇಠಜಿಯವರಲ್ಲಿ ಅಂದು ಬರೆಯಲ್ಪಟ್ಟಂತೆಯೇ ಇವೆ. ಮೋರವಿಗೆ ಹೋದಾಗ—ಈ ಕುರಿತು ವಿಚಾರಿಸಿ, ಈ ದಾಖಲೆಗಳನ್ನೂ ನೋಡಬಹುದಾಗಿದೆ. *

ಹಡಗಿನಲ್ಲಿ ಜಾದೂಗಾರ

ಸಮುದ್ರ ಪ್ರಯಾಣವು ಬಹಳ ನೀರಸವಾಗಿ ಕಾಣುತಿದ್ದಾಗ, ಹಡಗಿನಲ್ಲಿ ಪ್ರಯಾಣಿಕನಾಗಿದ್ದ ಜಾದುಗಾರನೊಬ್ಬನು ತನ್ನ ಯಕ್ಷಣೀ ವಿದ್ಯೆಯಿಂದ ಪ್ರಯಾಣಿಕರನ್ನು ಸಂತೋಷಪಡಿಸುತಿದ್ದ.

ಜೇಬಿನೊಳಗಿನಿಂದ ಇಸ್ಪೇಟು ಪೆಟ್ಟಿಗೆಯೊಂದನ್ನು ತೆಗೆದು ಎಲೆಗಳನ್ನು ರೊಂಯ್ಯನೆ ಗಾಳಿಯಲ್ಲಿ ತೇಲಿಸಿಬಿಟ್ಟ. ಅರೆನಿಮಿಷದಲ್ಲಿ ಎಲೆಗಳೆಲ್ಲ ಮಾಯವಾಗಿಬಿಟ್ಟವು! ಮೇಲೆ, ಕೂವೆಮರದಲ್ಲಿ ಮೌನವಾಗಿ ಕುಳಿತು ಎಲ್ಲವನ್ನೂ ನೋಡುತಿದ್ದ ಗಿಳಿಯು ಮರಿಯೊಂದು ಆಶ್ಚರ್ಯದಿಂದ ಕಣ್ಣು ಮಿಟುಕಿಸಿತು.

ಒಂದು ದೊಡ್ಡ ಪಾತ್ರೆಯನ್ನು ಮೇಜಿನ ಮೇಲಿರಿಸಿ ಅದನ್ನು ಕರಿ ಅರಿವೆಯಿಂದ ಮುಚ್ಚಿದ, ಜಾದುಗಾರ. ನಿಮಿಷಾರ್ಧದಲ್ಲಿ ಪಾತ್ರೆಯೂ ಮಾಯವಾಯಿತು! ಗಿಳಿಯ ಕುತೂಹಲವು ಇನ್ನಷ್ಟು ಕೆರಳಿತು. ಮೈಯೆಲ್ಲಾ ಕಣ್ಣಾಗಿಸಿ ಕೆಳಗೆ ನೋಡುತ್ತಲಿತ್ತು.

ಜಾದೂಗಾರನೀಗ ಎಲ್ಲದಕ್ಕಿಂತಲೂ ಅದ್ಭುತವಾದುದನ್ನೇ ಮಾಡುವೆನೆಂದ. ತನ್ನೆದುರಿಗಿರುವ ಮೇಜೂ ಅದರ ಮೇಲಿರುವ ಸಕಲ ವಸ್ತುಗಳೂ ಮಾಯವಾಗುವುವೆಂದು ಕರಿಯರಿವೆಯನ್ನು ಅವುಗಳ ಮೇಲೆ ಹಾಸಿದ. ಅಷ್ಟರಲ್ಲಿ ಹಡಗಿನ ಯಾವುದೋ ಮೂಲೆಯಲ್ಲಿ ಭಯಂಕರ ಸ್ಫೋಟನವಾಯಿತು. ಸಾಮಾನುಗಳೆಲ್ಲ ದಿಕ್ಕುದಿಕ್ಕಿಗೆ ಸಿಡಿದುವು. ಜನರು ಗೋಳೋ ಎಂದರು. ಹಡಗವು ಇಬ್ಭಾಗವಾಗಿ ನೀರ ಪಾಲಾಯಿತು. ಅದರೊಂದಿಗೆ ಜನ ಕೂಡಾ! ಮುಳುಗಿ ಹೋದ ಜಾದೂಗಾರನ ತಲೆಯೊಮ್ಮೆ ಮೇಲಕ್ಕೆ ಕಂಡುಬಂತು. 'ರಕ್ಷಿಸಿ!' ಎಂಬ ಆರ್ತನಾದವು ಕೇಳಿಸಿತು. ಒಡನೆಯೆ ನೀರಿನೊಳಕ್ಕೆ ಇಳಿದುಹೋದ ಜಾದೂಗಾರ ಮತ್ತೆ ಮೂರು ಬಾರಿ ಕಾಣಿಸಿಕೊಂಡ. ಮೂರನೆ ಬಾರಿ ತಳಕ್ಕೆ ಹೋದವನನ್ನು ಮತ್ತೆ ಯಾರೂ ಕಂಡಿಲ್ಲ!

ಎಲ್ಲವನ್ನೂ ನೋಡುತ್ತಿದ್ದ ಗಿಳಿಯು ಬಹಳ ಹೊತ್ತು ಆಲೋಚಿಸುತ್ತ ಕೊನೆಗೆ "ವಿಸ್ಮಯಕರ ಆಟ! ಅದ್ಭುತ ಜಾದೂಗಾರ!" ಎನ್ನುತ್ತ ಎತ್ತಲೋ ಹಾರಿಹೋಯಿತು!

— ಶಾಂತಾಕುಮಾರಿ, ಮಂಗಳೂರು.


LIFEBUOY
SOAP

ಠಕ್ಕನಿಗೆ ಠಿಕ್ಕ
ಭೆಟ್ಟಿಯಾದರೆ
ಹೀಗಾಗುತ್ತದೆ.

ಸವ್ವಾಸೇರು



ಶ್ರೀಕೃಷ್ಣ ಠಾಕೂರ

ಕಲ್ಯಾಣವನ್ನು ಬಿಟ್ಟು ಒಂದು ತಾಸಾಗಿತ್ತು. ರೈಲು ೪೫ ಮೈಲು ವೇಗದಿಂದ ಓಡುತ್ತಿತ್ತು. ಶ್ರೀ ಧಡಪಡೆ ಕೂತಲ್ಲಿಂದ ಎದ್ದು ಬರ್ತ್ ಮೇಲಿಟ್ಟಿದ್ದ ತಮ್ಮ ಸೂಟ್‌ಕೇಸನ್ನು ಎತ್ತಿ ಕಿಡಿಕಿಯಿಂದ ಹೊರಗೆ ಒಗೆದರು. ಆಗ ಅವರ ಕಂಪಾರ್ಟ್‌ಮೆಂಟಿನಲ್ಲಿ ಇದ್ದ ಬೇರೆ ವ್ಯಕ್ತಿ ಒಬ್ಬನೇ ಒಬ್ಬ. ಕ್ಷಣಕಾಲ ಇಬ್ಬರ ಕಣ್ಣುಗಳು ಕೂಡಿದವು. ಕೂಡಲೆ ಆ ಸಹಪ್ರವಾಸಿ ಮತ್ತೆ ತನ್ನ ಪುಸ್ತಕದಲ್ಲಿ ದೃಷ್ಟಿ ಹಾಕಿದ. ತನ್ನತ್ತ ಕ್ಷಣ ಕಾಲ ನೋಡಿಯೂ ಈತ ಯಾವ ಬಗೆಯ ಉತ್ಸುಕತೆಯನ್ನೂ ತೋರಿಸದೇ ಇರುವನಲ್ಲ ಎಂದು ಧಡಪಡೆ ಒಳಗೊಳಗೆ ನೊಂದರು. ಇದು ಅವರ ಸ್ವಂತ ಸ್ವಭಾವಕ್ಕೆ ವಿರುದ್ಧವಾಗಿತ್ತು. ಈತ ಯಾವ ಭಾವವನ್ನು ವ್ಯಕ್ತಪಡಿಸದಿದ್ದರೂ ತನ್ನ ಸೂಟಕೇಸ್ ಒಗೆಯುವ ಕೃತಿ ಇವನಲ್ಲಿ ವಿಚಾರತರಂಗವೆಬ್ಬಿಸಿರಲೇಬೇಕು. ಶಿಶುಹತ್ಯೆಯನ್ನು ಮಾಡಿ ಶವವನ್ನು ಸೂಟಕೇಸಿನಲ್ಲಿಟ್ಟು ತಾನು ಒಗೆದೆನೆಂದೂ ಆತ ತಿಳಿದಿರಬಹುದು. ಹಾಗೆನಿಸಿದ್ದೇ ನಿಜವಿದ್ದರೆ ಆತ ನಿಶ್ಚಿತವಾಗಿ ಪೋಲೀಸರಿಗೆ ವರದಿ ಮಾಡುವನು.

ಮರಾಠಿ 'ವಸುಧಾ' ದಿಂದ

ಸಹಪ್ರವಾಸಿಯ ಹೆಸರು ಗಾಯತೊಂಡೆ. ಅವನ ತಲೆಯಲ್ಲೂ ವಿಚಾರಗಳು ಸುಳಿಯದಿರಲಿಲ್ಲ. ಓದುವಂತೆ ನಟಿಸುತ್ತಿದ್ದ ಮಾತ್ರ. ಧಡಪಡೆಯ ಕೃತಿಯನ್ನು ನೋಡಿ ಅವನಿಗೂ ಆಶ್ಚರ್ಯವೆನಿಸಿತ್ತು.

—"ಸೂಟ್‌ಕೇಸ್ ಹೊರಗೆ ಒಗೆದು ಈತ ಆಶ್ಚರ್ಯಚಕಿತನಾಗಿ ನನ್ನನ್ನೇ ನೋಡುತ್ತಿರುವನು. ನಾನೇನಾದರೂ ಕೇಳುವೆನೆಂದುಕೊಂಡಿರುವನೊ ಏನೋ? ಆದರೆ ನೀನು ತಿಳಿದುಕೊಂಡಂತೆ ನಾನೇನನ್ನೂ ಮಾಡಲಾರೆ. ನಿನ್ನನ್ನು ನಾನಾಗಿ ಕೇಳಲಾರೆ. ಇಷ್ಟೇ ಅಲ್ಲ; ನನ್ನ ಮೋರೆಯ ಮೇಲೆ ಯಾವ ಭಾವನೆಯನ್ನೂ ತೋರಿಸಿ ಕೊಡಲಾರೆ. ಮೇಲಾಗಿ ನಿನ್ನ ಬ್ಯಾಗ್ ನೀನು ಒಗೆದರೆ ನಾನೇಕೆ ಚಿಂತಿಸಬೇಕು? ಆ ವಿಷಯ ನನಗೆ ಎಳ್ಳಷ್ಟೂ ಸಂಬಂಧಪಟ್ಟದ್ದಲ್ಲ—" ಗಾಯತೊಂಡೆಯ ಮನಸ್ಸು ಯೋಚಿಸಿತು.

ಇತ್ತ ಧಡಪಡೆಗೆ ಮಾತ್ರ ಭಾವನೆಗಳನ್ನು ಇನ್ನು ತಡೆಯುವುದು ಅಶಕ್ಯವೆನಿಸಿತು. ತಡೆಯದಿದ್ದರೆ ತಾನು ತನ್ನಷ್ಟಕ್ಕೆ ವಿಚಿತ್ರ ಹಾವಭಾವ ಮಾಡಬಹುದಿತ್ತು. ಅದಕ್ಕಿಂತ ಗಾಯತೊಂಡೆಯನ್ನು ಮಾತಾಡಿಸುವುದೇ ಒಳಿತೆಂದು ಅವರು ತುಟಿ ಬಿಚ್ಚಿದರು.

".ಕ್ಷಮಿಸಿ;— ನೀವು— ನಿಮ್ಮನ್ನು ನೋಡಿ ನನಗೆ ಆಶ್ಚರ್ಯವೆನಿಸುತ್ತದೆ."

"ಯಾಕೆ? ತನ್ನಷ್ಟಕ್ಕೆ ತಾನು ಪುಸ್ತಕ ಓದುತ್ತ ಕೂತರೂ ಅದು ಸಹಪ್ರವಾಸಿಗೆ ಆಶ್ಚರ್ಯವನ್ನುಂಟುಮಾಡಬೇಕೇ?"

"ಹಾಗಲ್ಲ, ಅದಲ್ಲ, ನಾನು ಕಿಡಿಕಿಯಿಂದಾಚೆ ಬ್ಯಾಗ್ ಚೆಲ್ಲಿದೆನಲ್ಲ! ಅದನ್ನು ಕಂಡು ನೀವು ಹೇಗೆ ಬೆರಗಾಗಲಿಲ್ಲಾ ಅಂತ!"

"ನಿಮಗೆ ಆಶ್ಚರ್ಯವೆನಿಸಿತು, ಸರಿ. ಅಂದರೆ ಬಹಳ ಬೇಗ ಆಶ್ಚರ್ಯಚಕಿತರಾಗುತ್ತೀರಿ ಅಂದ್ಹಾಗಾಯ್ತು!"

"ಇರಬಹುದು. ಆದರೆ ನನ್ನಂತೆ ತನ್ನ ಬ್ಯಾಗನ್ನು ಗಾಡಿಯಿಂದ ಹೊರಚೆಲ್ಲುವ ಬೇರೆ ಯಾರನ್ನೂ ನೀವು ನೋಡಿರಲಿಕ್ಕೆ ಸಾಧ್ಯವಿಲ್ಲೆಂದು ನಾನು ಖಂಡಿತವಾಗಿ ಹೇಳಬಲ್ಲೆ."

"ಇರಬಹುದು. ಆದರೆ ತನ್ನ ಸೀಟಿಯನ್ನು ಊದದೆ ಅದನ್ನು ಮುರಿದು ತಿನ್ನುವವರು ಅಥವಾ ದೇವಾಲಯದಲ್ಲಿ ಟ್ಯಾಪ್ ಡಾನ್ಸ್ ಮಾಡುವವರು... ಇಂಥ ಸಣ್ಣ ಸಣ್ಣ ವಿಶೇಷಗಳನ್ನು ನೋಡಿ ಆಶ್ಚರ್ಯಚಕಿತನಾದರೆ ಆಯುಷ್ಯದಲ್ಲಿ ಆಶ್ಚರ್ಯಕರ ಸಂಗತಿಗೆ ಏನೂ ಬೆಲೆಯೇ ಇಲ್ಲದಂತಾದೀತು."

"ನನ್ನ ಕೃತಿ ಆಶ್ಚರ್ಯದ್ದಲ್ಲ ಎನ್ನುತ್ತೀರಾ?"

"ಹೌದು."

"ಹಾಗಾದರೆ ಯಾವುದಕ್ಕೆ ಆಶ್ಚರ್ಯಕರ ಸಂಗತಿ ಎಂದು ನೀವು ಕರೆಯುತ್ತೀರಿ!"

"ನೀವು ನಿಮ್ಮ ಸೂಟ್‌ಕೇಸಿನ ಬದಲು ನನ್ನದನ್ನು ಹೊರಗೆ ಚಲ್ಲಿದ್ದರೆ ನನಗೆ ಆಶ್ಚರ್ಯವಾಗುತ್ತಿತ್ತು."

"ಹೀಗೇನು? ಹಾಗಾದರೆ ನನಗಿಂತ ನಿಮ್ಮನ್ನೇ ನೀವು ಹೆಚ್ಚಿನವರೆಂದು ತಿಳಿಯುತ್ತೀರೇನು?"

"ಹಾಗಲ್ಲರೀ, ನಿಮ್ಮ ಸೂಟ್‌ಕೇಸಿಗಿಂತ ನನ್ನ ಸೂಟ್‌ಕೇಸು ನನಗೆ ಯಾವತ್ತೂ ಮಹತ್ವದ್ದು."

"ಇನ್ನೊಬ್ಬರಿಗೆ ಏನೂ ಮಹತ್ವ ಇಲ್ಲವೇನು ನಿಮ್ಮ ಮಟ್ಟಿಗೆ?"

"ಸ್ವಾಭಾವಿಕವಾಗಿ. ಆದರೆ ನೋಡಿ, ನಿಮ್ಮ ಕೃತಿಯ ವಿವರಣೆ ಹೇಳುವ ಆತುರ ನಿಮಗೆ ಮಾತ್ರ ಬಹಳ ಆದಂತೆ ತೋರುತ್ತದೆ."

"ಬೇಡವೆನಿಸಿದ್ದರೆ ಹೇಳಲಾರೆ."

ಐದು-ಹತ್ತು ಮಿನಿಟು ಕಳೆದರೂ ಗಾಯತೊಂಡೆ ಉತ್ಸುಕತೆ ತೋರಿಸಲೇ ಇಲ್ಲ. ಕೊನೆಗೆ ಮತ್ತೆ ಧಡಪಡೆಯೆ ಸುರುಮಾಡಿದರು.

"ಅದು ಹೀಗಾಯಿತು. ಒಂದೆರಡು ಗಂಟೆಗಳ ಹಿಂದೆ ನಾನು ಪತ್ನಿಯೊಂದಿಗೆ ಜಗಳಾಡಿದೆ. ಬಹಳ ದೊಡ್ಡ ಜಗಳವಾಯಿತು. ಕೊನೆಗೆ ಸಂಸಾರವನ್ನೇ ತ್ಯಾಗಮಾಡಿ ಬಿಡೋಣ

ಎಂದು ನಾನು ನಿರ್ಧಾರ ಮಾಡಿದೆ. ಹಿಂದಿನ ಜೀವನದ ಯಾವ ಸ್ಮೃತಿಯೂ ಉಳಿಯದಂತೆ ಪುನಃ ಹೊಸತಾಗಿ ಬೇರೊಂದು ಜೀವನ ಪ್ರಾರಂಭಿಸಬೇಕೆಂದೆ. ಆಗ ಒಗೆದ ಬ್ಯಾಗಿನಲ್ಲಿ ನಮ್ಮ ಸಹಜೀವನದ ದ್ಯೋತಕವಾಗಿದ್ದ ಹಣಿಗೆ, ಬ್ರಶ್, ಟಾವೆಲ್—ಇವೇ ಮುಂತಾದ ವಸ್ತುಗಳಿದ್ದವು. ಅವನ್ನು ಒಗೆದು ಆ ಜೀವನದ ಮೇಲೆ ತೆರೆ ಎಳೆದು ನಾನು ಮುಕ್ತನಾದೆ. ನನಗಿಂದು ಐವತ್ತು ವರ್ಷ ಪ್ರಾಯ. ಆದರೂ ಈಗ ಹೊಸ ಜೀವನದ ವಿಚಾರದಿಂದ ಉಲ್ಲಾಸವೆನ್ನಿಸದಿಲ್ಲ. ಇದನ್ನು ಕೇಳಿ ನಿಮಗೆ ಆಶ್ಚರ್ಯವೆನಿಸುವುದಿಲ್ಲವೆ?"

"ಇಲ್ಲ. ಇದು But natural ರೀ."

"Natural? ..ಅಲ್ಲರೀ.. ನೀವು ಹೀಗೆ ಹೇಳುವುದನ್ನು ಕೇಳಿ ನಾನು ಆಶ್ಚರ್ಯಚಕಿತನಾಗಿದ್ದೇನೆ."

"ಅಷ್ಟಿಷ್ಟಕ್ಕೆಲ್ಲ ಆಶ್ಚರ್ಯಚಕಿತರಾಗುವುದು ನಿಮ್ಮ ಒಂದು ವೈಶಿಷ್ಟ್ಯವೆಂದು ತೋರುತ್ತದೆ"

"ಯಾವುದಕ್ಕೂ ಆಶ್ಚರ್ಯಚಕಿತರಾಗದಿರುವುದೇ ಭೂಷಣವೆಂದು ನೀವು ತಿಳಿಯುವಂತಿದೆ."

"ಹಾಗಲ್ಲರೀ.. ನಿಮಗೆ ಆಶ್ಚರ್ಯವನ್ನುಂಟು ಮಾಡುವ ಸಂಗತಿಗಳೇ ಬೇರೆ. ನನ್ನವೇ ಬೇರೆ.. ನಿಮ್ಮ ಮದುವೆಯಾಗಿ ಎಷ್ಟು ವರ್ಷಗಳಾದವು?"

"ಇಪ್ಪತ್ತೊಂದು."

"ಅಂದ ಮೇಲೆ ಆಶ್ಚರ್ಯ ಯಾಕನ್ನಿಸಬೇಕು?"

"ಒಂದು ವೇಳೆ ನೀವು ಇದನ್ನೇ ಇಪ್ಪತ್ತು ವರ್ಷಗಳ ಹಿಂದೇ ಮಾಡಿದ್ದರೆ ಸರಿಹೋಗುತ್ತಿತ್ತು. ಯಾಕೆ ಮಾಡಲಿಲ್ಲವೆಂಬುದೇ ಆಶ್ಚರ್ಯ!"

"ನಿಮಗೆ ಮದುವೆಯಾಗಿಲ್ಲವೇನೊ!"

"ಈಗ ಪತ್ನೀರಹಿತ."

"ಅಂದರೆ ಲಗ್ನವಾಗಿ ಪತ್ನಿಯನ್ನು ಬಿಟ್ಟಿರುವಿರಾ!..

"ಹಾಗೇನಿಲ್ಲ. ಆದರೆ ಪತ್ನಿಯನ್ನು ಬಿಡುವುದೆಂದರೆ ಮನೆಮಾರು ಬಿಟ್ಟು ಹೋಗುವುದೆಂದು ಅರ್ಥವಾಗುತ್ತದೆ. ನನಗೆ ನನ್ನ ಮನೆ ನನ್ನ ಹೊಲ ಪ್ರಿಯವಾಗಿವೆ."

"ಅದಕ್ಕೆ ನೀವು ಪತ್ನಿಯನ್ನೇ ಹೊರಹಾ—ಕಿ—ದಿರಾ?"

"ಹಾಗೆ ಮಾಡಿದ್ದರೆ ಇನ್ನೂ ಕಷ್ಟಕ್ಕಿಟ್ಟುಕೊಳ್ಳುತ್ತಿತ್ತು."

"ಯಾಕೆ -ಹಾಗಾದರೆ ಏನು ಮಾಡಿದಿರಿ?"

"ಬೇರೆ ಏನೂ ಮಾಡಲಿಕ್ಕೇ ಸಾಧ್ಯವಿಲ್ಲ ಎನ್ನುವಿರೇನು?"

"ಅದೇ, ಏನು ಮಾಡಿದಿರಿ?"

"ಅದರಿಂದ ನಿಮಗೇನೂ ಉಪಯೋಗವಾಗುವ ಸಂಭವವಿಲ್ಲ."

"ಅಂದರೆ?"

"ನನ್ನ ದಾರಿಯಿಂದ ಹೋಗಬೇಕಾದರೆ ಶಾಂತಿಯನ್ನು ತಾಳಬೇಕು. ವಿಚಾರಪೂರ್ವಕ ವರ್ತಿಸಬೇಕು, ಬುದ್ಧಿ ಉಪಯೋಗಿಸಬೇಕು."

"ಅಂದರೆ ಅವೆಲ್ಲ ನನ್ನಿಂದ ಸಾಧ್ಯವಿಲ್ಲೆಂದು ನಿಮ್ಮ ಅಭಿಪ್ರಾಯವೆ?"

"ಮಾತಾಡದೆ ಇರುವ ಗುಣ ನಿಮ್ಮ ಪ್ರಕೃತಿಗೆ ಸಮ್ಮತವಾಗದು. ಉತ್ಸುಕತೆ ಎನಿಸಿದಾಗೆಲ್ಲ ಆಶ್ಚರ್ಯಚಕಿತರಾಗುವುದು ನಿಮ್ಮಗುಣ. ಆದ್ದರಿಂದ ನಿಮಗೆ ನನ್ನ ಮಾರ್ಗ ಉಪಯೋಗವಾಗದು."

"ಚೆನ್ನಾಗಿ ಮಾತಾಡ್ತೀರಿ! ಇರಲಿರಲಿ. ಇನ್ನು ದಯಮಾಡಿ ನಿಮ್ಮ ಮಾರ್ಗವನ್ನು ಹೇಳಿರಿ."

"ಕೇಳಿ ಹಾಗಾದರೆ. ಆದರೆ ಅದನ್ನು ಕೇಳಿ ನೀವು ಆಶ್ಚರ್ಯಚಕಿತರಾಗಬಾರದು. ಅದೇ ರೀತಿ ನಿಮ್ಮ ಒತ್ತಾಯಕ್ಕಾಗಿ ನಾನು ಹೇಳುತ್ತಿರುವೆನಲ್ಲದೆ ನನ್ನ ಸ್ವಂತ ಸ್ಫೂರ್ತಿಯಿಂದಲ್ಲ ಎಂಬುದನ್ನೂ ಮರೆಯಬೇಡಿರಿ. ಇಲ್ಲದಿದ್ದರೆ ನನ್ನ ಪುಸ್ತಕ ಇದ್ದೇ ಇದೆ. ಮಾತಾಡುವುದು ನನಗೂ ಬೇಡ. ಓದುವುದರಲ್ಲಿ ತೊಡಗುವೆ."

"ಛೇ ಛೇ! ಹೇಳಿರಿ. ನೀವು ಹೇಳಿದಂತೇ

ಮಾಡುವೆ. ಆಶ್ಚರ್ಯಚಕಿತನಾಗಲಾರೆನೆಂದೂ ಮೊದಲೇ ಹೇಳಿಬಿಡುವೆ. ಇನ್ನು ಚಟ್ಟನೆ ಹೇಳಿರಿ."

"ನಾನು ಮಾಡಿದ್ದೇನೆಂದರೆ" ಗಾಯತೊಂಡೆ ಹೇಳತೊಡಗಿದರು. "ಆವರೆ ಮೊದಲೇ ಒಂದು ಮಾತು ಹೇಳಿ ಇಡುವೆ. ನನ್ನ ಸಂಗತಿ ತುಸು ವಿಚಿತ್ರವಾಗಿದೆ. ಆದ್ದರಿಂದ ದಯವಿಟ್ಟು ಯಾರ ಮುಂದೂ ಹೇಳಬೇಡಿರಿ. .. ಹುಂ. ಕೇಳಿ, ನಾನು ಮಾಡಿದ್ದೇನೆಂದರೆ— ನಾನು ಬರೇ ಅವಳನ್ನು ಕೊಂದುಬಿಟ್ಟೆ."

ಕ್ಷಣ ಮಾತ್ರ ಧಡಪಡೆಯವರಿಗೆ ಮಿಂಚು ಹೊಡೆದಂತಾಯಿತು. ಬಾಯಿಂದ ಶಬ್ದ ಮಾಯವಾಗಿಯೆ ಬಿಟ್ಟವೇನೊ ಎನಿಸಿತು. ಆದರೂ ಅವರೂ ತಡೆದರು. ಮತ್ತು ಶಾಂತಸ್ವರದಲ್ಲಿ ನುಡಿದರು. "ಮೊದಲೇ ಒಪ್ಪಿಕೊಂಡಂತೆ ನಾನೇನೂ ಆಶ್ಚರ್ಯಚಕಿತನಾಗಲಾರೆ. ನಿಮ್ಮ ಬಿಚ್ಚುಮನಸ್ಸನ್ನು ಕಂಡು ಬಹಳ ಸಂತೋಷವಾಯಿತು. ಇನ್ನು ನನ್ನ ವಿಚಾರ ಕೇಳಿರಿ. ನಾನು ಈ ವರೆಗೆ ಹೇಳಿದ್ದೆಲ್ಲ ಸುಳ್ಳು. ನಿಜ ಸಂಗತಿ ಹೀಗಿದೆ. ನಾನೊಬ್ಬ ಕಾಯಿಪಲ್ಯದ ವ್ಯಾಪಾರಿ. ವಾರಕ್ಕೊಮ್ಮೆ ಈ ಗಾಡಿಯಿಂದ ಹೋಗುವೆ. ಹೋಗುವಾಗ ದಾರಿಯಲ್ಲಿ ಇಂದು ಎಲ್ಲಿ ಸೂಟ್‌ಕೇಸ್ ಒಗೆದೆನೊ ಅಲ್ಲಿ ಇರುವ ಒಬ್ಬ ಮನುಷ್ಯನಿಗೆ ಒಂದು ಸೂಟ್‌ಕೇಸ್ ತುಂಬ ಕಾಯಿಪಲ್ಯ ಒಗೆಯುತ್ತೇನೆ. ಅವನ ಲಗೇಜೂ ತಪ್ಪುತ್ತದೆ. ಮಾಲೂ ಬೇಗ ಸಿಗುತ್ತದೆ. ನಿಮ್ಮ ಸಹವಾಸದಿಂದ ವೇಳೆಯು ಸಂದಿತು. ಅಷ್ಟೇ ಸಂತೋಷ, ನಮಸ್ಕಾರ." *

ಅತ್ತೆ-ಅಳಿಯ

ಆಫ್ರಿಕದ 'ಜೂಲು' ಜನರು ಶೌರ್ಯಕ್ಕೆ ಎತ್ತಿದ ಕೈ. ಆದರೂ ಅವರು ತಮ್ಮ 'ಅತ್ತೆ'ಯ (ಹೆಣ್ಣು ಕೊಟ್ಟ) ಎದುರಿಗೆ ನಿಲ್ಲುವುದಿಲ್ಲ. ಅವರೆಷ್ಟೇ ವೀರನಾದರೂ ಅತ್ತೆಯನ್ನು ಕಂಡರೆ ಹೆದರಿ ನಡುಗುತ್ತಾರೆ. ಅಕಸ್ಮಾತ್ತಾಗಿ ಅತ್ತೆಯು ಎದುರಿಗೆ ದೂರದಲ್ಲಿ ಬರುತ್ತಿರುವುದನ್ನು ಕಂಡರೆ, ಅಲ್ಲೇ ಹತ್ತಿರದಲ್ಲಿರುವ ಯಾವುದಾದರೂ ಒಂದು ಪೊದೆಯಲ್ಲಿ ಅಡಗಿಕೊಂಡು ಅವಳು ಕಣ್ಮರೆಯಾದ ಮೇಲೆ ಈಚೆ ಬರುತ್ತಾರೆ. ಇದು ಅವರ ಶಿಷ್ಟಾಚಾರ. ಒಂದು ವೇಳೆ ಅವರೇನಾದರೂ ಆ ರೀತಿ ನಡೆದುಕೊಳ್ಳದಿದ್ದರೆ ಅವರಿಗೆ ಕ್ರೂರ ಶಿಕ್ಷೆ ವಿಧಿಸಲ್ಪಡುತ್ತದೆ. ಜೊತೆಯಲ್ಲೇ ಅತ್ತೆಗೂ ಮರಣ ಶಿಕ್ಷೆಯುಂಟಾಗುತ್ತದೆ.

ಉತ್ತರ ಅಮೇರಿಕದ ಇಂಡಿಯನ್ನರಲ್ಲಿ ಅತ್ತೆ-ಅಳಿಯ ಇವರಿಬ್ಬರೂ ಭೇಟಿಯಾದರೆ ಅಳಿಯನಾದವನು "ಗ್ರಿಸಲಿ" ಎಂದು ನಾಲ್ಕಾರು ಬಾರಿ ಕೂಗುತ್ತಾನೆ. ಗ್ರಿಸಲಿ ಎಂಬ ಹೆಸರು ಕರಡಿಯ ಜಾತಿಗೆ ಅನ್ವಯಿಸುತ್ತದೆ. ಅವನು ಹಾಗೆ ಕೂಗಿದಾಗ ಅತ್ತೆಯು ಅಳಿಯನಿಗೆ ದಾರಿ ಬಿಟ್ಟು ಕೊಟ್ಟು ತಾನು ಮರೆಯಾಗುತ್ತಾಳೆ. ಅತ್ತೆ ಮಾವಂದಿರ ಎದುರಿನಲ್ಲಿ ಸಭ್ಯತೆಯಿಂದ ನಡೆದುಕೊಳ್ಳಬೇಕೆಂಬ ಕಟ್ಟಳೆಯೇ ಈ ರೀತಿಯ ವರ್ತನೆಗೆ ಕಾರಣ.

ಮಧ್ಯ ಆಸ್ಟ್ರೇಲಿಯಾದ "ಅರುಂಟಾ" ಜನರಲ್ಲಿ ಅಳಿಯನು ಅತ್ತೆಯನ್ನು ನೋಡುವುದೂ ಸಹ ಇಲ್ಲ. ಮಾತನಾಡಿಸುವ ಪ್ರಮೇಯವಂತೂ ಪ್ರಾಯಶಃ ಅವನಿಗೆ ಬರಲೇ ಅರದು.

— ಬಿ.ಎಸ್. ಲೀಲಾವತಿ

ತಂಪು ಪಾನೀಯಗಳು ಶಾಖವನ್ನು ಹುಟ್ಟಿಸುತ್ತವಲ್ಲದೆ
ನಿವಾರಿಸುವುದಿಲ್ಲ

ನಮಗೆ ಸೆಕೆಯೇಕಾಗುತ್ತದೆ?

ಆರ್. ನಾರಾಯಣ ಅಯ್ಯರ್

ಬೇಸಿಗೆಯ ಕಾಲ ಬಂದಿತು, ಎಂದರೆ, ಐಸ್‌ಕ್ರೀಂ ಮತ್ತು ತಂಪು ಪಾನೀಯಗಳ ಮಾರಾಟಗಾರರಿಗೆ ಸುಗ್ಗಿಯ ದಿನಗಳು.

"ಅಬ್ಬಾ! ಉರಿಬಿಸಿಲು. ಏನಾದರೂ ತಂಪು ಪಾನೀಯಗಳನ್ನು ತೆಗೆದುಕೊಳ್ಳೋಣ ನಡೆಯಿರಿ," ಎಂದು ಜತೆಯಲ್ಲಿದ್ದ ನನ್ನ ವೈದ್ಯ ಮಿತ್ರರನ್ನು ಕರೆದೆನು.

ಅವರೆಂದರು, "ತಂಪು ಪಾನೀಯಗಳಿಂದ ನಮ್ಮ ದೇಹವನ್ನು ತಂಪುಗೊಳಿಸುತ್ತೇವೆ ಎನ್ನುವುದು ಬರಿ ಭ್ರಮೆ. ಅವು ದೇಹವನ್ನು ತಂಪುಗೊಳಿಸುವುದರ ಬದಲು, ದೇಹದಲ್ಲಿ ಶಾಖೋತ್ಪತ್ತಿಯನ್ನು ಹೆಚ್ಚಿಸುತ್ತವೆ."

ಈ ಮಾತನ್ನು ನಾನು ಒಪ್ಪಲಿಲ್ಲ. ಅಪನಂಬಿಕೆಯಿಂದ ತಲೆ ಆಡಿಸಿದೆನು. ಆಗ ತಮ್ಮ ಮಾತನ್ನು ಸಮರ್ಥಿಸಲು ಆ ವೈದ್ಯ ಮಿತ್ರರು ಕೊಟ್ಟ ವಿವರಣೆ ಇದು :

ಬೇಸಿಗೆಯ ಕಾಲದಲ್ಲಿ ದೇಹವು ಅನುಭವಿಸುವ ತಾಪಕ್ಕೆ ಕಾರಣವನ್ನು ತಿಳಿಯಲು ಪ್ರೊಫೆಸರ್ ಲಿಯೋನಾರ್ಡ್ ಎಂಬ ವಿಜ್ಞಾನಿಯು ನಡೆಸಿದ ಪ್ರಯೋಗವು ಬಹು ಸ್ವಾರಸ್ಯವಾಗಿದೆ. ಅವರು ವೀಕ್ಷಕ ಕಿಟಿಕಿಗಳಿರುವ ಮತ್ತು ಗಾಳಿಯ ಪ್ರವೇಶ ಹಾಗೂ ನಿರ್ಗಮನಗಳಿಗೆ ಅವಕಾಶವಿಲ್ಲದ, ಒಂದು ಸಣ್ಣ ಮರದ ಕೊಠಡಿಯನ್ನು ತಯಾರಿಸಿದರು. ಈ ಕೊಠಡಿಯೊಳಗಿನ ಗಾಳಿಯನ್ನು ವಿದ್ಯುತ್ತಿನಿಂದ ಬಿಸಿ ಮಾಡಲು ಅಥವಾ ತಣ್ಣೀರು ಹರಿಯುತ್ತಿದ್ದ ಕೊಳವೆಗಳಿಂದ ತಂಪು ಮಾಡಲು ಸಾಧ್ಯವಿದ್ದಿತು. ಗಾಳಿಯಲ್ಲಿನ ನೀರಾವಿಯ ಅಂಶವನ್ನು ಹೆಚ್ಚಿಸಲು ಅಥವಾ ಕಡಿಮೆ ಮಾಡಲು ಏರ್ಪಾಟುಗಳಿದ್ದುವು. ಕೊಠಡಿಯ ಮೇಲ್ಛಾವಣಿಯಲ್ಲಿ ಒಂದು ವಿದ್ಯುದ್ವೀಸಣಿಗೆಯಿದ್ದಿತು.

ಇಂತಹ ಕೊಠಡಿಯಲ್ಲಿ ಲಿಯೋನಾರ್ಡರು ನಾಲ್ಕು ಮಂದಿ ಯುವಕರನ್ನು ಕುಳ್ಳಿರಿಸಿದರು. ಇವರಲ್ಲಿ ಒಬ್ಬರು ಮುಖವಾಡವನ್ನು ಧರಿಸಿ, ಕೊಳವೆಯೊಂದರ ಮೂಲಕ ಹೊರಗಿನ ವಾಯುವನ್ನು ಮಾತ್ರವೇ ಸೇವಿಸಲು ಬರುತ್ತಿದ್ದಿತು. ಬೇರೊಬ್ಬ ಯುವಕನು ಅದೇ ರೀತಿ ಮುಖವಾಡವನ್ನು ಧರಿಸಿ, ಕೊಠಡಿಯ ಹೊರಗಡೆ ಕುಳಿತು, ಕೊಳವೆಯ ಮೂಲಕ ಕೊಠಡಿಯ ಒಳಗಿನ ವಾಯುವನ್ನು ಮಾತ್ರವೇ ಸೇವಿಸಲು ಬರುತ್ತಿದ್ದಿತು.

ಕ್ರಮೇಣ ಕೊಠಡಿಯಲ್ಲಿನ ಗಾಳಿಯಲ್ಲಿನ ಆಮ್ಲಜನಕದ ಪ್ರಮಾಣವು ಶೇಕಡಾ ೨೧ ರಿಂದ ೧೭ ರ ವರೆಗೂ ಕಡಿಮೆಯಾಗಿ, ಕಾರ್ಬನ್ ಡೈ-ಆಕ್ಸೈಡ್ ಅನಿಲದ ಪ್ರಮಾಣವು ಶೇಕಡಾ ೪ ಭಾಗದಷ್ಟು ಏರಿತು. ಇಷ್ಟು ಕಡಿಮೆಯ ಪ್ರಮಾಣದಲ್ಲಿ ಆಮ್ಲಜನಕವಿರುವ ಗಾಳಿಯಲ್ಲಿ, ಬೆಂಕಿಯ ಕಡ್ಡಿಯನ್ನು ಗೀಚಿದರೆ ಅದು ಉರಿಯಲಾರದೆ ಆರಿ ಹೋಗುತ್ತದೆ. ಇಂತಹ ವಾತಾವರಣವಾದರೂ ಒಳಗಿದ್ದವರಿಗಾಗಲಿ, ಹೊರಗಿದ್ದವನಿಗಾ

ಗಲಿ, ಅಸಹನೀಯವಾದ ತಾಪದ ಅನುಭವ ವೇನೂ ಆಗಲಿಲ್ಲ.

ಎರಡನೆಯ ಪ್ರಯೋಗದಲ್ಲಿ ಲಿಯೋ-ನಾರ್ಡರು, ಗಾಳಿಯಲ್ಲಿನ ನೀರಾವಿಯ ಅಂಶವನ್ನು ಹೆಚ್ಚಿಸದೆ, ಕೊಠಡಿಯ ಉಷ್ಣತೆಯನ್ನು ಮಾತ್ರವೇ ಹೆಚ್ಚಿಸುತ್ತಾ ಹೋದರು. ಆಗಲೂ ಸಹ ಒಳಗಿದ್ದವರಿಗೆ ಅಸಹನೀಯವಾದ ತಾಪದ ಅನುಭವವಾಗಲಿಲ್ಲ.

ಮೂರನೆಯ ಪ್ರಯೋಗದಲ್ಲಿ ಲಿಯೋ-ನಾರ್ಡರು ಗಾಳಿಯಲ್ಲಿನ ನೀರಾವಿಯ ಅಂಶ ಹಾಗೂ ಉಷ್ಣತೆಗಳೆರಡನ್ನೂ ಕ್ರಮೇಣ ಹೆಚ್ಚಿಸುತ್ತಾ ಹೋದರು. ತೇವಾಂಶ ಹೆಚ್ಚಾಗಿದ್ದು, ಗಾಳಿಯ ಉಷ್ಣತೆಯು ಸುಮಾರು ೮೫ ಡಿಗ್ರಿ ಫ್ಯಾರನ್‌ಹೀಟ್ ಸಮೀಪಿಸುತ್ತಲೂ ಕೊಠಡಿಯ ಒಳಗಿದ್ದವರಿಗೆ ಸಹಿಸಲಾಗದ ಶೆಖೆಯ ಅನುಭವವಾಗಲಾರಂಭಿಸಿತು. ಅವರ ಮುಖಗಳು ಕೆಂಪಗಾದುವು. ಬೆವರು ಧಾರಾಕಾರವಾಗಿ ಸುರಿಯಿತು. ಲವಲವಿಕೆಯು ಸಂಪೂರ್ಣವಾಗಿ ಮಾಯವಾಯಿತು.

ಆಗ ಕೊಠಡಿಯಲ್ಲಿದ್ದ ವಿದ್ಯುದ್ಬೀಸಣಿಗೆಯನ್ನು ಶುರು ಮಾಡಲಾಯಿತು. ಕೂಡಲೆ ಒಳಗಿದ್ದವರಿಗೆ ಶೆಖೆಯ ಅನುಭವವು ಕಡಿಮೆಯಾಗುತ್ತ ಬಂದು ಹಿತಕರವಾಗಿ ಕಂಡಿತು. ಇದಕ್ಕೆ ಕಾರಣ, ಚರ್ಮದ ಸಮೀಪದಲ್ಲಿರುವ ಬಿಸಿ ಗಾಳಿಯು ಸ್ಥಳಾಂತರವಾಗಿ, ಕೊಂಚ ತಂಪಿನ ಭಾವನೆಯು ತೋರುತ್ತಿದ್ದಿತು.

ಇದಾದ ನಂತರ ಕೊಠಡಿಯೊಳಗಿನ ಗಾಳಿಯ ಉಷ್ಣತೆಯನ್ನು ೯೮.೬ ಡಿಗ್ರಿಗಿಂತ ಹೆಚ್ಚು ಏರಿಸಿದಾಗ, ವಿದ್ಯುದ್ಬೀಸಣಿಗೆಯು ಎಷ್ಟೇ ಬಲವಾಗಿ ಬೀಸುತ್ತಿದ್ದರೂ ಶೆಖೆಯ ತಾಪವು ಕಡಿಮೆಯಾಗದೇ ಹೆಚ್ಚುತ್ತಿದ್ದಿತು. ಆದರೆ ಹೊರಗಡೆಯಿದ್ದ ಯುವಕನಿಗೆ ಮೊದಲಿನಿಂದ ಕೊನೆಯವರೆಗೂ ಯಾವ ಅನಾನುಕೂಲದ ಅನುಭವವೂ ಆಗಲಿಲ್ಲ.

ಪ್ರೊಫೆಸರ್ ಲಿಯೋನಾರ್ಡರ ಈ ಪ್ರಯೋಗಗಳಿಂದ ತಿಳಿದು ಬರುವ ಅಂಶಗಳಿವು. ದೇಹಕ್ಕೆ ಶೆಖೆಯ ತಾಪದ ಅನುಭವವಾಗದೆ ಇರಬೇಕಾದರೆ ಗಾಳಿಯಲ್ಲಿನ ನೀರಾವಿಯ ಅಂಶವು ಕಡಿಮೆಯಾಗಿರಬೇಕು. ಎರಡನೆಯದಾಗಿ, ಗಾಳಿಯು ಒಂದೇ ಎಡೆಯಲ್ಲಿ ನಿಲ್ಲದೆ ಚಲಿಸುತ್ತಿರಬೇಕು. ಹಾಗಿದ್ದರೆ ಮಾತ್ರವೇ ವಾತಾವರಣದ ಶಾಖವು ಅಧಿಕವಾಗಿದ್ದರೂ ನಮ್ಮ ದೇಹವು ಅದನ್ನು ಸಹಿಸಬಲ್ಲದು.

ಲಿಯೋನಾರ್ಡರ ಪ್ರಯೋಗಗಳಿಂದ ತಿಳಿದು ಬಂದ ಈ ಅಂಶವನ್ನೇ ಎಲ್ಲ ಏರ್ ಕಂಡೀಷನಿಂಗ್ ವ್ಯವಸ್ಥೆಗಳಲ್ಲಿಯೂ ಉಪಯೋಗಿಸುತ್ತಾರೆ. ಈ ವ್ಯವಸ್ಥೆಯಲ್ಲಿ ಗಾಳಿಯ ಉಷ್ಣತೆಯನ್ನು ಕಡಿಮೆ ಮಾಡುವ ಯಾವ ಪ್ರಯತ್ನವೂ ಇರುವುದಿಲ್ಲ. ಅದರ ಬದಲು ಗಾಳಿಯಲ್ಲಿನ ನೀರಾವಿಯ ಅಂಶವನ್ನು ಕಡಿಮೆಗೊಳಿಸುವ ಏರ್ಪಾಟುಗಳು ಮಾತ್ರವೇ ಇರುತ್ತವೆ.

ಮನುಷ್ಯ ದೇಹದ ನಾರ್ಮಲ್ ಉಷ್ಣತೆಯು ೯೮.೬ ಡಿಗ್ರಿ ಫ್ಯಾರನ್‌ಹೀಟ್‌ನಷ್ಟಿರುತ್ತದೆ. ವಾತಾವರಣದ ಉಷ್ಣತೆಯು ಇದಕ್ಕಿಂತ ಕಡಿಮೆ ಇದ್ದಾಗ, ನಮ್ಮ ದೇಹದಲ್ಲಿ ಉತ್ಕರ್ಷಣ ಕ್ರಿಯೆಯಿಂದ ಸರ್ವದಾ ಉತ್ಪತ್ತಿಯಾಗುತ್ತಿರುವ ಶಾಖವು ಈ ನಾರ್ಮಲ್ ಉಷ್ಣತೆಯನ್ನು ಉಳಿಸಿಕೊಳ್ಳಲು ಸಹಕಾರಿಯಾಗಿದೆ. ವಾತಾವರಣದ ಉಷ್ಣತೆಯು ಹೆಚ್ಚಾಗಿದ್ದು, ನೀರಾವಿಯ ಅಂಶವು ಕಡಿಮೆಯಾಗಿದ್ದರೆ, ಆಗ ದೇಹದ ಶಾಖವು ಬೆವರಿನ ರೂಪದಲ್ಲಿ ಸುಲಭವಾಗಿ ಹೊರಹಾಕಲ್ಪಡುತ್ತದೆ. ಆದರೆ ನೀರಾವಿಯ ಅಂಶವು ಹೆಚ್ಚಾಗಿದ್ದಲ್ಲಿ, ಈ ಕ್ರಿಯೆಯು ಸುಲಭವಾಗಿ ನಡೆಯದೆ ಅನುಭವಿಸುವ ತೊಂದರೆಯನ್ನೇ ನಾವು ಬೇಸಿಗೆಯ ಧಗೆ ಎನ್ನುತ್ತೇವೆ.

ಆಗ ತಂಪು ಪಾನೀಯಗಳನ್ನು ಸೇವಿಸುವುದರಿಂದ ದೇಹವು ತಂಪಾಗುವುದಿಲ್ಲ. ಆದರೆ ತಂಪು

ಗೊಳಿಸಿತೆಂಬ ಭ್ರಮೆ ಉಂಟಾಗುವುದೇನೋ ನಿಜ. ಇದಕ್ಕೆ ಕಾರಣ, ತಂಪು ವಸ್ತುಗಳು ಕೇಂದ್ರ ನರವ್ಯೂಹದ ಮೇಲೆ ಪರಿಣಾಮವನ್ನುಂಟುಮಾಡಿ, ಕೊಂಚಕಾಲ ತಟಸ್ಥಗೊಳಿಸಿ, ಶೆಖೆಯ ಅರಿವಾಗದಂತೆ ತಡೆಯುತ್ತವೆ. ಆದ್ದರಿಂದಲೇ ನಮಗೆ ದೇಹವು ತಂಪಾಯಿತೆಂಬ ಭ್ರಮೆಯುಂಟಾಗುತ್ತದೆ.

ಐಸ್‌ಕ್ರೀಮ್‌ನಲ್ಲಿರುವ ಹಾಲು ಆಹಾರಾಂಶವಾದುದರಿಂದ ದೇಹದಲ್ಲಿ ಶಾಖೋತ್ಪತ್ತಿ ಮಾಡಬಲ್ಲದು. ಅದರಲ್ಲಿರುವ ಸಕ್ಕರೆ ಹಾಗೂ ಮೇದಸ್ಸಿನ ಅಂಶಗಳಂತೂ ಶಾಖೋತ್ಪತ್ತಿ ಮಾಡುವುದರಲ್ಲಿ ಎತ್ತಿದ ಕೈ. ಇವೆರಡೂ ಅತ್ಯಧಿಕ ಶಾಖವನ್ನು ಉತ್ಪತ್ತಿ ಮಾಡಬಲ್ಲ ವಸ್ತುಗಳು. ಹಾಗಿರುವಾಗ ಒಂದೆರಡು ಐಸ್‌ಕ್ರೀಮುಗಳನ್ನು ಸೇವಿಸಿ, ಒಂದು ಗ್ಲಾಸ್ ತಂಪು ಬಾದಾಮಿ ಹಾಲನ್ನು ಕುಡಿದು ದೇಹವನ್ನು ತಂಪುಮಾಡುತ್ತಿದ್ದೇವೆಂದು ಭ್ರಮಿಸುವ ಪ್ರತಿ ವ್ಯಕ್ತಿಯೂ ನಿಜಾಂಶದ ಅರಿವಿಲ್ಲದೆ ಮೋಸಹೋಗುತ್ತಿದ್ದಾನೆ.

ಸೊಪ್ಪು, ಸೌತೇಕಾಯಿ ಇತ್ಯಾದಿ ತರಕಾರಿಗಳು ದೇಹವನ್ನು ತಂಪುಗೊಳಿಸುತ್ತವೆಂಬು ಜನರು ಸಾಮಾನ್ಯವಾಗಿ ಭಾವಿಸುತ್ತಾರೆ. ತರಕಾರಿಗಳ ಹಸುರು ಬಣ್ಣವು ಹಸುರು ಮರಗಿಡಗಳ ನೆರಳಿನ ತಂಪನ್ನು ನೆನಪಿಗೆ ತರುವುದರಿಂದ ಜನರ ಮನಸ್ಸಿನಲ್ಲಿ ಈ ಬಗೆಯ ನಂಬಿಕೆಯನ್ನು ಪ್ರಚೋದಿಸಿರಬಹುದೆಂದು ಮನಃಶಾಸ್ತ್ರಜ್ಞರು ಅಭಿಪ್ರಾಯಪಡುತ್ತಾರೆ. ಇದೇ ರೀತಿ ರಸಭರಿತವಾದ ಕಿತ್ತಳೆ, ಕಲ್ಲಂಗಡಿ, ಇತ್ಯಾದಿ ಹಣ್ಣುಗಳಲ್ಲಿರುವ ಜಲಾಂಶವು ಇಂತಹ ಹಣ್ಣುಗಳು ದೇಹಕ್ಕೆ ತಂಪುಕೊಡುತ್ತವೆಯೆಂಬ ನಂಬಿಕೆಗೆ ಕಾರಣವಾಗಿದೆ. ಆಹಾರ ವಸ್ತುಗಳಾದುದರಿಂದ ಇವೆಲ್ಲವೂ ದೇಹದಲ್ಲಿ ಶಾಖೋತ್ಪತ್ತಿಯನ್ನು ಮಾಡಿಯೇ ತೀರುತ್ತವೆ.

ಇದೇ ರೀತಿ ಜನರು ಉಡುಪಿನ ವಿಚಾರದಲ್ಲಿಯೂ ತಪ್ಪು ಅಭಿಪ್ರಾಯಗಳನ್ನು ಇಟ್ಟುಕೊಂಡಿದ್ದಾರೆ.

ಬಿಳಿಯ ಬಟ್ಟೆಯು ಶಾಖವನ್ನು ಪ್ರತಿಫಲಿಸುವುದೆಂದೂ ಕರಿಯ ಬಟ್ಟೆಗಳು ಶಾಖವನ್ನು ಹೀರುತ್ತವೆಯೆಂದೂ ಭೌತಶಾಸ್ತ್ರದ ನಿಯಮವಿರುವುದು. ಆದುದರಿಂದ ಬಿಳಿಯ ಬಟ್ಟೆಗಳನ್ನು ಬೇಸಿಗೆಯಲ್ಲಿ ಧರಿಸುವುದು ಉತ್ತಮವೆಂದು ಅನೇಕರು ಅಭಿಪ್ರಾಯಪಡುತ್ತಾರೆ. ಆದರೆ ಬಿಳಿಯ ಬಟ್ಟೆಗಳು ಸೂರ್ಯನ ಶಾಖವನ್ನು ಪ್ರತಿಫಲಿಸುವಂತೆಯೇ, ದೇಹದ ಶಾಖವನ್ನೂ ಪ್ರತಿಫಲಿಸಿ ಹೊರಬೀಳದಂತೆ ಹಿಡಿದು ನಿಲ್ಲಿಸುವುವು ಎನ್ನುವುದನ್ನು ನಾವು ಮರೆಯಬಾರದು. ಅದರಂತೆಯೇ ಕರಿಯ ಉಡುಪು ದೇಹದ ಶಾಖವನ್ನು ಹೀರಿ ನಮಗೆ ಸಹಾಯಮಾಡಬಹುದಾದರೂ ಸೂರ್ಯನ ಶಾಖವನ್ನೂ ಹೀರಿ ನಮಗೆ ತೊಂದರೆ ಕೊಡುತ್ತದೆ. ಸ್ವತಂತ್ರವಾಗಿ ಗಾಳಿ ಸಂಚರಿಸಲು ಅನುಕೂಲವಿರುವಂಥ ಸಡಿಲವಾಗಿ ಧರಿಸುವ ತೆಳುವಾದ ಬಟ್ಟೆಯು ಮುಖ್ಯವೇ ಹೊರತು ಅದರ ಬಣ್ಣವಲ್ಲ.

ವೈದ್ಯಮಿತ್ರರ ಇಷ್ಟು ವಿವರಣೆಯು ಮುಗಿಯುವುದರೊಳಗಾಗಿ ನಾವು ತಂಪು ಪಾನೀಯಗಳ ಅಂಗಡಿಯನ್ನು ತಲುಪಿದ್ದೆವು. ತಲಾ ಒಂದೊಂದು ಗ್ಲಾಸ್ ನೀರು ಸಾಕೆಂದು ಮಿತ್ರರು ಹೇಳಿಬಿಡುವರೆಂದೇ ನಾನು ಭಾವಿಸಿದ್ದೆನು. ಆದರೆ, ತಲಾ ಒಂದೊಂದು ಐಸ್‌ಕ್ರೀಮ್ ಮತ್ತು ಒಂದೊಂದು ಗ್ಲಾಸ್ ಐಸ್ ಸೇರಿಸಿದ ಲೈಂ ಜೂಸ್‌ಗಳನ್ನು ಮಿತ್ರರು ತರಹೇಳಿದುದನ್ನು ಕೇಳಿ ನನಗೆ ಆಶ್ಚರ್ಯವಾಯಿತು.

"ತತ್ವ ಹೇಳುವುದೇನೋ ಸುಲಭ. ಆದರೆ ನಾಲಿಗೆಯ ಚಪಲ ಕೇಳುವುದಿಲ್ಲವಲ್ಲ!" ಎನ್ನುತ್ತ ಅವರು ನನ್ನ ಕಡೆ ನೋಡಿ, ಕಣ್ಣು ಮಿಟುಕಿಸಿ ನಕ್ಕರು. *



ಸೆಮೆಲ್‌ವೀಸ್ : ವೈದ್ಯಶಾಸ್ತ್ರಕ್ಕೊಂದು ಆತ್ಮಬಲಿ

ಹೆರಿಗೆ ಜ್ವರದ ನಿಜ ಕಾರಣವನ್ನಾತ ಊಹಿಸಿದ್ದ; ಆದರೆ ಅವನ ಕಾಲದ ವೈದ್ಯರು ಅವನನ್ನು ತಿರಸ್ಕರಿಸಿದರು!

ಎಚ್. ಕೆ. ಚಂದ್ರಶೇಖರ

ಈಗಿನ ಆಪರೇಷನ್ ಥಿಯೇಟರನ್ನು ನೋಡಿದ್ದೀರಲ್ಲವೆ?— ....ಧೂಳು ಕೊಳೆ ಈ ಸ್ಥಳದಲ್ಲಿ ನಿಷಿದ್ಧ. ಇಲ್ಲಿ ಕೆಲಸ ಮಾಡುವವರಿಗೆ ಯಾವ ಬಗೆಯ ಅಶುದ್ಧತೆಯೂ ಸಹಿಸದು. ಉಪಕರಣಗಳು ಸ್ವಚ್ಛ, ನೆಲ ಗೋಡೆ ಹಾಸಿಗೆ ಎಲ್ಲವೂ ನಿರ್ಮಲ.

ಈ ಶುಚಿತ್ವ ಹೇಗೆ ಆರಂಭವಾಯಿತೆಂದು ಯೋಚನೆ ಮಾಡಿದ್ದೀರಾ?....ಸಹಸ್ರ ಸಹಸ್ರ ಜನ ಆಸ್ಪತ್ರೆಗಳಲ್ಲಿ ಬಲಿಯಾಗುತ್ತಿದ್ದುದರ ಕಾರಣವನ್ನು ಪ್ರಪ್ರಥಮವಾಗಿ ಕಂಡುಕೊಂಡು ಈ ಸ್ವಚ್ಛತೆಗೆ ನಾಂದಿ ಹಾಕಿದ ಮಹಾಪುರುಷ ಜಗತ್ತಿನ ಪ್ರಮುಖ ವೈದ್ಯರನೇಕರ ಅವಹೇಳನಕ್ಕೆ ಗುರಿಯಾಗಿ ಅತೀವ ಸಂಕಟಪಟ್ಟು ಸಾವನ್ನಪ್ಪಿದ ಎಂದರೆ ನಂಬುತ್ತೀರಾ?....

ಇಗ್ನಾಜ್ ಫಿಲಿಪ್ ಸೆಮೆಲ್‌ವೀಸ್ (Ignaz Phillip Semmelweis) ಇಂಥ ಒಬ್ಬ ಜಗದ್ವ್ಯಕ್ತಿ. ಹಂಗೇರಿಯಲ್ಲಿ ಹುಟ್ಟಿದ ಈತ ವೈದ್ಯನಾದದ್ದೂ ಆಕಸ್ಮಿಕವಾಗಿಯೇ. ವಿಯೆನ್ನದಲ್ಲಿ ಲಾ ಅಭ್ಯಸಿಸುತ್ತಿದ್ದವ ಒಮ್ಮೆ ವಿಯೆನ್ನಾ ಜನರಲ್ ಆಸ್ಪತ್ರೆಯ ಶವದ ಮನೆ (Mortuary)ಗೆ ಕೇವಲ ಕುತೂಹಲದಿಂದ ಕಾಲಿಟ್ಟ. ಅಲ್ಲಿ ಪ್ರೊಫೆಸರ್ ರೋಕಿಟಾನ್ಸ್ಕಿ ಮಾಡುತ್ತಿದ್ದ ಶವವಿಚ್ಛೇದನವನ್ನು ಆಸಕ್ತಿಯಿಂದ ನೋಡಿದ. ಪ್ರೊ. ರೋಕಿಟಾನ್ಸ್ಕಿ ಆಗ ತಾನೇ ವೈದ್ಯಶಾಸ್ತ್ರದ ಹೊಸ ವಿಭಾಗವಾಗಿ ರೋಗಾವೃತ ದೇಹಶಾಸ್ತ್ರವೆಂಬ (Pathological Anatomy) ಅಭ್ಯಾಸದ ಸೃಷ್ಟಿಯನ್ನು ನಡೆಸಿದ್ದರು. ಎಳೆಯ ಸೆಮೆಲ್‌ವೀಸ್ ಲಾ ಬಿಟ್ಟು ವೈದ್ಯಶಾಸ್ತ್ರ ಓದಲು ತೊಡಗಿದ.

ವಿದ್ಯಾರ್ಥಿದಶೆಯಲ್ಲಿ ಇವನಿಗೆ ಶೋಧಕನಿಗಿರಬೇಕಾದ ಪ್ರವೃತ್ತಿ ಏನೇನೂ ಇರಲಿಲ್ಲ. ೧೮೪೪ರಲ್ಲಿ ತನ್ನ ೨೬ನೆಯ ವಯಸ್ಸಿನಲ್ಲಿ ವೈದ್ಯನಾದ ನಂತರ ವಿಯೆನ್ನ ಜನರಲ್ ಆಸ್ಪತ್ರೆಯ ಗರ್ಭಿಣಿಯರ ವಿಭಾಗದಲ್ಲಿ ಅಸಿಸ್ಟೆಂಟ್‌ನಾಗಿ ಸೇರಿಕೊಂಡ. ಚಂಚಲ ಸ್ವಭಾವದವನಾಗಿದ್ದ ಈತ ಅಲ್ಲಿ ಕೆಲವೇ ತಿಂಗಳಲ್ಲಿ ಪೂರ್ಣವಾಗಿ ಬದಲಾಯಿಸಿ ಹೋದ.

ಸೆಮೆಲ್‌ವೀಸ್ ಕೆಲಸ ಆರಂಭಿಸಿದಾಗ ಹೆರಿಗೆಯ ಜ್ವರವು (Puerperal fever) ಪ್ರಮುಖ ವ್ಯಾಧಿಯಾಗಿತ್ತು. ಆಗಿನ ಪುಸ್ತಕಗಳು ಈ ಜ್ವರದ ಬಗ್ಗೆ ವಿವರಣೆ ನೀಡುತ್ತ ‘ ಇದೊಂದು

(ಸಾಧಾರ)

ಹುಳಿತು ಹೋಗುವ ವ್ಯಾಧಿ; ಮನಸಿನ ಉದ್ರೇಕಗಳು, ನೆಗಡಿ, ಸಾಂಕ್ರಾಮಿಕ ಮತ್ತು ಸ್ಥಳೀಯ ಪ್ರಭಾವಗಳಿಗೊಳಪಟ್ಟು ಸೋಂಕಿನಿಂದ ರಕ್ತ ಹುಳಿಗಟ್ಟಿ ಬರುವಂಥದ್ದು' ಎಂದೆಲ್ಲ ವರ್ಣಿಸಿದ್ದವು.

ಸೆಮೆಲ್‌ವೀಸ್ ಕೆಲಸ ಕೈಗೊಂಡ ತಿಂಗಳಲ್ಲಿ ೨೦೮ ತಾಯಿಯರಲ್ಲಿ ೩೬ ಮಂದಿ ಅವನ ವಾರ್ಡಿನಲ್ಲಿ ಸತ್ತರು. ಆಸ್ಪತ್ರೆಯ ಡೈರೆಕ್ಟರ್ ಪ್ರೊ. ಕ್ಲೇನ್‌ರು ಹೆರಿಗೆಯ ಜ್ವರದ ವಿಷಯದಲ್ಲಿ ನಿರ್ಲಕ್ಷ್ಯರಾಗಿದ್ದರು.

ವಿಯೆನ್ನ ಜನರಲ್ ಆಸ್ಪತ್ರೆಯ ಗರ್ಭಿಣಿಯರ ಶಾಖೆಯಲ್ಲಿ ಎರಡು ವಿಭಾಗಗಳಿದ್ದವು. ಸೆಮೆಲ್‌ವೀಸ್ ಕೆಲಸಮಾಡುತ್ತಿದ್ದ ಮೊದಲ ವಿಭಾಗದಲ್ಲಿ ವೈದ್ಯವಿದ್ಯಾರ್ಥಿಗಳಿಗೆ ತರಬೇತಿ ಕೊಡಲಾಗುತ್ತಿತ್ತು. ಎರಡನೆಯ ವಿಭಾಗದಲ್ಲಿ ದಾದಿಯರು ಶಿಕ್ಷಣ ಪಡೆಯುತ್ತಿದ್ದರು. ಮೊದಲ ವಿಭಾಗದಲ್ಲಿ ಪ್ರಸೂತಿ ಜ್ವರದಿಂದ ನೂರಕ್ಕೆ ೧೦ ಮಂದಿ ಸಾಯುತ್ತಿದ್ದರು; ಆದರೆ ಎರಡನೆಯ ವಿಭಾಗದಲ್ಲಿ ನೂರಕ್ಕೆ ಕೇವಲ ಒಬ್ಬ ಹೆಂಗಸು ಸಾಯುತ್ತಿದ್ದಳು. ಎರಡು ವಿಭಾಗಗಳೂ ಒಂದೇ ಕಟ್ಟಡದಲ್ಲಿ ಪಕ್ಕ ಪಕ್ಕದಲ್ಲಿಯೇ ಇದ್ದವು. ಹೆರಿಗೆಯ ಜ್ವರ ನಿಜವಾಗಿಯೂ ಸಾಂಕ್ರಾಮಿಕವಾಗಿದ್ದರೆ,—ಸೆಮೆಲ್‌ವೀಸ್ ವಾದಿಸಿದ— ಎರಡು ವಿಭಾಗಗಳಲ್ಲಿಯೂ ಸಾವಿನ ಸಂಖ್ಯೆ ಒಂದೇ ಸಮವಾಗಿರಬೇಕು. ಆದರೆ ಅವನು ಈ ವಾದಗಳೊಡನೆ ಪ್ರೊಫೆಸರ್ ಕ್ಲೀನ್ ಅವರ ಮುಂದೆ ಬಂದಾಗ ಅವರು ಹುಬ್ಬು ಹಾರಿಸಿಬಿಡುತ್ತಿದ್ದರು.

ಸೆಮೆಲ್‌ವೀಸ್ ಇದಕ್ಕೊಂದು ವಿವರಣೆ ಹುಡುಕತೊಡಗಿದ. ಪುನಃ ಪುನಃ ಈ ವ್ಯಾಧಿಯ ಪ್ರಕೃತಿಯನ್ನು ತಿಳಿದುಕೊಳ್ಳಲು ತನ್ನ ವಿದ್ಯಾರ್ಥಿಗಳೊಂದಿಗೆ ಶವದ ಮನೆಗೆ ನಡೆದು ಪ್ರಸೂತಿಜ್ವರಕ್ಕೆ ಆಹುತಿಯಾಗಿದ್ದ ಹೆಂಗಸರ ವಿಚ್ಛೇದ ನಡೆಸಿ ನೋಡುತ್ತಿದ್ದ. ರೋಗದ ಚಿತ್ರ ಬದಲಾಯಿಸುತ್ತಲೇ ಇರಲಿಲ್ಲ: ಉರಿಯೂತ ಮತ್ತು ಕೀವಾಗುವಿಕೆ ಗರ್ಭಕೋಶದಲ್ಲಿ ಮಾತ್ರವಲ್ಲದೆ ಪಿತ್ತಕೋಶ, ಲಿಂಫ್ ಗ್ರಂಥಿಗಳು, ಗುಲ್ಮ, ಉದರದ ಒಳಗೋಡೆ—ಪೆರಿಟೋನಿಯಂ, ಮೂತ್ರಜನಕಾಂಗಗಳು ಮತ್ತು ಮಿದುಳಿನ ಹೊರ ಪದರುಗಳು—ಎಲ್ಲ ಕಡೆಗಳಲ್ಲೂ ನಡೆದಿರುತ್ತಿತ್ತು. ಆಪರೇಷನ್ ಮಾಡಿಸಿಕೊಂಡ ರೋಗಿಗಳಿಗೆ ಬರುತ್ತಿದ್ದ ಶಸ್ತ್ರಕ್ರಿಯಾಜ್ವರಕ್ಕೂ (Surgical fever) ಈ ಜ್ವರಕ್ಕೂ ವ್ಯತ್ಯಾಸವೇ ಇಲ್ಲದಿದ್ದರೂ ಸೆಮೆಲ್‌ವೀಸ್‌ಗೆ ಈ ಸಂಬಂಧದ ಬಗ್ಗೆ ಗಮನ ಹರಿದಿರಲಿಲ್ಲ. ವಿಚ್ಛೇದ ನಡೆಸಿದೊಡನೆ ಅವನು ಮತ್ತು ವಿದ್ಯಾರ್ಥಿಗಳು ನೇರಾಗಿ ಶವದ ಮನೆಯಿಂದ ವಾರ್ಡುಗಳಿಗೆ ತೆರಳುತ್ತಿದ್ದರು. ಹೆರಿಗೆಯ ನೋವಿನಲ್ಲಿದ್ದ ಹೆಂಗಸರನ್ನೂ ಪ್ರಸವಿಸಿದವರನ್ನೂ ಹೆಚ್ಚು ಹೆಚ್ಚು ಆಸ್ಥೆಯಿಂದ ಪರಿಶೀಲಿಸುತ್ತಿದ್ದರು.

ಇದ್ದಕ್ಕಿದ್ದಂತೆ ನರಳುವ ಮತ್ತು ಸಾಯುವ ಸ್ತ್ರೀಯರ ಸಂಖ್ಯೆ ಏರಿತು— ಅದು ಮೊದಲನೆಯ ವಿಭಾಗದಲ್ಲಿ. ಹೆಂಗಸರು ಹತಾಶರಾಗಿ ಆ ವಿಭಾಗದಿಂದ ತಪ್ಪಿಸಿಕೊಳ್ಳಲು ಹೆಣಗಲಾರಂಭಿಸಿದರು. ಎರಡು ವಿಭಾಗಗಳಲ್ಲೂ ಕಟ್ಟುನಿಟ್ಟಾಗಿ ನಿಯಮಿತ ವಾರದ ದಿನಗಳಲ್ಲೇ ಸ್ತ್ರೀಯರನ್ನು ಸೇರಿಸಿಕೊಳ್ಳಲಾಗುತ್ತಿತ್ತು. ಎರಡನೆಯ ವಿಭಾಗಕ್ಕೆ ಸೇರಲು ವಾರದ ದಿನ ಅಡ್ಡ ಬಂದರೆ ಆ ಹೆಂಗಸರು ಆಸ್ಪತ್ರೆಯ ಬಾಗಿಲಲ್ಲಿ ಪ್ರಸವಿಸುತ್ತಿದ್ದರೇ ಹೊರತು ಒಂದನೆಯ ವಿಭಾಗಕ್ಕೆ ಸೇರಲು ಮುಂದೆ ಬರುತ್ತಿರಲಿಲ್ಲ. ಹೆರಿಗೆಯ ನೋವಿನಲ್ಲಿದ್ದಾಗ ಒತ್ತಾಯಪೂರ್ವಕವಾಗಿ ಮೊದಲ ವಿಭಾಗಕ್ಕೆ ಸೇರಿದ ಮಂದಿ ಜಗಳಾಡಿ ಬೇಡಿ ಎರಡನೆಯ ವಿಭಾಗದ ದಿನ ಅಲ್ಲಿ ತೆರಳಲು ಹವಣಿಸುತ್ತಿದ್ದರು. ಸಾಂಕ್ರಾಮಿಕತೆಯಾದರೂ ಹೇಗೆ ವಾರದ ಕೆಲವೇ ದಿನಗಳಲ್ಲಿ ತನ್ನ ಪರಿಣಾಮ ಬೀರುತ್ತಿತ್ತೆಂಬುದು ಬುದ್ಧಿಗೆ ನಿಲುಕದ ವಿಷಯವಾಗಿತ್ತು.

ಸೆಮೆಲ್‌ವೀಸ್‌ಗೆ ತಲೆ ಕೆಟ್ಟಿತು. ಹಗಲೂ

ರಾತ್ರಿಯೂ ಈ ಸಮಸ್ಯೆಯನ್ನು ಕುರಿತು ಯೋಚಿಸಿದ. ತನ್ನೊಡನೆ ಶವವಿಚ್ಛೇದಕ್ಕೆ ಬರುತ್ತಿದ್ದ ವೈದ್ಯಕೀಯ ನ್ಯಾಯಶಾಸ್ತ್ರದ ಪ್ರೊಫೆಸರ್ ಕೊಲೆಟ್ಸ್ಕಾ ರೊಂದಿಗೆ ಚರ್ಚಿಸಿದ.

೧೮೪೬ ರ ಅಂತ್ಯಕ್ಕೆ ಸೆಮೆಲ್‌ವೀಸ್‌ನ ವಿಭಾಗದಲ್ಲಿ ಸಾವಿನ ಸಂಖ್ಯೆ ಶೇಕಡ ೧೧·೪ ಕ್ಕೆ ಏರಿತ್ತು. ಎರಡನೆಯ ವಿಭಾಗದಲ್ಲಿ ಅದು ಕೇವಲ ಶೇ. ೦·೯ ರಲ್ಲಿ ನಿಂತಿತ್ತು. ಸೆಮೆಲ್‌ವೀಸ್ ಲೆಕ್ಕವಿಲ್ಲದಷ್ಟು ವಿಷಯಗಳನ್ನು ಕಲೆ ಹಾಕಿದ-ಎರಡು ವಿಭಾಗಗಳಿಗೂ ಒಂದೇ ಸಮಾಜ ವರ್ಗದಿಂದ ರೋಗಿಗಳು ಬರುತ್ತಿದ್ದುದು, ಎರಡು ವಿಭಾಗಗಳಲ್ಲಿಯೂ ಒಂದೇ ಬಗೆಯ ಭೌತಿಕ ವಾತಾವರಣವಿದ್ದುದು, ಎಲ್ಲ ಬಗೆಯ ಸಾಮ್ಯಗಳನ್ನು ಪರೀಕ್ಷಿಸಿ ಚರ್ಚೆ ನಡೆಸಿದ.

ಅನಂತರ ಅವನು ತನ್ನ ವಿಭಾಗದಲ್ಲಿ ಎರಡನೆಯ ವಿಭಾಗದಲ್ಲಿದ್ದಂತೆಯೇ ಹೆರಿಗೆಯ ವಿಧಾನಗಳನ್ನು ಅಳವಡಿಸಿದ ಹೆಂಗಸರನ್ನು ಪ್ರಸವ ಸಮಯದಲ್ಲಿ ಮಗ್ಗುಲಾಗಿ ಮಲಗಿಸಿದ,- ಎರಡನೆಯ ವಿಭಾಗದ ದಾದಿಯರಿಗಿಂತ ಹೆಚ್ಚು ಸೂಕ್ಷ್ಮವಾದ ಕೌಶಲವನ್ನು ಪ್ರಯೋಗಿಸಿದ.

ಸಾವಿನ ಸಂಖ್ಯೆ ಇಳಿಯಲಿಲ್ಲ!

೧೮೪೭ರ ವಸಂತದ ಹೊತ್ತಿಗೆ ಅವನ ಮನೋವೇದನೆ ಮಿತಿಮೀರಿತ್ತು; ಪ್ರೊ. ಕೊಲೆಟ್ಸ್ಕಾ ಕೆಲವು ದಿನಗಳ ಮಟ್ಟಿಗೆ ಆಸ್ಪತ್ರೆಯಿಂದ ದೂರ ಏರೆಂದು ಬೇಡಿಕೊಂಡರು. ಮಾರ್ಚ್, ೨, ೧೮೪೭ ರಂದು ವೆನಿಸ್‌ಗೆ ತೆರಳಿದ ಸೆಮೆಲ್‌ವೀಸ್ ಮೂರೇ ವಾರಗಳಲ್ಲಿ ಕೆಲಸಕ್ಕೆ ಹಿಂದಿರುಗಿದ. ಶವದ ಮನೆಯಲ್ಲಿ ಕೊಲೆಟ್ಸ್ಕಾ ತನ್ನೊಡನೆ ಎಂದಿನಂತೆ ಇಲ್ಲದ್ದನ್ನು ನೋಡಿ ಆಶ್ಚರ್ಯಪಟ್ಟು ತನ್ನ ಸಂಗಾತಿಯೊಬ್ಬನನ್ನು ಕೇಳಿದ—ಅವರೆಲ್ಲಿ ಎಂದು. 'ಡಾಕ್ಟರ್, ನಿಮಗೆ ಗೊತ್ತಿಲ್ಲವೆ? ಪ್ರೊಫೆಸರ್ ಕೊಲೆಟ್ಸ್ಕಾ ಸತ್ತುಹೋದರು' ಎಂದು ಉತ್ತರ ಬಂತು.

ಸೆಮೆಲ್‌ವೀಸ್‌ಗೆ ಈ ಸಾವಿನ ಬಗ್ಗೆ ವಿವರ ಕ್ರಮೇಣ ತಿಳಿಯಿತು. ದೇಹವಿಚ್ಛೇದ ನಡೆಸು ತ್ತಿದ್ದಾಗ ಒಂದು ದಿನ ಯಾವನೋ ಒಬ್ಬ ವಿದ್ಯಾರ್ಥಿ ಗಡಿಬಿಡಿಯಲ್ಲಿ ಚಾಕುವನ್ನು ಕೊಲೆ-ಟ್ಸ್ಕಾಗೆ ತಗುಲಿಸಿದ್ದ. ಅವರು ಅದರ ಬಗ್ಗೆ ಗಮನಿಸಿಯೇ ಇರಲಿಲ್ಲ. ಆದರೆ ಮರುರಾತ್ರಿಯೇ ಚಳಿಜ್ವರ ಬಂದಿತ್ತು. ಕೆಲವೇ ದಿನಗಳ ನಂತರ ಸುಡುಜ್ವರದಲ್ಲಿ ಕನವರಿಸುತ್ತ ಕೊಲೆಟ್ಸ್ಕಾ ಪ್ರಾಣ ನೀಗಿದ್ದರು.

ಸೆಮೆಲ್‌ವೀಸ್ ಕೊಲೆಟ್ಸ್ಕಾರ ಶವಪರೀಕ್ಷೆಯ ವರದಿಬೇಕೆಂದು ಕೇಳಿದ. ವರದಿಯನ್ನು ಓದುತ್ತಿದ್ದಂತೆಯೇ ಅವನು ಗರಬಡಿದವನಂತಾದ: ಗುರುತು ಹಾಕಿದ್ದ ಲಕ್ಷಣಗಳು ಅವೇ!- ಉರಿಯೂತ, ಕೀವಾಗುವಿಕೆ— ಲಿಂಫ್ ಗ್ರಂಥಿಗಳು, ರಕ್ತನಾಳಗಳು, ಶ್ವಾಸಕೋಸದ ಹೊರಪದರು, ಮೆದುಳಿನ ಹೊರಪದರು— ಎಲ್ಲೆಲ್ಲೂ

.....ಕೊಲೆಟ್ಸ್ಕಾರ ನಿಧನದ ಕಾರಣಕ್ಕೂ ನೂರಾರು ಗರ್ಭಿಣಿಯರು ಸಾಯುವುದಕ್ಕೂ ತೀವ್ರ ಸಾಮ್ಯ ಇದ್ದುದು ಶುದ್ಧ ಸತ್ಯದಂತೆ ಸೆಮೆಲ್‌ವೀಸ್‌ಗೆ ಒಮ್ಮೆಲೇ ಗೋಚರವಾ-ಯಿತು.

ಚಾಕುವಿನಿಂದ ಗಾಯದ ಮೂಲಕ ಶವಗಳಲ್ಲಿದ್ದ ಯಾವುದೋ ವಿಷಾಂಶ ಕೊಲೆಟ್ಸ್ಕಾರ ದೇಹಕ್ಕೆ ನುಗ್ಗಿತ್ತು. ಹಾಗಿದ್ದರೆ, ತಾನು ಮತ್ತು ತನ್ನ ವಿದ್ಯಾರ್ಥಿಗಳು ಸ್ವತಃ ಕೈಗಳಿಂದಲೇ ಅಂಥದೇ ವಿಷಸಾಮಗ್ರಿಯನ್ನು ನೇರಾಗಿ ಶವದ ಮನೆಯಿಂದ ಹೊತ್ತು ರೋಗಿಗಳಿಗೆ ತಲುಪಿಸಿರಬಹುದೇ? ಇದೇ ಮೊದಲನೆ ವಿಭಾಗದಲ್ಲಿನ ಸಾವುಗಳಿಗೆ ಕಾರಣವಾಗಿರಬೇಕು..... ದಾದಿಯರು ಶವದ ಮನೆಗೆ ಹೋಗದೆಯೆ ಸ್ತ್ರೀಯರನ್ನು ಪರೀಕ್ಷಿಸಿದ್ದರಿಂದ ಎರಡನೆಯ ವಿಭಾಗದಲ್ಲಿ ಸಾವು ಅಷ್ಟು ಕಡಮೆ! ತೀವ್ರ ಮನೋಯಾತನೆಯನ್ನು ಅನುಭವಿಸುತ್ತ ಸೆಮೆಲ್‌ವೀಸ್ ಆ ಕ್ಷಣದಲ್ಲೇ ಕಂಡ—ಏಕೆ ಪ್ರಸವ ಪೂರ್ವದಲ್ಲಿ ಹೆಚ್ಚು ದಿನಗಳು ಆಸ್ಪತ್ರೆಯಲ್ಲಿದ್ದವರು ಖಂಡಿತ

ವಾಗಿ ರೋಗಕ್ಕೆ ತುತ್ತಾದರು ಎಂದು.

ಸೆಮೆಲ್‌ವೀಸ್‌ಗೆ ಇನ್ನು ತಡೆಯದಾಯಿತು. ತಾನೇ ಅಸಂಖ್ಯ ಸ್ತ್ರೀಯರ ಕೊಲೆಗಾರನೆಂಬ ಧೃಢನಿಶ್ಚಯ ಮನಸ್ಸಿಗೆ ನಾಟಿ ಚಿತ್ತವಿಭ್ರಮ ಗೊಳಿಸಿತು. ಆತ್ಮಹತ್ಯೆಮಾಡಿಕೊಳ್ಳಲೇ ಎಂದು ಕೊಂಡ ಆದರೆ ಈ ಜ್ಞಾನದ ಹೊಸ ಬೆಳಕಿನಲ್ಲಿ ತನ್ನ ಗುರಿ ಸಾಧಿಸುವ ಆಸೆ ಒತ್ತರಿಸಿಕೊಂಡು ಬಂದು ಮೇ ೧೮೪೭ ರಲ್ಲಿ ಹೋರಾಟ ಪ್ರಾರಂಭಿಸಿದ. ಪ್ರೊಫೆಸರ್ ಕ್ಲೇನ್‌ರ ಅಪ್ಪಣೆ ಪಡೆಯದೆ ತನ್ನ ವಿಭಾಗದ ಮುಂಬಾಗಿಲಲ್ಲಿ ಹೀಗೆಂದು ಪ್ರಕಟಣೆ ಹೊರಡಿಸಿದ: 'ಇದೇ ಮೇ ೧೫,೧೮೪೭ ರಿಂದ ಶವದ ಮನೆಯಿಂದ ಬರುವ ಎಲ್ಲ ವೈದ್ಯರೂ ವಿದ್ಯಾರ್ಥಿಗಳೂ ಹೆರಿಗೆಯ ವಾರ್ಡುಗಳಿಗೆ ತೆರಳುವ ಮೊದಲು ಬಾಗಿಲಲ್ಲಿ ಇರಿಸಿರುವ ಕ್ಲೋರಿನ್ ನೀರಿನ ಪಾತ್ರೆಯಲ್ಲಿ ಕೈಗಳನ್ನು ಸ್ವಚ್ಛವಾಗಿ ತೊಳೆದುಕೊಳ್ಳತಕ್ಕದ್ದು. ಐ. ಪಿ. ಸೆಮೆಲ್‌ವೀಸ್.'

ಸೆಮೆಲ್‌ವೀಸ್‌ಗೆ ಸೂಕ್ಷ್ಮ ಕ್ರಿಮಿಗಳೇ ಈ ಪ್ರಸೂತಿ ಜ್ವರಕ್ಕೂ ಶಸ್ತ್ರಕ್ರಿಯಾಜ್ವರಕ್ಕೂ ಕಾರಣ ಭೂತವಾದವು ಎಂಬುದು ತಿಳಿದಿರಲಿಲ್ಲ. ಆ ಶೋಧನೆಗೆ ಜಗತ್ತು ಇನ್ನೂ ಮೂವತ್ತು ವರ್ಷಗಳು ಕಾಯಬೇಕಾಗಿತ್ತು. ಆದರೆ ಅವನಿಗೆ ಹೇಗೋ ಶವಗಳನ್ನು ಮುಟ್ಟಿದ ಕೊಳಕಾದ ಕೈಗಳಿಂದ ರೋಗ ಹರಡಲ್ಪಡುತ್ತದೆಂದು ಮನವರಿಕೆಯಾಗಿತ್ತು.

ಬೇಸರದಿಂದ ಪ್ರೊ. ಕ್ಲೇನ್ ಈ ಉನ್ಮತ್ತನನ್ನು ತನ್ನ ದಾರಿಗೆ ಹೋಗಲು ಬಿಟ್ಟರು. ಅವನ ಅನೇಕ ವಿದ್ಯಾರ್ಥಿಗಳು ಈ 'ಅರ್ಥವಿಲ್ಲದ ತೊಳೆಯುವ ಕೆಲಸ'ದಿಂದ ತಪ್ಪಿಸಿಕೊಳ್ಳಲು ಯತ್ನಿಸಿದ್ದರಿಂದ ಸೆಮೆಲ್‌ವೀಸ್ ತಾನೇ ನಿಂತು ನಿಯಮ ಪಾಲನೆ ನಡೆಸಬೇಕಾಗಿ ಬರುತ್ತಿತ್ತು. ಈಗ ಸದಾ ಕೋಪೋದ್ರಿಕ್ತನಾಗಿರುತ್ತಿದ್ದ ಸೆಮೆಲ್ ವೀಸ್ ಒಂದು ಕಾಲದಲ್ಲಿ ಎಲ್ಲರ ಪ್ರೀತಿಗೆ ಪಾತ್ರನಾಗಿದ್ದವನು ಈಗ, ಜನರ ದ್ವೇಷ, ಹೀಯಾಳಿಕೆಗೆ ಗುರಿಯಾಗಿದ್ದ.

ಮೇ ೧೮೪೭ ರಲ್ಲಿ ನೂರಕ್ಕೆ ೧೨.೩ ಮಂದಿ ಮೊದಲ ವಿಭಾಗದಲ್ಲಿ ಸತ್ತಿದ್ದರು. ಮುಂದಿನ ಕೆಲವು ತಿಂಗಳಲ್ಲಿ ೧೮೪೧ ಹೆರಿಗೆಗಳಲ್ಲಿ ಕೇವಲ ೫೬ ಸಾವುಗಳಿದ್ದವು,— ನೂರಕ್ಕೆ ೩ ರಷ್ಟು. ಹಿಂದೆಂದೂ ಈ ಕನಿಷ್ಠ ಮಟ್ಟವನ್ನು ಮೊದಲ ವಿಭಾಗ ತಲುಪಿರಲಿಲ್ಲ.

ಸೆಮೆಲ್‌ವೀಸ್‌ಗೆ ಆಗಲೇ ತನ್ನ ಜಯದ ಅರಿವು ಉಂಟಾಗತೊಡಗಿತ್ತು. ಹೀಗಿದ್ದಾಗ ಅಕ್ಟೋಬರ್ ೨, ೧೮೪೭ ರಲ್ಲಿ ಹನ್ನೆರಡು ಮಂದಿಯಿದ್ದ ವಾರ್ಡಿನಲ್ಲಿ ಎಲ್ಲರೂ ಹೆರಿಗೆಯ ಜ್ವರಕ್ಕೆ ತುತ್ತಾಗಿ ಮಲಗಿದರು. ವಿದ್ಯಾರ್ಥಿಗಳಿಂದ, ಸಂಗಾತಿಗಳಿಂದ ಹಾಸ್ಯ ಅವಹೇಳನ ಪ್ರಾರಂಭವಾಯಿತು. ಕೆಲವೇ ದಿನಗಳಲ್ಲಿ ಒಂಬತ್ತು ಮಂದಿ ಅದೇ ವಾರ್ಡಿನಲ್ಲಿ ಸತ್ತರು. ಸೆಮೆಲ್‌ವೀಸ್ ಧೈರ್ಯಗೆಡಲಿಲ್ಲ— ಕಾರಣವನ್ನು ಹುಡುಕಿದ. ವಾರ್ಡಿನ ಮೊದಲನೆಯ ಹಾಸಿಗೆಯಲ್ಲಿ ಸ್ರವಿಸುತ್ತಿದ್ದ ಗರ್ಭಕೋಶದ ವ್ರಣದಿಂದ ನರಳುತ್ತಿದ ಒಬ್ಬ ಹೆಂಗಸಿದ್ದಳು. ಪರೀಕ್ಷಕ ವಿದ್ಯಾರ್ಥಿಗಳು ವಾರ್ಡಿಗೆ ಬರುವ ಮುನ್ನ ಕೈ ತೊಳೆಯುತ್ತಿದ್ದರೇ ಹೊರತು ಪ್ರತಿ ರೋಗಿಯ ಬಳಿಗೆ ಹೋಗುವಾಗಲೂ ತೊಳೆಯುತ್ತಿರಲಿಲ್ಲ.

ಸೆಮೆಲ್‌ವೀಸ್ ತನ್ನ ಎರಡನೆಯ ಪ್ರಖ್ಯಾತ ಶೋಧನೆಯನ್ನು ಮಾಡಿದ್ದ— ರೋಗಾಂಶ ಶವದಿಂದಲೇ ಅಲ್ಲದೆ ರೋಗಪೀಡಿತ ಜೀವಂತ ವ್ಯಕ್ತಿಗಳಿಂದಲೂ ಪ್ರಸಾರವಾಗಬಹುದು ಎಂದು. ಕೂಡಲೇ ಪ್ರತಿ ಪರೀಕ್ಷೆಗೆ ಮುನ್ನವೂ ಕೈತೊಳೆಯಬೇಕೆಂಬ ನಿಯಮವನ್ನು ಕಟ್ಟುನಿಟ್ಟಾಗಿ ಜಾರಿಗೆ ತಂದ. ಸಾವಿನ ಸಂಖ್ಯೆ ಕೇವಲ ಶೇ. ೧.೩೩ ಕ್ಕೆ ಇಳಿಯಿತು.

೧೮೪೭ ರ ಅಂತ್ಯದ ಹೊತ್ತಿಗೆ ತನ್ನ ಜಯಗಳಿಕೆಯ ವಿಷಯವನ್ನು ಅವನ ಅಧ್ಯಾಪಕರಿಬ್ಬರಿಗೆ —ಡಾ. ಸ್ಕೋಡಾ, ಡಾ ಹೀಬ್ರ— ತಿಳಿಸಿದ.

ಅವರು ಇವನಿಗೆ ವರದಿಯೊಂದನ್ನು ಸಿದ್ಧಮಾಡಲು ಸಲಹೆ ಕೊಟ್ಟರು. ಬರೆವಣಿಗೆ ಇವನಿಂದ ಸಾಧ್ಯವಾಗದೆ ಡಾ. ಹೀಬ್ರ ತಾವೇ ಇವನಿಗಾಗಿ ವರದಿಯನ್ನು ತಯಾರಿಸಿ ವಿಯೆನ್ನಾದ ವೈದ್ಯ ಸಂಘಕ್ಕೆ ತಲುಪಿಸಿದರು. ಒಬ್ಬಿಬ್ಬರನ್ನುಳಿದು ಮಿಕ್ಕೆಲ್ಲ ಖ್ಯಾತ ಯುರೋಪಿಯನ್ ವೈದ್ಯರು ಇದನ್ನು ಕೇಳಿ ನಕ್ಕರು, ಹೊಸ ಸಿದ್ಧಾಂತವನ್ನು ಹೀಯಾಳಿಸಿದರು. ಸೆಮೆಲ್‌ವೀಸ್ ಇಲ್ಲಿಗೇ ಬಿಡದೆ ವಿಶ್ವಪ್ರಯತ್ನ ಮಾಡಿ ಕೂಗನ್ನು ಸರಕಾರಕ್ಕೆ ಮುಟ್ಟಿಸಿದ. ಹೆಚ್ಚು ಒತ್ತಾಯ ಬಂದಮೇಲೆ ವಿಯೆನ್ನ ಸರಕಾರ ಈ ವರದಿಯ ನಿಜಾಂಶ ತಿಳಿಯಲು ಸಮಿತಿಯೊಂದನ್ನು ನಿಯಮಿಸಿತು. ಸೆಮೆಲ್‌ವೀಸ್ ಜಗದ್ವಿಖ್ಯಾತನಾಗಿಬಿಡುವ ಸೂಚನೆ ಕಂಡು ಅವನ ಬಗ್ಗೆ ಕರುಬಿ ಪ್ರೊ. ಕ್ಲೇನ್ ಯಾವುದೋ ತುಚ್ಛ ರಾಜಕೀಯ ವಿವಾದವನ್ನು ಮುಂದಿಟ್ಟು ಸರ್ಕಾರದ ನಿರ್ಧಾರವನ್ನು ಕದಲಿಸಿದರು. ಅಲ್ಲದೆ ಸೆಮೆಲ್‌ವೀಸನನ್ನು ಕೆಲಸದಿಂದ ಹೊರಗೋಡಿಸಿದರು.

ಡಾ. ಹೀಬ್ರರಿಂದ ಉತ್ತೇಜನ ಪಡೆದು ಸೆಮೆಲ್‌ವೀಸ್ ಮೇ, ೧೫, ೧೮೫೦ ರಲ್ಲಿ ತನ್ನ ವರದಿಯ ಪುನರ್ವಿಚಾರಣೆಗಾಗಿ ವೈದ್ಯಸಂಘಕ್ಕೆ ಮೊರೆಯಿಟ್ಟ. ಅವನನ್ನು ಪುನಃ ಜೂನ್ ೧೮ ರಲ್ಲಿ ಎರಡನೆಯ ಭಾಷಣ ನೀಡಲು ಸಂಘ ಕೇಳಿಕೊಂಡಿತು. ಅವನ ಜಗತ್ಪ್ರಸಿದ್ಧವಾದ ಸಂಪರ್ಕ ಕೀವು ಜಾಡ್ಯದ (Contact Infection) ವಾದ ಮೊಟ್ಟಮೊದಲ ಬಾರಿಗೆ ಅನೇಕ ವೈದ್ಯರ ಗಮನ ಸೆಳೆದಿತ್ತು. ಕೆಲವರು ಶಸ್ತ್ರವೈದ್ಯರು ಇವನ ಸಿದ್ಧಾಂತವನ್ನು ರೂಢಿಗೆ ತಂದರು. ಆಗಲೂ ಸೆಮೆಲ್‌ವೀಸ್ ತನ್ನ ಭಾಷಣಗಳನ್ನು ಬರೆದಿಡಲಾರದೆ ಹೋದ. ಆ ಭಾಷಣಗಳ ಅಸಂಪೂರ್ಣ ಸಾರಾಂಶಗಳನ್ನು ಇತರರು ಬರೆದು ಪ್ರಕಟಿಸಿದರು.

ಇತ್ತ ಸಂಪಾದನೆಯಿಲ್ಲದೆ ಮನೆಯಲ್ಲಿ ಬಡತನ ಕಾಲಿಟ್ಟಿತ್ತು. ಕೆಲಸವಿಲ್ಲದೆ ಬೇಸರಗೊಂಡು ಎಂಟು ತಿಂಗಳು ಪ್ರಯತ್ನಪಟ್ಟಮೇಲೆ ವಿಯೆನ್ನ ವೈದ್ಯಕೀಯ ಕಾಲೇಜಿನಲ್ಲಿ ಅಧ್ಯಾಪಕವೃತ್ತಿ ದೊರಕಿತು. ಅಲ್ಲಿಯೂ ಅಧಿಕಾರಿಗಳು ಈತನಿಗೆ ರೋಗಿಗಳೊಡನೆ ಸಂಪರ್ಕವನ್ನು ನಿಷೇಧಿಸಿದ್ದರಿಂದ ನಿರುತ್ಸಾಹಿಯಾಗಿ ಭಾರವಾದ ಹೃದಯದೊಡನೆ ವಿಯೆನ್ನ ತ್ಯಜಿಸಿ ಬುಡಾಪೆಸ್ಟ್‌ಗೆ ತೆರಳಿದ. ಬುಡಾಪೆಸ್ಟ್‌ನ ಸೇಂಟ್ ರಾಕ್ ಆಸ್ಪತ್ರೆಯಲ್ಲಿ ೧೮೫೧ ರ ವಸಂತದ ವೇಳೆಗೆ ಕೆಲಸ ದೊರಕಿತು. ಅಲ್ಲಿ ವ್ಯಾಪಕವಾಗಿ ನೆಲಸಿದ್ದ ಪ್ರಸೂತಿಜ್ವರವನ್ನು ಕಂಡಾಗ ಸೆಮೆಲ್‌ವೀಸ್‌ಗೆ ತನ್ನ ಹಳೆಯ ಆಸೆ ಪ್ರಬಲವಾಯಿತು. ಗರ್ಭಿಣಿಯರ ಶಾಖೆಗೆ ಮುಖ್ಯಸ್ಥನಾಗಲು ಬೇಡಿಕೆ ತಲುಪಿಸಿ ಮೇ ೨೦ ರಲ್ಲಿ ಕೆಲಸ ವಹಿಸಿಕೊಂಡ.

ಸೆಮೆಲ್‌ವೀಸ್ ಇಲ್ಲಿಯೂ ಹಿಂದಿನದೇ ಆಸಕ್ತಿಯಿಂದ ಕೆಲಸ ಪ್ರಾರಂಭಿಸಿದ. ಕೈಗಳ ಶುಚಿತ್ವಕ್ಕೆ ಮೊದಲ ಗಮನ ಹರಿಸಿದ. ಪುನಃ ಅದೇ ಬಗೆಯ ಪ್ರತಿಭಟನೆ, ದ್ವೇಷ ಇಲ್ಲೂ ಕಾಣಿಸಿಕೊಂಡಿತು. ಎದೆಗುಂದದೆ, ವಾರಗಟ್ಟಲೆ ಶ್ರಮಿಸಿದ ಮೇಲೆ, ಆ ಆಸ್ಪತ್ರೆ ಪ್ರಥಮ ಬಾರಿಗೆ ನೂರಕ್ಕೆ ಒಂದೇ ಸಾವನ್ನು ಕಂಡಿತು. ೯೩೩ ಮಂದಿ ಗರ್ಭಿಣಿಯರಲ್ಲಿ ಎಂಟು ಮಂದಿ ಮಾತ್ರವೇ ಸತ್ತಿದ್ದರು. ಈ ಆಸ್ಪತ್ರೆಯಲ್ಲಿದ್ದಾಗ ಕೊಳಕಾದ ಹಾಸಿಗೆ ಬಟ್ಟೆಗಳೂ ವ್ಯಾಧಿ ಪ್ರಸಾರಕ್ಕೆ ಕಾರಣವಾಗಬಹುದೆಂಬ ಹೊಸ ಅಂಶವನ್ನು ಸಿದ್ಧಾಂತಪಡಿಸಿದ.

ಜುಲೈ ವೇಳೆಗೆ ಇವನನ್ನು ಬುಡಾಪೆಸ್ಟ್ ವಿಶ್ವವಿದ್ಯಾನಿಲಯದ ಪ್ರಸವಶಾಸ್ತ್ರದ ಪ್ರೊಫೆಸರನ್ನಾಗಿ ನೇಮಿಸಿದರು. ೧೮೬೦ ರ ಹೊತ್ತಿಗೆ ತನ್ನ ಹಳೆಯ ಸ್ನೇಹಿತನೊಬ್ಬನ ಸಹಾಯದಿಂದ ಪುಸ್ತಕವೊಂದನ್ನು ಬರೆದು ಪ್ರಕಟಿಸಿದ: ಪ್ರಸೂತಿಜ್ವರ— ವ್ಯಾಧಿಕಾರಣ, ಅರ್ಥ ಮತ್ತು ಅದರ ನಿರೋಧ.'

ಅದು ಒಂದು ಚಿಕ್ಕದಾದ, ಚೆನ್ನಾಗಿ ಬರೆ

ನಾಲ್ಕು ಔಷಧಗಳಿಂದ ಕೂಡಿದ

'ಅನಾಸಿನ್'

ನೋವನ್ನು ಉಪಶಮನಗೊಳಿಸಲು ಅಧಿಕ ಉತ್ತಮವಾಗಿದೆ

1. 'ಅನಾಸಿನ್' ನೋವನ್ನು ಅತಿ ಶೀಘ್ರವಾಗಿ ಗುಣಪಡಿಸುತ್ತದೆ. ಡಾಕ್ಟರರ ಸುರಕ್ಷಿತ ಔಷಧದಂತೆ ಶಾಸ್ತ್ರೀಯ ಕ್ರಮದಲ್ಲಿ ಸಮ್ಮಿಲಿತವಾದ ನಾಲ್ಕು ಔಷಧಗಳಿಂದ ಕೂಡಿದ ಅನಾಸಿನ್ ತಲೆನೋವು, ಶೀತ, ಜ್ವರ, ಹಲ್ಲುನೋವು ಮತ್ತು ಸ್ನಾಯುಗಳ ನೋವನ್ನು ಸಂಪೂರ್ಣವಾಗಿ ಅತಿ ಶೀಘ್ರವಾಗಿ ಉಪಶಮನಗೊಳಿಸುತ್ತದೆ.

2. 'ಅನಾಸಿನ್' ಗಾಬರಿಗೊಳಿಸುವ ದುರ್ಬಲ ನರಗಳಿಗೆ ಶಾಂತತೆಯನ್ನೀಯುತ್ತದೆ. ಅನಾಸಿನ್ ನರಗಳ ಬಿಗಿತವನ್ನು ಬಹಳ ಪ್ರಭಾವಪೂರ್ಣವಾಗಿ ತೆಗೆದು ನೀವು ಆರಾಮದಲ್ಲಿರುವಂತೆ ಮಾಡುತ್ತದೆ.

3. 'ಅನಾಸಿನ್' ನಿರುತ್ಸಾಹವನ್ನು ಹೋಗಲಾಡಿಸುತ್ತದೆ. ಹೆಚ್ಚಾಗಿ ನೋವಿನೊಡನೆ ಬರುವ ನಿರುತ್ಸಾಹವನ್ನು ಅನಾಸಿನ್ ಹೋಗಲಾಡಿಸುತ್ತದೆ.

4. 'ಅನಾಸಿನ್' ಜ್ವರವನ್ನು ಕಡಿಮೆ ಮಾಡುತ್ತದೆ. ಅನಾಸಿನ್‌ನ ತಯಾರಿಕೆಯಲ್ಲಿ ಕ್ವೀನಿನ್ ಸೇರಿರುವುದರಿಂದ ಔಷಧಗಳ ಆ ಸಮ್ಮಿಲನವು ಜ್ವರವನ್ನು ತಗ್ಗಿಸುವುದಕ್ಕೆ ಅತ್ಯುತ್ತಮವಾಗಿದೆ.

* ನಿರ್ಮಲವಾಗಿ ಸೀಲ್ ಮಾಡಿದ ಸೆಲೋಫೇನ್ ಪ್ಯಾಕ್‌ನಲ್ಲಿ 2 ಬಿಲ್ಲೆಗಳೂ, ಭದ್ರವಾಗಿ ಪಿಲ್ಫರ್-ಪ್ರೂಫ್ ಕ್ರಮದಲ್ಲಿ ಮುಚ್ಚಲ್ಪಟ್ಟ ಸೀಸೆಯಲ್ಲಿ 32 ಬಿಲ್ಲೆಗಳೂ,–ಮನೆಗಳಲ್ಲಿ ಉಪಯೋಗಿಸಲು ಅನುಕೂಲವಾಗುವಂತೆ— ದೊರೆಯುತ್ತವೆ.





Registered User: GEOFFREY MANNERS & CO. LIMITED.

KAN. 2. 44. (AN

ಯಲ್ಪಡದ ಪ್ರಬಂಧವಾಗಿತ್ತು. ಆದರೂ ಅದು ಇಂದಿಗೂ ವೈದ್ಯನೊಬ್ಬನಿಂದ ರಚಿತವಾದ ಅತ್ಯಂತ ಹೃದಯಸ್ಪರ್ಶಿ ಗ್ರಂಥಗಳಲ್ಲೊಂದಾಗಿದೆ.

ಇಷ್ಟಕ್ಕೇ ಸೆಮೆಲ್‌ವೀಸ್‌ನ ಖ್ಯಾತಿ ಸರ್ವಮಾನ್ಯವಾಗಲು ಸಾಧ್ಯವಿರಲಿಲ್ಲ. ಜರ್ಮನ್ ವಿಜ್ಞಾನಿಗಳ ಮತ್ತು ವೈದ್ಯರ ಸಮ್ಮೇಳನವೊಂದರಲ್ಲಿ ಮಾತನಾಡಿದ ಡಾ. ರುಡಾಲ್ಫ್ ವಿರ್‌ಷೋ ತಮ್ಮ ಜೀವಕೋಶದ ವಾದದ ಮುಂದೆ ಇದು ಹುರುಳಿಲ್ಲದ್ದು ಎಂದು ವಾದಿಸಿದರು. ಡಾ. ವಿರ್‌ಷೋ ಮಾತಿಗೆ ವಿರುದ್ಧ ನಿಲ್ಲಲು ಜಗತ್ತಿಗೆ ಆಗ ಚೈತನ್ಯವಿರಲಿಲ್ಲ. ಸೆಮೆಲ್‌ವೀಸನ ಪುಸ್ತಕ ಮೂಲೆಗೆ ಬಿತ್ತು. ಅವನ ವಾದವನ್ನೊಪ್ಪಿದವರೂ ಮೌನವನ್ನವಲಂಬಿಸಿದರು. ಅವನ ಪ್ರಚಾರದ ಕೂಗು ಅರಣ್ಯರೋದನವಾಯಿತು. ಪ್ರೊಫೆಸರುಗಳು ಅವನನ್ನು ಬುದ್ಧಿ ಸ್ತಿಮಿತವಿಲ್ಲದವನೆಂದು ದೂರವಾಗಿಟ್ಟರು.

ಅದೂ ನಿಜವೇ ಆಗಿತ್ತು. ೧೮೬೪ರಲ್ಲಿ ಮನೋರೋಗದ ಪ್ರಥಮ ಚಿಹ್ನೆಗಳು ಕಾಣಿಸಿಕೊಂಡವು. ಸೆಮೆಲ್‌ವೀಸ್ ತಾನು ಕಲಿಸುತ್ತಿದ್ದ ಪಾಠಗಳ ನಡುವೆ ತನ್ನ ದುರಂತ ಕತೆಯನ್ನು ಜ್ಞಾಪಿಸಿಕೊಳ್ಳುತ್ತ ಗಟ್ಟಿಯಾಗಿ ಅತ್ತುಬಿಡುತ್ತಿದ್ದ. ರಸ್ತೆಯಲ್ಲಿ ನಡೆಯುವಾಗ ಯಾವ ದಂಪತಿಗಳನ್ನಾದರೂ ತಡೆದು ನಿಲ್ಲಿಸಿ ಮುಂದೆ ಆಸ್ಪತ್ರೆಗೆ ಹೋದಾಗ ಕ್ಲೋರಿನ್ ನೀರಿನಲ್ಲಿ ಕೈತೊಳೆಯುವಂತೆ ವೈದ್ಯರಿಗೆ ತಿಳಿಸಿರೆಂದು ಬೇಡಿಕೊಳ್ಳುತ್ತಿದ್ದ. ತನ್ನ ವಾದದ ವಿರುದ್ಧವಾಗಿ ಒಂದೇ ಒಂದು ಮಾತಾಡಿದವರ ಮೇಲೆ ಉರಿದು ಬೀಳುತ್ತಿದ್ದ. ಕಡೆಗೆ ಜುಲೈ ೧೮೬೫ ರ ಒಂದು ರಾತ್ರಿ ತನ್ನ ಹೆಣ್ಣು ಮಗುವನ್ನು ಎತ್ತಿಕೊಂಡು ಬೀದಿಗೋಡಿದ— ಯಾರೋ ಕೊಲ್ಲಲು ಬರುತ್ತಿದ್ದಾರೆ ಎಂದು ಕೂಗುತ್ತ.

ದುಃಖತಪ್ತಳಾದ ಅವನ ಹೆಂಡತಿ ಮಾರನೆಯ ಬೆಳಿಗ್ಗೆ ಪ್ರೊ. ಹೀಬ್ರರಿಗೆ ಕಾಗದ ಬರೆದು ಸೆಮೆಲ್‌ವೀಸನನ್ನು ವಿಯೆನ್ನಕ್ಕೆ ಒಯ್ದಳು. ಪ್ರೊ. ಹೀಬ್ರರು ಆತನನ್ನು ಮನೋವಿಕಲರ ಆಸ್ಪತ್ರೆಗೆ ಸೇರಿಸಿದರು.

ವಿಧಿ ಅವನಿಗೆ ವಿಶಿಷ್ಟ ರೀತಿಯಲ್ಲಿ ಸಾವನ್ನು ತಂದುಕೊಟ್ಟಿತು. ತನ್ನ ಸಂಗಾತಿ ಕೊಲೆಟ್ಸ್ಕಾ ಸತ್ತಂತೆ, ಅಸಂಖ್ಯ ಸ್ತ್ರೀಯರು ಪ್ರಸೂತಿ ಜ್ವರದಲ್ಲಿ ಮಡಿದಂತೆ, ಇನ್ನಿತರ ಸಹಸ್ರಾರು ಮಂದಿ ಶಸ್ತ್ರಕ್ರಿಯಾ ಜ್ವರಕ್ಕೆ ಆಹುತಿಯಾದಂತೆ ತಾನೂ ಸಾವನ್ನಪ್ಪಿದ್ದ. ಅವನು ನಡೆಸಿದ ಕಡೆಯ ಪ್ರಸವಗಳಲ್ಲೊಂದರಲ್ಲಿ ಸೆಮೆಲ್‌ವೀಸ್ ತನ್ನ ಕೈ ಬೆರಳನ್ನು ಕುಯಿದುಕೊಂಡಿದ್ದ. ತಾನು ಯಾವ ವ್ಯಾಧಿಯ ವಿರುದ್ಧ ತನ್ನ ಬಹುಪಾಲು ಜೀವನವನ್ನು ಹೋರಾಟಕ್ಕಾಗಿ ಮೀಸಲಾಗಿಟ್ಟಿದ್ದನೋ ಅದೇ ವ್ಯಾಧಿ ಈ ಗಾಯದ ಮೂಲಕ ದೇಹವನ್ನು ಪ್ರವೇಶಿಸಿತ್ತು. ಕೇವಲ ನಲವತ್ತೇಳನೆಯ ವಯಸ್ಸಿನಲ್ಲಿ ಅಗಸ್ಟ್, ೧೩, ೧೮೬೫ ರಂದು, ಅನೇಕ ದಿನಗಳ ಜ್ವರದಿಂದ ನರಳಿದ ಬಳಿಕ ಅಸಂಬದ್ಧವಾಗಿ ಮಾತಾಡುತ್ತ ದೇಹತ್ಯಾಗ ಸೆಮೆಲ್‌ವೀಸ್ ಮಾಡಿದ. ★



ಕಾಲೇಜು ಶಿಕ್ಷಣವೆಂದರೆ ಮನುಷ್ಯ ಬೇಕಾದ್ದನ್ನು ಕೊಡುತ್ತಾನೆ, ಆದರೆ ಪಡೆಯುವುದಿಲ್ಲ.

ವಿಲಿಯಂ ಲೋವ್ ಬ್ರಾಯನ್

ಅವರು ಆತ್ಮಹತ್ಯೆಗಳನ್ನು ತಡೆಯುತ್ತಾರೆ

ವಿವಿಧ ಮೂಲಗಳಿಂದ

ಕಲಕತ್ತೆಯ ೨೫ ವರ್ಷದ ತರುಣಿಯೊಬ್ಬಳು ಡಾಕ್ಟರರ ಕಡೆ ಯಾವುದೋ ಅಸ್ವಸ್ಥದ ಪರೀಕ್ಷೆಗಾಗಿ ಹೋಗಿದ್ದಳು. ಡಾಕ್ಟರರು ಪರೀಕ್ಷೆಯ ನಂತರ ಆದಷ್ಟು ಸೌಮ್ಯವಾಗಿ ಅವಳಿಗೆ ಕುಷ್ಠ ರೋಗವಾಗಿದೆಯೆಂದು ತಿಳಿಸಿದರು. ಅವಳು ಮನೆಗೆ ಮರಳಿದವಳೇ ಯಾರೂ ಇಲ್ಲದ ಸಮಯ ಸಾಧಿಸಿ ಒಂದು ಚೀಟಿ ಬರೆದಿಟ್ಟು ನೇಣು ಹಾಕಿಕೊಂಡಳು. ಸಾಕಷ್ಟು ಸುಶಿಕ್ಷಿತೆಯಾಗಿದ್ದರೂ ಅವಳು ಕುಷ್ಠರೋಗ ಗುಣವಾಗತಕ್ಕದ್ದಲ್ಲೆಂದೆಣಿಸಿ ತನ್ನ "ಗಂಡನಿಗೆ ಬರಬಹುದಾದ ತೊಂದರೆಯನ್ನು ತಪ್ಪಿಸಲೆಂದು" ಆತ್ಮಹತ್ಯೆ ಮಾಡಿಕೊಂಡಿದ್ದಳು.

ವಿಜಾಪುರದಲ್ಲೊಬ್ಬ ವಿದ್ಯಾರ್ಥಿ ಎಸ್. ಎಸ್. ಸಿ. ಪರೀಕ್ಷೆಯಲ್ಲಿ ತಾನು ತೇರ್ಗಡೆಯಾಗದ್ದನ್ನು ತಿಳಿದು ಒಂದು ತೋಟದಲ್ಲಿ ನೇಣು ಹಾಕಿಕೊಂಡು ಸತ್ತನು. ಸೌರಾಷ್ಟ್ರದಲ್ಲಿ ಅತ್ತೆಯ ಕಾಟ, ಗಂಡನ ಅಸಡ್ಡೆಗಳಿಂದ ಬೇಸತ್ತ ತರುಣಿಯೊಬ್ಬಳು ವಿಷ ತೆಗೆದುಕೊಂಡು ಸತ್ತಳು. ದಿಲ್ಲಿಯಲ್ಲಿ ವಿದೇಶೀ ಪದವಿಗಳನ್ನು ಹೊಂದಿದ್ದರೂ ಸರಕಾರವು ತನ್ನನ್ನು ಯೋಗ್ಯ ಸಂಬಳ ಮತ್ತು ಯೋಗ್ಯ ಕೆಲಸದಲ್ಲಿ ನೇಮಿಸದಿದ್ದುದರಿಂದ ಜೀವನದಲ್ಲಿ ಅಸಹ್ಯಗೊಂಡ ವಿಜ್ಞಾನಿಯೊಬ್ಬ ಆತ್ಮಹತ್ಯೆ ಮಾಡಿಕೊಂಡ

ಇಂಥ ಸುದ್ದಿಗಳ ಸಂಖ್ಯೆಯನ್ನು ಎಷ್ಟು ಬೇಕಾದರೂ ವಿಸ್ತರಿಸಬಹುದು. ಭಾರತದಲ್ಲಿ ಪ್ರತಿ ವರ್ಷ ಸಾವಿರಗಟ್ಟಳೆ ಜನರು ಒಂದಲ್ಲ ಒಂದು ಕಾರಣದಿಂದ ಆತ್ಮಹತ್ಯೆ ಮಾಡಿಕೊಳ್ಳುತ್ತಾರೆ. ಅವುಗಳಲ್ಲಿ ಹೆಚ್ಚಿನವು ನಿಷ್ಕಾರಣವಾದವುಗಳು; ಜೀವನದಲ್ಲಿ ಕ್ಷಣಿಕವಾಗಿ ಜುಗುಪ್ಸೆ ಹುಟ್ಟಿದಾಗ ಕೈಕೊಂಡ ದುಡುಕಿನ ಕೃತಿಗಳು.

ಈ ದುರ್ದೈವಿಗಳ ಬಗ್ಗೆ ಏನನ್ನೂ ಮಾಡಲು ಸಾಧ್ಯವಿಲ್ಲವೆ ? ಕುಷ್ಠವಾಗಿದೆಯೆಂದು ತಿಳಿದೊಡನೆ ಹತಾಶಳಾದ ಆ ತರುಣಿಗೆ ಇಂದಿನ ವಿಜ್ಞಾನಯುಗದಲ್ಲಿ ಅವಳ ರೋಗ ಗುಣವಾಗಬಲ್ಲದೆಂದೂ ರೋಗಿಯಾಗಿದ್ದರೂ ಅವಳ ಜೀವನ ನಿಜವಾಗಿ ನಿರರ್ಥಕವಾಗಬೇಕಿಲ್ಲೆಂದೂ ಹೇಳಿ ಸಮಾಧಾನಪಡಿಸುವವರಾರಾದರೂ ಇದ್ದಿದ್ದರೆ ಅವಳು ಸಾಯುತ್ತಿದ್ದಿಲ್ಲ. ಪರೀಕ್ಷೆಯಲ್ಲಿ ಅಯಶಸ್ವಿಯಾದ ವಿದ್ಯಾರ್ಥಿಗೆ ಪರೀಕ್ಷೆಯು ಜೀವನದಲ್ಲಿ ಅಂಥ ಮಹತ್ವದ ವಿಷಯವೇನೂ ಅಲ್ಲವೆಂದು ತಿಳಿಹೇಳುವವರಿದ್ದರೆ ಆತ ತನ್ನ ಆವೇಶದಿಂದ ಮುಕ್ತನಾಗಿ ಉಪಯುಕ್ತ ನಾಗರಿಕನಾಗಿ ಬೆಳೆಯಬಹುದಾಗಿತ್ತು.

ಇಂಗ್ಲಂಡಿನಲ್ಲಿ ರೆವರೆಂಡ್ ಎಡ್ವರ್ಡ್ ವಾರಾ ಎಂಬೊಬ್ಬ ಪಾದ್ರಿ ಆರು ವರ್ಷಗಳಿಂದ ಇದನ್ನೇ ಮಾಡುತ್ತಿದ್ದಾರೆ. ಈ ಅವಧಿಯಲ್ಲಿ ಆತ್ಮಹತ್ಯೆಯ ದಾರಿಯಲ್ಲಿ ಹೊರಟಿದ್ದ ೨,೪೦೦ ಜನರನ್ನು ಲಂಡನ್ನಿನಲ್ಲಿ ಅವರು ಉಳಿಸಿದ್ದಾರೆ. ಅಮೇರಿಕದಲ್ಲಿ

ಈಗ ೫೫ ವರ್ಷಗಳಿಂದ ೫೫,೦೦೦ ಜನರನ್ನು ಆತ್ಮಹತ್ಯೆಯ ನಿರ್ಣಯದಿಂದ ಪರಾವೃತ್ತಗೊಳಿಸಿದ ಒಂದು ಸಂಸ್ಥೆ ಕೆಲಸ ಮಾಡುತ್ತಿದೆ.

೧೯೦೬ ರಲ್ಲಿ ನ್ಯೂಯಾರ್ಕಿನಲ್ಲಿ ೧೯ ವರ್ಷದ ತರುಣಿಯೊಬ್ಬಳು ಪ್ರೇಮಭಂಗದಿಂದ ನಿರಾಶಳಾಗಿ ವಿಷ ತೆಗೆದುಕೊಂಡು ಸತ್ತಳು. ಅವಳ ಪ್ರಾಣ ಪಕ್ಷಿ ಹಾರುವುದಕ್ಕೆ ತುಸುವೇ ಮೊದಲು ಪಾದ್ರಿಯೊಬ್ಬ ಅವಳ ಮೃತ್ಯುಶಯ್ಯೆಯ ಬಳಿ ಹಾಜರಾದ. "ಪಾದ್ರಿಗಳೇ, ಸಾಯುವ ನಿರ್ಣಯ ಕೈಕೊಳ್ಳುವ ಮೊದಲು ಯಾರಾದರೊಬ್ಬ ಪಾದ್ರಿಯನ್ನು ಕಂಡು ನನ್ನೊಡಲ ದುಃಖವನ್ನು ತೋಡಿಕೊಳ್ಳಬೇಕೆಂದಿದ್ದೆ. ಆದರೆ ರಾತ್ರಿ ಹೊತ್ತು. ಯಾರೂ ಸಿಗಲಿಲ್ಲ. ನಿಮ್ಮೊಡನೆ ಮೊದಲೇ ಮಾತಾಡಿದ್ದರೆ ನಾನೆಂದೂ ಹೀಗೆ ಮಾಡುತ್ತಿದ್ದಿಲ್ಲ" ಎಂದು ಅವಳು ಹೇಳಿದಳು. ಆ ಪಾದ್ರಿಯ ಹೆಸರು ರೆವರೆಂಡ್ ಹ್ಯಾರಿ ವಾರೆನ್ ಎಂದು. ಯುವತಿಯ ಪ್ರಕರಣದಿಂದ ಮನಕರಗಿದವರಾಗಿ ಅವರು ಮಠದ ಸೇವೆಯಿಂದ ನಿವೃತ್ತಿಪಡೆದು ಈ ಕಾರ್ಯಕ್ಕೇ ಜೀವನವನ್ನು ಧಾರೆಯೆರೆದರು.

ಅವರು ತಮ್ಮ ಸಂಸ್ಥೆಗೆ "ಒಂದು-ಜೀವ-ಉಳಿಯಲಿ" ಎಂದೇ ಹೆಸರಿಟ್ಟರು. ೩೪ ವರ್ಷ ಕಾಲ ಅವರು ನಿರಂತರವಾಗಿ ಈ ಮುಖದಲ್ಲಿ ದುಡಿದರು. ಅವರ ಅನಂತರದಲ್ಲಿ ಈಗ ೨೧ ವರ್ಷಗಳಿಂದ ಅವರ ಮಗ ಹ್ಯಾರಿ ವಾರೆನ್ ತಂದೆಯ ಧ್ಯೇಯವನ್ನು ಮುಂದೆ ಸಾಗಿಸಿದ್ದಾರೆ.

ಲಂಡನ್ನಿನ ಸಂಸ್ಥೆಯ ಹೆಸರು "ಸಮರಿಟನ್ಸ್" (ಪರೋಪಕಾರಿ) ಎಂದು. ಅದರ ಸ್ಥಾಪಕ-ಸಂಚಾಲಕ ರೆವರೆಂಡ್ ವಾರಾ ಕೂಡ ಪಾದ್ರಿಯಾಗಿದ್ದವರೇ. ಲಂಡನ್ ಬಂದರಲ್ಲೇ ದಿನಕ್ಕೆ ಮೂರು ಜನ 'ಆತ್ಮಹತ್ಯೆ ಮಾಡಿಕೊಳ್ಳುತ್ತಾರೆಂದು ಓದಿ ಅವರು ದೇವರ ಮಕ್ಕಳ ಜೀವದ ಇಂಥ ಅಪವ್ಯಯವನ್ನು ತಡೆಗಟ್ಟುವ ಪ್ರತಿಜ್ಞೆ ಕೈಕೊಂಡರು.

ಜಗತ್ತಿನ ಅಧಿಕಾಂಶ ಧರ್ಮಗಳು ಆತ್ಮಹತ್ಯೆಯನ್ನು ಪಾಪವೆಂದು ಸಾರಿವೆ. ಆದರೂ ಪ್ರತಿಯೊಂದು ದೇಶದಲ್ಲಿಯೂ ಆತ್ಮಹತ್ಯೆಗಳಿದ್ದೇ ಇವೆ ಪ್ರತಿಯೊಬ್ಬನ ಜೀವನದಲ್ಲಿಯೂ ಒಂದು ನಿಟ್ಟಿನಲ್ಲಿ ಇನ್ನು ಭವಿಷ್ಯತ್ತೇ ಇಲ್ಲ, ಸಾವೇ ಗತಿ ಎಂಬಂಥ ಪರಿಸ್ಥಿತಿ ಎದುರಾಗುತ್ತದೆ "ಆತ್ಮಹತ್ಯೆಯೆಂಬುದು ಪರಿಸರವನ್ನು ಎದುರಿಸಲಾರದವರ ಕೊನೆಯ ಯತ್ನ. ಹತಾಶ ಭವಿಷ್ಯತ್ತನ್ನೆದುರಿಸಲು ಧೈರ್ಯ ಸಾಲದಿರುವುದು, ನಿಜವಾದ ಇಲ್ಲವೆ ಕಾಲ್ಪನಿಕ ಪಾಪದ ಬಗ್ಗೆ ಪಶ್ಚಾತ್ತಾಪ, ಮಾನಹೋಗುವ ಭಯ ಅಥವಾ ರೋಗ ಇವು ಇಂಥ ವ್ಯಕ್ತಿಗಳಲ್ಲಿ ಕಡ್ಡಿಯಿದ್ದುದು ಗುಡ್ಡವಾಗಿ ಪರಿಹಾರಕ್ಕಾಗಿ ಆತ್ಮಹತ್ಯೆಯ ದಾರಿ ಹಿಡಿಸುತ್ತವೆ" ಎಂದು ಪ್ರಸಿದ್ಧ ಅಪರಾಧ ವಿಜ್ಞಾನಿ ಕಾರ್ಲ್‌ಟನ್ ಸೈಮನ್ ಹೇಳುತ್ತಾರೆ.

ಆತ್ಮಹತ್ಯಾ ನಿವಾರಣ ಸಂಸ್ಥೆಗಳವರು ಆತಹತ್ಯೆಗಳಿಗೆ ಶ್ರದ್ಧೆ— ತನ್ನಲ್ಲೂ ದೇವರಲ್ಲೂ— ಇಲ್ಲದಿರುವುದೇ ಕಾರಣವೆಂದು ಮನಗಂಡು ಆ ಶ್ರದ್ಧೆಯ ಪುನರುಜ್ಜೀವನಕ್ಕಾಗಿ ದುಡಿಯುತ್ತಾರೆ. ಅವರು ಧರ್ಮದಲ್ಲಿ ಶ್ರದ್ಧೆಯುಳ್ಳವರಾದರೂ ಯಾವುದೇ ಒಂದು ವಿಶಿಷ್ಟ ಪಂಗಡಕ್ಕೆ ಸೇರಿದವರಲ್ಲ. ಜೀವನದಲ್ಲಿ ಹತಾಶರಾದವರಿಗೆ, ಆತ್ಮ-ಹತ್ಯೆಯ ವಿಚಾರದಲ್ಲಿರುವವರಿಗೆ ಅವರು ಉಚಿತವಾಗಿ ಸಲಹೆಗಳನ್ನು ಕೊಡುತ್ತಾರೆ.

ಎರಡೂ ಸಂಸ್ಥೆಗಳು ಟೆಲಿಫೋನುಗಳನ್ನು ದೊಡ್ಡ ಆಯುಧವಾಗಿ ಮಾಡಿಕೊಂಡಿವೆ. ಇಂದಿನ ಯುಗದಲ್ಲಿ ನಿರಾಶೆ, ಶ್ರದ್ಧಾಹೀನತೆ, ರೋಗ, ಆರ್ಥಿಕ ಬಿಕ್ಕಟ್ಟು ಇವೆಲ್ಲವೂ ನಗರಗಳಲ್ಲೇ ಹೆಚ್ಚಾಗಿರುವುದರಿಂದ ಆತ್ಮಹತ್ಯೆಗಳೂ ಅಲ್ಲಿಯೇ ಹೆಚ್ಚಾಗಿವೆ. ಪ್ರತಿ ದೊಡ್ಡ ನಗರದಲ್ಲೂ ಎಲ್ಲೆಲ್ಲಿಯೂ ಟೆಲಿಫೋನುಗಳು ಇರುತ್ತವೆ. ಆದ್ದರಿಂದ, ಉದಾಹರಣೆಗೆ "ಜೀವನದಲ್ಲಿ ನಿರಾಶೆಯಾಗಿದ್ದರೆ, ಆತ್ಮಹತ್ಯೆ ತಲೆಯಲ್ಲಿ ಸುಳಿಯುತ್ತಿದ್ದರೆ ನಂ. ೯೦೦೦ ಕ್ಕೆ ಫೋನ್ ಮಾಡಿರಿ"

ಎಂದು ಲಂಡನ್ನಿನ ಸಮರಿಟನ್ ಸಂಸ್ಥೆ ಪತ್ರಿಕೆಗಳಲ್ಲಿ ಜಾಹಿರಾತು ಕೊಡುತ್ತದೆ.

ಆತ್ಮಹತ್ಯೆಯ ಪ್ರಚೋದನೆ ಯಾವ ಗಳಿಗೆಯಲ್ಲಿ ಬರುತ್ತದೆಂಬ ನಿಯಮವಿಲ್ಲದ್ದರಿಂದ ಆತ್ಮಹತ್ಯಾ ನಿವಾರಕ ಕಚೇರಿಗಳು ದಿನದ ೨೪ ತಾಸೂ ತೆರೆದಿರುತ್ತವೆ. ಯಾವಾಗ ಬೇಕಾದರೂ ಅವರನ್ನು ಟೆಲಿಫೋನಿನಲ್ಲಿ ಕರೆಯಬಹುದು

ಮತ್ತು ಮಾನಸಿಕ ಕ್ಲೇಶದಲ್ಲಿರುವವರು ಕರೆದೂ ಕರೆಯುತ್ತಾರೆ ಪ್ರಿಯಕರನಿಂದ ಮೋಸಗೊಳಿಸಲ್ಪಟ್ಟಿದ್ದ ಲಂಡನ್ನಿನ ತರುಣಿಯೊಬ್ಬಳ ಉದಾಹರಣೆ ತೆಗೆದುಕೊಳ್ಳಿ. ತಾಯಿಯಿಲ್ಲದ ತಬ್ಬಲಿಯಾದ ಅವಳು ಪ್ರೀತಿಗಾಗಿ ಹಾತೊರೆಯುವ ಪ್ರಕೃತಿಯವಳು. ಸವಿ ಮಾತಾಡುವ ತರುಣನಿಗೆ ಮರುಳಾಗಿ ಅವನನ್ನು ಪ್ರೀತಿಸಿ ಬಳಿಕ ಕೈಬಿಡಲ್ಪಟ್ಟು ಅವಳು ಒಂದಿರುಳು ಥೇಮ್ಸ್ ನದಿಯಲ್ಲಿ ಪ್ರಾಣಾರ್ಪಣ ಮಾಡಬೇಕೆಂದಿದ್ದಾಗ ಪತ್ರಿಕೆಯಲ್ಲಿ ಕಂಡ ಜಾಹಿರಾತನ್ನು ನೆನೆದು ನಂ. ೯೦೦೦ ಕ್ಕೆ ಫೋನ್ ಮಾಡಿದಳು. "ನನ್ನ ಕಥೆ ಮುಗಿಯಿತು" ಎಂದು ಬಿಕ್ಕುತ್ತಿದ್ದ ಅವಳನ್ನು ಸಮರಿಟನ್ನರ ಕಚೇರಿಗೆ ಕರೆಸಿಕೊಂಡರು. ಅಲ್ಲಿ ಹಳೇ ಇಗರ್ಜಿಯೊಂದರಲ್ಲಿ ರೆವರೆಂಡ್ ವಾರಾ ಅವಳಿಗೊಂದು ಕಪ್ ಚಹಾ ಕೊಟ್ಟು ಮಾತಾಡಹಚ್ಚಿದರು ತನ್ನ ದುಃಖವನ್ನೆಲ್ಲ ತೋಡಿಕೊಂಡಳು. ಅದು ಮುಗಿದೊಡನೆ ಕರುಣಾಪೂರ್ಣ ದನಿಯಲ್ಲಿ ವಾರಾ ಅವಳಿಗೆ, "ನೀನು ಚೆಲುವ ಹುಡುಗಿ. ನಿನ್ನ ಕೈಬಿಟ್ಟಾತ ಜಗತ್ತಿನ ಏಕಮಾತ್ರ ವರನಲ್ಲ ತಾನೆ? ಹೋಗು. ಹೊಸ ಉಡುಪು ಕೊಂಡುಕೋ, ಹೊಸ ಬಾಳನ್ನು ತೊಡಗು" ಎಂದರು. ಒಂದಿಷ್ಟು ಸಹಾನುಭೂತಿ, ಒಂದಿಷ್ಟು ಧೈರ್ಯ ಹೇಳುವುದು-- ಇಷ್ಟರಿಂದಲೇ ಒಂದು ಜೀವ ಉಳಿಯಿತು.

ತಮ್ಮ ದುಃಖವನ್ನು ತೋಡಿಕೊಂಡಾಗ ಎಷ್ಟೋ ಜನರಿಗೆ ಆತ್ಮಹತ್ಯೆಯ ಹುರುಪು ಹೊರಟು ಹೋಗಿರುತ್ತದೆ. ನ್ಯೂಯಾರ್ಕಿನ ಆತ್ಮಹತ್ಯಾ ನಿವಾರಕ ಸಂಸ್ಥೆಯ ಕಟ್ಟಡದ ೧೧ ನೇ ಮಹಡಿಯಿಂದ ಹಾರಿಕೊಂಡು ಪ್ರಾಣ ಕಳೆದುಕೊಳ್ಳ ಹೊರಟ ಬಲಿಷ್ಠ ತರುಣನೊಬ್ಬನನ್ನು ಹೇಗೋ ಎಳೆತಂದು ಸಂಸ್ಥೆಯ ಸ್ವಯಂಸೇವಕಿ ಮಿಸ್ ಲೋನಾ ಬೋನೆಲ್ಲಳು ಒಂದು ಕುರ್ಚಿಯಲ್ಲಿ ದೂಡಿ "ಸುಮ್ಮನೆ ಕೂತುಕೋ" ಎಂದು ಕೂಗಿದಳು. ಎಲ್ಲ ಆತ್ಮಹತ್ಯಾಪೇಕ್ಷಿಗಳಂತೆ ಆತನೂ ದುರ್ಬಲ ಚಿತ್ತನಾಗಿದ್ದ. ಆತ ಕುಳಿತ. "ಈಗ ಹೇಳು!" ಎಂದಳು ಬೋನೆಲ್. ಆತ ಮಾತಾಡಿಯೇ ಆಡಿದ. ಅದು ಮುಗಿದಾಗ ತಾನಾಗಿ ಅವನ ನಿರ್ಧಾರ ಕರಗಿಹೋಗಿತ್ತು.

ಹೀಗೆ ಆತ್ಮಹತ್ಯೆಯಿಂದ ಪರಾವೃತ್ತಗೊಳಿಸಲ್ಪಟ್ಟ ಅನೇಕರು ಈ ಸಂಸ್ಥೆಗಳ ಸ್ವಯಂಸೇವಕರಾಗಿದ್ದಾರೆ. ಅವರು ತಮ್ಮ ಮಿಕ್ಕುಳಿದ ಸಮಯವನ್ನೆಲ್ಲ ಈ ಕಾರ್ಯಕ್ಕಾಗಿ ವಿನಿಯೋಗಿಸುತ್ತಾರೆ. ಟೆಲಿಫೋನಿನ ಬಳಿ ಹಗಲಿರುಳು ಕಾವಲು ಕೊಡುವುದು, ಸಂಭಾವ್ಯ ಆತ್ಮಹತ್ಯಾಕಾರರನ್ನು ಕಂಡು ಮಾತಾಡಿ ಅವರ ಹೃದಯಪರಿವರ್ತನೆ ಮಾಡುವುದು, ಮುಂತಾದ ಕೆಲಸಗಳನ್ನು ಅವರು ಎಸಗುತ್ತಾರೆ.

ಆತ್ಮಹತ್ಯಾನಿವಾರಕ ಸಂಸ್ಥೆಗಳಿಂದ ಸಹಾಯ ಅಪೇಕ್ಷಿಸುವವರಲ್ಲಿ ೧೪-೧೫ರ ಹುಡುಗರಿಂದ ಹಿಡಿದು ೭೦-೮೦ ಮುದುಕರ ವರೆಗೆ, ಕೂಲಿಕಾರರಿಂದ ಹಿಡಿದು ಕೋಟ್ಯಧೀಶರ ವರೆಗೆ ಎಲ್ಲ ಬಗೆಯ ಜನರಿದ್ದಾರೆ. ಅಮೇರಿಕದ ಸಂಸ್ಥೆಗೆ ಪ್ರತಿ ತಿಂಗಳು ೨೦೦ ಜನ ಸಲಹೆಗಾಗಿ ಬರುತ್ತಾರೆ. ಸಾವಿರಗಟ್ಟಳೆ ಪತ್ರಗಳೂ ಬರುತ್ತವೆ. ಕೆಲವೊಮ್ಮೆ ಆತ್ಮಹತ್ಯೆಯ ವಿಚಾರ ಮಾಡುತ್ತಿರುವವರ ಮಿತ್ರಬಾಂಧವರೂ ಬರೆಯುತ್ತಾರೆ. ವರ್ಷಕ್ಕೆ ೩,೦೦೦ ಪತ್ರಗಳನ್ನು ಆ ಸಂಸ್ಥೆ ಬರೆಯುತ್ತದೆ. ಇವೆಲ್ಲವೂ ಆತ್ಮಹತ್ಯೆಗಳನ್ನು ತಡೆಗಟ್ಟುವುದರಲ್ಲಿ ಸಹಕಾರಿಯಾಗುತ್ತವೆ.

ಈ ಸಂಸ್ಥೆಗಳಲ್ಲಿ ಧರ್ಮೋಪದೇಶಕರ ಸಲಹೆಗಳನ್ನೂ ಒದಗಿಸಲಾಗುತ್ತಿದೆ. ತಜ್ಞ ಮನೋ

ವೈದ್ಯರೂ ಸಾಮಾಜಿಕ ಕಾರ್ಯಕರ್ತರೂ ಇದ್ದಾರೆ. ಮಾನಸಿಕ ರೋಗಗಳ ಮೂಲಕ ಆತ್ಮಹತ್ಯೆಯ ಹಂಬಲವುಳ್ಳವರನ್ನು ಮನೋವೈದ್ಯರಿಗೆ ಒಪ್ಪಿಸಲಾಗುತ್ತಿದೆ. ಆದರೆ ನೂರಕ್ಕೆಂಭತ್ತು ಪ್ರಕರಣಗಳಲ್ಲಿ ಆ ಅಗತ್ಯ ಬೀಳುವುದಿಲ್ಲ. ಜೀವನದ ಸಾಮಾನ್ಯ ಸಮಸ್ಯೆಗಳಿಂದ ರೋಸಿಕೊಂಡು ಆತ್ಮಹತ್ಯೆಗೆಳಸುವವರೇ ಹೆಚ್ಚು.

"ಒಂದು–ಜೀವ ಉಳಿಯಲಿ" ಸಂಸ್ಥೆಯ ವಾರೆನ್ನರು ಹೇಳುವ ಹಾಗೆ, ಪರರ ಜೀವದ ರಕ್ಷಣೆಯ ಹೊಣೆಯೆಂಬುದು ಬಲು ಭಾರವಾದದ್ದು. ಆದರೆ ಬಹುಸಂಖ್ಯಾಕ ಜೀವಗಳನ್ನು ಎಷ್ಟು ಸುಲಭವಾಗಿ ಉಳಿಸಲಾಗುತ್ತಿದೆಯೆಂದು ಕೇಳಿ ಆಶ್ಚರ್ಯವಾಗುತ್ತದೆ. ಒಂಟಿತನ, ತನಗಾರೂ ಇಲ್ಲ ಎಂಬ ಭಾವನೆ ಆತ್ಮಹತ್ಯೆಗಳಿಗೆ ಮುಖ್ಯ ಕಾರಣವಾಗುತ್ತಿದೆ. ಆತ್ಮಹತ್ಯಾ ಪರಿಹಾರ ಸ್ವಯಂಸೇವಕರು ಈ ಏಕಾಂಗಿ ಜೀವಿಗಳಿದ್ದಲ್ಲಿಗೆ ಆಗಾಗ್ಗೆ ಹೋಗಿ ಅವರೊಡನೆ ಮಾತಾಡಿ ಅವರ ಜೀವನಕ್ಕೊಂದು ದಿಶೆಯನ್ನು ಕಲ್ಪಿಸುತ್ತಾರೆ. ಚಿಕ್ಕ ಪುಟ್ಟ ಆರ್ಥಿಕ ಅಡಚಣೆಗಳು ಕೆಲವರನ್ನು ಜೀವನದ ಆಚೆದಂಡೆಗೆ ಹಾರಲು ಪ್ರೇರಿಸುವುದುಂಟು. ಅಂಥವರಿಗೆ ಧನಸಹಾಯವನ್ನೂ ಸಂಸ್ಥೆಗಳು ಕೊಡುತ್ತವೆ. ಕೆಲವೇಳೆ ಬರಿ ೨೦ ರೂಪಾಯಿಯ ದಾನದಿಂದ ಒಂದು ಜೀವ ಉಳಿದದ್ದುಂಟು.

"ನಮ್ಮನ್ನೂ ವಿಚಾರಿಸುವವರುಂಟು" ಎಂಬ ಭಾವನೆಯನ್ನು ಆತ್ಮಹತ್ಯಾಪೇಕ್ಷಿಗಳಲ್ಲಿ ಮೂಡಿಸುವುದು ಮೊದಲನೇ ಕೆಲಸ. ಆತ್ಮಹತ್ಯೆ ಮಾಡಿಕೊಳ್ಳಬೇಕೆಂಬವರಿಗೆ ವಿಲಕ್ಷಣ ಮುಂದಾಲೋಚನೆಗಳಿರುತ್ತವೆ. ತಾನು ಆತ್ಮಹತ್ಯೆ ಮಾಡಿಕೊಂಡರೆ ಸಮಾಜದಲ್ಲಿ ತನ್ನ ಮಕ್ಕಳಿಗೆ ಅಪ

ಮಾನವಾದೀತೆ ? ತಾನು ನರಕಕ್ಕೆ ಹೋಗುವೆನೇ ? ಕೆಲವರಂತೂ ಆತ್ಮಹತ್ಯೆಯ ವಿಧಾನದಲ್ಲಿ ಕೂಡ ಆತ್ಮಾಭಿಮಾನವನ್ನು ಪ್ರಕಟಿಸುತ್ತಾರೆ. ತಮ್ಮ ರೂಪು ವಿಕಾರವಾದೀತೆಂಬ ಭಯವೇ ಹೆಂಗಸರು ಹೆಚ್ಚಾಗಿ ಗುಂಡಿನಿಂದ ಆತ್ಮಹತ್ಯೆ ಮಾಡಿಕೊಳ್ಳದೆ ವಿಷ ತೆಗೆದುಕೊಂಡು ಸಾಯಲು ಕಾರಣವಾಗಿರುತ್ತದೆ.

ಇಂಥ ಭಾವನೆಗಳ ಪ್ರಯೋಜನವನ್ನು ಆತ್ಮಹತ್ಯಾ ನಿವಾರಕರು ಪಡೆದು ಅವರ ಮನಸನ್ನು ತಿರುಗಿಸಲು ಯತ್ನಿಸುತ್ತಾರೆ. ಯಾರಿಗೂ ನಿಜವಾಗಿ ಸಾವು ಪ್ರಿಯವಲ್ಲ. ಆಶಾಕಿರಣವೊಂದನ್ನು ಮೂಡಿಸಿದರೆ, ತಾನು ನಿಜವಾಗಿ ಬದುಕಬೇಕೆನ್ನುವವರಿದ್ದಾರೆಂಬ ಎಣಿಕೆ ಹುಟ್ಟಿದರೆ ಅಷ್ಟೇ ಸಾಕು, ಅರ್ಧಭಾಗ ಆತ್ಮಹತ್ಯಾಪೇಕ್ಷೆ ಹೊರಟು ಹೋದಂತೆಯೆ. ಅನಂತರ ಉಳಿಯುವುದು, ಅವನನ್ನು ಮಾತಾಡಹಚ್ಚುವುದು. ಅದು ಸುಲಭವಲ್ಲ. ಅಭಿಮಾನ, ನಾಚಿಕೆ ಇವು ಎಷ್ಟೋ ವೇಳೆ ಅವನ ಬಾಯಿಗೆ ಬೀಗ ಹಾಕಿರುತ್ತವೆ. ಒಮ್ಮೆ ಆ ಬೀಗ ತೆಗೆದರೆ ಆತ್ಮಹತ್ಯೆಯ ವಿಚಾರವನ್ನು ನೀಗಿಸುವುದು ಸುಲಭ.

ಅಮೇರಿಕದಲ್ಲಿ ೨೮ ನಗರಗಳಲ್ಲಿ ಆಗಲೇ ‘ಒಂದು- ಜೀವ- ಉಳಿಯಲಿ’ ಸಂಸ್ಥೆಯ ಶಾಖೆಗಳು ಕೆಲಸ ಮಾಡುತ್ತಿವೆ. ಬ್ರಿಟನ್ನಿನ ಹಲವು ನಗರಗಳು ಅದೇ ಉಪಕ್ರಮದಲ್ಲಿವೆ. ಪಶ್ಚಿಮ ಜರ್ಮನಿ, ಸ್ವೀಡನ್, ಹಾಲಂಡ್, ಆಸ್ಟ್ರಿಯಗಳಲ್ಲಿಯೂ ಈ ಬಗೆಯ ಸಂಸ್ಥೆಗಳು ತಲೆಯೆತ್ತಿವೆ.

ಈ ದೇಶದಲ್ಲೂ ಅಂಥ ಸಂಸ್ಟೆಗಳು ಅಗತ್ಯ. ★



ಮೀನಾಕ್ಷಿಯ ರೋಷ

ಕನ್ಯಾಕುಮಾರಿಯಲ್ಲಿ ಮೀನಾಕ್ಷೀ ಮಂದಿರವಿದೆ. ಕೈಯಲ್ಲಿ ವರಮಾಲೆಯನ್ನು ಹಿಡಿದುಕೊಂಡ ಈ ಸುಂದರ ಕನ್ಯೆ ಕೊನೆಯವರೆಗೆ ಕುಮಾರಿಯಾಗಿಯೇ ಉಳಿದಳು. ಯಾಕೆಂದರೆ ಅವಳನ್ನು ಲಗ್ನವಾಗುವೆನೆಂದು ವಚನವಿತ್ತ ಶಂಕರ ಲಗ್ನಕ್ಕೆ ಬರಲೇ ಇಲ್ಲ. ದಾರಿ ನೋಡಿ ಬೇಸತ್ತು ಮೀನಾಕ್ಷಿ ಕೊನೆಗೆ ಮದುವೆಯ ಸಿದ್ಧತೆಗಳನ್ನೆಲ್ಲ ಉಧ್ವಸ್ತಗೊಳಿಸಿದಳು. ಅಕ್ಷತೆಯ ತಚ್ಚೆಯನ್ನು ಹಿಂದೀ ಮಹಾಸಾಗರದಲ್ಲಿ ತೂರಿದಳು. ಕಾಡಿಗೆಯ ಡಬ್ಬಿಯನ್ನು ಬಂಗಾಲ ಉಪಸಾಗರದಲ್ಲಿ ಬೀಸಿದಳು. ಮತ್ತು ಕುಂಕುಮವನ್ನು ಅರಬೀಸಮುದ್ರದಲ್ಲಿ ಚೆಲ್ಲಿದಳು.

ಅಂದಿನಿಂದ ಇಂದಿಗೂ ಕನ್ಯಾಕುಮಾರಿಯ ಸಮುದ್ರತೀರದಲ್ಲಿ ಆಯಾ ಸಮುದ್ರ ಆಯಾ ಬಗೆಯ ಉಸುಬನ್ನು ತಂದು ಚೆಲ್ಲುತ್ತದೆ. ಹಿಂದು ಮಹಾಸಾಗರದ ತೆರೆಬಂದೊಡಗೆಯ ಬಿಳಿ ಅಕ್ಕಿಯಂಥ ಉಸುಬು ಬಂದು ಬೀಳುತ್ತದೆ. ಬಂಗಾಲ ಉಪಸಾರದ ತೆರೆ ಕರಿ ಉಸುಬನ್ನು ತರುವುದು ಮತ್ತು ಅರಬೀ ಸಮುದ್ರದ ತೆರೆ ಕೆಂಪು ಉಸುಬನ್ನು ತಂದುಚೆಲ್ಲುತ್ತದೆ !



ಗಡ್ಡ ಬಿಟ್ಟವನೊಬ್ಬ ಪಟ್ಟಪಾಡಿನ ಸತ್ಯಕಥೆ

ಗಡ್ಡದ ಪುರಾಣ

ಸ್ವಾಭಿಮಾನಿಗಳಿಗೆ ಪ್ರಾಣದ ಪರಿವೆ ಇರುವುದಿಲ್ಲ. ತಮ್ಮ ಅಭಿಮಾನದ ಪ್ರಶ್ನೆ ಬಂದಾಗ ಅವರು ಪ್ರಾಣ ಕಳೆದುಕೊಂಡಾರೇ ಹೊರತು ತಮ್ಮ ಅಭಿಮಾನಕ್ಕೆ ಧಕ್ಕೆ ತಗಲಗೊಡುವುದಿಲ್ಲ. ದಕ್ಷಿಣ ಆಫ್ರಿಕೆಯ ಒಂದು ಕೋರ್ಟಿನಲ್ಲೊಮ್ಮೆ ನ್ಯಾಯಾಧೀಶರು ತಲೆಯ ಮೇಲಿನ ರುಮಾಲನ್ನು ಕಳಚಿಡು ಇಲ್ಲವೆ ಹೊರಗೆ ಹೋಗು ಎಂದು ಗಾಂಧೀಜಿಯವರಿಗೆ ಹೇಳಿದರು. ಗಾಂಧೀಜಿ ರುಮಾಲು ಕಳಚಲು ನಿರಾಕರಿಸಿ ಕೋರ್ಟಿನಿಂದೆದ್ದು ನಡೆದರು. ರುಮಾಲು ಅವರಿಗೆ ತಮ್ಮ ವ್ಯಕ್ತಿಸ್ವಾತಂತ್ರ್ಯದ, ಸ್ವಾಭಿಮಾನದ, ಧರ್ಮದ, ರಾಷ್ಟ್ರೀಯ ಗೌರವದ ಪ್ರಶ್ನೆಯಾಗಿತ್ತು.

ಇದೊಂದು ಮಹಾತ್ಮರ ಕಥೆಯಾಯಿತು, ಸಾಮಾನ್ಯರ ಸಂಬಂಧವೇನು ಇದರಲ್ಲಿ ಎನ್ನುವುದಾದರೆ ಅಮೇರಿಕದ ಜೊಸೆಫ್ ಪಾಮರ್ ಎಂಬವನ ಕಥೆಯನ್ನು ಕೇಳಿ. ಜೊಸೆಫನೇನೂ ಸಂತನಲ್ಲ, ರಾಜಕಾರಣಿಯಲ್ಲ, ಸಮಾಜಸುಧಾರಕನಲ್ಲ, ಸ್ವಾತಂತ್ರ್ಯ ವೀರನಲ್ಲ. ಆತನೊಬ್ಬ ಸಾಮಾನ್ಯ ಮನುಷ್ಯ. ಈತ ಸಮಾಜದ ಅವಹೇಳನವನ್ನು ತಾಳಿಕೊಂಡ, ಜನರ ಉಪಟಳವನ್ನು ಸಹಿಸಿದ, ಪೆಟ್ಟುತಿಂದ, ಜೇಲಿಗೆ ಹೋದ; ಆದರೆ ಇಷ್ಟೆಲ್ಲ ಕಷ್ಟಕ್ಕೆ ಕಾರಣವಾಗಿದ್ದ ತನ್ನ ಗಡ್ಡವನ್ನು ಬೋಳಿಸಲಿಲ್ಲ.

ಈ ಸಾಮಾನ್ಯ ಜೊಸೆಫನ ಗಡ್ಡ ಮಾತ್ರ ಅಸಾಧಾರಣವಾದದ್ದಿತ್ತು. ತನ್ನ ಈ ಅಪರೂಪದ ಗಡ್ಡದ ಮೇಲೆ ಅವನಿಗೆ ಅಪಾರ ಪ್ರೀತಿ, ನಿಷ್ಠೆ, ಅಭಿಮಾನಗಳಿದ್ದವು. ಆತನೊಬ್ಬ ಒಕ್ಕಲಿಗ. ತನ್ನ ಚಿಕ್ಕ ಜಮೀನಿನಲ್ಲಿ ದುಡಿದು ಹೊಟ್ಟೆತುಂಬಿಸಿಕೊಳ್ಳುತ್ತ ಕಾಲ ಹಾಕುತ್ತಿದ್ದ. ೧೮೩೦ ರಲ್ಲಿ ಅವನು ಹಳ್ಳಿಯನ್ನು ಬಿಟ್ಟು ಪೀಟ್ಸ್‌ಬರ್ಗ ನಗರಕ್ಕೆ ಹೋಗಿ ನೆಲೆಸಿದ.

ಅಲ್ಲಿ, ತುಸು ದಿನಗಳಲ್ಲಿಯೇ ಜನರ ದೃಷ್ಟಿ ಇವನ ಗಡ್ಡದತ್ತ ಆಕರ್ಷಿತವಾಯಿತು. ೧೭೨೦ ರಿಂದಲೇ ಅಮೇರಿಕಾದಲ್ಲಿ ಗಡ್ಡವನ್ನು ನುಣ್ಣಗೆ ಬೋಳಿಸಿಕೊಳ್ಳುವ ಫ್ಯಾಶನ್ ರೂಢಿಗೆ ಬಂದಿತ್ತು ವಾಶಿಂಗ್ಟನ್, ಗೇಟ್ಸ್, ಗ್ರೀನ್ ಮೊದಲಾದ ಅಮೇರಿಕನ್ ಧುರೀಣರ ಮುಖದ ಮೇಲೆ ಗಡ್ಡದ ಛಾಯೆ ಕೂಡ ಕಾಣಿಸುತ್ತಿರಲಿಲ್ಲ. ಎಲ್ಲರೂ ಗಡ್ಡ ಬೋಳಿಸಿಕೊಳ್ಳುತ್ತಿರುವಾಗ ಈ ಜೊಸೆಫ್ ಪಾಮರನೊಬ್ಬನೇ ಗಡ್ಡಬಿಟ್ಟಿರುವುದು ಜನರಿಗೆ ಸಹಿಸಲಿಲ್ಲ. ಜನ ಅವನನ್ನು ಕುಚೇಷ್ಟೆ ಮಾಡತೊಡಗಿದರು. ಬರುಬರುತ್ತ ಮಾತಿನ ಹಿಂಸೆಯ ಜೊತೆಗೆ ಪೀಟ್ಸ್‌ಬರ್ಗಿನ ಜನ ಜೊಸೆಫನಿಗೆ ಶಾರೀರಕ ಹಿಂಸೆಯನ್ನೂ ಕೊಡತೊಡಗಿದರು.

ಜೊಸೆಫ್ ಒಳ್ಳೆಯ ನಾಗರಿಕನಾಗಿದ್ದ. ದಯಾಳು ಸ್ವಭಾವದವನಿದ್ದ. ಪ್ರಾಮಾಣಿಕನಿದ್ದ. ಸಾಹಿತ್ಯಾದಿಗಳಲ್ಲಿ ಅಭಿರುಚಿಯುಳ್ಳವನಾಗಿದ್ದ. ಧಾರ್ಮಿಕನೂ ಸಹಿಷ್ಣುವೂ ಆಗಿದ್ದ. ತತ್ತ್ವಕ್ಕೆ

“ ಧರ್ಮಯುಗ ” ದಿಂದ

ಅಂಟಿಕೊಂಡು ನಡೆಯುವವನಾಗಿದ್ದ. ಗಡ್ಡ ಬಿಡುವ ಅಧಿಕಾರವೂ ಒಂದು ತತ್ತ್ವದ ಮಾತು ಎಂದು ಅವನು ತಿಳಿದಿದ್ದ.

ಆದರೆ ಗಡ್ಡಬಿಟ್ಟಿರುವ ಜೊಸೆಫ್ ಒಂದು ವಿಚಿತ್ರ ಪ್ರಾಣಿಯಂತೆ ಪಿಟ್ಸ್‌ಬರ್ಗ್ ನಾಗರಿಕರಿಗೆ ಕಾಣಿಸುತ್ತಿದ್ದ. ಆತ ಹೋದಲ್ಲೆಲ್ಲ ಹುಡುಗರು ಅವನ ಬೆನ್ನುಹತ್ತಿ ಚೇಷ್ಟೆಮಾಡುತ್ತಿದ್ದರು. ಕಲ್ಲುಕೆಸರುಗಳನ್ನು ಅವನ ಮೇಲೆಸೆಯುತ್ತಿದ್ದರು. ಆತ ಎದುರಿನಿಂದ ಬರುವುದನ್ನು ಕಂಡರೆ ಹೆಂಗಸರು ಮುಖ ತಿರುವಿ ಬೇರೆ ದಾರಿಯಲ್ಲಿ ಹೋಗುತ್ತಿದ್ದರು. ಪುಂಡರು ಅವನ ಮನೆಯ ಮೇಲೆ ಕಲ್ಲು ತೂರಿ ಕಿಡಿಕಿಗಳ ಕಾಜುಗಳನ್ನು ಒಡೆಯುತ್ತಿದ್ದರು. ಸಂಭಾವಿತರೆನಿಸಿಕೊಳ್ಳುವ ಜನ ಕೂಡ ಜೊಸೆಫನ ಎದುರಿಗೇ ಅವನ ಗಡ್ಡದ ಮಾತನ್ನೆತ್ತಿ ಅವಹೇಳನೆ ಮಾಡುತ್ತಿದ್ದರು.

೧೮೪೦ ರ ಹೊತ್ತಿಗೆ ಗಡ್ಡದ ಮೂಲಕ ಜೊಸೆಫ್ ಪಾಮರ ಅಮೇರಿಕದಲ್ಲಿ ರಾಷ್ಟ್ರೀಯ ಚರ್ಚೆಯ ವಿಷಯವಾಗಿ ಬಿಟ್ಟಿದ್ದ. ಎರಡು ಘಟನೆಗಳ ಮೂಲಕ ಅವನ ಸುದ್ದಿ ದೇಶದಲ್ಲೆಲ್ಲ ಹರಡಿತ್ತು.

ಮೊದಲನೆಯ ಘಟನೆ ನಡೆದದ್ದು ಹೀಗೆ: ಜೊಸೆಫ್ ತುಂಬ ಧಾರ್ಮಿಕನಾದ್ದರಿಂದ ಪ್ರತಿ ಆದಿತ್ಯವಾರವೂ ಚರ್ಚಿಗೆ ಹೋಗುತ್ತಿದ್ದ. ಅಲ್ಲಿಯೂ ಜನ ಅವನನ್ನು ತೆಗಳುತ್ತಿದ್ದರು. ಆದರೆ ಆತ ಮಾತ್ರ ಶಾಂತಚಿತ್ತದಿಂದ ಪ್ರಾರ್ಥನೆ ಮಾಡುತ್ತಿದ್ದ. ಒಂದು ಆದಿತ್ಯವಾರ ಚರ್ಚಿನ ಪಾದ್ರಿ ಬಹಿರಂಗವಾಗಿ ಅವನನ್ನು ಅವಮಾನಗೊಳಿಸಿದ. ಅಂದಿನ ಸಾಮೂಹಿಕ ಔತಣಕ್ಕೆ ಆತ ಎಲ್ಲರನ್ನೂ ಆಮಂತ್ರಿಸಿ ಜೊಸೆಫ್ ಒಬ್ಬನನ್ನೇ ಆಮಂತ್ರಿಸಲಿಲ್ಲ. ಜೊಸೆಫನಿಗೆ ಇದರಿಂದ ಅತಿ ಕೆಡಕೆನಿಸಿದ್ದರ ಜೊತೆಗೆ ಸಿಟ್ಟೂ ಬಂತು. ಆತ ನೆಟ್ಟಗೆ ಊಟದ ಮೇಜಿನ ಬಳಿಗೆ ಹೋಗಿ ಅದರ ಮೇಲಿದ್ದ ಮದ್ಯದ ಬಾಟಲಿಯನ್ನೆತ್ತಿ ಗಟಗಟ ಕುಡಿದು ಹೋಗಿಬಿಟ್ಟ.

ಎರಡನೆಯದರ ಸಮಾಚಾರ ಇದು: ಒಂದು ಹೋಟೆಲಿನಿಂದ ಒಂದು ದಿನ ಜೊಸೆಫ ಹೊರಬಿದ್ದಾಗ ನಾಲ್ಕು ಜನ ಧಾಂಡಿಗರು ಅವನ ಮೇಲೆರಗಿದರು. ಅವರಲ್ಲೊಬ್ಬನ ಕೈಲಿ ಸಾಬೂನು, ಇನ್ನೊಬ್ಬನ ಕೈಲಿ ಬ್ರಶ್, ಮತ್ತೊಬ್ಬನ ಕೈಲಿ ನೀರು, ನಾಲ್ಕನೆಯವನ ಕೈಲಿ ರೇಝರ್ ಇತ್ತು. ಅವರು ಜೊಸೆಫನನ್ನು ನೆಲಕ್ಕೆ ಕೆಡವಿದರು. ಆತ ತಲೆ ಮತ್ತು ಬೆನ್ನಿಗೆ ಹತ್ತಿದ ನೋವನ್ನು ಅಲಕ್ಷಿಸಿ ಕಿಸೆಯಿಂದ ಚಾಕು ತೆಗೆದು ಅತ್ತಿತ್ತ ಬೀಸಿದ. ಆಕ್ರಮಣಕಾರರಲ್ಲಿ ಇಬ್ಬರ ಕಾಲಿಗೆ ಪುಟ್ಟ ಗಾಯಗಳಾದವು. ಅಷ್ಟಕ್ಕೆ ಆ ನಾಲ್ವರೂ ಹೆದರಿ ಜೊಸೆಫನ ಗಡ್ಡ ಬೋಳಿಸುವ ಹವ್ಯಾಸವನ್ನು ಬಿಟ್ಟುಕೊಟ್ಟು ಓಡಿದರು. ನ್ಯಾಯ ಕುರುಡಾಗಿರುತ್ತದೆ ಅನ್ನುತ್ತಾರಲ್ಲ, ಅದಕ್ಕೆ ಜೊಸೆಫನೂ ಒಂದು ಉದಾಹರಣೆಯಾದ. ನ್ಯಾಯವಾಗಿ ಅವನ ಮೇಲೆಯೆ ಆಕ್ರಮಣವಾಗಿದ್ದರೂ ಗಡ್ಡ ಬಿಟ್ಟ ಅಪರಾಧಕ್ಕಾಗಿ ಅವನನ್ನು ಕೆಂಗಣ್ಣಿನಿಂದ ನೋಡುತ್ತಿದ್ದ ಅಧಿಕಾರಿ ವರ್ಗ

ಅವನೇ ಆಕ್ರಮಣ ಮಾಡಿದನೆಂಬ ಆರೋಪವಿಟ್ಟು ಅವನನ್ನು ಜೇಲಿಗೆ ಹಾಕಿತು. ಅಲ್ಲಿ ಆತ ವಿಚಾರಣೆಯಿಲ್ಲದೆ ಒಂದು ವರ್ಷ ಕಾಲ ಇರಬೇಕಾಯಿತು.

ಜೇಲಿನಲ್ಲಿದ್ದಾಗ ಜೊಸೆಫ್ ಪಾಮರ ತನ್ನ ಮಕ್ಕಳು ಮತ್ತು ಇತರರಿಗೆ ಅನೇಕ ಪತ್ರಗಳನ್ನು ಬರೆದು ತನ್ನ ಮೇಲಾದ ಅನ್ಯಾಯವನ್ನು ವಿವರಿಸಿದ. ಗಡ್ಡ ಬಿಟ್ಟುಕೊಂಡ ಅಪರಾಧಕ್ಕಾಗಿ ತನ್ನನ್ನು ಬಂಧಿಸಿದ್ದಾರಲ್ಲದೆ ಆಕ್ರಮಣ ಮಾಡಿದ್ದಕ್ಕಾಗಿ ಅಲ್ಲ ಎಂದು ತಿಳಿಸಿದ. ಆತನ ಮಗ ಈ ಪತ್ರಗಳನ್ನು ಒಂದು ಪತ್ರಿಕೆಯಲ್ಲಿ ಪ್ರಕಟಿಸಿದ. ಇತರ ಪತ್ರಿಕೆಗಳಲ್ಲೂ ಪಾಮರನ ಕಥೆ ಪ್ರಕಟವಾಯಿತು. ಆಗ ಪೀಟ್ಸಬರ್ಗಿನ ನಗರಾಧಿಕಾರಿಗೆ ಗಾಬರಿಯಾಗಿ ಆತ ಜೇಲಿನಿಂದ ಹೊರಟು ಹೋಗಲು ಜೊಸೆಫನಿಗೆ ತಿಳಿಸಿದ. ಜೊಸೆಫ್ ಒಪ್ಪಲಿಲ್ಲ. ಜೇಲರ್ ಆತನಿಗೆ ವಿನಂತಿ ಮಾಡಿಕೊಂಡ. ಅವನ ಮುದಿ ತಾಯಿ "ಮನೆಗೆ ಬಾ" ಎಂದು ಬರೆದಳು. ಆದರೆ ಜೊಸೆಫ್ ಜಗ್ಗಲಿಲ್ಲ. ಕೊನೆಗೆ ಅವನನ್ನು ಅವನು ಕುಳಿತುಕೊಂಡ ಖುರ್ಚಿ ಸಹಿತ ಎತ್ತಿಕೊಂಡು ಜೇಲಿನ ಹೊರಗೆ ತಂದುಬಿಟ್ಟರು.

ಆ ಮೇಲೆ ಆತನ ಗಡ್ಡದ ವಿರುದ್ಧ "ಬ್ರ" ಎನ್ನುವ ಧೈರ್ಯ ಯಾವಾತನಿಗೂ ಆಗಲಿಲ್ಲ. ಜೇಲಿನಿಂದ ಹೊರ ಬಂದ ಮೇಲೆ ಜೊಸೆಫ್ ಗುಲಾಮಗಿರಿಯ ವಿರುದ್ಧ ಹೋರಾಟ ನಡೆಸಿದ. ಆತ ಪ್ರಸಿದ್ಧ ಲೇಖಕ-ದಾರ್ಶನಿಕ ಇಮರ್ಸನ್‌ರನ್ನು ಭೆಟ್ಟಿಯಾದ. ನೋಡನೋಡುವಷ್ಟರಲ್ಲಿ ಅಮೇರಿಕದಲ್ಲಿ ದೊಡ್ಡ ಮನುಷ್ಯನಾಗಿಬಿಟ್ಟ.

ಮುಂದೆ ಕೆಲವೇ ಸಮಯದಲ್ಲಿ ಅಮೇರಿಕದಲ್ಲಿ ಯಾದವೀ ಕಲಹವೆದ್ದಿತು. ಆಗ ಮತ್ತೆ ಗಡ್ಡದ ಯುಗ ಆರಂಭವಾಯಿತು. ಪ್ರತಿಯೊಬ್ಬನೂ ಗಡ್ಡ ಬಿಡತೊಡಗಿದ. ಗಡ್ಡ ಬಿಡುವುದು ಫ್ಯಾಶನ್ ಎನಿಸಿಕೊಂಡಿತು.

ಜೊಸೆಫ್ ಪಾಮರ ತನ್ನ ಮರಣಾನಂತರವೂ ಜನ ತನ್ನನ್ನು ಮರೆಯದಂತೆ ಮಾಡಿಟ್ಟು ಸತ್ತ. ಇಂದಿಗೂ ಮೆಸಾಚುಸೆಟ್ಸ್‌ನ ಪೀಟ್ಸಬರ್ಗ್‌ನ ಸಮೀಪದ ನಾರ್ಥ್ ಲಿಯೊಮಿನ್‌ಸ್ಟರಿನ ಹಳೆಯ ದಫನ ಭೂಮಿಯಲ್ಲಿ ಆತನ ಸ್ಮೃತಿ ಚಿಹ್ನವನ್ನು ಕಾಣಬಹುದು. ಆಳೆತ್ತರದ ಒಂದು ಚಚ್ಚೌಕು ಕಲ್ಲಿನ ಮೇಲೆ ಆತನ ತಲೆಯ ಮೂರ್ತಿ ಇದೆ. ಸಂಗಮವರಿ ಕಲ್ಲಿನ ಆ ಮೂರ್ತಿಯ ಮುಖದಲ್ಲಿ ದಟ್ಟವಾದ, ನೀಳವಾದ ಶುಭ್ರ ಗಡ್ಡ ಮೆರೆಯುತ್ತಿದೆ. ಕಲ್ಲಿನ ಮೇಲೆ "ಗಡ್ಡ ಬಿಟ್ಟಿದ್ದಕ್ಕಾಗಿ ಕಷ್ಟಕ್ಕೆ ಗುರಿಯಾದವ" ಎಂದು ಬರೆಯಲ್ಪಟ್ಟಿದೆ. *




ಪ್ರೇಮವೆಂದರೆ ನಾಯಿಕೊಡೆ, ಶಾಶ್ವತವೊ ಅಶಾಶ್ವತವೊ ತಿಳಿಯುವ ಮೊದಲೇ ಕಾಲ ಮಿಂಚಿಹೋಗಿರುತ್ತದೆ.

* *

ಕಾರಕೂನ— ಸ್ವಾಮಿ, ಇನ್ನು ಮೇಲೆ ನನ್ನ ಪಗಾರನ್ನು ಹೆಚ್ಚಿಸಲೇಬೇಕು. ಏಕೆಂದರೆ ನಾನು ಲಗ್ನ ಮಾಡಿಕೊಂಡಿದ್ದೇನೆ.

ಮ್ಯಾನೇಜರ— ಕಾರಖಾನೆಯ ಹೊರಗೆ ಆಗುವ ಅಪಘಾತಗಳಿಗೆ ನಾವು ಜವಾಬ್ದಾರರಲ್ಲ, ತಿಳಿಯಿತೇ ?



ಮ್ಯಾನರ್ಸ್ ಗ್ರೈಪ್ ಮಿಕ್ಸ್ಚರ್ ಕೊಡಿರಿ






ಮತ್ತು ಮುಖದಲ್ಲಿ ಪುನಃ ಮುಗುಳುನಗೆ ಮೂಡುವುದನ್ನು ನೋಡಿರಿ

ಇದು 'ಮ್ಯಾನರ್ಸ್'ರವ

ಮ್ಯಾನರ್ಸ್ ಗ್ರೈಪ್ ಮಿಕ್ಸ್ಚರ್ ನಿಮ್ಮ ಮಗುವಿನ ವಾಯು ಹಾಗೂ ಹೊಟ್ಟೆ ಶೂಲೆಯ ಉಪದ್ರವವನ್ನು ಸೌಮ್ಯರೀತಿಯಲ್ಲಿ ಉಪಶಮನಗೊಳಿಸುತ್ತದೆ; ಮತ್ತು ಮಗುವಿಗೆ ಹಲ್ಲು ಬರುವಾಗ ಹೊಟ್ಟೆಯ ಅವ್ಯವಸ್ಥೆಗಳು ಉಂಟಾಗದಂತೆಮಾಡಲು ನೆರವಾಗುತ್ತದೆ.

ASP/GM 16 KA



ಈ ಫ್ರೆಂಚ್ ಕಥೆ ಜಗತ್ತಿನ ಶ್ರೇಷ್ಠತಮ
ಕಥೆಗಳಲ್ಲೊಂದು ಪರಿಗಣಿತವಾಗಿದೆ

ದಾರದ ತುಣುಕು

ಗಾಯ್ ಡಿ ಮೋಪಾಸಾ

ಅಂದು ಗೋಡರ್‌ವಿಲೆಯಲ್ಲಿ ಸಂತೆ. ಸುತ್ತ ಮುತ್ತಲಿನ ಹಳ್ಳಿಗಳ ರೈತರೂ ಅವರ ಹೆಂಡಂದಿರೂ ಸಂತೆಗೆಂದು ಹೊರಟಿದ್ದರು. ಸಂತೆ ಪೇಟೆಯ ಮುಖ್ಯ ಚೌಕಿನಲ್ಲಿ ಜನರ ಗದ್ದಲದ ನಡುವೆ ದನಕರುಗಳ ಕೋಡುಗಳು, ಶ್ರೀಮಂತ ರೈತರ ತಲೆಯ ಮೇಲಿನ ಎತ್ತರದ ಹ್ಯಾಟುಗಳು ಮತ್ತು ರೈತ ಹೆಂಗಸರ ತಲೆಯುಡಿಗೆಗಳು ಎದ್ದು ಕಾಣಿಸುತ್ತಿದ್ದವು. ಜನರ ಮಾತಿನ ಗದ್ದಲದಲ್ಲಿ ಆಗಾಗ ಯಾವನೊಬ್ಬ ಧಷ್ಟಪುಷ್ಟ ಹಳ್ಳಿಗನ 'ಹ್ಹಾ! ಹ್ಹಾ!' ಎಂಬ ನಗುವಿನ ಧ್ವನಿಯೋ ಅಥವಾ ಆಕಳಿನ 'ಅಂಬಾ' ಎಂಬ ಕೂಗೋ ಕಿವಿಗೆ ಬೀಳುತ್ತಿತ್ತು.

ಬ್ರಿಯೂಟಿನ ಮೇತ್ರ ಹಾಚ್‌ಕಾರ್ನ್ ಮುಖ್ಯ ಚೌಕಿನತ್ತ ಹೊರಟಿದ್ದ. ಹಾದಿಯಲ್ಲಿ ಅವನ ಕಣ್ಣಿಗೆ ಒಂದು ದಾರದ ತುಣುಕು ಕಾಣಿಸಿತು. ಪಕ್ಕಾ ಮಿತವ್ಯಯಿಯಾದ ಆತ ಉಪಯೋಗಕ್ಕೆ ಬರುವ ಪ್ರತಿಯೊಂದು ವಸ್ತುವನ್ನೂ ಹಾಳು ಮಾಡಬಾರದು ಎಂದು ಯೋಚಿಸಿ ಕಷ್ಟದಿಂದ ಬಗ್ಗಿದ. ಅವನಿಗೆ ವಾತರೋಗವಿದ್ದಿತು. ಕಷ್ಟವಾದರೂ ಆತ ಬಗ್ಗಿ ನಿಂತು ಆ ದಾರದ ತುಣುಕನ್ನು ಸರಿಯಾಗಿ ಸುತ್ತತೊಡಗಿದ. ಅಷ್ಟರಲ್ಲಿ ಅವನಿಗೆ ಕುದುರೆಗಳ ಜೀನು ತಯಾರಿಸುವ ಮೇತ್ರ ಮಲಾಂಡೇನ್ ತನ್ನ ಬಾಗಿಲಲ್ಲಿ ನಿಂತುಕೊಂಡು ತನ್ನನ್ನೇ ನೋಡುತ್ತಿರುವುದು ಕಾಣಿ

ಪಿತು. ಅವರಿಬ್ಬರಲ್ಲಿ ಒಮ್ಮೆ ಯಾವುದೊ ಒಂದು ವಸ್ತುವಿಗಾಗಿ ಮನಸ್ತಾಪವುಂಟಾಗಿತ್ತು. ಇಬ್ಬರೂ ದ್ವೇಷಸಾಧನೆಯಲ್ಲಿ ಅಪ್ರತಿಮರಾಗಿದ್ದುದರಿಂದ ಅವರಿಬ್ಬರಲ್ಲಿ ರಾಜಿಯಾಗಿರಲೇ ಇಲ್ಲ. ಹಾದಿಯ ಧೂಳಿನಲ್ಲಿ ಬಿದ್ದಿದ್ದ ದಾರದ ತುಣುಕನ್ನು ತಾನು ಎತ್ತುತ್ತಿರುವುದನ್ನು ತನ್ನ ವೈರಿ ನೋಡಿದನಲ್ಲ ಎಂದು ಮೇತ್ರ ಹಾಚ್‌ಕಾರ್ನನಿಗೆ ತುಂಬ ನಾಚಿಕೆಯಾಯಿತು. ಆತ ಸರಕ್ಕನೆ ದಾರವನ್ನು ತನ್ನ ಚೊಣ್ಣದ ಕಿಸೆಯೊಳಗೆ ತುರುಕಿದ. ಆ ಮೇಲೆ ಇನ್ನೂ ಏನೋ ಹುಡುಕುತ್ತಿರುವವನಂತೆ ಒಂದೆರಡು ನಿಮಿಷ ನಟಿಸಿ ಬಳಿಕ ಎದೆ ಸೆಟಿಸಿಕೊಂಡು ಪೇಟೆಗೆ ನಡೆದ.

ಅಲ್ಲಿ ಆತ ಬಲು ಬೇಗ ಆ ಸಂತೆಯ ಗದ್ದಲದಲ್ಲಿ ಬೆರೆತುಹೋದ. ಅದು ಇದು ವ್ಯಾಪಾರದಲ್ಲಿ ಮುಳುಗಿಹೋದ. ರೈತರು ಆಕಳುಗಳನ್ನು ನೋಡಿ ಬೆಲೆ ವಿಚಾರಿಸಿ ಮುಂದಕ್ಕೆ ತೆರಳಿ ಮತ್ತೆ ಮರಳಿ ಬರುತ್ತಿದ್ದರು. ತಮ್ಮನ್ನೆಲ್ಲಿ ಮೋಸಗೊಳಿಸುತ್ತಾರೊ ಎಂಬ ಭಯ ಸದಾ ಅವರನ್ನು ಪೀಡಿಸುತ್ತಿತ್ತು. ನಿರ್ಣಯ ಮಾಡುವ ಧೈರ್ಯವಿಲ್ಲದೆ, ಮಾರಾಟಗಾರನ ಕುತಂತ್ರವನ್ನು ಕಂಡುಹಿಡಿಯಲೆಂದು ಅವನ ಕಣ್ಣುಗಳನ್ನು ದಿಟ್ಟಿಸುತ್ತ, ಆಕಳಿನ ದೋಷವನ್ನು ಕಂಡುಹಿಡಿಯಲು ಅದನ್ನೆ ನೋಡುತ್ತ ನಿಲ್ಲುತ್ತಿದ್ದರು. ಹೆಂಗಸರು ಹೊತ್ತು ತಂದಿದ್ದ ದೊಡ್ಡ ಬುಟ್ಟಿಗಳನ್ನು ನೆಲದ ಮೇಲಿಟ್ಟು ಕುಳಿತಿದ್ದರು. ಒಳಗಿದ್ದ ಕಾಲುಕಟ್ಟಿಹಾಕಿದ ಕೋಳಿಗಳು ಈಗ ನೆಲದ ಮೇಲೆ ಅಂಜಿಕೆಯಿಂದ ಕಣ್ಣುಗಳನ್ನು ಮಿಳುಕಿಸುತ್ತ ಬಿದ್ದಿದ್ದವು. ಹೆಂಗಸರು ಬೆಲೆ ಹೇಳಿದ ಬಳಿಕ ಗಂಭೀರ ಮುಖದಿಂದ ಕಡಿಮೆಗೆ ಕೊಡುವುದಿಲ್ಲ ಎಂದು ಸೂಚಿಸುತ್ತಿದ್ದರು. ಇಲ್ಲವೆ ಗಿರಾಕಿಯ ಮಾತಿಗೆ ಒಪ್ಪುವ ನಿರ್ಧಾರವನ್ನು ಮಾಡಿ ಮುಂದಕ್ಕೆ ತೆರಳಿದ್ದ ಗಿರಾಕಿಯನ್ನು ಕೂಗಿ ಕರೆಯುತ್ತ "ಒಳ್ಳೇದು. ಬನ್ನಿ ಸ್ವಾಮಿ. ನಿಮ್ಮಮಾತೇ ನಡೆಯಲಿ. ಅಷ್ಟಕ್ಕೇ ಕೊಡುತ್ತೇನೆ ಬನ್ನಿ" ಎಂದು ನುಡಿಯುತ್ತಿದ್ದರು.

ಸಾವಕಾಶವಾಗಿ ಜನಸಂದಣಿ ಕರಗಿತು. ದೂರದ ಹಳ್ಳಿಗರು ಊರಿನ ಖಾನಾವಳಿಗೆ ನಡೆದರು. ಜೋರ್ಡೇನ್ ಖಾನಾವಳಿಯಲ್ಲಿ ಊಟದ ಜನರ ಗದ್ದಲವಿತ್ತು. ಖಾನಾವಳಿಯ ಅಂಗಳ ಚಕ್ಕಡಿಗಳಿಂದ ತುಂಬಿಹೋಗಿತ್ತು.

ಊಟದ ಕೋಣೆಯಲ್ಲಿದ್ದ ಅಗ್ಗಿಷ್ಟಿಗೆ ಸಮೀಪವಿದ್ದವರ ಬೆನ್ನು ಚುರುಗುಟ್ಟುವಂತೆ ಕಾವನ್ನು ಹೊರಡಿಸುತ್ತಿತ್ತು. ಕೋಳಿ, ಕುರಿ, ಹಂದಿಯ ಮಾಂಸದ ಅಡಿಗೆ ತಯಾರಾಗುತ್ತಿತ್ತು. ಹುರಿಯುತ್ತಿದ್ದ ಮಾಂಸದ ವಾಸನೆ ಎಲ್ಲರ ಬಾಯಲ್ಲಿ ನೀರೂರಿಸುತ್ತಿತ್ತು. ಶ್ರೀಮಂತ ರೈತರೆಲ್ಲ ಊಟಮಾಡುವುದು ಈ ಹೊಟೆಲಿನಲ್ಲಿಯೆ. ಊಟದ ತಟ್ಟೆಗಳು ಬರಿದಾಗುತ್ತಿದ್ದಂತೆ ಮದ್ಯದ ಬಟ್ಟಲುಗಳೂ ಬರಿದಾಗುತ್ತಿದ್ದವು. ಎಲ್ಲರೂ ತಾವು ಮಾರಿದ, ಕೊಂಡ ವಸ್ತುಗಳ ವಿಷಯವನ್ನು ಮಾತಾಡುತ್ತಿದ್ದರು.

ಹಠಾತ್ತಾಗಿ ಬೀದಿಯಲ್ಲಿ ಹಲಗೆಯ ಧ್ವನಿ ಕೇಳಿಸಿತು. ಯಾರಳಿದರೇನು, ಯಾರುಳಿದರೇನು ಎಂಬ ನಿರ್ಲಕ್ಷ್ಯಭಾವದ ಕೆಲವರನ್ನು ಬಿಟ್ಟು ಉಳಿದವರೆಲ್ಲ ಬಾಯಲ್ಲಿದ್ದ ತುತ್ತನ್ನು ಜಗಿಯುತ್ತಿದ್ದಂತೆಯೆ ಕಿಟಿಕಿಯ ಬಳಿಗೊ ಬಾಗಿಲ ಬಳಿಗೊ ಓಡಿದರು.

ಡಂಗುರದವ ಹಲಗೆ ಬಡಿಯುವುದನ್ನು ನಿಲ್ಲಿಸಿ ಕೂಗಿದ. "ಇಂದು ಮುಂಜಾನೆ ೯-೧೦ ಗಂಟೆಗಳ ನಡುವೆ ಬ್ಯುಝುವಿಲೆ ರಸ್ತೆಯಲ್ಲಿ ೫೦೦ ಫ್ರಾಂಕ್ ಮತ್ತು ಒಂದಿಷ್ಟು ಕಾಗದ ಪತ್ರಗಳಿದ್ದ ಒಂದು ಚರ್ಮದ ಕಪ್ಪು ಚೀಲ ಕಳೆದುಹೋಗಿದೆ. ಅದು ಸಿಕ್ಕವರು ಕೂಡಲೆ ಅದನ್ನು ಮೇಯರರ ಕಚೇರಿಗೆ ಅಥವಾ ಮ್ಯಾನ್‌ವಿಲೆಯ ಮೇತ್ರ ಹೋಲ್‌ಬ್ರಿಕ್‌ರಿಗೆ ಮುಟ್ಟಿಸಬೇಕು. ತಂದು ಕೊಟ್ಟವರಿಗೆ ೨೦ ಫ್ರಾಂಕುಗಳ ಇನಾಮು ಸಿಗುವುದು."

ಇಷ್ಟು ಹೇಳಿ ಡಂಗುರದವ ಮುಂದೆ ನಡೆದ. ಮುಂದಿನ ಓಣಿಯಿಂದ ಮತ್ತೆ ಆತನ ಕೂಗು

ಅಸ್ಪಷ್ಟವಾಗಿ ಕೇಳಿಸಿತು.

ಊಟ ಮಾಡುತ್ತಿದ್ದವರೆಲ್ಲ ಈಗ ಈ ವಿಚಾರವನ್ನೆ ಮಾತಾಡತೊಡಗಿದರು. ಹೋಲ್‌ಬ್ರಿಕ್‌ಗೆ ಕಳೆದು ಹೋದ ಚೀಲ ಸಿಕ್ಕುವ ಸಂಭವವೆಷ್ಟು ಎಂದು ಅವರು ಚರ್ಚಿಸಿದರು. ಅವರು ಕಾಫಿ ಕುಡಿಯುತ್ತಿದ್ದಾಗ ಪೋಲೀಸ್ ಪ್ರಮುಖ ಬಾಗಿಲ ಬಳಿ ಬಂದು "ಇಲ್ಲಿ ಬ್ರಿಯೂಟಿನ ಮೇತ್ರ ಹಾಚ್‌ಕಾರ್ನ್ ಇದ್ದಾರೆಯೆ?" ಎಂದು ಕೇಳಿದ.

ಕೋಣೆಯ ಈ ಮೂಲೆಯ ಬಳಿ ಕುಳಿತಿದ್ದ ಹಾಚ್‌ಕಾರ್ನ್ "ಇಲ್ಲಿದ್ದೇನೆ. ಏನಾಗಬೇಕು?" ಎಂದು ಕೇಳಿದ.

"ಸ್ವಾಮಿ, ದಯಮಾಡಿ ಮೇಯರರ ಕಚೇರಿಗೆ ನನ್ನೊಡನೆ ಬರುತ್ತೀರಾ? ಮೇಯರರು ನಿಮ್ಮೊಡನೆ ಮಾತನಾಡಬೇಕಂತೆ," ಪೋಲೀಸ್ ಅಧಿಕಾರಿ ಹೇಳಿದ.

ಈ ಕರೆಯಿಂದ ಆಶ್ಚರ್ಯಚಕಿತನಾದ, ಗಡಬಿಡಿಗೊಂಡ ಹಾಚ್‌ಕಾರ್ನ್ ಗ್ಲಾಸಿನಲ್ಲಿದ್ದ ಬ್ರಾಂಡಿಯನ್ನು ಒಂದೇ ಗುಟುಕಿನಲ್ಲಿ ಕುಡಿದು ಎದ್ದು ನಿಂತ. ಮುಂಜಾನೆಗಿಂತಲೂ ಈಗ ಅವನ ಬೆನ್ನು ಹೆಚ್ಚು ಬಾಗಿತ್ತು. ವಾತದ ಮೂಲಕ ಅವನು ಕುಳಿತ ಮೇಲೆ ಎದ್ದು ನಿಂತು ನಡೆಯುವುದು ಬಲು ಕಷ್ಟದ್ದಾಗುತ್ತಿತ್ತು. ಆತ ಭಾರವಾದ ಹೆಜ್ಜೆಗಳನ್ನೆತ್ತಿಡುತ್ತ "ಬಂದೆ ಬಂದೆ" ಎಂದ.

ಆರಾಮ ಕುರ್ಚಿಯಲ್ಲೊರಗಿಕೊಂಡು ಮೇಯರರು ಅವನ ಹಾದಿಯನ್ನೆ ಕಾಯುತ್ತಿದ್ದರು. ಸ್ಥೂಲಕಾಯದ, ದೊಡ್ಡ ದೊಡ್ಡ ಶಬ್ದಗಳನ್ನು ಪ್ರಯೋಗಿಸಿ ಮಾತನಾಡುವ ಚಾಪಲ್ಯವುಳ್ಳ ಈತ ಹಾಚ್‌ಕಾರ್ನನನ್ನು ಕಂಡೊಡನೆ "ಮ್ಯಾನವಿಲೆಯ ಮೇತ್ರ ಹೋಲ್‌ಬ್ರಿಕ್ ಬ್ಯುಝುವಿಲೆ ರಸ್ತೆಯಲ್ಲಿ ಕಳೆದುಕೊಂಡ ಚೀಲವನ್ನು ನೀವು ಎತ್ತಿಕೊಂಡಿದ್ದನ್ನು ಕಂಡವರಿದ್ದಾರೆ" ಎಂದರು.

ತನ್ನ ಮೇಲೆ ಸಂಶಯವುಂಟಾದದ್ದನ್ನು ಕೇಳಿ ಕಂಗಾಲಾದ ಆ ರೈತ ಭಯಮಿಶ್ರಿತ ಆಶ್ಚರ್ಯದಿಂದ ಮೇಯರರನ್ನು ನೋಡಿದ. "ನಾನು! ನಾನೇ! ನಾನು ಚೀಲವನ್ನು ಎತ್ತಿಕೊಂಡೆನೆ?"

"ಹೌದು."

"ದೇವರಾಣೆಯಾಗಿ – ನನಗೆ ಅದರ ವಿಷಯ ಏನೇನೂ ತಿಳಿಯದು."

"ಆದರೆ ಪ್ರತ್ಯಕ್ಷ ನೋಡಿದವರಿದ್ದಾರೆ."

"ನೋಡಿದರೆ? ಯಾರವರು ಹಾಗೆ ಹೇಳಿದವರು?"

"ಜೀನು ತಯಾರಿಸುವ ಮೇತ್ರ ಮಲಾಂಡೇನ್ ಹಾಗೆ ಹೇಳಿದ್ದಾನೆ."

ಆಗ ಮುದುಕ ಹಾಚ್‌ಕಾರ್ನನಿಗೆ ಬೆಳಗಿನ ಸಂಗತಿ ನೆನಪಿಗೆ ಬಂತು. ತನ್ನ ಮೇಲೆ ಸಂಶಯ ಉಂಟಾದ ಕಾರಣ ತಿಳಿಯಿತು. ಆತ ಸಿಟ್ಟಿನಿಂದ ಕೆಂಪಾಗಿ "ಮುಂಡೇಗಂಡ! ಆತ ನೋಡಿದನೇ? ಕೇಳಿ. ನಾನು ಈ ದಾರವನ್ನು ಎತ್ತಿಕೊಂಡಿದ್ದನ್ನು ಆತ ನೋಡಿದ್ದು ನಿಜ. ನೋಡಿ, ಇಲ್ಲಿದೆ ಮೇಯರರೇ" ಎನ್ನುತ್ತ ಕಿಸೆಯೊಳಗೆ ಹುಡುಕಾಡಿ ದಾರದ ತುಣುಕನ್ನು ಹೊರಗೆ ತೆಗೆದು ತೋರಿಸಿದ.

ಆದರೆ ಮೇಯರರು ನಂಬಲಾರದವರಂತೆ ತಲೆಯಲ್ಲಾಡಿಸಿದರು.

"ನಾಲ್ಕು ಜನರಲ್ಲಿ ಮರ್ಯಾದೆ ಗಳಿಸಿರುವ ಮೇತ್ರ ಮಲಾಂಡೇನ್ ಈ ದಾರದ ತುಣುಕನ್ನು ಚೀಲವೆಂದು ಭಾವಿಸಿಕೊಂಡ ಎಂಬ ನಿಮ್ಮ ಮಾತಿನಲ್ಲಿ ನನಗೆ ನೀವು ನಂಬಿಗೆ ಹುಟ್ಟಿಸಲಾರಿರಿ."

ಈಗ ಕೋಪ ಮಿತಿಮೀರಿದ ಆ ರೈತ ತನ್ನ ಪ್ರಾಮಾಣಿಕತೆಯನ್ನು ದೃಢಪಡಿಸಲೆಂಬಂತೆ ಪಕ್ಕಕ್ಕೆ ಉಗುಳಿ "ಮೇಯರರೇ, ನಾನು ಹೇಳುವುದು ದೇವರಷ್ಟೇ ಸತ್ಯ. ನನ್ನಾಣೆಯಾಗಿ ನಾನು ಹೇಳುವುದು ನಿಜ" ಎಂದ.

ಮೇಯರರು ಹೇಳಿದರು: "ಆ ವಸ್ತುವನ್ನು ಹೆಕ್ಕಿಕೊಂಡ ನಂತರ ಚೀಲದಿಂದ ಹಣವೇನಾ

ದರೂ ಕೆಳಗೆ ಬಿದ್ದಿದೆಯೆ ಎಂದು ನೋಡಲು ಧೂಳಿನಲ್ಲಿ ಕೆಲ ನಿಮಿಷಗಳ ವರೆಗೆ ಹುಡುಕಾಡಿ-ದಿರಂತೆ."

ಇಷ್ಟರಲ್ಲಿ ಕೋಪಾತಿರೇಕದಿಂದ ಮುದುಕನ ಶ್ವಾಸ ಕಟ್ಟುವಂತಾಗಿತ್ತು.

"ಏನು ಹೇಳುತ್ತಾರೆ? ಹೇಗೆ ಹೇಳುತ್ತಾರೆ? ಒಬ್ಬ ಪ್ರಾಮಾಣಿಕ ಮನುಷ್ಯನ ಹೆಸರು ಕೆಡಿ-ಸಲು . . ."

ಆದರೆ ಮುದುಕ ಹಾಚ್‌ಕಾರ್ನನ ನಿರಾಕ-ರಣೆ ವ್ಯರ್ಥವಾಯಿತು. ಒಬ್ಬರೂ ಅವನ ಮಾತು ನಂಬಲಿಲ್ಲ. ಆತನನ್ನು ಮಲಾಂಡೇನನ ಎದುರಿಗೆ ನಿಲ್ಲಿಸಿದರು. ಮಲಾಂಡೇನ್ ತನ್ನ ಮಾತನ್ನು ಒತ್ತಿ ಹೇಳಿದ. ಸತ್ಯವೆಂದು ಪ್ರಮಾಣ ಮಾಡಿದ. ಹಾಚ್‌ಕಾರ್ನ್ ಮತ್ತು ಮಲಾಂಡೇನ್ ಒಂದು ತಾಸಿನ ವರೆಗೆ ಪರಸ್ಪರ ಬೈದಾಡಿಕೊಂಡರು. ಹಾಚ್‌ಕಾರ್ನನನ್ನು ತಪಾಸಿಸಿದರು. ಅವನಲ್ಲಿ ಏನೂ ಹೊರಡಲಿಲ್ಲ.

ಮೇಯರರಿಗೆ ಏನೂ ತಿಳಿಯದಂತಾಯಿತು. ಕೊನೆಗೆ ಪಬ್ಲಿಕ್‌ಪ್ರಾಸಿಕ್ಯೂಟರರನ್ನು ವಿಚಾರಿಸಿ ಮುಂದಿನ ಕ್ರಮ ಕೈಕೊಳ್ಳುವುದಾಗಿ ತಿಳಿಸಿ ಅವರು ಹಾಚ್‌ಕಾರ್ನನನ್ನು ಬಿಡುಗಡೆಮಾಡಿ ದರು.

ಸುದ್ದಿ ಹಬ್ಬಿತು. ಮೇಯರರ ಕಚೇರಿಯಿಂದ ಹೊರಗೆ ಬಂದ ಹಾಚ್‌ಕಾರ್ನನನ್ನು ಜನ ಸುತ್ತುಗಟ್ಟಿ ಗಂಭೀರ ಭಾವದಿಂದ ಸಂಗತಿ ಯೇನು ಎಂದು ವಿಚಾರಿಸಿದರು. ಕೆಲವರು ಹುಡುಗಾಟಿಕೆ ಮಾಡಿದರು. ಹಾಚ್‌ಕಾರ್ನ್ ದಾರದ ತುಣುಕಿನ ಕಥೆ ಹೇಳಿದ. ಯಾರೂ ನಂಬಲಿಲ್ಲ. ಎಲ್ಲರೂ ನಕ್ಕರು.

ಹಾಚ್‌ಕಾರ್ನ್ ಹೊರಟ. ಹಾದಿಯಲ್ಲಿ ಭೆಟ್ಟಿಯಾದ ಮಿತ್ರರನ್ನು ನಿಲ್ಲಿಸಿಕೊಂಡು ತನಗೆ ಸಿಕ್ಕ ದಾರದ ತುಣುಕಿನ ಕಥೆಯನ್ನು ಹೇಳಿದ. ಕಿಸೆಗಳನ್ನು ತೋರಿಸಿದ. ತನ್ನ ನಿರಪರಾಧಿತ್ವ ವನ್ನು ಸಾರಿದ. ಅವರೆಲ್ಲ 'ಹ್ಹಾ! ಹ್ಹಾ! ಮುದಿ ನರಿ ನೀನು" ಎಂದು ಮುಂದೆ ನಡೆದರು.

ರಾತ್ರಿಯಾಯಿತು. ಹಾಚ್‌ಕಾರ್ನ್ ಮನೆಗೆ ಮರಳಬೇಕಾಗಿತ್ತು. ಆತ ತನ್ನ ಊರಿನ ಮೂವ ರೊಡನೆ ಹೊರಟಾಗ ಹಾದಿಯಲ್ಲಿ ತಾನು ದಾರದ ತುಣುಕನ್ನು ಹೆಕ್ಕಿದ ಸ್ಥಳವನ್ನು ತೋರಿ ಸಿದ. ಮನೆ ಮುಟ್ಟುವವರೆಗೂ ಆತ ಈ ವಿಷಯ ವನ್ನೇ ಕುರಿತು ಮಾತಾಡಿದ.

ಮರುದಿನ ಆತ ಬ್ರಿಯೂಟಿನ ಓಣಿಗಳನ್ನೆಲ್ಲ ಸುತ್ತಾಡಿ ಜನರಿಗೆ ಈ ಸಂಗತಿ ಹೇಳಿದ. ಕೇಳಿ ದವರು ಕುಹಕ ನಗೆ ನಕ್ಕರು. ಅಂದು ರಾತ್ರಿ ಯಷ್ಟು ಹೊತ್ತಿಗೆ ಮುದುಕ ಹಾಚ್‌ಕಾರ್ನ್ ಹಾಸಿಗೆ ಹಿಡಿಯುವಂತಾಯಿತು.

ಮೂರನೆಯ ದಿನ ಮಧ್ಯಾಹ್ನ ೧ ಗಂಟೆಯ ಸುಮಾರಿಗೆ ಮ್ಯಾನ್‌ವಿಲೆಯ ಬ್ರಿಟನ್ ಎಂಬಾತ ಹೋಲ್‌ಬ್ರಿಕ್‌ನ ಕಳೆದುಹೋದ ಚೀಲವನ್ನು ತಂದೊಪ್ಪಿಸಿದ. ತನಗದು ರಸ್ತೆಯಲ್ಲಿ ಸಿಕ್ಕಿ ತೆಂದೂ ಓದಲು ಬಾರದ ತಾನು ಅದನ್ನು ತನ್ನ ಯಜಮಾನನಿಗೆ ಒಯ್ದು ಕೊಟ್ಟೆನೆಂದೂ ಆತ ಹೇಳಿದ.

ಈ ಸುದ್ದಿ ಹಬ್ಬಿತು. ಹಾಚ್‌ಕಾರ್ನನಿಗೆ ಈ ವಿಷಯ ತಿಳಿಸಿದರು. ಆತ ಮತ್ತೆ ಓಣಿ ಓಣಿ ತಿರುಗುತ್ತ ಎಲ್ಲರಿಗೂ ತಾನು ಮೊದಲು ಹೇಳಿದ್ದ ಮಾತನ್ನೇ ಹೇಳತೊಡಗಿದ. ತನ್ನ ಮಾತು ನಿಜವಾದದ್ದಕ್ಕಾಗಿ ಅವನಿಗೆ ಹರ್ಷವಾಗಿತ್ತು.

"ಅಲಾ, ನನಗೆ ಮನಸ್ಸು ನೊಂದಿದ್ದು ಕಳ ವಿನ ಆರೋಪ ಬಂದಿದ್ದಕ್ಕಾಗಿ ಅಲ್ಲ, ಆದರೆ ಸುಳ್ಳು ಹೇಳಿದ ಆರೋಪ ಬಂದಿದ್ದಕ್ಕಾಗಿ. ಸುಳ್ಳು ಹೇಳುವವ ಎನಿಸಿಕೊಳ್ಳುವುದಕ್ಕಿಂತ ಘೋರವಾದದ್ದು ಇನ್ನೊಂದಿಲ್ಲ" ಎಂದನಾತ.

ಇಡೀ ದಿನ ಆತನಿಗೆ ಈ ದಾರದ ತುಣುಕಿನ ಕಥೆ ಹೇಳುವುದೇ ಕೆಲಸವಾಯಿತು. ಹಾದಿಯಲ್ಲಿ ಹೋಗಿ ಬರುವವರಿಗೆಲ್ಲ ಹೇಳುತ್ತಿದ್ದ. ಮದ್ಯದ ಅಂಗಡಿಯಲ್ಲಿ ಕುಡಿಯಲು ಬರುವವರಿಗೆ ಹೇಳು ತ್ತಿದ್ದ. ಅಪರಿಚಿತರನ್ನು ಮಾತಾಡಿಸಿ ಅವರಿಗೆ ಈ

ಕಥೆ ತಿಳಿಸುತ್ತಿದ್ದ. ಆತನ ಮನಸ್ಸು ಈಗ ಶಾಂತವಾಗಿದ್ದರೂ ಏನೊ ಒಂದು ಅಸ್ವಸ್ಥತೆ ಎನಿಸುತ್ತಿತ್ತು. ಜನ ಇವನ ಮಾತು ಕೇಳುವಾಗ ಏನೋ ಒಂದು ವಿನೋದವನ್ನು ಕೇಳುವವರಂತಿರುತ್ತಿದ್ದರು. ಅವರಿಗೆ ಇವನ ಮಾತಿನಲ್ಲಿ ನಂಬಿಕೆಯಾದಂತೆ ಕಾಣುತ್ತಿರಲಿಲ್ಲ. ತನ್ನ ಹಿಂದೆ ಜನ ತನ್ನನ್ನಾಡಿಕೊಳ್ಳುತ್ತಾರೆ ಎಂದು ಅವನಿಗೆ ಅನಿಸುತ್ತಿತ್ತು.

ಗೋಡರ್‌ವಿಲೆಯ ಮುಂದಿನ ಸಂತೆಗೆ ಆತ ಈ ಸಂಗತಿಯ ಚರ್ಚೆ ಮಾಡಲೆಂದೇ ಹೋದ. ಬಾಗಿಲಲ್ಲಿ ನಿಂತಿದ್ದ ಮಲಾಂಡೇನ್ ಇವನನ್ನು ಕಂಡೊಡನೆ ನಗತೊಡಗಿದ. ಯಾಕೊ? ಕ್ರಿಕ್ವಿಟೋಟದ ರೈತನೊಬ್ಬನೊಡನೆ ಹಾಚ್‌ಕಾರ್ನ್ ದಾರದ ತುಣುಕಿನ ಕಥೆ ಹೇಳತೊಡಗಿದಾಗ ಆತ ನಡುವೆಯೆ ಹಾಚ್‌ಕಾರ್ನನ ಹೊಟ್ಟೆ ಚಪ್ಪರಿಸಿ "ಎಲಾ! ಮುದಿನರಿಯೆ!'' ಎಂದು ಮುಂದೆ ಹೋಗಿಬಿಟ್ಟ.

ಹಾಚ್‌ಕಾರ್ನನಿಗೆ ಸಂದಿಗ್ಧಕ್ಕಿಟ್ಟುಕೊಂಡಿತು. ಅಂ! ತನ್ನನ್ನೇಕೆ ಮುದಿನರಿ ಎನ್ನುತ್ತಾರೆ?

ಹೋಟಲಿನಲ್ಲಿ ಊಟಕ್ಕೆ ಕುಳಿತಾಗ ಆತ ದಾರದ ತುಣುಕಿನ ಪ್ರಸ್ತಾಪವೆತ್ತಿದ. ಒಬ್ಬ ಕುದುರೆ ವ್ಯಾಪಾರಿ, ''ಸಾಕು ಸಾಕು. ಮುದಿ ಠಕ್ಕ, ನಿನ್ನ ದಾರದ ತುಣುಕಿನ ಕಥೆಯನ್ನೆಲ್ಲ ಬಲ್ಲೆ,'' ಎಂದ.

ಹಾಚ್‌ಕಾರ್ನ್ ತೊದಲುತ್ತ ''ಆದರೆ ಚೀಲ ಬೇರೆಡೆಗೇ ಸಿಕ್ಕಿದೆಯಲ್ಲ!'' ಎಂದ.

ಕುದುರೆ ವ್ಯಾಪಾರಿ ಅಂದ: "ಸಾಕು ಮಾಡು ಅಜ್ಜಾ. ಒಬ್ಬನಿಗೆ ಸಿಗುತ್ತದೆ. ಇನ್ನೊಬ್ಬ ತಂದು ಕೊಡುತ್ತಾನೆ. ಅಲ್ಲವೆ. ಹ್ಹಾ. ಹ್ಹಾ."

ಮುದುಕ ಹಾಚ್‌ಕಾರ್ನ್ ತಬ್ಬಿಬ್ಬಾದ. ಅವನಿಗೆ ಅರ್ಥವಾಯಿತು. "ಬೇರೊಬ್ಬನ ಮೂಲಕ ಚೀಲವನ್ನು ತಿರುಗಿ ಒಪ್ಪಿಸಿದೆ ಎಂದು ಜನ ತಿಳಿದಿದ್ದಾರೆ" ಎಂದು ಅವನಿಗೆ ಗೊತ್ತಾಯಿತು. ಆತ ನಿರಾಕರಿಸಲು ಪ್ರಯತ್ನಿಸಿದ. ಎಲ್ಲರೂ ನಕ್ಕುಬಿಟ್ಟರು.

ಊಟ ಮುಗಿಸುವುದು ಅವನಿಂದಾಗಲಿಲ್ಲ. ಜನರ ಉಪಹಾಸದ ಅಸಹ್ಯ ಧ್ವನಿ ಕಿವಿಯಲ್ಲಿ ಧುಮುಧುಮಿಸುತ್ತಿದ್ದಂತೆ ಆತ ಅಲ್ಲಿಂದೆದ್ದು ನಡೆದ. ಆತ ಕೋಪದಿಂದ ಉರಿಯುತ್ತ ಮನೆಗೆ ಹೋದ. ತನ್ನ ಮೇಲೆ ಬಂದಿರುವ ಆರೋಪಕ್ಕೆ ತಾನು ತನ್ನ ಸ್ವಭಾವಸಹಜವಾದ ಗತ್ತುಗಾರಿಕೆಯ ಮೂಲಕ ಅರ್ಹನಾಗಿದ್ದೇನೆ, ಹಾಗೆ ಮಾಡಿ ಜಂಭ ಕೊಚ್ಚಿಕೊಳ್ಳುವ ಜಾತಿಯವ ತಾನು ಎಂಬ ಸತ್ಯದ ಅರಿವು ಅವನಿಗಿದ್ದುದರಿಂದ ಅವನಿಗೆ ಇನ್ನಿಷ್ಟು ತಾಪವೆನಿಸುತ್ತಿತ್ತು. ಈಗಾತನಿಗೆ ತನ್ನ ನಿರಪರಾಧಿತ್ವವನ್ನು ಮನವರಿಕೆ ಮಾಡಿಕೊಡುವುದು ಅಸಾಧ್ಯವಾಗಿತ್ತು. ಏಕೆಂದರೆ ಅವನ ಮೋಸಗಾರಿಕೆಯ ಸ್ವಭಾವ ಎಲ್ಲರಿಗೂ ಪರಿಚಿತವಾದದ್ದಾಗಿತ್ತು. ವ್ಯರ್ಥ ಸಂಶಯಕ್ಕೊಳಗಾದೆನಲ್ಲ ಎಂದು ಅವನ ಮನಸ್ಸು ಚಡಪಡಿಸಿತು.

ಆತ ಮತ್ತೆ ತನ್ನ ಕತೆ ಹೇಳತೊಡಗಿದ. ನಿತ್ಯವೂ ಅವನ ಕಥೆ ಉದ್ದವಾಗುತ್ತ ನಡೆಯಿತು. ಹೊಸ ಹೊಸ ಆಣೆಗಳನ್ನು ಅವನು ಮಾಡತೊಡಗಿದ. "ಇವೆಲ್ಲ ಸುಳ್ಳು ಹೇಳುವವನ ವಾದಗಳು" ಎಂದು ಜನ ಅನ್ನುತ್ತಿದ್ದರು.

ಹಾಚ್‌ಕಾರ್ನ್ ಮನಸ್ತಾಪದಿಂದ ಕೊರಗತೊಡಗಿದ. ತನ್ನ ನಿರಪರಾಧಿತ್ವವನ್ನು ಸಿದ್ಧಪಡಿಸುವ ಹವ್ಯಾಸದಲ್ಲಿ ಆತ ಸವೆಯತೊಡಗಿದ.

ಜನ ಈಗ ಮೋಜಿಗಾಗಿ ಅವನನ್ನು 'ದಾರದ ತುಣುಕಿನ ಕಥೆ' ಹೇಳಲು ಒತ್ತಾಯಿಸುತ್ತಿದ್ದರು. ತಿಂಗಳೆರಡು ತಿಂಗಳಲ್ಲಿ ಹಾಚ್‌ಕಾರ್ನ್ ಹಾಸಿಗೆ ಹಿಡಿದ.

ತುಸು ದಿನಗಳಲ್ಲಿಯೆ ಆತ ಸತ್ತುಹೋದ. ಸಾಯುವ ಮುನ್ನ ಸನ್ನಿ ಹಿಡಿದಾಗ "ಬರೇ ದಾರದ ತುಣುಕು. ದಾರದ ತುಣುಕು. ಇಲ್ಲಿದೆ ನೋಡಿ ಮೇಯರರೇ" ಎಂದಾತ ಬಡಬಡಿಸುತ್ತಿದ್ದ.

*

ನಿಮ್ಮ ಶಬ್ದ ಭಾಂಡಾರ ಬೆಳೆಯಲಿ

ಶಬ್ದಭಾಂಡಾರವು ಹಣದ ಭಾಂಡಾರಕ್ಕಿಂತಲೂ ಅಮೂಲ್ಯವಾಗಿದೆ

ಇಲ್ಲಿ ಪ್ರತಿ ತಿಂಗಳು ಕೆಲವು ಶಬ್ದಗಳನ್ನು ಪರಿಚಯ ಮಾಡಿ ಕೊಡಲಾಗುವುದು. ಆಯಾ ಶಬ್ದದ ಮುಂದೆ ನಾಲ್ಕು ಅರ್ಥಗಳನ್ನು ಕೊಟ್ಟದ್ದು, ಅವುಗಳಲ್ಲಿ ಒಂದು ಮಾತ್ರ ಸರಿಯಾಗಿರುತ್ತದೆ. ನಿಮಗೆ ಸರಿಯೆನಿಸಿದ ಅರ್ಥವನ್ನು ಮೊದಲು ಆರಿಸಿಕೊಳ್ಳಿರಿ. ಆ ಮೇಲೆ ಇದರ ಬೆನ್ನಿನ ಪುಟ ನೋಡಿರಿ. ಅಲ್ಲಿ ಸರಿಯಾದ ಅರ್ಥಗಳನ್ನು ವಿವರಿಸಿದೆ.

೧. ಸುಷಮೆ

(ಅ) ಕ್ಷಮೆ (ಆ) ಒಳ್ಳೇ ಶೀಲದವಳು (ಇ) ಅಮಾವಾಸ್ಯೆ (ಈ) ಲಾವಣ್ಯ

೨. ಏಡಿಸು

(ಅ) ಎಬ್ಬಿಸು (ಆ) ಏಡಿ ಹಿಡಿ (ಇ) ಹಾಸ್ಯಮಾಡು (ಈ) ಹಾರಿಸು

೩. ದ್ರುಷ್ಟಾರ

(ಅ) ಆತ್ಮಜ್ಞಾನಿ (ಆ) ಧೈರ್ಯಶಾಲಿ (ಇ) ದುಷ್ಟ (ಈ) ಕುರುಡ

೪. ನಿರ್ಲಿಪ್ತ

(ಅ) ನೌಕರ (ಆ) ಸಂಬಂಧಬಿಟ್ಟ (ಇ) ಶುದ್ಧ (ಈ) ಕಳೆದು ಹೋದ

೫. ಪರುಷ

(ಅ) ಸೋಂಕು (ಆ) ಕೊಡಲಿ (ಇ) ಸಂತೋಷ (ಈ) ಒರಟು

೬. ಅವಂಧ್ಯ

(ಅ) ಸಫಲ (ಆ) ಕೀಳು (ಇ) ಸಾವಿಲ್ಲದ (ಈ) ಬಿಡುಗಡೆಯಾದ

೭. ವರೇಣ್ಯ

(ಅ) ಬರಣಿ (ಆ) ಪ್ರಿಯತಮ (ಇ) ಶ್ರೇಷ್ಠ (ಈ) ಅನಿಷ್ಟ

೮. ವಿದಲಿತ

(ಅ) ಎರಡು ದಳಗಳಿರುವ (ಆ) ಹರಿದ (ಇ) ನಡೆಯುವ (ಈ) ತೆಗೆದುಕೊಂಡ

೯. ಹಸುಳೆ

(ಅ) ಹುಲ್ಲು (ಆ) ಹುಚ್ಚು (ಇ) ಸಣ್ಣ ಮಗು (ಈ) ಆಕಳು

೧೦. ಸುನಾವಣೆ

(ಅ) ವಿವರಿಸುವುದು (ಆ) ಸುಣ್ಣ ಬಳಿಯುವುದು (ಇ) ಬಣ್ಣದ ಮಣೆ (ಈ) ದೋಣಿ ನಡೆಸುವಿಕೆ

೧೧. ಪ್ರಣೀತ

(ಅ) ಮಣಿ (ಆ) ಮಾಡಿದ (ಇ) ಹೊಳೆಯುವ (ಈ) ನೀತಿವಂತ

೧೨. ಪ್ರಣೇತ

(ಅ) ಪ್ರಾಣಕ್ಕೆ ಸಂಬಂಧಿಸಿದ (ಆ) ಪಣತೊಟ್ಟ (ಇ) ಪಣತಿ ಹಿಡಿದ (ಈ) ಮುಂದಾಳು

'ಶಬ್ದಭಾಂಡಾರ'ದ ಸರಿಯಾದ ಅರ್ಥಗಳು

೧. **ಸುಷಮೆ** (ಈ) ಲಾವಣ್ಯ, ಪರಮ-ಸೌಂದರ್ಯ, ಚೆಲುವು. [ಸಂ.]

೨. **ಏಡಿಸು** (ಇ) ಹಾಸ್ಯಮಾಡು; ತೆಗಳು, ಹೀನೈಸಿ ಮಾತಾಡು. ಉದಾ— ಅವ ನನ್ನು ಬೆರಳು ತೋರಿಸಿ ಏಡಿಸಿದನು. [ಕನ್ನಡ]

೩. **ದ್ರಷ್ಟಾರ** (ಅ) ಆತ್ಮಜ್ಞಾನಿ, ಜ್ಞಾನ ದೃಷ್ಟಿಯುಳ್ಳವ, ಋಷಿ. ಉದಾ— ಈ ಕವಿ ಕವಿಮಾತ್ರವಲ್ಲದೆ ದ್ರಷ್ಟಾರನೂ ಆಗಿದ್ದಾನೆ. [ಸಂ. ದ್ರಷ್ಟಾ = ಕಾಣುವವ]

೪. **ನಿರ್ಲಿಪ್ತ** (ಅ) ಸಂಬಂಧ ಹಚ್ಚಿಕೊ-ಳ್ಳದ; ಸಂಸಾರ ಬಂಧನವಿಲ್ಲದ; ನಿರ್ವಿ ಕಾರ. ಉದಾ— ಈ ಎಲ್ಲ ಕಷ್ಟಗಳ ನಡುವೆಯೂ ಅವನು ನಿರ್ಲಿಪ್ತನಾಗಿ ದ್ದನು. [ಸಂ. ನಿರ್ = ಇಲ್ಲ, ಲಿಪ್ತ = ಅಂಟಿದ-]

೫. **ಪರುಷ** (ಈ) ಒರಟು, ಕಠೋರ, ನಿಷ್ಠುರ; ಬಿರುಸು ಮಾತು; ಮುಟ್ಟಿ ದ್ದನ್ನು ಚಿನ್ನ ಮಾಡುವ ಕಲ್ಲು, ಸ್ಪರ್ಶ ಶಿಲೆ. [ಸಂ.]

೬. **ಅವಂಧ್ಯ** (ಅ) ಸಫಲ, ಎಂದೂ ನಿಷ್ಪ್ರಯೋಜಕವಾಗದ; ಬಂಜೆಯುಲ್ಲದ. ಉದಾ— ಅವನ ಅವಂಧ್ಯ ಪರಾಕ್ರ ಮದ ಮುಂದೆ ಯಾರ ಆಟವೂ ಸಾಗ ಲಿಲ್ಲ. [ಸಂ. ಅ = ಅಲ್ಲ, ವಂಧ್ಯಾ = ಬಂಜೆ]

೭. **ವರೇಣ್ಯ** (ಇ) ಶ್ರೇಷ್ಠ, ಮುಖ್ಯ, ಪ್ರಧಾನ; ಅಪೇಕ್ಷಿಸಲರ್ಹ. ಉದಾ— ಗುರುವರೇಣ್ಯ. [ಸಂ. ವರ = ಮೇಲಿನ ಎಂಬುದರಿಂದ]

೮. **ವಿದಲಿತ** (ಅ) ಹರಿದ, ಒಡೆದುಹೋದ, ಛಿದ್ರವಾದ, ಚೂರುಚೂರಾದ. ಉದಾ— ಅವನ ಹೃದಯು ನಾನಾ ಚಿಂತೆಗಳಿಂದ ವಿದಲಿತವಾಗಿತ್ತು. [ಸಂ.]

೯. **ಹಸುಳೆ** (ಇ) ಸಣ್ಣಮಗು, ಕೂಸು. [ಕನ್ನಡ]

೧೦. **ಸುನಾವಣೆ** (ಅ) ವಿವರಣೆ; ನ್ಯಾಯ-ಸ್ಥಾನದಲ್ಲಿ ಅರ್ಜಿ ಮೊದಲಾದವನು ಓದುವುದು ಇಲ್ಲವೆ ವಿವರಿಸುವುದು, ಹೇರಿಂಗು. ಉದಾ— ಅವನ ಸುನಾ ವಣೆಯನ್ನೆಲ್ಲ ಕೇಳಿದ ಮೇಲೆ ನನಗೆ ಸಮಾಧಾನವಾಯಿತು. [ಮರಾಠಿ-ಸುನಾ ವಣಿ – ಸುನ = ಕೇಳು ಎಂಬುದರಿಂದ]


೧೧. **ಪ್ರಣೀತ** (ಅ) ಮಾಡಿದ; ಬರೆದ; ಸಾಗಿಸಿದ; ಸಾಧಿಸಿದ. ಉದಾ— ಈ ಗ್ರಂಥ ವ್ಯಾಸಪ್ರಣೀತವಾದುದು ಅಂದರೆ ವ್ಯಾಸಋಷಿ ಬರೆದದ್ದು. [ಸಂ. ಪ್ರ = ಬಹಳವಾಗಿ, ನೀತ = ಒಯ್ಯಲ್ಪಟ್ಟ.]

೧೨. **ಪ್ರಣೇತ** (ಈ) ಮುಂದಾಳು, ನೇತಾರ, ಮುಂದೆ ನಡೆಸುವವ [ಸಂ. ಪ್ರ = ಮುಂದೆ, ನೇತಾ = ಒಯ್ಯುವವ].

ನಿಮ್ಮ ಶಬ್ದಶಕ್ತಿಯ ತರಗತಿ


ನೀವು ಎಷ್ಟು ಶಬ್ದಗಳಿಗೆ ಅರ್ಥ ಅರಿಸಿದ್ದು ಸರಿಯಾಗಿದೆಯೆಂದು ಎಣಿಸಿ ಕೆಳಗಿನಂತೆ ನಿಮ್ಮ ಶಬ್ದಶಕ್ತಿಯ ತರಗತಿಗಳನ್ನು ತಿಳಿಯಿರಿ.

೬—೮ ಸರಿಯಿದ್ದರೆ	..	ಸಾಧಾರಣ
೯—೧೦ "	...	ಉತ್ತಮ
೧೧—೧೨ "	....	ಅತ್ಯುತ್ತಮ



ಬ್ರಿಟಿಶರ ನೀತಿ ಈ ಹಿಮಾಲಯ ರಾಜ್ಯದೊಡನೆ
ನಮ್ಮ ಸಂಬಂಧವನ್ನು ಕೆಡಿಸಿದೆ

ಸಿಕ್ಕಿಂ ಮತ್ತು ಭಾರತ



ಅಮೇರಿಕ ಏಷ್ಯೋ ದೇಶಗಳಿಗೆ ಆರ್ಥಿಕ, ತಾಂತ್ರಿಕ ಮೊದಲಾದ ಸಹಾಯಗಳನ್ನು ಮಾಡುತ್ತಿದ್ದರೂ ಆ ದೇಶಗಳಲ್ಲಿ ಅದು ಜನಪ್ರಿಯವಾಗದಿರುವುದು ಒಂದು ವಿಶೇಷ. ಕೊಡದೆ ಕೆಟ್ಟವರೆನಿಸಿಕೊಳ್ಳುವುದು ಸಾಮಾನ್ಯ ಮಾತಾಗಿದ್ದರೂ ಇಲ್ಲಿ ಕೊಟ್ಟೂ ಕೆಟ್ಟ ಹೆಸರು ಬರುವಂತಿದೆ ಪರಿಸ್ಥಿತಿ. ಹಿಂದುಳಿದ ರಾಷ್ಟ್ರಗಳಿಗೆ ಸಹಾಯ ಅವಶ್ಯವಿದ್ದರೂ ಸಹಾಯ ಮಾಡಲು ಮುಂದೆ ಬರುವವರನ್ನು ಅದು ಪೂರ್ಣ ನಂಬಲಾರದಂಥ ಪರಿಸ್ಥಿತಿ ಇಂದು ಜಗತ್ತಿನಲ್ಲಿದೆ. ಈ ಮಾತು ಇಂದು ಸಿಕ್ಕಿಂ ರಾಜ್ಯದ ವಿಚಾರದಲ್ಲಿ ಭಾರತಕ್ಕೂ ಅನ್ವಯಿಸುತ್ತಿದೆ.

ಸಿಕ್ಕಿಮ್ ಅತಿ ಚಿಕ್ಕರಾಜ್ಯ. ೨,೮೦೦ ಚದುರು ಮೈಲು ವಿಸ್ತೀರ್ಣವಾಗಿರುವ ಈ ರಾಜ್ಯದ ಜನಸಂಖ್ಯೆ ಕೇವಲ ೧,೫೦,೦೦೦. ಈ ರಾಜ್ಯದಲ್ಲಿ ಸರಿಯಾದ ಜನಗಣತಿ ನಡೆಯದೆ ಎಷ್ಟೋ ಕಾಲವಾಗಿ ಹೋಗಿದೆ. ಇದರ ರಾಜಧಾನಿಯಾದ ಗಂಗಟೋಕದ ಜನಸಂಖ್ಯೆ ಬರೀ ೭,೦೦೦ ಮಾತ್ರ. ಆದರೆ ಭಾರತದ ದೃಷ್ಟಿಯಿಂದ ಈ ಪುಟ್ಟ ರಾಜ್ಯಕ್ಕೆ ವಿಶೇಷ ಮಹತ್ವವಿದೆ. ತಿಬೇಟಿನ ರಾಜಧಾನಿ ಲ್ಹಾಸಾಕ್ಕೆ ಭಾರತದಿಂದ ಹೋಗುವ ಮಾರ್ಗ ಸಿಕ್ಕಿಮ್‌ನಲ್ಲಿ ಹಾಯ್ದೇ ಹೋಗಬೇಕು; ಮತ್ತು ಈ ದೇಶ, ಭಾರತ, ನೇಪಾಳ ಹಾಗೂ ತಿಬೇಟಗಳ ನಡುವೆ ಒಂದು ಬೆಣೆಯಂ

"ಕಾಮನ್‌ವೆಲ್ತ್" ಆಧಾರದಿಂದ

ತಿದೆ. ಭೂತಾನದ ಮತ್ತು ಭಾರತದ ಪ್ರದೇಶಗಳಲ್ಲಿ ಕೆಲವು ತನ್ನದೆಂದು ಚೀನ ಹಟ ಸಾಧಿಸುತ್ತಿರುವುದರಿಂದ ಭಾರತದ ಸಂರಕ್ಷಣೆಯ ದೃಷ್ಟಿಯಿಂದ ಸಿಕ್ಕಿಮ್‌ಗೆ ತುಂಬ ಮಹತ್ವವಿದೆ. ಹಿಂದೆ ಬ್ರಿಟಿಶರ ಆಶ್ರಿತ ರಾಜ್ಯವಾಗಿದ್ದ ಸಿಕ್ಕಿಂ ಈಗ ಸ್ವತಂತ್ರ ಭಾರತದ ಆಶ್ರಿತ ರಾಜ್ಯವಾಗಿದೆ. ಚೀನದ ಚೌಎನ್ ಲಾಯ್‌ರು ಸಿಕ್ಕಿಮ್‌ದೊಡನೆ ತಮಗೆ ಗಡಿ ತಂಟೆಯಿಲ್ಲವೆಂದೂ ಭಾರತ ಮತ್ತು ಸಿಕ್ಕಿಮ್‌ಗಳ ಸಂಬಂಧವನ್ನು ತಾವು ಮನ್ನಿಸುವುವೆಂದು ಹೇಳಿದ್ದರೂ ಚೀನ ಇಂದು ಭಾರತದ ಕೆಲ ಗಡಿ ಪ್ರದೇಶವನ್ನಾಕ್ರಮಿಸಿ ಕುಳಿತಿರುವುದನ್ನು ಕಂಡಾಗ ಚೀನದ ಮಾತುಗಳಲ್ಲಿ ನಂಬಿಗೆಯಿಡಲು ಬಾರದಂತಾಗಿದೆ. ಸಿಕ್ಕಿಂ ಭಾರತ ಪ್ರದೇಶವಲ್ಲ. ಭಾರತದ ಈ ಆಶ್ರಿತ ರಾಜ್ಯದ ಆಂತರಿಕ ಪರಿಸ್ಥಿತಿಯು ಸಾಕಷ್ಟು ಭದ್ರವಾಗಿಲ್ಲ. ಅಲ್ಲಿರುವ ಭಾರತೀಯ ಕಮ್ಯುನಿಸ್ಟರು ಸಾಕಷ್ಟು ಗೊಂದಲ ಎಬ್ಬಿಸಿ ಪ್ರಜಾಪ್ರಭುತ್ವ ಮತ್ತು ಸ್ವಾತಂತ್ರ್ಯಗಳ ಹೆಸರಿನಲ್ಲಿ ಚೀನವು ಹಸ್ತಕ್ಷೇಪ ಮಾಡುವಂತೆ ಮಾಡಬಲ್ಲರು.

೧೯೪೯ರಲ್ಲಿ ಗಂಗಟೋಕಿನಲ್ಲಿ ಸಿಕ್ಕಿಂ ರಾಜರ ನಿರಂಕುಶ ಪ್ರಭುತ್ವದ ವಿರುದ್ಧ ಕ್ರಾಂತಿಯಾಯಿತು. ನೇಪಾಳಿಗಳೂ ಅನೇಕ ಬೌದ್ಧ ಧರ್ಮದವರೂ ಅರಮನೆಯನ್ನು ಸುಡುವ ಅಂಜಿಕೆ ಹಾಕಿದರು. ಆದರೆ ಬಂಡುಗಾರರು ಅಶಿಕ್ಷಿತರೂ ಅಸಘಂಟಿತರೂ ಆಗಿದ್ದುದರಿಂದ ಅವರು ಎಂಥ ಸರಕಾರವನ್ನೆ ಆಗಲಿ. ರಚಿಸುವುದು ಸಾಧ್ಯವಿರಲಿಲ್ಲ. ಸಿಕ್ಕಿಮ್‌ದ ರಾಜ ಸಿಂಹಾಸನ ತ್ಯಾಗಮಾಡಿ ಅಲ್ಲಿದ್ದ ಭಾರತದ ರೆಸಿಡೆನ್ಸಿ ಭವನದಲ್ಲಿ ಆಶ್ರಯ ಪಡೆದ. ಸಿಕ್ಕಿಮ್ ಕಾಂಗ್ರೆಸ್ಸು ಸರಕಾರ ರಚಿಸಿ ದೇಶದಲ್ಲಿ ಶಾಂತಿ ಸುವ್ಯವಸ್ಥೆಗಳನ್ನು ಸ್ಥಾಪಿಸಲು ಸರ್ವಥಾ ಸಮರ್ಥವಿಲ್ಲವೆಂದು ಕಂಡುಕೊಂಡು ಭಾರತ ಸರಕಾರ ಮನಸ್ಸಿಲ್ಲದಿದ್ದರೂ ಅನಿವಾರ್ಯವಾಗಿ ಕ್ರಾಂತಿಯನ್ನು ಹತ್ತಿಕ್ಕಿ ರಾಜನನ್ನು ಮತ್ತೆ ಪಟ್ಟಕ್ಕೇರಿಸಬೇಕಾಯಿತು.

ಆದರೆ ಈ ಪ್ರತಿಗಾಮಿ ಹೆಜ್ಜೆಯ ಮೂಲಕ ಕೆಲ ಸುಧಾರಣೆಗಳನ್ನು ಮಾಡುವುದು ಸಾಧ್ಯವಾಯಿತು. ಕೆಲ ನಾಮಕರಣ ಮಾಡಿದ ಸದಸ್ಯರು ಮತ್ತು ಧಾರ್ಮಿಕ ತಳಹದಿಯ ಮೇಲೆ ಆರಿಸಿದ ಕೆಲವು ಸದಸ್ಯರ ಒಂದು ಸಲಹಾ ಸಮಿತಿಯನ್ನು ರಚಿಸಲು ಮತ್ತು ಭಾರತವು ಕಳಿಸುವ ಒಬ್ಬ ದಿವಾನನ್ನು ನೇಮಿಸಿಕೊಳ್ಳಲು ರಾಜ ಒಪ್ಪಿದ. ೧೯೫೦ ರಲ್ಲಿ ಆದ ಹೊಸ ಕರಾರಿನಂತೆ ಭಾರತ-ಸಿಕ್ಕಿಂಗಳ ಬಾಂಧವ್ಯ ಬಲಿತು ಭಾರತದ ಮೇಲೆ ಹೆಚ್ಚು ಹೊಣೆ ಬಿದ್ದಿತು.

ಈಗ ಕಾಲ ಬದಲಾಗಿದೆ. ಸಿಕ್ಕಿಮ್‌ದ ರಾಜರು ಎಷ್ಟೇ ಮುಂದುವರಿಯಲಿ, ಅವರು ಕೂಡ ಪ್ರಜಾಪ್ರಭುತ್ವಕ್ಕೆ ತಲೆ ಬಾಗಬೇಕಾಗುವುದು, ಇಲ್ಲವಾದರೆ ಕ್ರಾಂತಿ ಅವರನ್ನು ಕೊಚ್ಚಿಕೊಂಡು ಹೋಗುವುದು ಎಂದು ಭಾರತ ಬಲ್ಲುದು.

ಈ ದೃಷ್ಟಿಯಿಂದ ಭಾರತ ಅಲ್ಲಿ ಕಾರ್ಯಕ್ರಮಗಳನ್ನು ಹಾಕಿಕೊಳ್ಳುತ್ತಿದೆ. ಆದರೆ ಈ ಕ್ರಮಗಳಿಂದ ಅಲ್ಲಿಯ ರಾಜ ಅಂಜಿಕೆ ಮತ್ತು ಸಂಶಯಗಳಿಂದ ಭಾರತವನ್ನು ನೋಡುವಂತಾಗಿದೆ. ಬ್ರಿಟಿಶ ಸರಕಾರ ಹಿಂದೆ ಸಿಕ್ಕಿಂ ರಾಜರನ್ನು ಅಪ್ರಬುದ್ಧ ಮಕ್ಕಳಂತೆ ನಡೆಸಿಕೊಂಡಿದ್ದರ ನೆನಪು ಇನ್ನೂ ಇರುವ ಸಿಕ್ಕಿಂ ರಾಜರಿಗೆ ಭಾರತದ ಬಗ್ಗೆಯೂ ಸ್ನೇಹ—ವಿಶ್ವಾಸಗಳಿಲ್ಲ. ಭಾರತ ತಮಗೆ ಹಿತೋಪದೇಶ ಮಾಡುವುದು ಅವರಿಗೆ ಮೆಚ್ಚಿಗೆಯಾಗಿಲ್ಲ. ಭಾರತ ಎಷ್ಟೇ ಕೌಶಲ್ಯದಿಂದ ಹೆಜ್ಜೆಯಿಟ್ಟರೂ ಒಂದಿಲ್ಲೊಂದು ದಿನ ಘರ್ಷಣೆ ಬರತಕ್ಕದ್ದೇ. ಏಕೆಂದರೆ ಭಾರತ ಸಿಕ್ಕಿಮ್‌ಗಿಂತ ಬಲು ದೊಡ್ಡ ದೇಶ. ಭಾರತದ ರಾಜ-ಮಹಾರಾಜರ ಅವಸ್ಥೆಯೇನಾಯಿತು ಎಂಬುದನ್ನು ಸಿಕ್ಕಿಂ ರಾಜರು ಪ್ರತ್ಯಕ್ಷ ಕಂಡವರು. ಭಾರತದ ಜನತೆ ಒಂದಿಲ್ಲೊಂದು ದಿನ ತಮ್ಮನ್ನು ಭಾರತದ ಇತರ ರಾಜ ಮಹಾರಾಜರಂತೆ ಪದಚ್ಯುತ ಮಾಡಲು ಕೇಳಿಕೊಳ್ಳಬಹುದು ಎಂದು ಅವರಿಗೆ ಅಂಜಿಕೆಯಿದೆ. ಸಿಕ್ಕಿಂ ಪ್ರವೇಶಿ

ಸಲು ಅಪ್ಪಣೆ ಚೀಟಿಯನ್ನು ಕೊಡುವ ಅಧಿಕಾರ ತಮಗಿರದೆ ಭಾರತ ಸರಕಾರಕ್ಕಿದೆ ಎಂಬ ಮಾತಿನಿಂದಲೇ ಸಿಕ್ಕಿಂ ರಾಜರ ಅಭಿಮಾನಕ್ಕೆ ಪೆಟ್ಟು ಬಿದ್ದಿದೆ. ಬ್ರಿಟಿಶರ ಕಾಲದಲ್ಲಿ ದಿಲ್ಲಿಯಲ್ಲಿರುವ ವೈಸರಾಯರು ಸಿಕ್ಕಿಮ್‌ನ ವಿರುದ್ಧ ಒಳಸಂಚನ್ನು ಪ್ರಚೋದಿಸುತ್ತಿದ್ದರು ಎಂದು ನಂಬುವ ಸಿಕ್ಕಿಂ ರಾಜ ದರಬಾರು ಭಾರತದ ವಿಚಾರದಲ್ಲಿ ಅಂಥದೇ ಭಾವನೆಯನ್ನು ಇಟ್ಟುಕೊಂಡಿದೆ.

೧೯೪೪ ರಲ್ಲಿ ಬ್ರಿಟಿಶರು ಸಿವಿಲ್ ಸರ್ವಿಸಿನ ಸಿಕ್ಕಿಂ ಗ್ಯಾಜೆಟಿಯರಿನಲ್ಲಿ "ಭಾರತದಲ್ಲಿಯಂತೆ ಸಿಕ್ಕಿಮ್‌ದಲ್ಲಿಯೂ ಹಿಂದೂ ಧರ್ಮ ಬೌದ್ಧಧರ್ಮವನ್ನು ಹೊಡೆದೋಡಿಸುವುದು. ಲಾಮಾನ ಪ್ರಾರ್ಥನಾ ಚಕ್ರಗಳ ಸ್ಥಳವನ್ನು ಬ್ರಾಹ್ಮಣರ ಮಂತ್ರ ತಂತ್ರಗಳು ಆಕ್ರಮಿಸುವವು. ಹೀಗೆ ಕುಲ ಮತ್ತು ಧರ್ಮಗಳು ನಮ್ಮ ಸಿಕ್ಕಿಂ ಸಮಸ್ಯೆಯನ್ನು ತಮ್ಮದೇ ಆದ ರೀತಿಯಲ್ಲಿ ಒಗೆಹರಿಸಿ ಕೊಡುವವು. ಈ ಶಕ್ತಿಗಳ ಕಾರ್ಯಕ್ಕೆ ನೇಪಾಳ ಅಥವಾ ತಿಬೇಟಗಳಿಂದ ಅಡ್ಡಿ ಬಾರದಂತೆ ನಾವು ನೋಡಿಕೊಂಡರೆ ಸಾಕು" ಎಂದು ಬರೆದಿದ್ದರು. ಶತ್ರು ಚೀನವು ಬಾಗಿಲಿಗೆ ಬಂದು ನಿಂತಿರುವಾಗ ಸಿಕ್ಕಿಮ್‌ನ ಮೇಲೆ ಪ್ರಭುತ್ವವು ಅಗತ್ಯವಾಗಿರುವ ಭಾರತವು ಕೂಡ ಇದೇ ಲೆಕ್ಕ ಹಾಕಿದೆಯೆಂದು ಸಿಕ್ಕಿಮ್‌ದ ಇಂದಿನ ರಾಜನ ನಂಬಿಗೆಯಿದೆ. ಸಿಕ್ಕಿಮ್ ಪರಿಸ್ಥಿತಿಯೂ ಹಾಗೆಯೆ ಇದೆ. ಸಿಕ್ಕಿಮ್ ಪ್ರಜೆಗಳಲ್ಲಿ ನೂರಕ್ಕೆ ೭೫ರಷ್ಟು ಜನ ನೇಪಾಳೀಯರು. ಯಾರೂ ಬುದ್ಧಿಪೂರ್ವಕವಾಗಿ ಈ ವಲಸೆಗೆ ಕಾರಣವಾಗಿಲ್ಲ. ಪಾಸ್‌ಪೋರ್ಟುಗಳು ಇನ್ನೂ ಚಾಲ್ತಿಯಲ್ಲಿರದಾಗ ಹೊಲ ಮನೆಗಳನ್ನು ಹುಡುಕಿಕೊಂಡು ಹೊರಟ ಜನ ಇಲ್ಲಿ ಬಂದು ವಾಸಿಸಿದರು. ಈ ಮುಕ್ಕಾಲು ಪಾಲು ಜನ ಹಿಂದುಗಳು. ಇವರು ಗೋಮಾಂಸವನ್ನು ತಿನ್ನುವುದಿಲ್ಲ. ಸಿಕ್ಕಿಂ ಮೂಲ ನಿವಾಸಿಗಳು ಗೋಮಾಂಸ ಭಕ್ಷಕರಾಗಿರುವುದರಿಂದ ಇವರಿಗೂ ಅವರಿಗೂ ಶರೀರ ಸಂಬಂಧ ನಡೆಯುವುದಿಲ್ಲ. ಹಿಂದುಗಳಾಗಿರುವ ಈ ಮುಕ್ಕಾಲು ಪಾಲು ಜನ ಹಿಂದೀ ಭಾಷೆಯನ್ನು ಬಹುಮಟ್ಟಿಗೆ ಹೋಲುವ ನೇಪಾಳಿ ಭಾಷೆಯನ್ನಾಡುತ್ತಾರೆ. ಉಳಿದ ಕಾಲು ಭಾಗ ರಾಜನ ಜಾತಿಯವರು–ಅಂದರೆ ಲೇಪಾಚಾ-ಭೂಟಿಯಾರು. ಇವರು ಬೌದ್ಧ ಧರ್ಮಿಗಳು. ತಿಬೇಟಿ ಭಾಷೆಯನ್ನು ಹೋಲುವ ಭಾಷೆಯನ್ನು ಮಾತಾಡುವವರು. ತಿಬೇಟಿಯರೊಡನೆ ಶರೀರ ಸಂಬಂಧ ಬೆಳೆಸುವರು. ತಮಗಿಂತಲೂ ಹೆಚ್ಚು ಉದ್ಯಮಶೀಲರಾದ, ಸಾಹಸಿಗಳಾದ, ವಿದ್ಯಾವಂತರಾದ ನೇಪಾಳಿಗಳನ್ನು ಇವರು ದ್ವೇಷಿಸುವರು.

ನೇಪಾಳಿಗಳು ಬಂದು ನೆಲೆಸಿ ತಲೆತಲಾಂತರಗಳು ಕಳೆದಿದ್ದರೂ ರಾಜರು ಅವರನ್ನು ಆಗಂತುಕರೆಂದೇ ತಿಳಿಯುವರು. ತಮ್ಮ ಜನರ ಸಂಪೂರ್ಣ ಬೆಂಬಲವಿರುವ ಅವರು ನೇಪಾಳಿಗಳನ್ನು ಪಕ್ಷಪಾತದಿಂದಲೇ ನಡೆಸಿಕೊಳ್ಳುತ್ತಾರೆ. ಉತ್ತರ ಸಿಕ್ಕಿಮ್‌ನಲ್ಲಿ ನೇಪಾಳಿಗಳು ಭೂಮಾಲಿಕರಾಗುವಂತಿಲ್ಲ. ಜಾತೀಯ ತಳಹದಿಯ ಮೇಲೆ ಆಯ್ಕೆ ಹೊಂದಿದ ಅರ್ಧದಷ್ಟು ಮತ್ತು ನಾಮಕರಣ ಮಾಡಿದ ಅರ್ಧದಷ್ಟು ಸದಸ್ಯರಿರುವ ಸ್ಥಾನಿಕ ಸಲಹಾ ಸಮಿತಿಗಳಲ್ಲಿ ನೇಪಾಳಿಗಳಿಗೆ ಇರುವ ಪ್ರಾತಿನಿಧ್ಯ ತೀರ ಕಡಿಮೆ. ಪ್ರಜೆಗಳಲ್ಲಿ ನೂರಕ್ಕೆ ೭೫ ರಷ್ಟು ಜನ ದಬ್ಬಾಳಿಕೆಗೊಳಗಾದ ಅಲ್ಪ ಸಂಖ್ಯಾಕರಾದಾಗ ಅದೇ ಕ್ರಾಂತಿಯ ಕಿಡಿಯಾಗುವುದು. ಸಿಕ್ಕಿಮ್ ಮಹಾರಾಜ ಕುಮಾರರು ಸ್ವತಃ "ಚಪ್ಪಟೆ ಮೂಗಿನ ಬೌದ್ಧ ಧರ್ಮೀಯರಲ್ಲೂ ಉದ್ದ ಮೂಗಿನ ನೇಪಾಳಿಗಳಲ್ಲಿಯೂ ಎಂದಿಗೂ ಬಾಂಧವ್ಯ ಬೆಳೆಯದು" ಎಂದು ಹೇಳುತ್ತಾರೆ. ಆದರೆ ಈ ಮೂಗಿನ ಯುದ್ಧ ಸಿಕ್ಕಿಮ್‌ಗೆ ಮಾತ್ರವಲ್ಲ, ಆದರೆ ಪ್ರಜಾಪ್ರಭುತ್ವಕ್ಕೇ ಗಂಡಾಂತರಕಾರಿಯಾದದ್ದು. ಇಂಥ ಗಂಡಾಂತರವನ್ನು ಭಾರತವು ಉಪೇಕ್ಷಿಸುವಂತಿಲ್ಲ ಎಂಬ ಸತ್ಯವನ್ನವರು ಮನಗಾಣುತ್ತಿಲ್ಲ.

ಇನ್ನು ನೇಪಾಳಿಗಳು ಬಂಡೆದ್ದಿದ್ದೇ ಆದರೆ ಮತ್ತು ಸಿಕ್ಕಿಮ್‌ನೊಡನಾದ ಒಪ್ಪಂದದನ್ವಯ ಭಾರತ ಸರಕಾರ ಅದನ್ನು ಹತ್ತಿಕ್ಕಿದರೆ ಮುಕ್ಕಾಲು ಭಾಗದ ಜನರ ಚಳವಳಿಗೆ ಸಹಾಯ ಮಾಡುವುದು ನ್ಯಾಯ ಎಂದು ಚೀನ ಮುಂದೆ ಬಂದೀತು. ಒಂದು ವೇಳೆ ಭಾರತ ಬಂಡುಗಾರರ ಸಹಾಯಕ್ಕೆ ಹೋದರೆ ಚೀನ ರಾಜರಿಗೆ ಸಹಾಯ ಮಾಡಬಹುದು. ತಾತ್ಪೂರ್ತಿಕವಾಗಿಯೆ ಆದರೂ ತಮ್ಮ ಆಳಿಕೆ ಮುಂದುವರಿದೀತು ಎಂಬ ಆಶೆಯಿಂದ ಸಿಕ್ಕಿಮ್ ರಾಜರು ಚೀನದ ಸಹಾಯವನ್ನು ಸ್ವಾಗತಿಸಬಹುದು.

ಇದೆಲ್ಲ ಭಾರತ ಸರಕಾರಕ್ಕೆ ಗೊತ್ತಿದೆ. ಇಂಥ ಸ್ಥಿತಿಯಲ್ಲಿ ಅದು ಸಿಕ್ಕಿಮ್‌ನ್ನು ಇಪ್ಪತ್ತನೆಯ ಶತಮಾನದ ದೇಶವನ್ನಾಗಿ ಮಾಡಬೇಕಾಗಿದೆ. ಕ್ರಾಂತಿಯನ್ನು ತಡೆಗಟ್ಟುವ ಒಂದೇ ಒಂದು ಉಪಾಯವೆಂದರೆ ಸಿಕ್ಕಿಮ್‌ನಲ್ಲಿರುವ ಸಕಲರ ಅಭಿವೃದ್ಧಿಯನ್ನು ಸಾಧಿಸುವುದು. ಆದರೆ ಪ್ರಗತಿಯ ಕಾರ್ಯ ಹೊರಗಿನವರಿಂದ ನಡೆಯುವುದು ಎಂದಾಗ ತಿಕ್ಕಾಟ ತಪ್ಪಿದ್ದಲ್ಲ.

ತಿಬೇಟಿನ ಗಡಿಯಲ್ಲಿ ತನ್ನ ಸೈನ್ಯಕ್ಕಾಗಿ ರಸ್ತೆಗಳನ್ನು ಕಟ್ಟಲು ಭಾರತ ಸರಕಾರ ಅಪಾರ ಹಣ ವೆಚ್ಚಮಾಡುತ್ತಿದೆ. ಸಿಕ್ಕಿಮ್ ಒಳನಾಡಿನಲ್ಲಿ ಕೂಡ ರಸ್ತೆಗಳಿಗಾಗಿ ತುಂಬ ಹಣ ವೆಚ್ಚವಾಗುತ್ತಿದೆ. ಸಿಕ್ಕಿಮ್‌ನಲ್ಲಿ ಭಾರತೀಯ ಸೈನಿಕರಿದ್ದಾರೆ. ಸ್ಥಳಿಕರಿಗೆ ಅವರ ಕಾರ್ಯಗಳಿಂದ ಕೆಲಸ ಸಿಗುತ್ತಿದೆ. ಇಷ್ಟೇ ಅಲ್ಲ, ಸಿಕ್ಕಿಮ್‌ನ ಸಪ್ತವಾರ್ಷಿಕ ಯೋಜನೆಗಾಗಿ ಸಿಕ್ಕಿಮ್‌ನ ವಾರ್ಷಿಕ ಉತ್ಪನ್ನಕ್ಕಿಂತ ಆರು ಪಟ್ಟು ಹೆಚ್ಚು ಹಣ ಅಂದರೆ ಸುಮಾರು ೩ ಕೋಟಿ ರೂಪಾಯಿಗಳನ್ನು ಭಾರತ ಸರಕಾರ ಕೊಡುತ್ತಿದೆ. ಭಾರತ ಸರಕಾರದ ಸಹಾಯದಿಂದ ಕೈಗಾರಿಕೆ, ಶಿಕ್ಷಣ ಶಾಲೆ, ಆಸ್ಪತ್ರಿ, ಹಾಯಸ್ಕೂಲುಗಳು ಆಗಿವೆ. ೨೫೦ ಮೈಲು ರಸ್ತೆ ರಚಿಸಲ್ಪಟ್ಟಿದೆ. ಈಗೊಂದು ವರ್ಷದಿಂದಲೂ ಹಣ್ಣಿನ ರಸ ತೆಗೆದು ಡಬ್ಬಿಗಳಲ್ಲಿ ಕಾಯ್ದಿಡುವ ಕಾರಖಾನೆಯೊಂದು ಕಾರ್ಯಮಾಡುತ್ತಿದೆ. ಭಾರತ ಮತ್ತು ಸಿಕ್ಕಿಂ ಸರಕಾರಗಳು ಕೂಡಿ (ಸಿಕ್ಕಿಮ್‌ಗೆ ಹೆಚ್ಚು ಲಾಭದಾಯಕವಾದ ಕರಾರಿನ ಮೇಲೆ) ತಾಮ್ರವನ್ನು ತೋಡಿ ತೆಗೆಯುವ ಕಂಪನಿಯೊಂದು ಆರಂಭವಾಗಿದೆ. ೩೦೦ ಕ್ಕಿಂತ ಹೆಚ್ಚು ಸಿಕ್ಕಿಂ ಜನರು ಭಾರತದಲ್ಲಿದ್ದು ಬೇರೆ ಬೇರೆ ವಿಷಯಗಳಲ್ಲಿ ತರಬೇತಿ ಪಡೆಯುತ್ತಿದ್ದಾರೆ.

ಆದರೆ ಜನ ಕಲಿತು ತಯಾರಾಗುವ ವರೆಗೂ ಯೋಜನೆಗಳನ್ನು ತಡೆಹಿಡಿಯುವುದು ಸಾಧ್ಯವಾಗುವುದಿಲ್ಲ. ಆದ್ದರಿಂದ ಸಿಕ್ಕಿಮ್ ಅಭಿವೃದ್ಧಿ ಯೋಜನೆಗಳಲ್ಲಿ ದುಡಿಯಲು ಭಾರತವು ತಜ್ಞರ ದೊಡ್ಡ ತಂಡವನ್ನೆ ಕಳಿಸಿಕೊಡಬೇಕಾಯಿತು. ಅಮೇರಿಕದಿಂದ ಭಾರತಕ್ಕೆ ಬಂದ ತಜ್ಞರನ್ನು ಭಾರತೀಯರು ಸಂಶಯದಿಂದ ಕಾಣುತ್ತಿದ್ದಂತೆಯೆ ಸಿಕ್ಕಿಂ ಜನರು ಭಾರತದ ತಜ್ಞರನ್ನು ಕಾಣುತ್ತಿದ್ದಾರೆ. ಸಹಾಯಮಾಡಿಯೂ ಭಾರತ ಸಿಕ್ಕಿಮ್‌ದಲ್ಲಿ ಜನಪ್ರಿಯವಾಗಿಲ್ಲ. ಆದರೂ ಸಹಾಯ ಮಾಡುವುದು ಭಾರತಕ್ಕೆ ಅನಿವಾರ್ಯವಾಗಿದೆ. *

ಇಬ್ಬರು ಪ್ರೊಫೆಸರರು ಮಾತಾಡುತ್ತ ಕುಳಿತಿದ್ದಾಗ ಒಬ್ಬಾತನೆಂದ: "ನನಗೆ ಹೆಂಗಸರನ್ನು ಕಂಡರೆ ತುಂಬ ಭಯ. ಅದಕ್ಕೇ ಇದುವರೆಗೆ ಲಗ್ನ ಮಾಡಿಕೊಂಡಿಲ್ಲ."

ಆಗ ಇನ್ನೊಬ್ಬರೆಂದರು "ಹೀಗೋ! ಹಾಗಾದರೆ ನೀವು ಬೇಗ ಲಗ್ನ ಮಾಡಿಕೊಂಡು ಬಿಡಿ. ಆಮೇಲೆ ಎಲ್ಲ ಹೆಂಗಸರನ್ನೂ ಕಂಡು ಹೆದರಿಕೊಳ್ಳುವ ಬದಲು ಒಬ್ಬಳನ್ನೆ ಕಂಡು ಹೆದರಿಕೊಂಡರೆ ಸಾಕಾಗುತ್ತದೆ."

ಪಿಗ್ಮಿಗಳೊಡನೆ ಎಂಟುವರ್ಷ



ಏನ್ ಐನ್ಸರ್ ಫುಟ್ನಾಮ್
ಮತ್ತು
ಎಲನ್ ಕೆಲ್ಲರ್

ಕಾಂಗೋ ಪಿಗ್ಮಿಗಳೊಡನೆ ಎಂಟು ವರ್ಷ

ಪಿಗ್ಮಿಗಳು ಜಗತ್ತಿನ ಅತಿ ಕುಳ್ಳ ಜನ. ಆಫ್ರಿಕಾ ಖಂಡವು ಪ್ರಪಂಚಕ್ಕೆ ನೀಡಿದ ವೈಲಕ್ಷಣ್ಯಗಳಲ್ಲಿ ಅವರೂ ಒಂದು. ಇಂದು ಅಂತರ್ಯುದ್ಧ ಬಾಹ್ಯ ಹಸ್ತಕ್ಷೇಪಗಳಿಂದ ತತ್ತರಿಸುತ್ತಿರುವ ಬೆಲ್ಜಿಯನ್ ಕಾಂಗೋದ "ಗುಂಯೆಂದು ಗುಳಿಗುಳಿಪ" ಅರಣ್ಯಗಳಲ್ಲಿ ಈ ಜನ ಮಾತ್ರ ಯಾವ ಜಗಳದಲ್ಲಿಯೂ ಸೇರದೆ ಶಾಂತಿಯುಲ್ಲಿದ್ದಾರೆ. ಕ್ರೂರ ಮೃಗಗಳ ಕೂಟದಲ್ಲಿ, ನಿಸರ್ಗದ ಅಂತರಂಗಕ್ಕೆ ಸಮೀಪವಾಗಿ, ಅದರೊಡನೆ ಸಮರಸವಾಗಿ ಬಾಳುವ ಈ ಜನಾಂಗದ ಜೀವನ ಈಗ ಎರಡು ಸಾವಿರ ವರ್ಷಗಳಿಂದ ಇದ್ದಂತೆಯೆ ಇದೆ. ಅವರ ಸಂಗಡ ತನ್ನ ಗಂಡನೊಡನೆ ಬದುಕಿ ಅವರೊಡನೆ ಹೊಂದಿಕೊಂಡು, ಪ್ರೀತಿ ಪಾತ್ರಳು ಕೂಡ ಆದ ಯುರೋಪಿಯನ್ ಮಹಿಳೆಯು ಇಲ್ಲಿ ಚಿತ್ರಿಸಿರುವ ಸಂಗತಿಗಳು ಅನಾಗರಿಕವಾದರೂ ಸಜೀವ— ಸಾನಂದ— ಸಹಾಸ್ಯವಾಗಿವೆ.

ಮೂಲ ಪುಸ್ತಕ : Madami : " My Eight Years of Adventure with the Congo Pigmies'' by Anne Eisner Putnam and Allan Keller. (c) 1954 by Anne Eisner Putnam and Allan Keller.

ಶಾಲೆಯಲ್ಲಿದ್ದಾಗ ಪಿಗ್ಮಿ ಜನಾಂಗದವರ ವಿಷಯವನ್ನೋದಿದ್ದೆ. ಆದರೆ ದ್ವಿತೀಯ ಮಹಾಯುದ್ಧಾನಂತರ ಅಮೇರಿಕದ ಮೆಸಾಶುಸೆಟ್ಸ್‌ನಲ್ಲಿ ಪೆಟ್ರಿಕ್ ಟ್ರೇಸಿಲೊವೆಲ್ ಪುಟ್ನಾಮ್‌ನನ್ನು ಮೊದಲಿಗೆ ನಾನು ಕಂಡ ದಿನ ಪಿಗ್ಮಿ ಜನರ ವಿಚಾರ ಸುತರಾಂ ನನ್ನ ತಲೆಯಲ್ಲಿರಲಿಲ್ಲ.

ಆತ ಆಜಾನುಬಾಹು. ಆದರೆ ತೀರ ಬಡಕಲು ಮನುಷ್ಯ. ಆತನ ಸ್ವಚ್ಛ ನೀಲ ನೇತ್ರಗಳಲ್ಲಿ ತುಂಟ ಹೊಳಪು ಕುಣಿಯುತ್ತಲಿತ್ತು. ಮಿತ್ರರು ನಮ್ಮಿರ್ವರಿಗೆ ಪರಸ್ಪರ ಪರಿಚಯ ಮಾಡಿಸಿದರು. ಆತ ಬೆಲ್ಜಿಯನ್ ಕಾಂಗೋದಿಂದ ರಜೆಯ ಮೇಲೆ ಬಂದಿದ್ದನೆಂದೂ ಮಾನವ ಶಾಸ್ತ್ರದಲ್ಲಿ ಪರಿಣತನೆಂದೂ ಬೆಲ್ಜಿಯನ್ ಕಾಂಗೋದಲ್ಲಿ ಅನೇಕ ವರ್ಷಗಳಿಂದ ಅಲ್ಲಿಯ ಮೂಲನಿವಾಸಿಗಳ ಜೀವನ ರೀತಿಯನ್ನು ಅಭ್ಯಸಿಸುತ್ತಿದ್ದನೆಂದೂ ತಿಳಿಯಿತು. ಮತ್ತೆ ಅಲ್ಲಿಯ ವಸಾಹತು ಸರಕಾರದಲ್ಲಿ ಆರೋಗ್ಯಾಧಿಕಾರಿಯೂ ಆಗಿದ್ದನಾತ.

ತುಂಬ ರೋಮಾಂಚಕಾರಿ ಜೀವನವನ್ನು ನಡೆಸುತ್ತಿದ್ದ, ವಿಚಿತ್ರ ಅಪರಿಚಿತ ಪ್ರದೇಶಗಳ ಬಗ್ಗೆ ಅನೇಕಾನೇಕ ಕಥೆಗಳನ್ನು ಹೇಳಬಲ್ಲವನಾಗಿದ್ದ ಪೆಟ್ರಿಕ್‌ನನ್ನು ಮೆಚ್ಚಿಕೊಳ್ಳುವುದೇನೂ ಕಠಿಣವಾಗಿರಲಿಲ್ಲ. ನಾನೊಬ್ಬ ಚಿತ್ರಕಾರಳು. ಸ್ತ್ರೀಸಹಜವಾದ ಕುತೂಹಲ ಕನಸುಗಳೆಲ್ಲ ನನ್ನಲ್ಲಿದ್ದವು; ನನ್ನ ಕುಂಚ ಮತ್ತು ಬಣ್ಣಗಳಿಗೆ ಅನಾಗರಿಕರೂ ಸರಳಜೀವಿಗಳೂ ಆದ ಪಿಗ್ಮಿ ಕುಳ್ಳರು ವಸ್ತುವಾಗುವುದು ನನಗೆ ಬಲು ಹಿಗ್ಗೆನಿಸಿತು.

ನಮ್ಮ ವಿವಾಹದ ಸುದ್ದಿ ಕೇಳಿದಾಗ ನನ್ನ ಮಿತ್ರರನೇಕರಿಗೆ ಆಶ್ಚರ್ಯವಾಯಿತು; ಮಾತ್ರವಲ್ಲ, ನಾನು ಕಾಂಗೋದ ಒಳನಾಡಿನಲ್ಲಿ ಇರಲು

ನಿರ್ಧರಿಸಿರುವುದನ್ನು ಕೇಳಿ ಅವರಿಗೆ ನನ್ನ ಬುದ್ಧಿ ಭ್ರಂಶವಾಗಿದೆಯೆಂದೇ ಅನಿಸಿತು. ಇನ್ನು ಕೆಲವರಿಗೆ ನನ್ನಲ್ಲಿ ಅಸೂಯೆಯೂ ಉಂಟಾಯಿತು.

ಮುಂದೆ ಕೆಲವೇ ವಾರಗಳಲ್ಲಿ ನಾವು ಆಫ್ರಿಕಕ್ಕೆ ಹೋಗುವ ಹಡಗದಲ್ಲಿದ್ದೆವು.

ಸ್ಟಾನ್ಲೆವಿಲೆಯಲ್ಲಿ ಪ್ಯಾಟನ (ಪ್ರೆಡ್ರಿಕ್‌-ಪುಟ್ನಾಂ) ಹಳೆಯ ಕಾರಿನೊಳಗೆ ನಮ್ಮ ಸಾಮಾನುಗಳಲ್ಲಿ ಅರ್ಧವನ್ನು ಹೇರಿದೆವು. ರಸ್ತೆ ಇಟುರಿ ಅಡವಿಯಲ್ಲಿ ಸುತ್ತುಬಳಸಿ ಹೋಗುತ್ತಿತ್ತು. ಗಿಡಮರಗಳ ಕೆಳಗಿನ ಟೊಂಗೆಗಳಿಂದ ನಾನಾ ಬಳ್ಳಿಗಳು ಜೋತುಬಿದ್ದಿದ್ದವು. ರಸ್ತೆಯ ಮಗ್ಗುಲಲ್ಲಿ ಅಲ್ಲಲ್ಲಿ ದಟ್ಟವಾದ ಗಿಡಗಂಟಿಗಳ ಗುಂಪುಗಳಿದ್ದವು.

ಆಗೊಮ್ಮೆ ಈಗೊಮ್ಮೆ ಹಾದಿಯಲ್ಲಿ ಮೂಲನಿವಾಸಿಗಳ ಚಿಕ್ಕಪುಟ್ಟ ಹಳ್ಳಿಗಳು ಕಾಣಿಸುತ್ತಿದ್ದವು. ಅಲ್ಲಿರುವ ೨೦-೩೦ ಮನೆಗಳು ಎಲೆಗಳಿಂದ ಹೊಚ್ಚಲ್ಪಟ್ಟಿದ್ದವು. ಹಳ್ಳಿಗಳು ಹೊಲಸಾಗಿಯೂ ಗುಡಿಸಲುಗಳು ಒಂದಸ್ನೊಂದು ನೂಕುತ್ತಿರುವಂತೆ ಒಟ್ಟಾಗಿಯೂ ಇರುತ್ತಿದ್ದವು.

ನಡುಮಧ್ಯಾಹ್ನದ ಹೊತ್ತಿಗೆ ನಾವು ಇಪುಲು ಸಮೀಪ ಬಂದೆವು. ಪ್ಯಾಟ್ ಕಾರು ನಿಲ್ಲಿಸಿದಾಗಲೆಲ್ಲ ಮೂಲನಿವಾಸಿಗಳು ಅಡವಿಯೊಳಗಿಂದ "ಪುಟ್ನಾಮಿ ತಿರುಗಿ ಬಂದರು, ಪುಟ್ನಾಮಿ ತಿರುಗಿ ಬಂದರು" ಎಂದು ಕೂಗುತ್ತ ಓಡಿಬರುತ್ತಿದ್ದರು.

ರಾತ್ರಿ ಒಂಭತ್ತರ ಸುಮಾರಿಗೆ ಮುಖ್ಯ ರಸ್ತೆಯನ್ನು ಬಿಟ್ಟು ಪ್ಯಾಟ್ ಕಾರನ್ನು ದೊಡ್ಡದೊಡ್ಡ ಮರಗಳ ನಡುವೆ ಹಾಯ್ದಿದ್ದ ಓಣಿಯಂಥ ಚಿಕ್ಕ ರಸ್ತೆಗೆ ಹೊರಳಿಸಿದ. ಒಂದೇ ಒಂದು ಮೈಲು ಮುಂದೆ ನಾನು ಎಂದೂ ಎಲ್ಲಿಯೂ ನೋಡಿರದಂಥ ಅತ್ಯಂತ ಸುಂದರವಾದ ದೃಶ್ಯವೊಂದನ್ನು ನಾನು ನೋಡಲಿದ್ದೆ.

ಅದು ಅತಿ ದೊಡ್ಡದಾದ ಕೆಂಪು ಹೂಗಳ ಒಂದು ತೋರಣವಾಗಿತ್ತು. ಆ ಹೂವಿನ ತೋರಣದ ಅಡಿಯಲ್ಲಿ ಹಾಯ್ದುಹೋಗುತ್ತಿರುವಾಗ ಮೂಲನಿವಾಸಿಗಳು ಹೂಗಳನ್ನು ತಾಳೆಗರಿಗಳಿಗೆ ಕಟ್ಟಿ ಆ ತೋರಣ ತಯಾರಿಸಿದ್ದರೆಂದು ನನಗೆ ತಿಳಿಯಿತು. ಪ್ಯಾಟನಲ್ಲಿ ಇವರಿಗೆ ಎಷ್ಟೊಂದು ಪ್ರೀತಿಯಿರಬೇಡ, ಎಂದೆನಿಸಿತು ನನಗೆ.

ತೋರಣದಾಚೆ ಬಯಲು ಪ್ರದೇಶ. ಅದರ ಒಂದು ಅಂಚು ಇಪುಲು ನದಿ ಕೊರೆದ ದಂಡೆಯಾಗಿದ್ದರೆ ಉಳಿದ ಮೂರು ಅಂಚುಗಳಲ್ಲಿ ಅಡವಿಯಿತ್ತು. ಪ್ರಕಾಶವನ್ನು ಮರೆಮಾಡುವ ಗಿಡಗಳು ವಿರಳವಾಗಿದ್ದುದರಿಂದ ಬಯಲೆಲ್ಲ ಚಂದ್ರಪ್ರಕಾಶದಲ್ಲಿ ಮುಳುಗಿ ಮೀಯುತ್ತಲಿತ್ತು.

ಆ ಚಂದ್ರಪ್ರಕಾಶದಲ್ಲಿ ಒಂದು ಉದ್ದನ್ನ ಗುಡಿಸಲು ಕಾಣಿಸಿತು. ನೋಡಿದೊಡನೆ ಅದು ಆಸ್ಪತ್ರೆಯೆಂದು ಗುರುತಿಸಿದೆ. ಅಲ್ಲೆ ಬಳಿಯಲ್ಲಿ ಅಸ್ತವ್ಯಸ್ತವೂ ವಿಶಾಲವೂ ಆದ ಇನ್ನೊಂದು ಗುಡಿಸಲಿತ್ತು. ಅದು ಹೋಟೆಲ್. ಅವೆರಡರಾಚೆ ನದಿಗೆ ಸಮೀಪವಾಗಿ ಮಣ್ಣುಗೋಡೆಗಳ, ಹಸಿರು ಎಲೆಗಳು ಹೊದಿಸಲ್ಪಟ್ಟ ಚಿಕ್ಕಮನೆಯೊಂದಿತ್ತು.

ಆಸ್ಪತ್ರೆಯ ಆಚೆ ತಾಳೆಮರಗಳ ಬೇಲಿಯ ಒಂದು ಕೊಟ್ಟಿಗೆ. ಅದರಲ್ಲಿರುವ ಪ್ರತ್ಯೇಕ ಪ್ರತ್ಯೇಕ ಭಾಗಗಳಲ್ಲಿ ಅಡವಿಯಿಂದ ಹಿಡಿದು ತಂದ ಬೇರೆ ಬೇರೆ ಪ್ರಾಣಿಗಳು.

ಈ ಮೂರು ಮುಖ್ಯ ಕಟ್ಟಡಗಳಲ್ಲಿ ಮೂರನೆಯದಾದ ಚಿಕ್ಕಮನೆಯ ಸುತ್ತ ಹೂದೋಟವಿತ್ತು. ಕಂದುಬಣ್ಣದ ಗೋಡೆಯ, ಹಸುರು ಮಾಡಿನ ಆ ಪುಟ್ಟಮನೆ ರಾಕ್ಷಸ ಮರಗಳ ಹಿನ್ನೆಲೆಯಲ್ಲಿ ಚಿಕ್ಕರತ್ನದಂತೆ ಶೋಭಿಸುತ್ತಿತ್ತು.

ನನ್ನ ಕಲಾದೃಷ್ಟಿಗೆ ಅದು ಹಿಡಿಸಿತು. ಅಲ್ಲಿ ಸೌಂದರ್ಯವೇ ಮೂರ್ತೀಭವಿಸಿತ್ತು. ಅದು ಕಾವ್ಯಮಯವಾಗಿತ್ತು

ಕಂಪೌಂಡಿನಲ್ಲಿ ಮೂಲನಿವಾಸಿಗಳ ತಂಡ ಒದರುತ್ತ, ಚೀರುತ್ತ ಕುಣಿಯುತ್ತ ಅಡ್ಡಾಡು

ತ್ತಿತ್ತು. ಆ ಪುಟ್ಟ ಮನೆಯ ಪಡಸಾಲಿಗೆ ಅವರು ನಮ್ಮನ್ನು ಜಗ್ಗಿಕೊಂಡೇ ಹೋದರೆನ್ನಬೇಕು.

ಮಾರನೆಯ ಬೆಳಿಗ್ಗೆ ಪ್ಯಾಟ್ ಮತ್ತು ನಾನು ನದಿಯ ದೃಶ್ಯ ಕಾಣಿಸುತ್ತಿದ್ದ ಕಿಡಿಕಿಯ ಬಳಿ ಕುಳಿತು ಉಪಾಹಾರ ಸ್ವೀಕರಿಸಿದೆವು. ರಾತ್ರಿಗಿಂತಲೂ ಮುಂಜಾವಿನ ಈ ದೃಶ್ಯ ಸುಂದರವಾಗಿತ್ತು. ನದಿಯ ಆಚೆಗಿನ ಅಡವಿ ಪ್ರವೇಶಿಸಲಸಾಧ್ಯವಾಗಿರಬೇಕು ಎಂದಿದ್ದ ನನ್ನ ಊಹೆ ಸುಳ್ಳಾಯಿತು. ಅಲ್ಲಿರುವ ರಾಕ್ಷಸ ಮರಗಳ ಟೊಂಗೆಗಳು ಎತ್ತರದ ಮೇಲಿದ್ದು ಕೆಳಗಿನ ಭೂಮಿಗೆ ಛತ್ರವನ್ನು ಹಿಡಿದಂತಿದ್ದವು. ಓಡಾಡಲು ಸಾಕಷ್ಟು ಸ್ಥಳವಿದ್ದಿತು. ಮಳೆ ಬಾರದಿದ್ದಾಗ ಅಡವಿಯ ಮೇಲಿನ ಆಕಾಶದ ನೀಲಿ ಬಣ್ಣ ಆಶ್ಚರ್ಯವನ್ನುಂಟುಮಾಡುವಂಥದಿತ್ತು.

ನನ್ನ ವಿಚಾರಮಾಲಿಕೆಯನ್ನು ಭಂಗಿಸಿ ಪ್ಯಾಟ್ ನುಡಿದ: "ಇಂದು ಪಿಗ್ಮಿಗಳ ಹಳ್ಳಿಗೆ ನಮ್ಮ ಮೊದಲನೆಯ ಭೆಟ್ಟಿಯನ್ನು ಕೊಡೋಣ. ಬೆಳಕು ಸಾಕಷ್ಟೇ ಇದೆ."

ನಮ್ಮ ಮೂಲನಿವಾಸಿ ಆಳು ಅಗೆರೊಂಗಾ ಪಾಲಕಿಯಂಥ ಎರಡು ವಾಹನಗಳನ್ನು ತರಿಸಿದ. ಎರಡು ಉದ್ದನ್ನ ಗಳಗಳ ನಡುವೆ ಚರ್ಮದ ಆಸನವಿದ್ದಿತು. ಒಂದರಲ್ಲಿ ಪ್ಯಾಟ್ ಕುಳಿತ. ನಾಲ್ಕು ಜನ ಹುಡುಗರು ಆತ ಏಳೆಂಟು ಪೌಂಡು ತೂಕದ ವಸ್ತುವೇನೊ ಎಂಬಷ್ಟು ಸುಲಭದಲ್ಲಿ ಎರಡೂ ಗಳಗಳನ್ನು ಹಿಡಿದು ಮೇಲಕ್ಕೆತ್ತಿದರು. ನಾನೂ ಹಾಗೇ ಕುಳಿತೆ. ನನ್ನನ್ನು ಮೇಲಕ್ಕೆತ್ತಿದಾಗ ಕಾಲುಗಳನ್ನು ಇಳಿಬಿಟ್ಟುಕೊಂಡು ನಾನು ಬಹು ಸುಖವಾಗಿ ಆ ಚರ್ಮದ ಆಸನದಲ್ಲಿ ಕುಳಿತಿದ್ದೆ. ಆ ಅಡವಿಯಲ್ಲಿ ನಾನು ನಡೆಯಬಹುದಾದದ್ದಕ್ಕಿಂತ ಹೆಚ್ಚು ವೇಗದಿಂದ ಪ್ರವಾಸ ಮಾಡುತ್ತಿರುವ ಅನುಭವ ನನಗೆ ಬಂತು.

ಮುಂದೆ ಒಂದು ಬಯಲು. ಸೂರ್ಯಪ್ರಕಾಶ ಅಲ್ಲಿ ಪ್ರಖರವಾಗಿತ್ತು. ನನ್ನ ಕಣ್ಣುಗಳು ಆ ಪ್ರಕಾಶಕ್ಕೆ ಹೊಂದಿಕೊಂಡೊಡನೆ ಹದಿನೇಳು ಚಿಕ್ಕ ಗುಡಿಸಲುಗಳು ಕಾಣಿಸಿದವು. ನಡುವೆ ಒಂದು ಹುಲ್ಲಿನ ಅಂಗಳ. ಸುತ್ತ ನಾಲಿನಾಕಾರದಲ್ಲಿ ಗುಡಿಸಲುಗಳು ಕಟ್ಟಲ್ಪಟ್ಟಿದ್ದವು. ಮಣಿಸಿದ ಬೆತ್ತಗಳ ಮೇಲೆ ಹಸಿರು ಎಲೆಗಳನ್ನು ಹೊಚ್ಚಿ ಮಾಡಿದ ಆ ಗುಡಿಸಲುಗಳು ನನಗಿಂತಲೂ ಎತ್ತರವಾಗಿರಲಿಲ್ಲ. ಪ್ರತಿಯೊಂದಕ್ಕೆ ಒಂದೇ ಒಂದು ಪುಟ್ಟ ಬಾಗಿಲಿತ್ತು. ಗುಡಿಸಲುಗಳ ಮುಂದೆ ಆ ಕುಳ್ಳರಿದ್ದರು. ಕೆಲವರು ಒಲೆಗಳ ಮುಂದೆ ಕುಳಿತು ಅಡಿಗೆ ಮಾಡುತ್ತಲಿದ್ದರು. ಕೆಲವರು ನುಣುಪಾದ ತೊಲೆಗಳ ಮೇಲೆ ಗಿಡದ ತೊಗಟೆಯನ್ನು ಜಜ್ಜಿ ಬಟ್ಟೆ ತಯಾರಿಸುತ್ತಿದ್ದರು. ಉಳಿದವರು ಆರಾಮಾಗಿ ಬಿದ್ದುಕೊಂಡಿದ್ದರು.

ನಮ್ಮನ್ನು ಕಂಡೊಡನೆ ಅವರೆಲ್ಲ ಒಮ್ಮೆಲೆ ವಟಗುಡತೊಡಗಿದರು. ಗಂಡಸರು ಓಡೋಡೋತ್ತ ಬಂದು ನಮ್ಮನ್ನು ಮುತ್ತಿದರು. ಹುತ್ತದೊಳಗಿಂದ ಹೊರಬೀಳುವ ಇರುವೆಗಳಂತೆ ಪಿಗ್ಮಿಗಳು ಆ ಗುಡಿಸಲುಗಳಿಂದ ಹೊರಗೆ ಬರಹತ್ತಿದರು.

ಹೆಂಗಸರು ಮುಂದೆ ಬಾರದೆ ಗುಡಿಸಲು ಮತ್ತು ಒಲೆಗಳ ಸಮೀಪದಲ್ಲಿಯೆ ನಿಂತಿರುವುದನ್ನು ಕಂಡೆ. ಮಕ್ಕಳು ತಾಯಂದಿರ ಬಳಿಯಲ್ಲೆ ನಿಂತಿದ್ದರು. ತೊಗಟೆಯ ಬಟ್ಟೆಯಿಂದ ಮಾಡಿದ, ಹೆಂಗಸರ ಕರವಸ್ತ್ರಗಳಿಗಿಂತಲೂ ದೊಡ್ಡದಾಗಿರದ ಒಂದು ಲಂಗೋಟಿಯನ್ನು ಬಿಟ್ಟರೆ ಅವರಲ್ಲೊಬ್ಬರ ಮೈಮೇಲೂ ಬೇರೆ ಬಟ್ಟೆಯಿರಲಿಲ್ಲ. ಮಕ್ಕಳಲ್ಲಿ ಹೆಚ್ಚಿನವು ಲಂಗೋಟಿಯನ್ನೂ ಧರಿಸಿರಲಿಲ್ಲ.

ಕೆಲ ಗಂಡಸರು– ಬಹುಶಃ ಅವರು ಅಲ್ಲಿಯ ಷೋಕಿ ಜನರಾಗಿರಬೇಕು— ಉಡಿದಾರದ ಹಿಂಬದಿಯಲ್ಲಿ ಹಸಿರು ಎಲೆಗಳನ್ನು ಸಿಗಿಸಿಕೊಂಡಿದ್ದರು. ಅವು ಹುಂಜದ ಪೃಷ್ಠಭಾಗವ-

ಲ್ಲಿರುವ ಗರಿಗಳಂತೆ ಕಾಣಿಸುತ್ತಿದ್ದವು.

ತರುಣಿಯರು ಮತ್ತು ವಯಸ್ಸಿಗೆ ಬಂದ ಹುಡುಗಿಯರ ಮೊಲೆಗಳು ಬಿರುಸಾಗಿ ಸೆಟೆದು ನಿಂತಿದ್ದವು. ವಯಸ್ಸಾದ ಹೆಂಗಸರ ಮೊಲೆಗಳು ಕೆಳಗೆ ಜೋತುಬಿದ್ದಿದ್ದವು.

ಪ್ಯಾಟ್ ಪಿಗ್ಮಿ ಗಂಡಸರೊಡನೆ ಮಾತಾಡುತ್ತಿದ್ದಂತೆ ನಾನು ಆ ಸುಂದರ ಹಳ್ಳಿಯಲ್ಲಿ ಸುತ್ತಾಡಿದೆ. ನಾನು ಸಮೀಪಿಸಿದಾಗ ಗುಡಿಸಲಿನೊಳಗೆ ಓಡದೆ ಕೆಲ ಹೆಂಗಸರು ಹೊರಗೇ ಇರುವ ಧೈರ್ಯ ಮಾಡಿದರು. ಅವರಿಗೆ ಇಂಗ್ಲೀಷ್ ಬರುತ್ತಿರಲಿಲ್ಲ. ನನಗೆ ಅವರ ಭಾಷೆ ಬರುತ್ತಿರಲಿಲ್ಲ. ಆದರೂ ನಾವು ಸನ್ನೆಗಳ ಮೂಲಕ ಸಂಭಾಷಣೆ ನಡೆಸಿದೆವು. ನಾನು ಅವರ ಚಿಕ್ಕ ಕೂಸುಗಳನ್ನು ನೋಡಿದೆ. ಪ್ಯಾಟ್ ತಂದಿದ್ದ ಉಪ್ಪನ್ನು ಹಂಚಿದೆ.

ಸಾಮಾಜಿಕ ದೃಷ್ಟಿಯಲ್ಲಿ ಹೇಳುವುದಾದರೆ ಕಾಂಗೋದಲ್ಲಿರುವ ಈ ಕುಳ್ಳ ಜನಾಂಗದ ಬಾಳು ವಿಚಿತ್ರವಾಗಿದೆ. ಅನಾದಿ ಕಾಲದಿಂದಲೂ ಅವರು ಸ್ವತಂತ್ರರಾಗಿ ಬಾಳಿಯೇ ಇಲ್ಲ. ಪ್ರತಿಯೊಬ್ಬ ಪಿಗ್ಮಿಗೂ ಒಬ್ಬ ನಿಗ್ರೋ ಒಡೆಯನಿರುತ್ತಾನೆ. ಆದರೆ ಅದು ನಮಗೆ ಗೊತ್ತಿರುವ ಗುಲಾಮಗಿರಿಯಲ್ಲ. ಒಡೆಯನಿಗೂ ಆಳಿಗೂ ನಡುವೆ ಒಂದು ವಿಧವಾದ ಬಂಧನಕಾರಿ ವ್ಯವಸ್ಥೆಯಿರುತ್ತದೆ, ಅಷ್ಟೆ.

ಸಾಮಾನ್ಯವಾಗಿ ಪ್ರತಿಯೊಂದು ಆಫ್ರಿಕನ್ ನಿಗ್ರೋ ಮೂಲನಿವಾಸಿ ಗುಂಪಿನ ಊರಿನ ಬಳಿಯಲ್ಲೆ ಅವರ ಆಳೆನಿಸಿಕೊಳ್ಳುವ ಪಿಗ್ಮಿಗಳ ವಸತಿಯಿರುತ್ತದೆ. ಪಿಗ್ಮಿಗಳು ಬೇಟೆಯಾಡಿ ಮಾಂಸವನ್ನು ಒಡೆಯರಿಗೆ ಒಪ್ಪಿಸುತ್ತಾರೆ. ಒಡೆಯರು ತಾವು ಬೆಳೆಯುವ ಬಾಳೆಹಣ್ಣು ಮತ್ತು ಕಾಯಿಪಲ್ಲೆ ಮುಂತಾದವನ್ನು ಪಿಗ್ಮಿಗಳಿಗೆ ಕೊಡುತ್ತಾರೆ.

ಮೊದಲಿನ ನಾಲ್ಕು ತಿಂಗಳಲ್ಲಿ ಕೆಲವೇ ಅತಿಥಿಗಳು ಬಂದರು. ಅವರೆಲ್ಲ ವ್ಯಾಪಾರಿಗಳೋ ಅಡವಿಯಲ್ಲಿಯೆ ಹೆಚ್ಚಿನ ಕಾಲ ಕಳೆಯುವ ವಿಜ್ಞಾನಿಗಳೋ ಆಗಿದ್ದರು. ಇದು ನನ್ನ ಅದೃಷ್ಟವೇ ಎನ್ನಬೇಕು. ಏಕೆಂದರೆ ಋತುಗಳಿಲ್ಲದ, ಹವಾಬದಲಾವಣೆಯಿಲ್ಲದ ಮತ್ತು ಕೆಲವೇ ಬಿಳಿಯರಿರುವ ಪ್ರದೇಶದಲ್ಲಿ ವಾಸಿಸುವ ರೂಢಿ ನನಗಾಯಿತು.

ಈ ಸಮಯವನ್ನೆಲ್ಲ ನಾನು ಕಿಂಗ್ವಾನಾ ಭಾಷೆಯನ್ನು ಕಲಿಯುವುದರಲ್ಲಿ ಕಳೆದೆ. ಒಮ್ಮೆ ಆ ಭಾಷೆ ಬಂತೆಂದರೆ ನಾನು ಬೇಕಾದಲ್ಲಿ ಸಂಚರಿಸಬಹುದಿತ್ತು, ಬೇಕಾದ್ದನ್ನು ಮಾಡಬಹುದಿತ್ತು ಮತ್ತು ಬೇಕಾದವರೊಡನೆ ಮಾತಾಡಬಹುದಿತ್ತು.

ಹಗಲಿನಲ್ಲಿ ಅಡವಿಯಲ್ಲಿ ತಿರುಗಾಡುತ್ತಿರುವಾಗಲೆಲ್ಲ ಇಲ್ಲಿನ ಶಾಂತಿ ಎಷ್ಟು ಭ್ರಾಮಕವಾದುದು ಎಂಬ ವಿಚಾರ ನನ್ನಲ್ಲಿ ಸುಳಿಯದೆ ಇರುತ್ತಿರಲಿಲ್ಲ. ಗಿಡಗಳ ಮೇಲಿಂದ ಸೋರಿ ಕೆಳಗೆ ಬರುವ ಪ್ರಕಾಶದಲ್ಲಿರುವ ಆ ಮಾರ್ದವವು ಇಲ್ಲಿ ಶಾಂತಿ ಸುರಕ್ಷಿತೆಗಳ ಆಭಾಸವನ್ನುಂಟುಮಾಡುತ್ತದೆ.

ಆದರೆ ರಾತ್ರಿ ಬಂತೋ, ಈ ಚಿತ್ರ ಬದಲಾಗುತ್ತದೆ. ನನ್ನ ಗುಡಿಸಲಿನ ಭದ್ರತೆಯಲ್ಲಿಯೂ ನನಗೆ ಚಿರತೆಯ ಗುರುಗುಡುವಿಕೆ ಕೇಳಿಸುತ್ತದೆ. ಕಾಡು ಮೃಗಗಳ ಕೂಗು ಕಿವಿಗೆ ಬೀಳುತ್ತದೆ. ಕಾಂಗೋದ ಅಡವಿಗಳಲ್ಲಿ ರಾತ್ರಿಹೊತ್ತು ಜೀವ ಅತಿ ಅಗ್ಗವಾಗಿರುತ್ತದೆ. ಇಲ್ಲಿಯ ಬಲಿಷ್ಠ, ಧಾವಂತ ಮತ್ತು ವಿಷಪೂರಿತ ಪ್ರಾಣಿಗಳ ಬದುಕಿನ ಹೋರಾಟದಲ್ಲಿ ಮಾನವನ ಪಾತ್ರ ಬಲು ಚಿಕ್ಕದು. ಸಾಮಾನ್ಯವಾಗಿ ಅಡವಿಯ ಕ್ರೂರಾತಿಕ್ರೂರ ಪ್ರಾಣಿ ಕೂಡ ಮನುಷ್ಯನ ವಾಸನೆ ಬಡಿದೊಡನೆ ತನ್ನಷ್ಟಕ್ಕೆ ಗುರುಗುಟ್ಟಿಕೊಂಡು ಪಲಾಯನ ಹೇಳಿಬಿಡುತ್ತದೆ.

ಆದರೆ ಕಾಂಗೋವಾಸಿಗಳಲ್ಲಿ ಒಂದಾದ ಡ್ರೈವರ್ ಇರುವೆ ಹಾಗಲ್ಲ. ಚಿಕ್ಕದಾದರೂ

ಇದು ಬಲು ಭೀಕರ ಜಂತು. ಎಂದೆಂದೂ ಹಿಂಗದ ಹಸಿವಿನ ಒತ್ತಡದಿಂದ, ಲಕ್ಷಗಟ್ಟಲೆ ಸಂತಾನದ ಹೊಟ್ಟೆಗೆ ಹಾಕಬೇಕಾದ ಅಗತ್ಯದಿಂದ ಪ್ರಚೋದಿತವಾದ ಡ್ರೈವರ್ ಇರುವೆಗಳು ಆಹಾರ ಶೋಧನೆಗಾಗಿ ಹೊರಟವೆಂದರೆ ಆ ದಾಳಿ ಭೀಕರವಾಗಿರುತ್ತದೆ.

ಅವು ಮೂರು, ಆರು, ಹನ್ನೆರಡರ ಸಾಲಾಗಿ ಹಾದಿಯಲ್ಲಿ ಬರುವ ಯಾವುದನ್ನೂ ಲೆಕ್ಕಿಸದೆ ದಂಡಯಾತ್ರೆ ಹೊರಟಿದ್ದನ್ನು ಕಂಡಿದ್ದೇನೆ. ತಮ್ಮ ಅತಿ ದೊಡ್ಡ ಶತ್ರು ಇದೇ ಎಂಬಂತೆ ಪ್ರಾಣಿಗಳು ಅವುಗಳ ಎದುರಿನಲ್ಲಿ ಓಡಿಹೋಗುವವು. ಕ್ರಿಮಿ-ಕೀಟಕಗಳೂ ಹಾಗೆಯೆ. ಎದುರು ಬಿದ್ದದ್ದೇ ಆದರೆ ಡ್ರೈವರ್ ಇರುವೆಗಳು ಅವಕ್ಕೆ ಯಮಪ್ರಾಯವಾಗುವವು.

ದೊಡ್ಡ ಬೆಂಕಿ ಅವುಗಳ ಹಾದಿಯನ್ನು ಬದಲಿಸಬಹುದು. ಅಥವಾ ಮುಂಚೂಣಿಯನ್ನು ಸುಟ್ಟುಹಾಕಬಹುದು. ಹಳ್ಳವೊ ನದಿಯೊ ಅವುಗಳನ್ನು ತಡೆಗಟ್ಟಿ ಬೇರೆ ಹಾದಿಯನ್ನು ಹುಡುಕುವಂತೆ ಮಾಡಬಹುದು. ಇವೆರಡರ ಹೊರತು ಅವುಗಳ ಹಾದಿಯನ್ನು ಕಟ್ಟಿ ಅವುಗಳ ಕ್ರೂರ ಮುನ್ನಡೆಯನ್ನು ನಿಲ್ಲಿಸಬಲ್ಲ ಮತ್ತಾವ ಶಕ್ತಿಯೂ ಇಲ್ಲವೆನ್ನಬಹುದು.

ಈ ಡ್ರೈವರ್ ಇರುವೆಗಳೆಂದರೆ ನನಗೆ ಮೈ ಮುಳ್ಳೇಳುತ್ತದೆ. ಮಧ್ಯ ಅಮೇರಿಕದ ಎಝುಟೆಕ್ ಇಂಡಿಯನ್ನರು ತಾವು ಬಲಿಕೊಡಲಿರುವ ಮನುಷ್ಯರನ್ನು ಈ ಇರುವೆಗಳ ದಂಡಿಗೆ ಒಪ್ಪಿಸುತ್ತಿದ್ದರು ಎಂದು ಪ್ಯಾಟ್ ಹೇಳಿದ್ದೇನೂ ನನ್ನ ಭಯವನ್ನು ಕಡಿಮೆ ಮಾಡಲಿಲ್ಲ. ಆ ಇರುವೆಗಳು ಬಲಿಯನ್ನು ಸ್ವೀಕರಿಸಿ ಮುಂದೆ ತೆರಳಿದಾಗ ಹಗ್ಗದಿಂದ ಬಿಗಿದಿದ್ದ ಮನುಷ್ಯರು ಮಾಯವಾಗಿ ಅಲ್ಲಿ ಬರೇ ಎಲುಬಿನ ಪಂಜರ ಕಾಣಿಸುತ್ತಿತ್ತಂತೆ.

ಇವುಲು ನದೀ ತೀರದಲ್ಲಿ ಕೆಲ ತಿಂಗಳು ವಾಸಿಸಿದ ನಂತರ ನನಗೆ ಈ ಡ್ರೈವರ್ ಇರುವೆಗಳ ಪರಿಚಯ ಚೆನ್ನಾಗಿ ಆಯಿತು. ನಾನು ಅವುಗಳಿಂದ ದೂರವೇ ಇರುತ್ತಿದ್ದೆ. ಅವೂ ಅಷ್ಟು ಮಾಡಿದರೆ ಸಾಕು ಎಂದುಕೊಳ್ಳುತ್ತಿದ್ದೆ.

ಆದರೆ ಒಂದು ಎಪ್ರಿಲ್ ರಾತ್ರಿ ನನ್ನ ಗತ್ತು ನಡೆಯಲಿಲ್ಲ. ಮಲಗುವ ಹೊತ್ತಾಗಿಹೋಗಿತ್ತು. ನಾನು ತಲೆದಿಂಬುಗಳ ರಾಶಿಗೆ ಆತುಕೊಂಡು ದೂರದಲ್ಲಿ ನ್ಯೂಯಾರ್ಕ್ ನಗರದಲ್ಲಿದ್ದ ನನ್ನ ತಂದೆ ತಾಯಿಗಳಿಗೆ ಪತ್ರ ಬರೆಯುವುದರಲ್ಲಿ ಮಗ್ನಳಾಗಿದ್ದೆ.

ಹಾಸಿಗೆಯ ಬಳಿ ಚಾಪೆಯ ಮೇಲೆ ನನ್ನ ನಾಯಿ ಮೆಡಮಾಯಿಲ್ ಮಲಗಿತ್ತು. ಪ್ಯಾಟ್ ನನಗೆ ಒಂದು ವಾರದ ಹಿಂದೆ ತಂದುಕೊಟ್ಟಿದ್ದ ಚಿಂಪಾಂಝಿ ಮರಿ ತನ್ನ ಪಂಜರದಲ್ಲಿ ತೂಕಡಿಸುತ್ತಿತ್ತು.

ಆಗ ನನ್ನ ಕಿವಿಗೆ ಮಾಡಿನ ಮೇಲಣ ಒಣಗಿದ ಎಲೆಗಳಲ್ಲಿ ಸರಸರ ಸದ್ದಾದುದು ಕೇಳಿಸಿತು. ಒಂದು ಚೇಳು ಕೆಳಗೆ ಬಿದ್ದು ಬಾಗಿಲ ಹೊರಗೆ ಓಡಿತು. ಲಾಂದ್ರದ ಬೆಳಕಿನಲ್ಲಿ ಮಾಡಿನಿಂದ ಕೆಳಗೆ ಉದುರುತ್ತಿದ್ದ ಕ್ರಿಮಿಕೀಟಕಗಳು ಬಾಗಿಲ ಹೊರಗೆ ಧಾವಿಸುತ್ತಿರುವುದನ್ನು ಕಂಡೆ. ಮೆಡಮಾಯಿಲ್ ಕುಂಯಿಗುಟ್ಟಿತು. ಚಿಂಪಾಂಝಿ ಮರಿ ಭಯದಿಂದ ಹಲ್ಲುಕಟಿಯಿತು. ನಾಯಿಗೆ ಅಂಜಿಕೆಯಾಗಲು ಕಾರಣವೇನು ಎಂದು ನನಗೆ ತಿಳಿಯದಾಯಿತು.

ಪ್ರಾಣಿಗಳನ್ನು ನೋಡಿಕೊಳ್ಳುತ್ತಿದ್ದ ಅಬಾಝುಂಗಾ ಧಬಧಬ ಬಾಗಿಲು ಬಡಿದ. "ಮ್ಯಾಡಮ್, ಬದುಕಬೇಕೆಂದಿದ್ದರೆ ಮನೆಯ ಹೊರಗೆ ಬನ್ನಿ" ಎಂದಾತ ಕೂಗಿದ.

ನಾನು ಬಾಗಿಲು ತೆರೆದೆ. "ಬ್ವಾನಾ (ಒಡೆಯ) ನನ್ನನ್ನು ಕಳಿಸಿದ್ದಾರೆ. ಇರುವೆಗಳು ಬಂದಿವೆ. ನಾವಿಲ್ಲಿಂದ ಓಡಬೇಕು" ಎಂದ ಅಬಾಝುಂಗಾ.

ಆಗ ನನಗೆ ಅರ್ಥವಾಯಿತು. ಸಮೀಪದಲ್ಲೆಲ್ಲೂ ಆ ಕುರುಡು ಡ್ರೈವರ್ ಇರುವೆಗಳ ದಂಡು ಬರುತ್ತಲಿತ್ತು. ಮಾಡಿನ ಮೇಲಿಂದ ಕ್ರಿಮಿಕೀಟಕಗಳು ಉದುರಿ ಓಡಿದ್ದರ, ಮೆಡ-

ಮಾಯಿಲಳ ಭಯದ ಕಾರಣ ತಿಳಿಯಿತು.

ನಾಯಿಗಾಗಿ ಸಿಳ್ಳು ಹಾಕಿ ಬಾಗಿಲ ಬಳಿ ಬಂದೆ. "ಹೊತ್ತು ಕಳೆಯಬೇಡಿ. ಎಲ್ಲವೂ ಇದ್ದಲ್ಲಿ ಇರಲಿ" ಎಂದು ಅಪ್ಪಣೆ ಮಾಡಿದ ಅಬಾಝಿಂಗಾ.

ಹೊರಗೆ ಲಾಂದ್ರಗಳು, ಟಾರ್ಚುಗಳು ಬೆಳಕು ಕೊಡುತ್ತಿದ್ದವು. ಬೇಲಿಯ ಕೊಟ್ಟಿಗೆಯಿಂದ ಪ್ರಾಣಿಗಳನ್ನು ಹೊರಗೆ ತರುತ್ತಿದ್ದರು. ಆಳುಗಳು ಉದ್ವಿಗ್ನರಾಗಿ ಅತ್ತಿತ್ತ ಓಡುತ್ತ ನಮ್ಮ ಹಂದಿಗಳು, ಮಿಕಗಳು, ಮಂಗಗಳನ್ನು ಸುರಕ್ಷಿತ ಸ್ಥಳಕ್ಕೆ ಸಾಗಿಸುತ್ತಿದ್ದರು.

"ಅಲಿಲಿಯ ಪಿಗ್ಮಿಗಳು ಮೊದಲು ಅವನ್ನು ನೋಡಿದರು. ಅವೀಗ ತೋಟದೊಳಗೆ ಬಂದಿವೆ" ಎಂದ ಪ್ಯಾಟ್.

ನಾನು ಅವುಗಳನ್ನು ದ್ವೇಷಿಸುತ್ತಿದ್ದೆನಾದರೂ ಅವನ್ನು ನೋಡಬೇಕೆಂಬ ಚಪಲವಿದ್ದುದರಿಂದ ಗ್ಯಾರೇಜಿನ ಹಿಂದಿದ್ದವರೊಡನೆ ಸೇರಿಕೊಂಡೆ. ಇರುವೆಗಳೀಗ ಒಂದು ಬೇಲಿಯೊಳಗಿಂದ ನುಗ್ಗಿ ಬರುತ್ತಿದ್ದವು. ಮುಖ್ಯ ಸಾಲು ಹೋಟೆಲ್ಲಿನ ಪಶ್ಚಿಮ ದಿಕ್ಕಿನಿಂದ ಸಾಗಿ ನೇರವಾಗಿ ನನ್ನ ಮನೆಯತ್ತ ಹೊರಟಿತ್ತು. ಆ ಅಸಹ್ಯ, ಕುರೂಪಿ ದಂಡಿನ ಹಿಂಭಾಗ ನನಗೆ ಕಾಣಿಸುತ್ತಿರಲಿಲ್ಲ.

"ಬೆಂಕಿಯನ್ನುರಿಸಿ ನಾವು ಅವುಗಳನ್ನೇಕೆ ಬೇರೆಡೆ ತಿರುಗಿಸಬಾರದು ?" ಎಂದು ಪ್ಯಾಟನನ್ನು ಕೇಳಿದೆ.

"ಸಮಯ ಸಾಲದು. ಮತ್ತೆ ದಾರಿ ಬದಲಿಸಿ ಅವು ಆಸ್ಪತ್ರೆಗೆ ಹೋಗಬಹುದು. ಆಗ ಇನ್ನೂ ಅನಾಹುತವಾದೀತು."

ನನ್ನ ಮನೆಯನ್ನು ಅವು ಪ್ರವೇಶಿಸುವ ವಿಚಾರವೇ ನನಗೆ ಅಸಹ್ಯವಾಗಿತ್ತು.

ಇರುವೆಗಳ ದಂಡು ಹಾದಿ ಬದಲಿಸುತ್ತಿದೆಯೆ ಎಂದು ಪಾಟ್ ನಿರೀಕ್ಷಿಸುತ್ತಿದ್ದ. ಆಳುಗಳು ಚಿಮಣಿಎಣ್ಣೆಯಲ್ಲಿ ಅದ್ದಿದ ಅರಿವೆ ತುಂಡುಗಳಿಗೆ ಬೆಂಕಿ ಹಚ್ಚಿ ಒಂದೆರಡು ಸಲ ಇರುವೆಗಳ ದಂಡಿನ ಅಂಚಿಗೆ ಬೀಸಿದರು.



ಪಿಗ್ಮಿ ನೃತ್ಯ

ಇರುವೆಗಳು ಇಷ್ಟು ವೇಗದಿಂದ ಹೋಗುವವೆಂಬ ಕಲ್ಪನೆ ನನಗಿರಲಿಲ್ಲ. ಆದರೆ ಇವು ಡ್ರೈವರ್ ಇರುವೆಗಳು. ಕಲ್ಪನಾತೀತ ವೇಗದಿಂದ ಅವು ಸಾಗಿದ್ದವು.

ಅವು ನನ್ನ ಮನೆಯ ಗೋಡೆಯ ಬಳಿ ಬಂದಾಗ ನನಗೆ ಚಿಂಪಾಂಝಿ ಅಂಜಿಕೆಯಿಂದ ಹುಚ್ಚೆದ್ದು ಅರಚುವುದು ಕೇಳಿಸಿತು. ಅಬಾಝಿಂಗಾನ ಹೇಳಿಕೆಯಂತೆ ನಾನು ಓಡಿಬಂದಾಗ ಅದರ ಪಂಜರದ ಬಾಗಿಲನ್ನು ತೆರೆಯದೆ ಬಂದಿದ್ದೆ. ಫೈಜಿ ಹೇಳಿದ ಮಾತುಗಳು ನೆನಪಾದವು. ಓಡಿ ಹೋಗಲು ಅಥವಾ ಹಾರಿಹೋಗಲು ಬಾರದ ಯಾವುದಕ್ಕೂ ಈ ಇರುವೆಗಳ ಎದುರು ಉಳಿಗಾಲವಿಲ್ಲ ಎಂದಿದ್ದನಾತ.

ಯಾವ ಯೋಚನೆಯನ್ನೂ ಮಾಡದೆ ಮನೆಯತ್ತ ಓಡಿದೆ. "ಹಿಂತಿರುಗು ಮೂರ್ಖಳೇ," ಎಂದು ಪ್ಯಾಟ್ ಕೂಗಿದ.

ನಾನು ಬಾಗಿಲನ್ನು ದೂಡಿ ಒಳಗೋಡಿದೆ.

ಚಿಂಪಾಂಝಿ ಅಂಜಿಕೆಯಿಂದ ಚೀರುತ್ತ ಪಂಜರದ ಗಳದ ಸಲಾಕೆಗಳನ್ನು ಅಲ್ಲಾಡಿಸುತ್ತಿತ್ತು. ನಾನು ಚಿಲಕವನ್ನು ತೆರೆದೆ.

ಆಗ ಮೊದಲನೆಯ ಇರುವೆ ಕಡಿಯಿತು. ಅದರ ಹಿಂದೆಯೆ ಇನ್ನೊಂದು, ಮತ್ತೊಂದು ಆ ಕಡಿತದ ನೋವು ಕಡಜೇರಿಗೆ ಹುಳದ ಕಡಿತದ ನೋವಿನಂತಿತ್ತು. ನಾನು ನೋವಿನಿಂದ ಚೀರಿದೆ.

ಅಂಜಿಕೆ ನನ್ನಲ್ಲಿ ಎಲ್ಲಿಲ್ಲದ ಶಕ್ತಿಯನ್ನು ತಂದಿತು. ಒಮ್ಮೆ ಬಲವಾಗಿ ಎಳೆದು ಪಂಜರದ ಬಾಗಿಲನ್ನು ತೆರೆದೆ. ಒಳಗೆ ಕೈಹಾಕಿ ಚಿಂಪಾಂಝಿ ಮರಿಯನ್ನು ಎತ್ತಿಕೊಂಡು ಹೊರಗೆ ಸುರಕ್ಷಿತ ಸ್ಥಳಕ್ಕೆ ಓಡಿದೆ. ನನ್ನ ಹಿಂದೆ ಗುಡಿಸಲಿನಲ್ಲಿ ಸಹಸ್ರಗಟ್ಟಲೆ, ಲಕ್ಷಗಟ್ಟಲೆ ಇರುವೆಗಳ ಮುನ್ನುಗ್ಗುವಿಕೆಯ ಸದ್ದು ಕೇಳಿಬರುತ್ತಿತ್ತು.

ನಾನು ಹೋಟೆಲ್ಲಿಗೆ ಹೋಗಿ ಚಿಂಪಾಂಝಿಯನ್ನು ಅಬಾಝಿಂಗಾನಿಗೆ ಒಪ್ಪಿಸಿದೆ. ಆತ ಇರುವೆಗಳ ದಂಡಯಾತ್ರೆಯ ಪ್ರತ್ಯಕ್ಷ ವರದಿಯನ್ನು ಬಿತ್ತರಿಸುವ ಜೊತೆಗೆ ಗುಡಿಸಲಿನ ಬಗ್ಗೆ ಚಿಂತೆ ಮಾಡುವ ಅಗತ್ಯವಿಲ್ಲವೆಂದ. "ಇದೂ ಒಳ್ಳೇಯದೇ. ಗುಡಿಸಲಿನಲ್ಲಿರುವ ಒಂದೇ ಒಂದು ಕೀಟಕ ಅಥವಾ ಅದರ ಮೊಟ್ಟೆಯನ್ನು ಇರಗೊಡುವುದಿಲ್ಲ ಈ ಇರುವೆಗಳು. ಎಲ್ಲವೂ ಸ್ವಚ್ಛವಾಗಿಹೋಗುವುದು" ಎಂದನಾತ.

ಎರಡು ತಾಸುಗಳ ವರೆಗೆ ಕಂಪೌಂಡಿನಲ್ಲಿ, ನನ್ನ ಗುಡಿಸಲಿನಲ್ಲಿ ಈ ಇರುವೆಗಳ ಕೋಲಾಹಲ ನಡೆದಿತ್ತು. ನಂತರ ಅವು ಆಚೆಯ ಅಡವಿಗೆ ನಡೆದವು.

ಅಂದು ರಾತ್ರಿ ಏನು ಕೊಟ್ಟರೂ ನಾನು ನನ್ನ ಗುಡಿಸಲಿಗೆ ಹೋಗುತ್ತಿರಲಿಲ್ಲ. ಹೋಟೆಲಿನ ಒಂದು ಕೋಣೆಯಲ್ಲಿ ಮಲಗಿಕೊಂಡೆ.

ಬೆಳಗಾಯಿತು. ಸ್ವಚ್ಛ ಸೂರ್ಯಪ್ರಕಾಶ ಬಿದ್ದಿತ್ತು. ಹೋಟೆಲ್ಲಿನ ಜಗುಲಿಯಲ್ಲಿ ನಿಂತಾಗ ರಾತ್ರಿ ಲಕ್ಷಗಟ್ಟಲೆ ಇರುವೆಗಳ ದಂಡಯಾತ್ರೆ ನಡೆದಿತ್ತು ಎಂಬುದರ ಕುರುಹೊಂದೂ ಕಾಣುತ್ತಿರಲಿಲ್ಲ.

ನನ್ನ ಮನೆಯಲ್ಲೂ ಹಾಗೇ. ಮನೆಯನ್ನು ಪ್ರವೇಶಿಸುವ ಧೈರ್ಯಮಾಡಿ ನಾನು ಒಳಗೆ ಕಾಲಿಟ್ಟಾಗ ಎಲ್ಲವೂ ಅಸ್ತವ್ಯಸ್ತವಾಗಿರುವುದು ಎಂದೆಣಿಸಿದ್ದೆ. ಎರಡು ತಾಸುಗಳ ವರೆಗೆ ಮನೆಯಲ್ಲಿ ಎಲ್ಲೆಲ್ಲೂ ಪರೀಕ್ಷಿಸಿ ನೋಡಿದೆ. ಹಿಂದಿನ ಸಂಜೆ ಎಣ್ಣೆಯಿಂದ ತುಂಬಿದ್ದ ಒಂದು ಕಪ್ಪು ಈಗ ಅರಿವೆಯಿಂದ ಚೆನ್ನಾಗಿ ಒರೆಸಿಟ್ಟಂತಿತ್ತು. ಚಿರತೆಯ ಮುಖವನ್ನು ಹೋಲುತ್ತಿದ್ದ ಒಂದು ಓಗ್ಮಿನೃತ್ಯದ ಮುಖವಾಡದ ಮೇಲ್ಭಾಗ (ಅದು ಚಿರತೆಯ ಚರ್ಮದ್ದು) ಕಣ್ಮರೆಯಾಗಿತ್ತು. ಇವೆರಡನ್ನು ಬಿಟ್ಟರೆ ಆ ಮನೆಯಲ್ಲಿ ಲಕ್ಷಗಟ್ಟಲೆ ಇರುವೆಗಳು ಒಂದು ನೆಲ, ಗೋಡೆ ಮತ್ತು ಮಾಡಿನ ಮೇಲೆ ಒಂದು ಇಂಚು ಕೂಡ ಸ್ಥಳ ಬಿಡದೆ ಪರೀಕ್ಷೆ ನಡೆಸಿಹೋಗಿದ್ದವು ಎಂಬುದಕ್ಕೆ ಬೇರಾವ ಸಾಕ್ಷಿಯೂ ಇರಲಿಲ್ಲ.

ನನ್ನ ಮನೆಯ ಮೇಲೆ ಡ್ರೈವರ್ ಇರುವೆಗಳ ದಾಳಿಯಾಗಿ ಎಷ್ಟೋ ವರ್ಷಗಳು ಸಂದಿವೆ. ಆದರೆ ನನಗೆ ಹೇಳಿಕೊಳ್ಳಲು ನಾಚಿಕೆಯಾಗುವಷ್ಟು ಸಲ ರಾತ್ರಿ ನನ್ನ ಮೈಮೇಲೆ ಅವುಗಳ ದಾಳಿಯಾದ ಕನಸು ಬಿದ್ದು ನಾನು ಅಂಜಿ ಬೆವತು ಎಚ್ಚತ್ತಿದ್ದೇನೆ.

ಒಂದು ಮುಂಜಾನೆ ನದಿಯಲ್ಲಿ ಮೊಸಳೆಗಳು ಚಿನ್ನಾಟ ಮಾಡುವುದನ್ನು ನೋಡುತ್ತ ಜಗಲಿಯ ಮೇಲೆ ಕುಳಿತಿದ್ದೆ.

ಆಸ್ಪತ್ರೆಯಿಂದ ಒಬ್ಬ ಆಳು ಬಂದು "ಬ್ವಾನಾ ಕೊಟ್ಟರು" ಎಂದು ಒಂದು ಚೀಟಿಯನ್ನು ಕೊಟ್ಟ. ನನಗೇನಾದರೂ ಹೇಳಬೇಕಾದಲ್ಲಿ ಪ್ಯಾಟ್ ಹೀಗೆ ಚೀಟಿ ಕಳಿಸುತ್ತಿದ್ದ. "ಏನ್, ಕೂಸಿನ ಹಾಲಿನ ಬಾಟ್ಲಿ ಮತ್ತು ನಿಪಲ್ಸ್‌ಗಳನ್ನು ಹುಡುಕಿ ಶುದ್ಧಗೊಳಿಸಿಟ್ಟಿರು. ಇಷ್ಟರಲ್ಲಿಯೆ ಬರುತ್ತೇನೆ" ಎಂದು ಬರೆದಿತ್ತು ಚೀಟಿಯಲ್ಲಿ.

ಇದರಲ್ಲೇನೂ ವಿಶೇಷವಿರಲಿಲ್ಲ. ತನ್ನ ಪ್ರಾಣಿ-ಸಂಗ್ರಹಾಲಯಕ್ಕೆ ಪ್ಯಾಟ್ ಯಾವಾಗಲೂ ಹೊಸ ಪ್ರಾಣಿಗಳನ್ನು ತರುತ್ತಿದ್ದ. ಅವುಗಳಲ್ಲಿ ಎಷ್ಟೋ ಇನ್ನೂ ಚಿಕ್ಕ ಮರಿಗಳಾಗಿರುತ್ತಿದ್ದವು. ಅವಕ್ಕೆ ಬಾಟ್ಲಿಯ ಮೂಲಕ ಆಹಾರ ಹಾಕ-ಬೇಕಾಗುತ್ತಿತ್ತು.

ಕೊಟ್ಟಿಗೆಯಿಂದ ಅಬಾಝಿಂಗಾ ಬಂದ. ಇಬ್ಬರೂ ಕೂಡಿ ಹುಡುಕಾಡಿದೆವು. ಎರಡು ನಿಪಲ್ಸ್‌ಗಳೇನೊ ಸಿಕ್ಕವು. ಆದರೆ ಬಾಟ್ಲಿ ಸಿಗಲಿಲ್ಲ. ಕೊನೆಗೆ ಚಿಕ್ಕ ಬಾಯಿಯ ಒಂದು ಬೀರ್ ಬಾಟ್ಲಿಯನ್ನೂ (ಅದಕ್ಕೆ ನಿಪಲ್ಸ್‌ಗಳನ್ನು ಕೂಡಿಸಬಹುದಿತ್ತು) ನಿಪಲ್ಸ್‌ಗಳನ್ನೂ ಒಂದು ಪಾತ್ರೆಯಲ್ಲಿ ಕುದಿಸಲಿಕ್ಕಿಟ್ಟೆ.

ಈ ಕೆಲಸದ ನಡುವೆ ಇಪುಲು ನಾಡಿನಲ್ಲಿ ಸಾಮಾನ್ಯವಾಗಿದ್ದ ಕಿಬಿರಾ ಭಾಷೆಯಲ್ಲಿ ಅನೇಕ ಜನರು ಮಾತಾಡುತ್ತಿರುವುದನ್ನು ಕೇಳಿದೆ. ನನಗೆ ಅದರ ಒಂದಕ್ಷರವೂ ಅರ್ಥವಾಗುತ್ತಿರಲಿಲ್ಲ.

ಕತ್ತೆತ್ತಿದಾಗ ಒಬ್ಬ ಚೆನ್ನಾಗಿಯೆ ಉಡುಪು ಧರಿಸಿದ್ದ ಎತ್ತರದ ನಿಗ್ರೋನ ಹಿಂದೆ ಹತ್ತು ಹನ್ನೆರಡು ಪಿಗ್ಮಿಗಳು ಬರುತ್ತಿರುವುದನ್ನು ಕಂಡೆ. ಆತನ ವಿನಯಪೂರ್ಣ ಮಾತು ಕೇಳಿದಾಗ ಆತ ಅರಬ್ಬೀ ಪ್ರಭಾವಕ್ಕೊಳಗಾದ ನಿಗ್ರೋ ಎಂದು ಅನಿಸಿತು.

ಆತ ತಾನು ಕಾಪಾಪೇಲಾ ಎಂದು ಪರಿಚಯ ಮಾಡಿಕೊಟ್ಟು ಆ ಎಲ್ಲ ಪಿಗ್ಮಿಗಳು ತನ್ನ ಆಸ್ತಿ ಎಂದ.

ಅವರನ್ನು ಕೂಡ್ರಿಸಲು ಹೇಳಿದೆ. ಕಾಪಾ-ಪೇಲಾ ಹೇಳಿದಾಗ ಪಿಗ್ಮಿಗಳೆಲ್ಲ ಕುಳಿತರು. ಮಂಚದ ಮೇಲೆ ಅವರು ಕೂಡ್ರುವ ರೀತಿ ಆಶ್ಚರ್ಯಕರವಾದದ್ದು. ಸಾಮಾನ್ಯ ಅಳತೆಯ ಒಂದು ಮಂಚದಲ್ಲಿ ಏಳು ಜನ ಕುಳಿತಿದ್ದರೂ ಮಂಚವೇನೂ ತುಂಬಿದಂತೆ ಕಾಣುತ್ತಿರಲಿಲ್ಲ. ಆ ಏಳು ಜನರಲ್ಲಿ ಒಬ್ಬಳಿಗೆ ಮಾತ್ರ ಸ್ವಲ್ಪ ತೊಂದರೆಯಾದಂತೆ ಕಾಣಿಸುತ್ತಿತ್ತು.

ಅವಳು ಹಲ್ಲಿಲ್ಲದ ಮುದುಕಿಯಾಗಿದ್ದಳು. ಕೂದಲು ಬೆಳ್ಳಗಾಗತೊಡಗಿದ್ದವು. ಮೈಮೇಲೆ ಒಂದೇ ಒಂದು ತೊಗಟೆಬಟ್ಟೆಯ ತುಣುಕಿತ್ತು. ಅವಳ ಒಣಗಿದ ಮೊಲೆಗಳು ಟೊಂಕದ ವರೆಗೂ ಇಳಿಬಿದ್ದಿದ್ದವು. ಅವಳ ಕುತ್ತಿಗೆಗೆ ಹೊಲಸು ನೀಲಿ ಅರಿವೆಯ ಜೋಳಿಗೆಯೊಂದಿತ್ತು. ಆ ಜೋಳಿಗೆಯಲ್ಲಿ ಬೆಕ್ಕಿನ ಮರಿಗಿಂತಲೂ ದೊಡ್ಡ ದಲ್ಲದ ಒಂದು ಕೂಸಿತ್ತು.

ಕಾಪಾಪೇಲಾ ಕಿಂಗ್ವಾನಾ ಭಾಷೆಯಲ್ಲಿ ಮಾತಾಡಿದ: "ಈ ಅಜ್ಜಿ ತನ್ನ ಮೊಮ್ಮಗು ವನ್ನು ತಂದಿದ್ದಾಳೆ. ಯಾವ ತೊಂದರೆಯಿಲ್ಲದೆ ತಾಯಿ ಮಗುವನ್ನು ಹೆತ್ತಳು. ಆದರೆ ಯಾವ ರೋಗವೂ ಇಲ್ಲದೆ ಅವಳು ಸತ್ತುಹೋದಳು. ಅಲ್ಲಿ ಕುಳಿತಿರುವ ಮನುಷ್ಯ ಅವಳ ಗಂಡ. ಆತ, ಈ ಮುದುಕಿ, ಆ ಹುಡುಗ ಈ ಮೂವ ರನ್ನು ಬಿಟ್ಟರೆ ಕೂಸಿಗೆ ಮತ್ತಾರೂ ಇಲ್ಲ. ಎರಡು ದಿನಗಳಿಂದಲೂ ಕೂಸಿಗೆ ಬಾಳೆ-ಹಣ್ಣಿನ ನೀರನ್ನು ಕುಡಿಸುತ್ತಿದ್ದಾರೆ. ಆ ಮುದು-ಕಿಯ ಮೊಲೆಯಲ್ಲಿ ಹಾಲಿಲ್ಲ. ಬ್ವಾನಾ ಪುಟ್ನಾ-ಮಿಯ ಸಹಾಯಕ್ಕಾಗಿ ಇಂದು ಬೆಳಗೆಲ್ಲ ನಡೆದು ಬಂದಿದ್ದೇವೆ. ಆತ ನಮ್ಮನ್ನು ಇಲ್ಲಿಗೆ ಕಳಿಸಿದ."

ಹುಟ್ಟಿ ಎರಡೇ ದಿನಗಳಾಗಿದ್ದ ಕೂಸನ್ನು ನೋಡಿದೆ. ಚಾಕಲೇಟ್ ಬಣ್ಣದ, ವಯಸ್ಸಿಗೆ



ಹೊಗೆಯ ಸುಖ

ಮತ್ತು ಸಿಕ್ಕಿದ ಆಹಾರದ ಮಾನದಿಂದ ನೋಡಿದರೆ ದಪ್ಪವೇ ಎನಿಸುವಂತಿದ್ದ ಆ ಕೂಸು ಮುದ್ದಾಗಿತ್ತು. ಅದೀಗ ನಿದ್ರಿಸುತ್ತಲಿತ್ತು.

ಕೂಸು ಎಷ್ಟು ಚಿಕ್ಕದಿದೆ ಎಂದು ನೋಡಲು ಕೈಗೆತ್ತಿಕೊಂಡೆ. ಕುಳ್ಳರ ಪುಟ್ಟ ಕೂಸಾಗಿದ್ದರೂ ಅದು ಕಡೆದು ಮಾಡಿದಂತಿತ್ತು. ತಿರುಗಿ ಅದನ್ನು ಅದರ ಅಜ್ಜಿಯ ಕೈಲಿಟ್ಟೆ. ಅವಳು ಗಾಬರಿಯಿಂದ ಕಾಪಾಪೇಲಾನತ್ತ ದೃಷ್ಟಿ ಬೀರಿ ಕೂಸನ್ನು ತಟಕ್ಕನೆ ಮತ್ತೆ ನನ್ನ ಕೈಗೆ ಕೊಟ್ಟಳು.

ಕುಳ್ಳರ ಒಡೆಯ ಹೇಳಿದ: "ಅದನ್ನು ನಿಮ್ಮ ಕೈಗೆ ಕೊಡಲು ಬ್ವಾನಾ ಹೇಳಿದ್ದಾರೆ."

ನನಗೆ ಕೂಸುಗಳ ವಿಚಾರ ಏನೇನು ಗೊತ್ತಿರಲಿಲ್ಲವೊ ಅವನ್ನೆಲ್ಲ ಬರೆದರೆ ೨೦-೨೮ ಸಂಪುಟಗಳು ಸಾಲವು. ಪ್ಯಾಟನ ಬಳಿಯಲ್ಲಿದ್ದ ಹಳೆಯ ೧೯೧೧ ರ 'ವಿಶ್ವಕೋಶ' ವನ್ನು ತಿರುವಿಹಾಕಿದೆ. ಆಮೇಲೆ ಹಾಲಿನ ಹಿಟ್ಟಿನ ಡಬ್ಬಿಯೊಂದನ್ನು ಹುಡುಕಿ ತೆಗೆದೆ. ಅಹಾ! ಭಾಗ್ಯವೇ ಭಾಗ್ಯ. ಡಬ್ಬಿಯ ಮೇಲೆ ಹಾಲನ್ನು ತಯಾರಿಸುವ ಹಲವಾರು ವಿಧಾನಗಳು ಬರೆದಿದ್ದ ಚೀಟಿಯಿತ್ತು.

ಆಮೇಲೆ ಹಿಟ್ಟಿನ ಹಾಲು, ಕುದಿದ ನೀರು ಮತ್ತು ಬಾಳೆಹಣ್ಣುಗಳನ್ನು ನೆನೆಸಿಟ್ಟ ನೀರು ಇವುಗಳ ಮಿಶ್ರಣ ತಯಾರಾಯಿತು. ಅದನ್ನು ಶುದ್ಧಗೊಳಿಸಿದ ಬೀರ್ ಬಾಟ್ಲಿಗೆ ಸುರುವಿ ನಿಪಲ್ ತಗಲಿಸಿ ಅದನ್ನು ತಣ್ಣೀರಿನ ಬಾಲ್ದಿಯಲ್ಲಿಟ್ಟು ತಣ್ಣಗೆ ಮಾಡಿದೆ.

ಸುಖೋಷ್ಣವಾಗಿದೆ ಎಂದೆನಿಸಿದಾಗ ಬಾಟ್ಲಿಯನ್ನು ಮಗುವಿನ ಬಾಯಿಗೆ ಹಿಡಿದೆ. ಕೂಸು ಬಹುಕಾಲದ ರೂಢಿಯಿದ್ದವರಂತೆ ನಿಪಲ್ಲನ್ನು ಬಾಯಲ್ಲಿ ಹಿಡಿದು ಚೀಪತೊಡಗಿದ್ದನ್ನು ಕಂಡು ಆಶ್ಚರ್ಯದಿಂದ ಪಿಗ್ಮಿಗಳ ಕಣ್ಣುಗುಡ್ಡೆಗಳೇ ಹೊರಬಂದಂತಾದವು. ಕೂಸು ತಾಯಿಯ ಮೊಲೆಯೊಂದನ್ನು ಬಿಟ್ಟು ಮತ್ತೇನನ್ನೂ ಚೀಪಿದ್ದನ್ನು ಬಹುಶಃ ಅವರು ಕಂಡಿರಲಾರರು. ಈಗ ಅವರು ನಾನೊಬ್ಬ ಮಾಟಗಾರ್ತಿಯೇ ಇರಬೇಕು ಎಂದೆಣಿಸಿರಬೇಕು.

ಬಾಟ್ಲಿಯಲ್ಲಿದ್ದ ಮಿಶ್ರಣವನ್ನು ಕುಡಿದು ಮುಗಿಸುವ ಮೊದಲೇ ನನ್ನ ಮೇಲಿನ ಈ ಹೊಸ ಜವಾಬ್ದಾರಿ ನಿದ್ರಿಸಿಬಿಟ್ಟಿತು. ಚಿಕ್ಕ ಬಾಲಿಕೆಯೊಬ್ಬಳು ಲಂಗೋಟಿ ಚಡ್ಡಿಯೊಂದನ್ನು ಬಿಟ್ಟು ತನ್ನ ಗೊಂಬೆಯ ಉಳಿದೆಲ್ಲ ಅರಿವೆಯನ್ನು ಕಳಚಿ, ಅದನ್ನು ಮಲಗಿಸಿದಂತೆ ಕಾಣಿಸುತ್ತಿತ್ತು ಕುಳ್ಳರ ಕೂಸು.

ನಾನು ಅದನ್ನು ನಮ್ಮ ಜೋಡು ಗಾದಿಯ ನಡುವೆ ಮಲಗಿಸಿದೆ. ಬರ್ಫಾಚ್ಛಾದಿತವಾದ ಹೊಲದ ಮೇಲೆ ಮಲಗಿರುವ ಕರಿ ಬೆಕ್ಕಿನ ಮರಿಯಂತೆ ಆ ಕೂಸು ಕಾಣಿಸುತ್ತಿತ್ತು.

ನಾನು ಮತ್ತೊಮ್ಮೆ ಅದಕ್ಕೆ ಬಾಟ್ಲಿಯ ಹಾಲು ಕುಡಿಸಿದೆ. ಆ ಅದ್ಭುತವನ್ನು ನೋಡಲು ಕುಳ್ಳರು ಮಂಚದ ಸುತ್ತ ಮುತ್ತಿದರು. ಇನ್ನು ಎಲ್ಲ ಸರಿಹೋಯಿತು ಎಂದು ಅವರಿಗೆ ನಂಬಿಕೆಯಾದಂತೆ ಕಂಡಿತು. ಅಜ್ಜಿ ಮಗುವಿನ ಮೇಲೆ ಕೈಯಾಡಿಸಿ ಎಲುಬು-ಚರ್ಮಗಳ ಸರಳಿನಂತಿದ್ದ ತನ್ನ ಕೈಯನ್ನು ನನ್ನ ಹೆಗಲಮೇಲಿಟ್ಟು ಕಿಬಿರಾ ಭಾಷೆಯಲ್ಲಿ ಏನನ್ನೊ ಹೇಳಿದಳು. ನನಗೆ ಅದು ತಿಳಿಯದಿದ್ದರೂ ದುಭಾಷಿಯ ಆಗತ್ಯವೆನಿಸಲಿಲ್ಲ. ಅವಳು ಹೇಳಿದ್ದರ ಅರ್ಥ ನನಗಾಯಿತು. ಅವಳ ಕಣ್ಣುಗಳಿಂದ ನೀರು ಹೊರಟು ಗಲ್ಲದ ಮೇಲಿಳಿಯಿತು. ಅವಳೆಂದದ್ದನ್ನು ನಾನು ಅಕ್ಷರಶಃ ಗ್ರಹಿಸಬಲ್ಲವಳಾಗಿದ್ದೆ.

ಕಾಪಾಪೇಲಾ ಮತ್ತು ಅವನ ಕುಳ್ಳರು ಸ್ವಗ್ರಾಮಕ್ಕೆ ಹೊರಟರು. ನಾನು ಮಗುವಿನ ಲಂಗೋಟಿ ಚಡ್ಡಿಗಾಗಿ ಹಳೆಯ ಅರಿವೆ ಹುಡುಕಿ ತೆಗೆದೆ. ಆ ಅರಿವೆಯನ್ನು ಚೌಕ ತುಂಡುಗಳಾಗಿ ಕತ್ತರಿಸುತ್ತ ಕುಳಿತಿದ್ದಾಗ ಆಸ್ಪತ್ರೆಯಿಂದ ಪ್ಯಾಟ್ ಬಂದ. ಅವನ ಕೈಲಿ ಒಂದು ಕ್ಯಾಲೆಂಡರಿತ್ತು. ಆತ ಬಾಗಿಲ ಬಳಿ ತನ್ನ ಗಡ್ಡವನ್ನು ನೀವುತ್ತ ನಿಂತಿದ್ದಾಗ ಅವನ ನೀಲಿ ಕಣ್ಣುಗಳು ತುಂಟನಗು ನಗುತ್ತಿದ್ದವು.

ಬಿಳಿಯ ದೊಡ್ಡ ಹಾಸಿಗೆಯ ಮೇಲೆ ಮಲಗಿದ್ದ ಚಾಕಲೆಟ್ ಬಣ್ಣದ ಕೂಸನ್ನು ಕಂಡಾಗ ನನ್ನ ಹೃದಯದಲ್ಲಿ ಏನೋ ಒಂದು ಮಹತ್ವದ ಭಾವನೆ ಉದಯಿಸಿತು. ಅದಕ್ಕೆ ಸಹಾಯ ಬೇಕಿತ್ತು. ಆ ಸಹಾಯವನ್ನು ನಾನು ಮಾಡಬಲ್ಲವಳಾಗಿದ್ದೆ. ಆದರೆ ಈ ಸಂತೋಷಭಾವದ ಜೊತೆಯಲ್ಲಿ ಹೊಟ್ಟೆಯಲ್ಲಿ ಒಂದು ಭೀತಿಯ ಭಾವನೆಯೂ ಇತ್ತು.

ಮಗುವಿಗೆ ಬೇಕಾದ ವಸ್ತುಗಳು ಸಿಗಬಹುದಾಗಿದ್ದ ಅತಿ ಸಮೀಪದ ನಗರವಾದ ಸ್ಟಾನ್ಲೆವಿಲೆ ನಮ್ಮ ಪುಟ್ನಾಮ ಶಿಬಿರದಿಂದ ೨೬೫ ಮೈಲು ದೂರವಿತ್ತು. ನನ್ನೆದುರು ಕಠಿನ ಪ್ರಸಂಗವೇ ತಲೆಯೆತ್ತಿ ನಿಂತಿತ್ತು.

ಕಿಟಿಕಿಬಾಗಿಲುಗಳ ಹಳೆಯ ಪರದೆಗಳನ್ನು ಹರಿದು ಮೂವತ್ತಾರು ಲಂಗೋಟಿ ಚಡ್ಡಿಗಳನ್ನು ತಯಾರಿಸಿದೆ. ಮಗ್ಗಲು ಹಾಸಿಗೆಗಳನ್ನು ಮಗುವಿನ ಅಳತೆಗೆ ಹರಿದೆ: ಪಡಸಾಲೆಯಲ್ಲಿದ್ದ ಕುರ್ಚಿಯ ಮೇಲಿನ ಗಾದಿ ಮಗುವಿನ ಗಾದಿಯಾಯಿತು. ಮಾಂಸದ ನಾಲ್ಕು ಡಜನ್ ಡಬ್ಬಿಗಳನ್ನು ತುಂಬಿದ್ದ ದಪ್ಪ ಗಟ್ಟಿರಟ್ಟಿನ ಪೆಟ್ಟಿಗೆ ತೊಟ್ಟಿಲಾಯಿತು.

ಆದರೆ ಹಾಸಿಗೆಯ ಮೇಲೆ ಹಾಸಲು ರಬ್ಬರ್ ಶೀಟ್ ಬೇಡವೆ? ಸ್ಟಾನ್ಲೆವಿಲೆಯಲ್ಲಿ ಕೂಡ ಅದು ಸಿಗುವ ಸಂಭವವಿರಲಿಲ್ಲ. ಈ ಸಮಸ್ಯೆಯನ್ನೂ ನಾನು ಬಗೆಹರಿಸಿಕೊಂಡೆ. ಮೊಂಗೊಂಗೊ ಎಲೆಗಳು ನೀರಿನಲ್ಲಿ ತೋಯುವುದಿಲ್ಲ ಎಂಬುದು ನೆನಪಾಗಿ ಒಬ್ಬ ಹುಡುಗನಿಂದ ಅವನ್ನು ತರಿಸಿ ಗಾದಿಯ ಮೇಲೆ ಹಾಸಿದೆ. ಅದರ ಪರೀಕ್ಷೆಯೂ ಬೇಗನೆ ಆಗಿ ಅದು ಗೆದ್ದಿತು.

ಅಂದಿನ ದಿನ ರಾತ್ರಿ ನಮ್ಮ ಮನೆ ಹುಚ್ಚರ ಮನೆಯಂತಿತ್ತು. ಎರಡೇ ನಿಪಲ್ಸ್‌ಗಳು, ಅವನ್ನು ಕೂಡಿಸಬಹುದಾದಂಥ ಕೆಲವೇ ಬಾಟ್ಲಿಗಳು ದಿನವಿಡೀ ನಾನು ಏನನ್ನಾದರೂ ಕುದಿಸಿ ಶುದ್ಧಿಗೊಳಿಸುವುದರಲ್ಲಿ ಮಗ್ನಳಾಗಿದ್ದೆನೆನ್ನಬಹುದು.

ಕೂಸಿಗೆ ಮಧ್ಯರಾತ್ರಿಯಲ್ಲಿ ಹಾಲು ಕುಡಿಸುವ ಹೊತ್ತಿಗೆ ನನ್ನ ಅವಸ್ಥೆ ಮುಗಿದೇ ಹೋಗಿತ್ತು. ಸಾಮಾನ್ಯವಾಗಿ ಸದಾ ಉತ್ಸಾಹಿಯಾಗಿರುವ ಪ್ಯಾಟ್‌ನ ಸ್ಥಿತಿ ಕೂಡ ಹಾಗೆಯೆ ಇತ್ತು. ಇಬ್ಬರೂ ಮಲಗಿದೆವು ನಿಜ, ಆದರೆ ನಿದ್ದೆ ಬರಲಿಲ್ಲ. ಪ್ರತಿ ಕೆಲ ನಿಮಿಷಗಳಿಗೊಮ್ಮೆ ನಾನು ಜಿಗಿದೆದ್ದು ತೊಟ್ಟಿಲಲ್ಲಿ ಮಗು ಏನುಮಾಡುತ್ತಿದೆ ಎಂದು ನೋಡುತ್ತಿದ್ದೆ. ಅದಾದರೊ ಗಾಢವಾಗಿ ನಿದ್ರಿಸಿತ್ತು.

ಮುಂಜಾನೆ ಆರರ ಸುಮಾರಿಗೆ ಮಗು ಅಳತೊಡಗಿತು. ನಾವಿಬ್ಬರೂ ಮೇಲಕ್ಕೆತ್ತಿ ಒಗೆಯಲ್ಪಟ್ಟವರಂತೆ ಹಾಸಿಗೆಯಿಂದ ಜಿಗಿದೆವು.

ನಾನು ಅದರ ಹಾಲಿನ ಬಾಟ್ಲಿಯನ್ನು ತಯಾರಿಸಿ ತರುವವರೆಗೆ ಪ್ಯಾಟ್ ಅದನ್ನು ಎತ್ತಿಕೊಂಡಿರಬೇಕಾಯಿತು. ಮಗು ಬಹು ಸುಖದಿಂದ ಹಾಲು ಚೀಪಿತು. ಹಾಲು ತೀರುವುದರೊಳಗಾಗಿ ಎರಡು ಸಲ ಲಂಗೋಟಿ ಚಡ್ಡಿಯನ್ನು ಒದ್ದೆ ಮಾಡಿಕೊಂಡಿತು. ನನ್ನ ಮತ್ತು ಪ್ಯಾಟನ ಉಪಾಹಾರವಾದೊಡನೆ ಮತ್ತಾವ ಸೂಚನೆಗಳನ್ನೂ ಓದುವ ಹವ್ಯಾಸಕ್ಕೆ ಬೀಳದೇ ನಾನು ಮಗುವಿಗೆ ಸ್ನಾನ ಮಾಡಿಸಿದೆ.

ನನಗೆ ನಿಜವಾಗಿಯೂ ಗಾಬರಿಯಾದದ್ದು ಆಗ. ಸಾಬೂನು ಹಚ್ಚಿದಾಗ ಆತ ಕೈಯಿಂದ ಸುಣುಚಿ ಹೋಗುತ್ತಿದ್ದ. ಎಲ್ಲಿ ಅವನನ್ನು ಕೆಳಕ್ಕೆ ಬೀಳಿಸುವೆನೊ ಎಂಬ ಭಯದಿಂದ ನನ್ನ ಮೈ ಬೆವತುಹೋಯಿತು. ಅದು ಹೇಗೊ ಸ್ನಾನವಿಧಿ ನಿರ್ವಿಘ್ನವಾಗಿ ನೆರವೇರಿತು. ಆಗಲೇ ಪ್ಯಾಟ್ ಮಗುವನ್ನು ಚೆನ್ನಾಗಿ ಪರೀಕ್ಷಿಸಿದ್ದು.

"ಈತನ ತೂಕ ಸರಿಯಾಗಿ ನಾಲ್ಕು ಪೌಂಡು ಇದೆ," ಮಗುವನ್ನು ಮತ್ತೆ ನನ್ನ ಕೈಗೆ ಕೊಡುತ್ತ ಪ್ಯಾಟ್ ಹೇಳಿದ. "ನಮಗೆ ಇಲ್ಲಿ ತಿಳಿದುಬಂದಿರುವ ವಿಷಯಗಳು ಗೊತ್ತಿರದಿದ್ದರೆ. ನಾವು ಇದನ್ನು ಅಕಾಲಶಿಶು ಎಂದೇ ಎನ್ನುತ್ತಿದ್ದೆವು.

"ನಾವು ಇದನ್ನು ಈತ, ಅಥವಾ ಇದು ಎಂದು ಕರೆಯಲಾರೆವು. ನನ್ನ ತಂದೆಯ ಹೆಸರನ್ನಿಡೋಣ. ದೂರ ನ್ಯೂಯಾರ್ಕಿನಲ್ಲಿರುವ ಆತನೇನೂ ಆಕ್ಷೇಪಣೆ ಎತ್ತಲಾರ."

ನಾನು ಆ ರಟ್ಟಿನ ತೊಟ್ಟಿಲಲ್ಲಿ ಹಣಿಕಿದೆ. "ಏ, ವಿಲಿಯಂ ಜ್ಯೂನಿಯರ್, ಹೆಸರು ಒಪ್ಪಿಗೆ ತಾನೇ ?" ಎಂದೆ.

ಮಗು ತುಸು ಅಸ್ಪಷ್ಟದಿಂದ ಸರಿದಾಡಿದಂತೆ ಮಾಡಿ ದರ್‍ರನೆ ತೇಗಿ ಒಂದಿಷ್ಟು ಹಾಲನ್ನು ವಾಂತಿಮಾಡಿತು. ಆದರೆ ಅದಕ್ಕೆ ಎಚ್ಚರಾಗಲಿಲ್ಲ.

"ಹಾಂ! ನೀನವನ ಬೆನ್ನು ಚಪ್ಪರಿಸಿ ತೇಗು ಬರಿಸಲು ಮರೆತೆ. ಪ್ರತಿಸಲ ಹಾಲು ಕುಡಿಸಿದಾಗಲೂ ಹಾಗೆ ಮಾಡಬೇಕು ಎನ್ನುವುದು ಶುದ್ಧ ಬೆಪ್ಪನಿಗೂ ಗೊತ್ತು" ಪ್ಯಾಟ್ ನನ್ನ ಮೇಲೆ ಆರೋಪ ಹೊರಿಸಿದ.

ಕುಳ್ಳರು ಆಗಾಗ ಬರುತ್ತಿದ್ದರು. ವಿಲಿಯಂ ಹಾಲು ಕುಡಿಯುವುದು, ಅಳುವುದು, ಮಲಗುವುದನ್ನು ನೋಡುತ್ತ ಹಗಲನ್ನೆಲ್ಲ ಕಳೆಯುತ್ತಿದ್ದರು. ಬಾಟ್ಲಿಯಿಂದ ಹಾಲು ಕುಡಿಸುವುದು ಅವರಿಗೆ ಅಚ್ಚರಿಯ ಮಾತಾಗಿದ್ದರೂ ಸುವಾಸನೆಯುಳ್ಳ ಬಾತ್ ಪೌಡರು ಅವರಿಗೆ ಅದಕ್ಕೂ ಅಚ್ಚರಿಯ ಸಂಗತಿಯಾಗಿತ್ತು.

ವಿಲಿಯಂ ಜ್ಯೂನಿಯರನ ಸ್ನಾನವಾದೊಡನೆ ಕುಳ್ಳರು ನನ್ನ ಸುತ್ತ ಮುಕುರುವ ವರೆಗೆ ಕಾಯ್ದು ಆ ಮೇಲೆ ಆ ಪುಟ್ಟ ಚಾಕಲೆಟ್ ಬಣ್ಣದ ದೇಹದ ಮೇಲೆ ನಾನು ಪೌಡರನ್ನು ಸಿಂಪಡಿಸುತ್ತಿದ್ದೆ. ಆಗ ಆ ಕುಳ್ಳರ ಬಾಯಿಂದ ಹೊರಡುವ "ಹ್ಹಾ! ಹ್ಹೊ!" ಉದ್ಗಾರಗಳು ನಟನನ್ನು ಧನ್ಯನನ್ನಾಗಿಸುವ ಪ್ರೇಕ್ಷಕರ ಸಂತೋಷೋದ್ಗಾರಗಳಂತಿರುತ್ತಿದ್ದವು.

ಒಂದು ದಿನ ಫೈಜಿಯ ಹೆಂಡತಿ ಸೋಫಿನಾ ನಾನು ಮಗುವಿಗೆ ಸ್ನಾನ ಮಾಡಿಸುವುದನ್ನು ನೋಡುತ್ತ ನಿಂತಳು. ಸ್ನಾನ ಮುಗಿಯುವ

ವರೆಗೂ 'ಆ' ಎಂದು ಬಾಯಿ ತೆರೆದುಕೊಂಡೇ ನಿಂತಿದ್ದ ಅವಳು ಮಗು ನಿದ್ರಿಸುವವರೆಗೂ ಒಂದಕ್ಷರವನ್ನೂ ಮಾತಾಡಲಿಲ್ಲ. ಆಮೇಲೆ "ಮಡಾಮ್, ಇದು ನಿಮ್ಮ ಕೂಸೇನು ?" ಎಂದು ಕೇಳಿದಳು.

"ಹೌದು ಮತ್ತು ಅಲ್ಲ. ಅದು ನನ್ನ ಹೊಟ್ಟೆಯಲ್ಲಿ ಹುಟ್ಟಿದ ಮಗುವಲ್ಲ. ಆದರೆ ಅದಕ್ಕೆ ತಾಯಿಯಿಲ್ಲವಾದ್ದರಿಂದ ಅದನ್ನು ಸಾಕಲು ನಾನೊಪ್ಪಿದ್ದೇನೆ" ಎಂದೆ ನಾನು.

ಸೋಫಿನಾ ದುಃಖದಿಂದಲೇ ತಲೆಯಲ್ಲಾಡಿಸಿದಳು. "ಎಂಥ ವಿಪರೀತ! ಈ ಹುಡುಗ ಬ್ವಾನಾ ಪುಟ್ನಾಮ್ ಮತ್ತು ನಿಜ ಮಾನವರಂತೆ ದೊಡ್ಡ ಆಕಾರದವನಾಗುತ್ತಾನೆ. ಆತ ಕುಳ್ಳನಾಗುವುದಿಲ್ಲ" ಎಂದಳವಳು.

ಆನುವಂಶಿಕತೆ, ಸಂತಾನಶಾಸ್ತ್ರ, ಕುಲವೈಶಿಷ್ಟ್ಯ ಎಂಬ ವಿಷಯಗಳು ಈ ಕುಳ್ಳ ಜನಾಂಗದ ತಲೆಯಲ್ಲಿ ಹೊಕ್ಕುವುದೇ ಇಲ್ಲ.

ಕಾಂಗೋದಲ್ಲಿ ಸರ್ವಸಾಮಾನ್ಯವಾಗಿರುವ ಘಟನೆಗಳಲ್ಲಿ ಒಂದರ ರಹಸ್ಯವನ್ನು ಹೆರಾಘು ಕಂಡು ಹಿಡಿಯಲೆತ್ನಿಸಿದಾಗಿನ ಪ್ರಸಂಗ ನೆನಪಾದರೆ ನನಗೆ ಈಗಲೂ ನಗೆ ಬರುತ್ತದೆ. ಬೆಲ್ಜಿಯಮ್ಮಿನಲ್ಲಿ ಕ್ಯಾಥೊಲಿಕರೇ ಬಹುಸಂಖೆಯಲ್ಲಿರುವರೆಂದ ಮೇಲೆ ಬೆಲ್ಜಿಯನ್ ಕಾಂಗೋದಲ್ಲಿ ಕ್ಯಾಥೋಲಿಕ್ ಮಿಶನರಿಗಳ ಸಂಖ್ಯೆ ದೊಡ್ಡದಾಗಿರುವುದು ಸಹಜವೇ. ಮಿಶನರಿ ಸಂಸ್ಥೆಗಳನ್ನು ನಡೆಸುವ ಪಾದ್ರಿಗಳಲ್ಲಿ ಹೆಚ್ಚಿನವರಿಗೆ ಫ್ರೆಂಚ್ ಭಾಷೆ ಬರುತ್ತದೆ. ಅವರ ಜನ ಅವರನ್ನು "ಮಾನ್ ಪೆರೆ" ಅಂದರೆ "ತಂದೆ" ಎಂದು ಕರೆಯುತ್ತಾರೆ.

ಪುಟ್ನಾಮ ಶಿಬಿರದಲ್ಲಿ ಎಷ್ಟೋ ಪಾದ್ರಿಗಳು ಅತಿಥಿಗಳಾಗಿ ಬರುವುದುಂಟು. ಒಂದು ಸಲ

ಕೆಲ ದಿನಗಳಲ್ಲಿ ಎಂಟು-ಹತ್ತು ಪಾದ್ರಿಗಳು ಬಂದು ಹೋಗಿದ್ದರು. ಅವರೆಲ್ಲ ಹೋದ ಮೇಲೆ ಹೆರಾಘು ಬಂದು "ಮಡಾಮಿ, ಈ ಮಾನ್ ಪಿರೆಗಳು ಎಲ್ಲಿಂದ ಬರುತ್ತಾರೆ?" ಎಂದು ಕೇಳಿದ. ಜ್ಞಾನಸಂಪಾದನೆಯ ನಿರ್ಧಾರದಿಂದ ಆತ ಬಂದಂತಿತ್ತು.

ಕುಳ್ಳರಿಗೆ ಬಹುದೂರ ಸ್ಥಳದ ಒಂದಿಷ್ಟು ಕಲ್ಪನೆಯನ್ನು ಮಾಡಿಕೊಡುವ ಮಾತುಗಳಲ್ಲಿ ಉತ್ತರವಿತ್ತೆ: "ಅದರಲ್ಲಿ ಹೆಚ್ಚಿನವರು ಸಮುದ್ರ-ದಾಚೆಯಿಂದ ಬರುತ್ತಾರೆ."

"ಸರಿ. ಅವರ ಹೆಂಗಸರೆಲ್ಲಿರುತ್ತಾರೆ?" ಕುಳ್ಳ ವೇದಾಂತಿ ಕೇಳಿದ.

ಒಂದಿಷ್ಟು ವಿಚಾರ ಮಾಡಿಯೆ ಹೇಳಿದೆ: "ಅವರಿಗೆ ತಾಯಂದಿರಿರುತ್ತಾರೆ, ಆದರೆ ಹೆಂಡಂ-ದಿರುವುದಿಲ್ಲ. ಲಗ್ನ ಮಾಡಿಕೊಳ್ಳುವುದು ಅವರ ಧರ್ಮಕ್ಕೆ-ಅವರ ಶಾಸ್ತ್ರಕ್ಕೆ-ವಿರುದ್ಧ. ಬ್ರಹ್ಮ-ಚಾರಿಗಳಾಗಿದ್ದರೆ ಮಾಡಬಹುದಾದಷ್ಟು ಪರೋ-ಪಕಾರವನ್ನು ವಿವಾಹಿತರಾಗಿ ಮಾಡುವುದು ಸಾಧ್ಯವಿಲ್ಲ ಎಂದು ಅವರು ತಿಳಿಯುತ್ತಾರೆ."

ಮೊದಲನೆಯ ಸಲ ನೃತ್ಯಕ್ಕೆ ಬಂದ ಹುಡುಗನಂತೆ ಸಂಕೋಚದಿಂದ ಹೆರಾಘು ತನ್ನ ಗಡ್ಡವನ್ನು ಜಗ್ಗಿದ.

"ಹೆಂಗಸರೇ ಇಲ್ಲವೇ?" ಇದಾತನ ಕೊನೆಯ ಪ್ರಶ್ನೆ.

"ಇಲ್ಲ. ಪಾದ್ರಿಗಳು ಯಾವಾಗಲೂ ಒಂಟಿ-ಯಾಗೇ ಇರುತ್ತಾರೆ."

ಹೆರಾಘು ನನ್ನತ್ತ ಕರುಣೆಯ ದೃಷ್ಟಿಯನ್ನು ಬೀರಿದ. ನನ್ನ ಅನೇಕ ವಿಚಾರಗಳ ಬಗ್ಗೆ ಅವ-ನಿಗೆ ಗೌರವವಿದ್ದರೂ ಇಂದು ನನ್ನನ್ನು ವಾದದಲ್ಲಿ ತಾನು ಸೋಲಿಸಿದೆನೆಂದು ಆತ ತಿಳಿದುಕೊಂಡನೆಂಬುದು ಸ್ಪಷ್ಟವಾಗಿತ್ತು.

ಆತ ಬುದ್ಧಿವಂತನಂತೆ ಹೇಳಿದ: "ಹೆಂಡಂದಿ-ರಿಲ್ಲ! ಅಂದ ಮೇಲೆ ಹೊಸ ಮಾನ್‌ಪಿರೆಗಳು ಹುಟ್ಟುತ್ತಾರಲ್ಲ, ಅದು ಹೇಗೆ?"

ಒಮ್ಮೆ ಪ್ಯಾಟ್ ನನಗೇ ಎಂದು ಒಂದು ವರ್ಷದ ಚಿಂಪಾಂಝಿಮರಿಯೊಂದನ್ನು ಕೊಟ್ಟ. ಅದಕ್ಕೆ ಕಟಾಲಿನಾ ಎಂದು ಹೆಸರಿಟ್ಟೆ.

ಸ್ತ್ರೀಜಾತಿಗೆ ಸಹಜವಾದಂತೆ ಕಟಾಲಿನಾಗೆ ಸುವಾಸನೆಯ ವಸ್ತುಗಳೆಂದರೆ ಬಲು ಪ್ರೀತಿ-ಯಾಗಿತ್ತು. ಅದೊಂದನ್ನೆ ಕೋಣೆಯಲ್ಲಿ ಬಹು ಕಾಲ ಬಿಟ್ಟು ತಿರುಗಿ ಬಂದು ನೋಡಿದರೆ ಮುಖದ ಪೌಡರೆಲ್ಲ ಕೋಣೆಯ ತುಂಬ ಚೆಲ್ಲಿ-ರುತ್ತಿತ್ತು. ಟೂತ್‌ಪೇಸ್ಟ್ ಮೇಜಿಗೆ ಬಳಿದಿರು-ತ್ತಿತ್ತು. ಪೌಡರ್ ಮತ್ತು ಪೇಸ್ಟ್ ಎರಡೂ ಚಿಂಪಾಂಝಿಯ ಮೈಗೆ ಮೆತ್ತಿರುತ್ತಿತ್ತು.

ಬಟ್ಟೆಯೆಂದರೂ ಕಟಾಲಿನಾಗೆ ಪ್ರೀತಿ. ಉಗ್ರ ಬಣ್ಣದ ಬಟ್ಟೆ ಸಿಕ್ಕರಂತೂ ಅದರ ಆನಂದ ಹೇಳಲಾಸಲ್ಲ. ಯಾವ ಬಟ್ಟೆಯ ತುಂಡೇ ಆಗಲಿ, ಅದು ಹಳೆಯದೇ ಇರಲಿ, ಹೊಸತೇ ಇರಲಿ,—ಸಿಕ್ಕರೆ ಸಾಕು, ಕಟಾಲಿನಾ ಗಂಟೆಗಟ್ಟಲೆ ಸಂಭ್ರ-ಮದಲ್ಲಿರುತ್ತಿತ್ತು. ನಾನು ಕಳಚಿ ಬಿಸುಟ ಬಟ್ಟೆ-ಯನ್ನೆತ್ತಿಕೊಂಡು ಮುದ್ದಿಸುತ್ತ ಅದು ಬಹಳ ಹೊತ್ತಿನ ವರೆಗೆ ಕೂಡ್ರುತ್ತಿತ್ತು. ಇಲ್ಲವೆ ಕನ್ನಡಿ ಯೆದುರು ನಿಂತು ಅದನ್ನು ತಲೆ ಮತ್ತು ಕುತ್ತಿಗೆಗೆ ಸುತ್ತಿಕೊಳ್ಳುತ್ತಿತ್ತು.

ವಿಲಿಯಂ ಜ್ಯೂನಿಯರ್ ಮೂರು ತಿಂಗಳಿನ-ವನಾದಾಗ ಪ್ಯಾಟ್ ಇಪುಲು ನದಿಯನ್ನು ಕೂಡುತ್ತಿದ್ದ ಹಳ್ಳವೊಂದಕ್ಕೆ ಅಣೆಕಟ್ಟು ಕಟ್ಟ-ಲಾರಂಭಿಸಿದ.

ಒಂದು ಸಲ ಈ ಅಣೆಕಟ್ಟಿನ ಕಾರ್ಯ ನೋಡ-ಬಯಸಿ ನಾನು ಮಗುವಿಗೆ ಆಹಾರಕೊಟ್ಟು ಮಲ-ಗಿಸಿ ಇಬ್ಬರು ಹೋಟೆಲ್ ಹುಡುಗರಿಗೆ ಅದರ ಮೇಲೆ ಕಣ್ಣಿಡಲು ಹೇಳಿಹೋದೆ.

ಒಂದು ತಾಸು ಕಳೆದಿರಬಹುದು. ಹೋಟೆಲ್ಲಿ-ನಲ್ಲಿ ಕೆಲಸಕ್ಕಿದ್ದ ಇಬ್ಬರು ಆಫ್ರಿಕನ್ ಹುಡುಗಿಯರು ಓಡೋಡುತ್ತ ಬಂದು ನನ್ನ ಕಿವಿಯಲ್ಲಿ "ಕಟಾಲಿನಾ ಮಗುವನ್ನೆತ್ತಿಕೊಂಡಿದೆ" ಎಂದು ಉಸುರಿದರು.

ಉಸಿರುಕಟ್ಟಿ ಮನೆಗೋಡಿದೆ. ಮಲಗುವ ಕೋಣೆಯಲ್ಲಿ ಚಿಂಪಾಂಝಿ ಪುಟ್ಟ ವಿಲಿಯಂ-ನನ್ನು ಬಿಗಿಯಾಗಿ ಎದೆಗಪ್ಪಿಕೊಂಡಿತ್ತು. ಮಗು ಹಸಿರುಕಟ್ಟತೊಡಗಿತ್ತು. ಅದರ ಶ್ವಾಸೋಚ್ಛ್ವಾಸ ಕೂಡ ಸರಿಯಾಗಿ ನಡೆಯುತ್ತಿರಲಿಲ್ಲ. ಆದರೆ ಅದು ನರಳುತ್ತಿರಲಿಲ್ಲ. ಅದರ ಚಿಕ್ಕ ಮುಖದ ಮೇಲೆ ರಕ್ತ ಹರಿಯುತ್ತಲಿತ್ತು.

ನಾನು ಮಗುವನ್ನು ಚಿಂಪಾಝಿಯಿಂದ ಕಸಿದುಕೊಂಡು ಆಸ್ಪತ್ರೆಗೋಡಿದೆ. ಅಣೆಕಟ್ಟ-ನಿಂದ ಅದೇ ತಾನೇ ಪ್ಯಾಟ್ ಅಲ್ಲಿಗೆ ಬಂದಿದ್ದ. ಆತ ವಿಲಿಯಮ್ಮನನ್ನು ಸೂಕ್ಷ್ಮವಾಗಿ ಪರೀಕ್ಷಿ-ಸಿದ. ಆದರೆ ಮುಖದ ಮೇಲೆ ಆಳವಾದ ಉಗು-ರಿನ ಗಾಯಗಳಲ್ಲದೆ ದೇಹದ ಮೇಲೆ ಮತ್ತಾವ ಗಾಯವೂ ಇರಲಿಲ್ಲ. ಗಾಯಗಳ ಮೇಲೆ ಆತ ಆಯೋಡಿನ್ ಹಚ್ಚಿದಾಗಲೂ ಮಗು ಅಳಲಿಲ್ಲ.

"ಒಳಗೊಳಗೇ ಪೆಟ್ಟು ಬಿದ್ದಿದೆಯೊ ಇಲ್ಲವೊ ಹೇಳಲಾರೆ. ಅವನನ್ನೆತ್ತಿಕೊಂಡು ಮನೆಗೆ ಹೋಗಿ ಒಂದಿಷ್ಟು ಬಿಸಿ ಹಾಲು ಕುಡಿಸುವ ಯತ್ನ ಮಾಡು. ಅದಕ್ಕಿಂತ ಹೆಚ್ಚೇನೂ ಮಾಡ-ಲಾರೆವು" ಎಂದ ಪ್ಯಾಟ್.

ಬಾಟ್ಲಿ ಬೆಚ್ಚಗಾದೊಡನೆ ವಿಲಿಯಮ್ಮನ ಬಾಯಿಗೆ ಕೊಟ್ಟೆ. ಆತ ಒಂದಿಷ್ಟು ಹಾಲು ಕುಡಿದು ಗಾಢ ನಿದ್ದೆಯಲ್ಲೊರಗಿದ.

ಅಂದು ಇಡೀ ಮಧ್ಯಾಹ್ನ ಮತ್ತು ರಾತ್ರಿ ನಾನು ಅವನ ತೊಟ್ಟಿಲ ಬಳಿಯಲ್ಲಿ ಚಿಂಪಾಂಝಿ ಅವನಿಗೇನೂ ಕೇಡುಮಾಡಿರಲಿಕ್ಕಿಲ್ಲ ಎಂದು ಯೋಚಿಸುತ್ತ, ಅದು ನಿಜವಾಗಲೆಂದು ದೇವರಲ್ಲಿ ಪ್ರಾರ್ಥಿಸುತ್ತ ಕುಳಿತೆ. ವಿಲಿಯಂ ರಾತ್ರಿಯಿಡೀ ನಿದ್ದೆ ಮಾಡಿದ. ಆತನಿಗೇನೂ ಅನಿಷ್ಟವಾದಂತೆ ಕಾಣಿಸಲಿಲ್ಲ. ಮರುದಿನ ಬೆಳಿಗ್ಗೆಯೆ ನನಗೆ

ನಡೆದದ್ದೆಲ್ಲ ಗೊತ್ತಾದದ್ದು.

"ಕಟಾಲಿನಾ ತನ್ನ ಸರಪಳಿಯನ್ನು ಹರಿದುಕೊಂಡು ಮನೆಯಲ್ಲೆಲ್ಲ ಓಡಾಡತೊಡಗಿತು. ಮಗುವಿಗೆ ಹೊದಿಸಿದ್ದ ಕಂಬಳಿ ಚಾದರಗಳನ್ನು ಕಂಡು ಅದು ಅವುಗಳನ್ನೆತ್ತಿಕೊಳ್ಳುವ ಭರದಲ್ಲಿ ಮಗುವನ್ನು ಎತ್ತಿಕೊಂಡಿತು. ಅಷ್ಟರಲ್ಲಿ ಇದನ್ನು ಕಂಡು ಹುಡುಗಿಯೊಬ್ಬಳು ಚೀರಲು ಚಿಂಪಾಂಝಿ ಹೆದರಿ ಮಗುವಿನ ಮುಖವನ್ನು ಪರಚಿತು" ಎಂದು ಆಳುಗಳು ಹೇಳಿದರು.

ವಿಲಿಯಮ್ಮನ ಮುಖದ ಮೇಲೆ ಇನ್ನೂ ಎರಡು ಕಲೆಗಳಿವೆ. ಆದರೆ ಈಗ ಆತ ಮತ್ತು ಕಟಾಲಿನಾ ಸ್ನೇಹಿತರಾಗಿದ್ದಾರೆ.



ಅಲಿಮಾ ತರುಣಿ

ಫ್ನೆಜಿಯ ಹೆಂಡತಿ ಸೋಫಿನಾಳೊಡನೆ ಬೇರೆ ಬೇರೆ ಕುಲಗಳ ಶಿಷ್ಟಾಚಾರಗಳನ್ನು ಚರ್ಚಿಸುತ್ತಲಿದ್ದೆ.

"ಪಿಗ್ಮಿಗಳಲ್ಲಿ ಹೆಂಡತಿಯಾಗಲು ಕೌಮಾರ್ಯವೇನೂ ಅಗತ್ಯವಲ್ಲ. ಲಗ್ನವಾಗುವಾಗ ಕುಮಾರಿಯರಾಗಿರುವ ಪಿಗ್ಮಿ ಹೆಂಗಸರು ಬಹುಕಡಿಮೆ" ಅವಳೆಂದಳು.

"ಅಲಿಮಾ" ಎಂದು ಕರೆಯಲ್ಪಡುವ ಕೌಮಾರ್ಯಭಂಗ ಸಮಾರಂಭ ಅವರಲ್ಲಿದೆಯೆಂದು ಕೇಳಿ ಅರಿತಿದ್ದೆ. ಆದರೆ ಈಗ ಅದು ಗತಕಾಲದ ಮಾತಾಗಿತ್ತು. ಶಹರಗಳಲ್ಲಿ ನಾಗರಿಕತೆ ಮತ್ತು ಮಿಶನರಿಗಳು ಬಂದಾಗಿನಿಂದ ಈ ಪದ್ಧತಿ ನಿಂತಂತಾಗಿತ್ತು.

ನಾನು ಈ ವಿಷಯ ಪ್ರಸ್ತಾಪಿಸಿದಾಗ ಸೋಫಿನಾ ದೊಡ್ಡ ತಮಾಷೆಯೊಂದನ್ನು ಕೇಳಿದವಳಂತೆ ನನ್ನತ್ತ ನೋಡಿ, "ಇನ್ನೆರಡು ವಾರಗಳಲ್ಲಿ ನಾವು ಲಿಲೊ ನದಿಗೆ ಮೀನು ಹಿಡಿಯಲು ಹೋಗುತ್ತೇವೆ. ಆಗ ಅಲ್ಲಿ ಬನ್ನಿ" ಎಂದಳು.

ನಾನು ಕಾವಲನ್ನೆ ಇಟ್ಟೆ. ಕುಳ್ಳರು ತಮ್ಮ ಮೀನು ಹಿಡಿಯುವ ತಾಣವನ್ನು ಬದಲಿಸಹೊರಟಾಗ ನಾನೂ ಅವರೊಡನೆ ಹೊರಟೆ.

ಆ ಪುಟ್ಟ ನದೀದಂಡೆಯಲ್ಲಿ ಒಂದು ಬಯಲಿಗೆ ನಾವು ಬಂದಾಗ ಪಿಗ್ಮಿಗಳು ಅವಸರವಸರವಾಗಿ ತಮ್ಮ ಗುಡಿಸಲುಗಳನ್ನು ಕಟ್ಟತೊಡಗಿದರು. ಬಿರುಗಾಳಿ ಮಳೆಗೆ ಮುರಿದು ಬೀಳಬಹುದಾದ ಸತ್ತು ಒಣಗಿದ ಮರಗಳನ್ನು ಕಡಿದುಹಾಕಿದರು.

ನನ್ನ ಆಳುಗಳು ನನಗಾಗಿ ಒಂದು ಗುಡಿಸಲು ಕಟ್ಟಿದರು. ನನ್ನ ಸಾಮಾನುಗಳನ್ನು ಒಪ್ಪವಾಗಿಟ್ಟು ತಿರುಗಿ ಹೋದರು. ಪಿಗ್ಮಿಗಳೊಡನೆ ಆ ಅಡವಿಯ ಮಧ್ಯದಲ್ಲಿ ರಸ್ತೆಗಳಿಂದ ಮತ್ತು ನಾಗರಿಕತೆ ಎಂದು ನಾವು ಕರೆಯುವ ಪ್ರತಿಯೊಂದರಿಂದಬಹುದೂರ ನಾನೊಬ್ಬಳೇ ಇದ್ದೆ.

ಮೊದಲನೆಯ ದಿನ ನಿರ್ವಿಶೇಷವಾಗಿತ್ತು. ಅಂದು ಮುಂಜಾನೆ ಅವರು ಮೀನು ಹಿಡಿಯುವುದರಲ್ಲಿ ಮಗ್ನರಾಗಿದ್ದರು. ಪ್ರತಿ ಮನೆಯಲ್ಲೂ ಅಂದು ಮೀನಿನ ಅಡಿಗೆಯಾಯಿತು.

ಮಧ್ಯಾಹ್ನ ಪಿಗ್ಮಿಗಳೆಲ್ಲ ಸಾಮಾನ್ಯವಾಗಿ ತಾವು ಕಟ್ಟುವುದಕ್ಕಿಂತ ದೊಡ್ಡದಾದೊಂದು ಗುಡಿಸಲನ್ನು ಅವರ ಶಿಬಿರದ ಆಚೆ ಪ್ರತ್ಯೇಕವಾಗಿ ಅಡವಿಯ ಅಂಚಿನಲ್ಲಿ ಕಟ್ಟತೊಡಗಿದ್ದನ್ನು ಕಂಡೆ. ಅದಕ್ಕೆ ಹಿಂಬದಿಯಲ್ಲೂ ಒಂದು ಬಾಗಿಲಿತ್ತು. ಪಿಗ್ಮಿಗಳ ಯಾವ ಮನೆಗೂ ಹಿಂಬಾಗಿಲು ಇರುವುದಿಲ್ಲ.

ಗುಡಿಸಲು ತಯಾರಾದ ಬಳಿಕ ಅಕಿನಾಡಾಮೆನಾ ಎಂಬ ಮುದುಕಿ ಗುಡಿಸಲನ್ನು ಪ್ರವೇಶಿಸಿದಳು. ಅವಳ ಹಿಂದೆಯೆ ಆರು ಹುಡುಗಿ-


ಕೋಟ್ಯಾಂತರ ಮನೆಗಳಲ್ಲಿ
ಕುಡಿದು ಆನಂದಿಸುತ್ತಾರೆ
BROOKE BOND
SPECIAL HOTEL BLEND
BROOKE BOND
ಬ್ರೂಕ್ ಬಾಂಡ್
ಚಹಾ
ತಾಜಾ ಮತ್ತು ಉತ್ತಮ
ಬ್ರೂಕ್ ಬಾಂಡ್ ಇಂಡಿಯಾ ಪ್ರೈವೇಟ್ ಲಿಮಿಟೆಡ್

ಯರು ಒಳಸೇರಿದರು. ಅವರೆಲ್ಲರೂ ಷೋಡಶಿಯರಾಗಿದ್ದರು. ಸುಂದರ ಮೈಕಟ್ಟಿನಿಂದ ಅವರು ಆಕರ್ಷಕರಾಗಿದ್ದರು.

"ಅಲಿಮಾಮನೆ" ಹೊಕ್ಕ ಈ ಹುಡುಗಿಯರು ಮಾರನೆಯ ದಿನದ ವರೆಗೂ ಹೊರಗೆ ಬರಲಿಲ್ಲ. ಹೊರಗೆ ಬಂದ ಮೇಲೆ ಅವರು ದೊಡ್ಡ ಬೂದಿಯ ರಾಶಿ ಕೂಡಿಬೀಳುವ ವರೆಗೆ ಬೆಂಕಿಯನ್ನುರಿಸಿದರು. ಮುದುಕಿ ಅಕಿನಾಡಾಮಿನಾ ಒಂದಿಷ್ಟು ಬೂದಿಯನ್ನು ಮಣ್ಣಿನ ಮಡಕೆಯಲ್ಲಿ ಹಾಕಿ ನೀರು ಸುರಿದು ಕೋಲಿನಿಂದ ತಿರುವಿದಳು. ತನ್ನೆದುರು ಒಬ್ಬೊಬ್ಬರಾಗಿ ಬಂದು ಕುಳಿತ ಕುಳ್ಳ ಹುಡುಗಿಯರ ಮುಖ, ಎದೆ ಮತ್ತು ತೊಡೆಗಳ ಮೇಲೆ ತಾನು ತಯಾರಿಸಿದ ಬೂದಿ ಮಿಶ್ರಣದಿಂದ ವಿಚಿತ್ರಾಕೃತಿಗಳನ್ನು ಬರೆದಳು.

ಪ್ರಸಾಧನದ ಕಾರ್ಯ ಮುಗಿದ ಬಳಿಕ ಎಲ್ಲ ಹೆಂಗಸರೂ ಹುಡುಗಿಯರೂ ಅಡವಿಗೆ ಹೋಗಿ ಬೆತ್ತ, ಬಾರುಕೋಲಿಗಾಗಿ ಜಿಗುಟಾದ ಬಳ್ಳಿಗಳೇ ಮುಂತಾದವನ್ನು ಕೂಡಿಸಿ ತಂದರು. ಸೂರ್ಯಾಸ್ತವಾದೊಡನೆ ಹುಡುಗಿಯರು ಅಲಿಮಾ ಮನೆಯನ್ನು ಹೊಕ್ಕರು. ಅಲಿಮಾ ಹುಡುಗಿಯರ ತಾಯಂದಿರು ಮತ್ತು ಸ್ತ್ರೀಬಳಗದವರು ಆ ದೊಡ್ಡ ಗುಡಿಸಲಿನ ಹೊರಗೆ ಅರ್ಧಚಂದ್ರಾಕೃತಿಯಲ್ಲಿ ನೆರೆದರು.

ಗಂಡಸರೆಲ್ಲ ಅಂಗಳದ ನಟ್ಟನಡುವೆ ಉರಿಯುತ್ತಿದ್ದ ಬೆಂಕಿಯ ಬಳಿ ಕುಳಿತು ಹರಟೆಹೊಡೆಯುತ್ತಲಿದ್ದರು. ಬಾಳೆ ಎಲೆಯ ಚಿಲುಮೆಗಳಲ್ಲಿ ಯಾವುದೋ ಸೊಪ್ಪನ್ನು ಸೇದುತ್ತಿದ್ದರು.

ಕಾಂಗೋದಲ್ಲಿ ಹಗಲು ಮುಗಿಯಿತೆಂದು ಹಠಾತ್ತಾಗಿ ಸೂಚಿಸುವ ಕತ್ತಲೆ ಬಂದು ಕವಿಯಿತು. ಯಾವ ಸೂಚನೆಯನ್ನೂ ಕೊಡದೆ ಹೆಂಗಸರು ಹಾಡತೊಡಗಿದರು. ಅವರು ಅಲಿಮಾ ಮನೆಯ ಎದುರು ನಿಂತಲ್ಲಿಂದ ಕದಲಲಿಲ್ಲ. ಆದರೆ ಏಕಸ್ವರದಲ್ಲಿ ಉಚ್ಚಕಂಠದಿಂದ ಹಾಡತೊಡಗಿದಾಗ ತಮ್ಮ ಬಾರುಕೋಲುಗಳನ್ನು ಕೆಳಗಿಟ್ಟರು. ಸಂಗೀತ ಒಂದು ತಾಸಿಗಿಂತಲೂ ಹೆಚ್ಚು ಕಾಲ ನಡೆಯಿತು.

ಬೆಂಕಿಗಾಗಿ ಕಟ್ಟಿಗೆಯನ್ನಾರಿಸಿ ತರುವಾಗ "ಆ ಹುಡುಗಿಯರಿಗೆ ಇನ್ನೂ ಅಲಿಮಾ ಹಾಡುಗಳು ಒರುವುದಿಲ್ಲ. ಹಿರಿಯರು ಅವರಿಗೆ ಕಲಿಸಬೇಕು" ಎಂದು ಸೋಫಿನಾ ಹೇಳಿದಳು.

ನಿಜ ಸಮಾರಂಭ ಇನ್ನೆರಡು ರಾತ್ರಿಗಳ ವರೆಗೆ ನಡೆಯುವುದಿಲ್ಲವೆಂದು ಸಾಲಾಮಿನಿ ನನಗೆ ಭರವಸೆ ಹೇಳಿದಳು. ಪಿಗ್ಮಿಗಳೆಲ್ಲ ಬೆಂಕಿಯ ಸುತ್ತ ಕುಳಿತು ಆಡುತ್ತಿದ್ದ ಮಾತುಗಳನ್ನು ಕೇಳುತ್ತಲೇ ನಾನು ನಿದ್ದೆಹೋದೆ.

ಎರಡನೆಯ ದಿನ ಹುಡುಗಿಯರು ಬಳ್ಳಿಗಳ ತೊಗಟೆಗಳನ್ನು ತೆಗೆದು ಅವು ರಿಬ್ಬನಿನಂತೆ ತೆಳ್ಳಗೂ ಮೃದುವೂ ಆಗುವ ವರೆಗೆ ತೊಲೆಗಳ ಮೇಲೆ ಬಡಿದರು. ಆಮೇಲೆ ಪ್ರತಿಯೊಬ್ಬರೂ ಎಡಮೊಲೆಯ ಕೆಳಗಿಂದ ಹಾಯ್ದು ಬಲಭುಜಕ್ಕೆ ಬರುವಂತೆ, ಬಲಮೊಲೆಯ ಅಡಿಯಿಂದ ಹಾಯ್ದು ಎಡಭುಜಕ್ಕೆ ಬರುವಂತೆ ಎರಡೆರಡು ಈ ತೊಗಟೆ ರಿಬ್ಬನ್ನುಗಳನ್ನು ಧರಿಸಿದರು.

ಅಂದು ರಾತ್ರಿ ಹುಡುಗಿಯರಲ್ಲೊಬ್ಬರೂ ಮಾಂಸವನ್ನು ತಿನ್ನಲಿಲ್ಲ. ಅವರ ಹಿರಿಯರು ಅವರಿಗೆ ಬಾಳೆಹಣ್ಣು, ಇತರ ಫಲಗಳು ಮತ್ತು ಚಹದಂಥ ಒಂದು ಪೇಯವನ್ನು ಕೊಟ್ಟರು. ವಿವಾಹಿತ ಸ್ತ್ರೀಯರು ಮತ್ತು ಗಂಡಸರು ಅನೇಕ ಕೆಂಪು ಹಂದಿಗಳ ಮತ್ತು ಒಂದು ಮಿಕದ ಮಾಂಸವನ್ನು ಕೋಲುಗಳ ತುದಿಗೆ ಸಿಕ್ಕಿಸಿ ಹುರಿದರು.

ವೇದಾಂತಿ ಹೆರಾಫುನ ಮಕ್ಕಳಾರೂ ಈ ಗುಂಪಿನಲ್ಲಿ ಇರಲಿಲ್ಲ. ಅಲಿಮಾದಲ್ಲಿ ಅವನ ಯಾವ ಸಮೀಪದ ಸಂಬಂಧಿಕನೂ ಭಾಗವಹಿಸಿರಲಿಲ್ಲ. ಆದ್ದರಿಂದ ಆತ ದೂರ ಒಂಟಿಯಾಗಿ ಕುಳಿತು ಈ ಗದ್ದಲವನ್ನೆಲ್ಲ ಒಂದು ತಿರಸ್ಕಾರದ

ದೃಷ್ಟಿಯಿಂದಲೇ ನೋಡುತ್ತಲಿದ್ದ.

"ಅಲಿಮಾದಿಂದ ನಿನಗೆ ಸಂತೋಷವಾದಂತಿಲ್ಲ" ಎಂದೆ ನಾನು.

"ಮಡಾಮಿ, ಮುದುಕನಾಗುವುದೇನೂ ಸಂತೋಷದ ಮಾತಲ್ಲ. ನಾನು ತರುಣನಾಗಿದ್ದಾಗ ಧೀರನಂತೆ ಹೋರಾಡಿ ಎಷ್ಟೊ ಅಲಿಮಾಮನೆಗಳಲ್ಲಿ ನುಗ್ಗಿದ್ದೇನೆ. ಈಗ ನನ್ನಲ್ಲಿ ಯಾವ ಬಯಕೆಯೂ ಇಲ್ಲ. ಅದರಿಂದ ನನಗೆ ದುಃಖವಾಗುತ್ತದೆ," ಆತನೆಂದ.

ನಾನಿನ್ನೂ ನನ್ನ ಗುಡಿಸಲನ್ನು ಮುಟ್ಟಿದ್ದೆನೊ ಇಲ್ಲವೋ ಅಷ್ಟರಲ್ಲಿ ಕೋಲಾಹಲ ಮಸಗಿಹೋಯಿತು. ಹನ್ನೆರಡು— ಅಥವಾ ಒಬ್ಬಿಬ್ಬರು ಹೆಚ್ಚಿಗೆ ಇದ್ದರೂ ಇರಬಹುದು— ತರುಣರು ಬೆಂಕಿಯ ಬಳಿಯಿಂದ ಎದ್ದು ಆ ದೊಡ್ಡ ಗುಡಿಸಲಿನತ್ತ ನಡೆದರು. ಗುಡಿಸಲಿನಲ್ಲಿಯ ಹುಡುಗಿಯರು ಅವರ ಪ್ರತಾಪಾದಿಗಳ ವಿಚಾರದಲ್ಲಿ ಕುತೂಹಲ ಉಳ್ಳವರಾಗಿದ್ದಾರೆಂದು ಹೇಳಲಾಗಿತ್ತು.

ಕಾವಲು ನಿಂತಿದ್ದ ಹೆಂಗಸರು ತಮ್ಮ ಬಾರುಕೋಲುಗಳನ್ನೂ ಬಡಿಗೆಗಳನ್ನೂ ಎತ್ತಿಕೊಂಡು, ಅಲಿಮಾ ಹುಡುಗಿಯರತ್ತ ಧಾವಿಸುತ್ತಿದ್ದ ತರುಣರ ಮೇಲೆ ಪ್ರಹಾರ ಮಾಡತೊಡಗಿದರು.

ನಿಜವಾಗಿಯೂ ಅದೊಂದು ಹತ್ಯಾಕಾಂಡವೇ ಸರಿ ಎಂದೆನಿಸಿತು ನನಗೆ. ಹಿರಿಯ ಹೆಂಗಸರ ಚೀರುವಿಕೆ, ಬಾರುಕೋಲುಗಳ ಏಟು ತರುಣರ ಮೈಮೇಲೆ ಬಿದ್ದಾಗ ಆಗುವ ಸಪ್ಪಳ ನನಗೆ ಕೇಳಿಸುತ್ತಿದ್ದವು. ಹೆಂಗಸರ ಏಟುಗಳಲ್ಲಿ ನಟನೆಯು ತಿಲಾಂಶವಿರದಿದ್ದರೂ ಏಟುತಿಂದ ತರುಣರು ನೋವಿನ ಒಂದೇ ಒಂದು ಸದ್ದನ್ನು ಹೊರಗೆಡಹುತ್ತಿರಲಿಲ್ಲ.

ಹೊಡೆಯುವವರು, ಹೊಡೆಸಿಕೊಳ್ಳುವವರ

ಕೋಲಾಹಲ ಗುಂಪುಗುಂಪುಗಳಾಗಿ ನಡೆಯಿತು. ಆಕ್ರಮಣಕಾರ ತರುಣರು ತಮ್ಮ ಕೈಮೀರುವ ಲಕ್ಷಣ ಕಂಡುಬಂದಾಗ ಆ ಹೆಂಗಸರು ಉರಿಯುತ್ತಿದ್ದ ಕೊಳ್ಳಿಗಳನ್ನೆತ್ತಿಕೊಂಡು ಬೀಸತೊಡಗಿದರು. ಈ ಅಗ್ನ್ಯಸ್ತ್ರಕ್ಕಂಜಿ ತರುಣರು ಹಿಂದೆ ಸರಿದರು. ಅಂದು ರಾತ್ರಿ ಆ ಹಿರಿಯ ಹೆಂಗಸರ ವ್ಯೂಹವನ್ನು ಭೇದಿಸಿಕೊಂಡು ಅಲಿಮಾಗೃಹದೊಳಗೆ ನುಗ್ಗಲು ಯಾವ ತರುಣನಿಂದಲೂ ಸಾಧ್ಯವಾಗಲಿಲ್ಲ.

ಆ ದೊಡ್ಡ ಗುಡಿಸಲಿನೊಳಗೆ ಹುಡುಗಿಯರು ಕೂಗುತ್ತ ಹರಟುತ್ತ ಕುಳಿತಿದ್ದರು. ಹುಡುಗರು ಹಿಮ್ಮೆಟ್ಟಿದ್ದರಿಂದ ಅವರಿಗೆ ಸಂತೋಷವಾಯಿತೋ ನಿರಾಶೆಯಾಯಿತೊ ತಿಳಿಯಲಿಲ್ಲ.

ಪ್ರತ್ಯೇಕವಾಗಿ ಕುಳಿತಿದ್ದ ಮುದುಕರು ಈ ಹೊಸ ಪೀಳಿಗೆಯ ತರುಣರ ಹೇಡಿತನವನ್ನು ಟೀಕಿಸುತ್ತಿದ್ದರು. ಅಂದು ಪ್ರತಿಯೊಬ್ಬರು ಇಂದಿನದು ಕೇವಲ ಪ್ರಾರಂಭದ ಕದನವೆಂದುಕೊಂಡವರಂತೆ ಬೇಗನೆ ಮಲಗಿದರು..... ಮುಖ್ಯ ಯುದ್ಧ ಇನ್ನೂ ನಡೆಯುಲಿತ್ತು.

ಮಾರನೆಯ ದಿನ ಸುಖಕಾರಿಯಾಗಿರಲಿಲ್ಲ. ಮಳೆ ಆಗಾಗ ಸುರಿಯಿತು. ಮೀನುಗಾರರು ಹೊಳೆಗೆ ಹೋಗಲಿಲ್ಲ.

ಇಳಿಹೊತ್ತಿಗೆ ಶಿಬಿರದಲ್ಲಿದ್ದ ಪ್ರತಿಯೊಬ್ಬನೂ ಅಸ್ವಸ್ಥಚಿತ್ತನಾಗಿದ್ದ. ಎತ್ತರದ ಗಿಡಗಳ ತುದಿಯಲ್ಲಿ ಬೆಳಕು ಮಿಂಚುತ್ತಲಿತ್ತು. ದೂರದಲ್ಲಿ ಮೋಡಗಳ ಗರ್ಜನೆ ಅವ್ಯಾಹತವಾಗಿ ಕೇಳಿಸುತ್ತಲಿತ್ತು. ಮಳೆ ಅಡ್ಡವಾಗಿ ಸುರಿಯುತ್ತಲಿತ್ತು.

ಗಂಡಸರು ಮನೆಗಳೊಳಗೇ ಕುಳಿತಿದ್ದರು. ಬಿಸಿರಕ್ತದ ತರುಣರು ಕೂಡ ಗುಡಿಸಲುಗಳೊಳಗೆ ಇದ್ದರು. ಆದರೆ ಆ ಹಿರಿಯ ಹೆಂಗಸರಿಗೆ ಮಾತ್ರ ಮಳೆ ಮೋಡ ಗುಡುಗುಗಳ ಪರವೆಯಿರಲಿಲ್ಲ. ಅವರು ಅಲಿಮಾ ಮನೆಯ ಎದುರಿನಲ್ಲಿ ಸರತಿಯ ಪ್ರಕಾರ ಕಾವಲುನಿಂತಿದ್ದರು. ಮಳೆಯಿಂದ ಅವರ ದೇಹವನ್ನು ರಕ್ಷಿಸಲು ಯಾವ ಆಚ್ಛಾದನವೂ ಇರಲಿಲ್ಲ.

ತುಸು ಹೊತ್ತಿನ ಮೇಲೆ ಮಳೆಯ ರಭಸ ಕಡಿಮೆಯಾಯಿತು. ಗಾಳಿಯ ಜೋರು ಕುಗ್ಗಿತು. ಗಂಡಸರು, ಹೆಂಗಸರು ಗುಡಿಸಲೊಳಗಿಂದ ಹೊರಬಂದು ಕೂಡಿಸಿಟ್ಟಿದ್ದ ಒಣ ಕಟ್ಟಿಗೆಗಳನ್ನು ರಾಶಿಹಾಕಿ ಬೆಂಕಿ ಮಾಡಿದರು. ಬೆಂಕಿಯ ಸುತ್ತ ಕುಳಿತು ತಮ್ಮ ಕುಳ್ಳ, ನಗ್ನ ದೇಹಗಳನ್ನು ಕಾಯಿಸಿಕೊಳ್ಳತೊಡಗಿದರು.




ಹುಡುಗ

ಅಲಿಮಾಮನೆಯ ಕಾವಲಿನ ಹೆಂಗಸರ ಸಂಖ್ಯೆ ಹೆಚ್ಚಿತು. ಇದರಿಂದ ಎಚ್ಚರಿಕೆ ಪಡೆದವರಂತೆ ಹನ್ನೆರಡು ಹುಡುಗರು ಒಂದು ಗುಂಪಾಗಿ ನಿಂತು, ಕನ್ನಡಿಯ ಗಂಟಾಗಿ ಕುಮಾರಿಯರು ಅಡಗಿ ಕುಳಿತಿದ್ದ ಗುಡಿಸಲಿನತ್ತ ನೋಡತೊಡಗಿದರು.

ಒಳಗಿದ್ದ ಹುಡುಗಿಯರು ಕಿಲಕಿಲನೆ ನಗುತ್ತಿರುವ ಸಪ್ಪಳ ನನಗೆ ಕೇಳಿಸುತ್ತಿತ್ತು. ತರುಣರಲ್ಲೊಬ್ಬ ಏನೊ ಒದರಿದ. ಬಹುಶಃ ಅದೊಂದು ಪೌರುಷದ ಮಾತಿರಬೇಕು.

ಅನಿಫಾ ಮೋಹಕ ಸ್ವರದಲ್ಲಿ ಪ್ರೇಮ-ಕಾಮಗಳ ಗೀತೆಯೊಂದನ್ನು ಹಾಡತೊಡಗಿದಳು. ಯಾವನೋ ಒಬ್ಬ ಡೋಲನ್ನೆತ್ತಿಕೊಂಡು ಅವಳ ಸ್ವರ ಮುಳುಗಿ ಹೋಗದಷ್ಟು ಗಟ್ಟಿಯಾಗಿ ಅದನ್ನು ತಾಳ ಹಿಡಿದು ಬಡಿಯತೊಡಗಿದ.

ಉರಿಯುತ್ತಿದ್ದ ಬೆಂಕಿಯಲ್ಲಿ ಒಂದು ಕಟ್ಟಿ-



ಪಿಗ್ಮಿ ನಾಡಿನ ಬೇಟೆಗಾರ: ಹುಲಿ ಹೊಡೆದ ನಂತರ ಹೀಗೆ ಬಣ್ಣ ಬಳಿದುಕೊಳ್ಳಬೇಕೆಂದು ಅಲ್ಲಿನ ಧಾರ್ಮಿಕ ವಿಧಿ

ಗೆಯ ತುಂಡನ್ನು ಹಾಕುವವನಂತೆ ತರುಣರಲ್ಲೊಬ್ಬ ಗುಂಪನ್ನು ಬಿಟ್ಟು ಮುಂದೆ ಬಂದವನೇ ಸೆಟ್ಟಗೆ ಅಲಿಮಾಗೃಹದ ಬಾಗಿಲಿನತ್ತ ಓಡಿದ. ಟೊಮಾಪೊ ಬಾರುಕೋಲು ಬೀಸಿದಳು. ಆ ತರುಣನ ಬರಿಬೆನ್ನಿನ ಮೇಲೆ ಬಾಸಾಳೆ ಮೂಡಿತು.

ತರುಣನ ಮಗ್ಗಲಿಗೆ ಇನ್ನಿಬ್ಬರು ಬಂದು ನಿಂತರು. ಅವರ ಹಿಂದಿಂದ, ಉಳಿದವರೂ ಬಂದರು. ತಮಗೆ ಬೀಳಲಿರುವ ಹೊಡೆತಗಳ ಬಗ್ಗೆ ಅವರಲ್ಲಿ ಎಳ್ಳಷ್ಟು ಅಂಜಿಕೆಯಿದ್ದಂತಿರಲಿಲ್ಲ.

ಮರುಕ್ಷಣದಲ್ಲಿ ಕೋಲಾಹಲ ಮಸಗಿತು. ಹೆಂಗಸರು ಚೀರುತ್ತ ಬಾರುಕೋಲು ದೊಣ್ಣೆಗಳನ್ನು ಬೀಸಿದರು. ಒಂದೊಂದು ಹೊಡೆತ ಬಿದ್ದಾಗಲೂ ನನ್ನ ಮೈ ಜುಮ್ಮೆನ್ನುತ್ತಿತ್ತು.

ಅಲ್ಲಾ! ಒಬ್ಬ ಹುಡುಗಿಯ ಪ್ರಥಮ ಪ್ರಿಯಕರನಾಗುವ ಸವಿಗನಸು ಈ ತರುಣರು ಅನುಭವಿಸುತ್ತಿದ್ದ ನೋವನ್ನು ನಿವಾರಿಸುವಷ್ಟು ಸತ್ವಶಾಲಿಯಾಗಿದೆಯೆ!

ಚೀರಾಟ ಕೂಗಾಟಗಳ ನಡುವೆ ಒಮ್ಮಂದೊಮ್ಮೆ ಅಲಿಮಾಗೃಹದ ಒಳಗೆ ಹಾಡತೊಡಗಿರುವುದು ನನಗೆ ಕೇಳಿಸಿತು. ಹಾಡು ಕಿಬಿರಾ ಭಾಷೆಯದಾಗಿತ್ತು. ಒಳಗಿದ್ದ ಹುಡುಗಿಯರು ಹೊರಗಿನ ತರುಣರನ್ನು ಪ್ರೋತ್ಸಾಹಿಸಲು ಧ್ವನಿ ಹೊರಡಿಸುತ್ತಿದ್ದರೆಂದು ಊಹಿಸಿದೆ.

ಆ ಹೆಂಗಸರ ಹೊಡೆತಗಳನ್ನು ತಪ್ಪಿಸಿಕೊಂಡು ಒಬ್ಬ ತರುಣ ಅಲಿಮಾ ಗುಡಿಸಲಿನೊಳಗೆ ನುಗ್ಗುತ್ತಿದ್ದಾಗ ಮಿಂಚೊಂದು ಮಿಂಚಿ ಮಾಯವಾಯಿತು. ಆತ ಟೊಮಾಪೊಳ ಬಾರುಕೋಲಿನ ಹೊಡೆತ ತಪ್ಪಿಸಿಕೊಂಡು ಇನ್ನೂ ಪ್ರೇಮ-ಕಾಮಗಳ ಗೀತೆಯನ್ನು ಹಾಡುತ್ತಿದ್ದ ಅನಿಘಾಳ ಮಗ್ಗಲಿಂದ ನುಸುಳಿ ಒಳಗೆ ಹೊಕ್ಕ.

ಎಲ್ಲ ಮಾನವೀ ಸದ್ದನ್ನು ಅಡಗಿಸುವಷ್ಟು ಗಟ್ಟಿಯಾಗಿ ಆಕಾಶದಲ್ಲಿ ಗುಡುಗು ಆರ್ಭಟಿಸಿತು. ಗುಡುಗಿನ ಆರ್ಭಟದ ಸದ್ದು ಮಾಯವಾದಂತೆ ಅಲಿಮಾಗೃಹದ ಮೂಲೆಯಿಂದ ಅಸ್ಪಷ್ಟವಾಗಿ ಒಬ್ಬ ಹುಡುಗಿಯ ಸ್ವರ ಹೊರಟಿತು. ಆಮೇಲೆ ಅನಿಘಾಳ ಹಾಡಿನ ಸ್ವರವೊಂದೇ ಕೇಳಿಸುತ್ತಿತ್ತು.

ನಾನು ಬೆಂಕಿಯ ಎದುರು ಮುದ್ದೆಯಾಗಿ ಕುಳಿತಿದ್ದ ಹೆರಾಫುನನ್ನು ನೋಡಿದೆ. ಮಿಂಚಿನ ಪ್ರಕಾಶದಲ್ಲಿ ಸೂರ್ಯಪ್ರಕಾಶದಲ್ಲಿಯಷ್ಟೇ ಸ್ಪಷ್ಟವಾಗಿ ಆ ಮುದುಕನ ಮುಖ ನನಗೆ ಕಾಣಿಸಿತು. ಆತ ಮುಖ ತಿರುಗಿಸಿದ. ಆದರೆ ಅಷ್ಟರಲ್ಲಿ ಅವನ ಕಣ್ಣೀರು ಹರಿದು ಗಡವನ್ನು ತೋಯಿಸುತ್ತಿದ್ದುದು ನನ್ನ ದೃಷ್ಟಿಗೆ ಬಿದ್ದುಹೋಯಿತು.

ಮಾರನೆಯ ದಿನ ಹವೆ ಚೆನ್ನಾಗಿತ್ತು. ಕೆಲ ಗಂಡಸರು ಬೇಟೆಗೆ ತೆರಳಿದರು. ಹೆಂಗಸರು ಬಾಳೆಕಾಯಿಗಳನ್ನು ಹುರಿಯುವ ಮತ್ತು ಬೇರುಗಳ ಹಿಟ್ಟನ್ನು ತಯಾರಿಸುವ ಕೆಲಸದಲ್ಲಿ ಮಗ್ನರಾದರು. ಮಧ್ಯಾಹ್ನದ ಊಟವಾದ ಬಳಿಕ

ನಮ್ಮ ಹಳ್ಳಿಯ ಪಿಗ್ಮಿ ಗುಂಪೊಂದು ವಿಲಿಯಂ ಜ್ಯೂನಿಯರ್ ಮತ್ತು ಅವನ ಅಜ್ಜಿಯನ್ನು ಕರ ತಂದಿತು.

ನನ್ನನ್ನು ಕಂಡು ವಿಲಿಯಂ ಹಿಗ್ಗಿದ. ಇಂಗ್ಲಿಷ್ ಮತ್ತು ಕಿಂಗ್ವಾನಾ ಭಾಷೆಯ ಯದ್ವಾತದ್ವಾ ಮಿಶ್ರಣದಲ್ಲಿ ಏನೇನೊ ಬಡಬಡಿಸಿದ. ಹೋಟೆಲ್ಲಿನಿಂದ ಬರುವಾಗ ಹಾದಿಯಲ್ಲಿ ಏನೇನೆಲ್ಲ ಆಯಿತು ಎಂದು ವರ್ಣಿಸುವ ಹುಮ್ಮಸ ಆತನಿಗೆ.

ಇತರ ಕುಳ್ಳ ಹುಡುಗರ ಜೊತೆಯಲ್ಲಿ ಆತ ಸುಲಭವಾಗಿ ಬೆರೆತು ಒಂದಾಗಿದ್ದನ್ನು ಕಂಡು ನನಗೆ ಸಂತೋಷವಾಗಿತ್ತು. ಅವನನ್ನು ಅಗಲುವುದು ಕಷ್ಟವಾಗಿದ್ದರೂ ಅವನನ್ನು ಅವನ ಅಜ್ಜಿಗೆ ಒಪ್ಪಿಸಿದ್ದೆ. ಏಕೆಂದರೆ ಆತ ಕುಳ್ಳರ ಸಮಾಜದಲ್ಲಿ ಬೆಳೆದು ಬಾಳಿದರೇನೇ ಅವನಿಗೆ ಜೀವನದಲ್ಲಿ ಸುಖ ಸಿಕ್ಕೀತು ಎಂದು ನನಗೆ ತಿಳಿದಿತ್ತು.

"ಎಲ್ಲ ಮುಗಿಯಿತೆ?" ಎಂದು ಕೇಳಿದೆ.

"ಇಲ್ಲ. ಕನಿಷ್ಠ ಇನ್ನೊಂದು ವಾರದ ವರೆಗೆ ಈ ಯುದ್ಧಗಳು ನಡೆಯುವವು."

"ಇದರಲ್ಲಿ ಯಾರಾದರೂ ಗಾಯಗೊಂಡು ನರಳುತ್ತಾರೆಯೆ?"

"ಈಗೇನೂ ಹೇಳಿಕೊಳ್ಳುವಂಥ ಗಾಯಗಳಾಗುವುದಿಲ್ಲ. ಬ್ವಾನಾ ಪುಟ್ನಾಮಿ ಬರುವ ಮೊದಲು ಮಾತು ಬೇರೆಯಾಗಿತ್ತು. ಆ ಕಾಲದಲ್ಲಿ ತರುಣರು ಹೆಂಗಸರ ವಿರುದ್ಧ ಬಿಲ್ಲು ಬಾಣಗಳನ್ನು ಪಯೋಗಿಸುತ್ತಿದ್ದರು. ಒಬ್ಬ ಹುಡುಗಿ ಮೈನೆರೆತೊಡನೆ ಅಲಿಮಾ ಜರುಗುತ್ತಿತ್ತು. ಗಂಡಸರನ್ನು ದೂರವಿಡಬೇಕು ಎಂದಿಲ್ಲದಿದ್ದರೂ ತರುಣರ ವಿರುದ್ಧ ಹೆಂಗಸರನ್ನು ನಿಲ್ಲಿಸುವುದು ಕುಲಪದ್ಧತಿಯಾಗಿತ್ತು. ಯಾವಾಗಲಾದರೊಮ್ಮೆ ಒಬ್ಬಿಬ್ಬರು ಸಾಯುತ್ತಿದ್ದರು. ಅಷ್ಟು ಗಡಸಾಗಿರುತ್ತಿತ್ತು ಯುದ್ಧ.

"ಕೆಲ ಸಲ ಮದುವೆಯಾದ ಗಂಡಸರೂ ಯುದ್ಧದಲ್ಲಿ ಭಾಗ ವಹಿಸುತ್ತಿದ್ದರು. ಯಾವಳಾದರೂತನ್ನ ಗಂಡ ಅಲಿಮಾಗೃಹದಲ್ಲಿ ಹೋಗುವುದಕ್ಕಾಗಿ ಯುದ್ಧ ಮಾಡುವುದನ್ನು ಕಂಡರೆ ಆ ಹಕ್ಕನ್ನು ಅವನಿಗೆ ಕೊಡುವುದಕ್ಕಾಗಿ ಅವನಿಂದ ಕಬ್ಬಿಣದ ತುದಿಯಿರುವ ಹತ್ತು ಬಾಣಗಳನ್ನು ಪಡೆಯುತ್ತಿದ್ದಳು. ಆ ಬಾಣಗಳಿಂದ ಅವಳು ಇನ್ನೂ ಹೆಚ್ಚಿನ ಬೆಲೆಯ ಪದಾರ್ಥಗಳನ್ನು ಕೊಳ್ಳಬಲ್ಲವಳಾಗಿದ್ದಳು.



ಕಾರ್ಯನುಗ್ನೆ

"ಇಂದು ಹಾಗಿಲ್ಲ. ಎಲ್ಲ ಬದಲಾಗಿದೆ. ಸರಕಾರ ಅಲಿಮಾವನ್ನು ನಡೆಯಗೊಡುವುದಿಲ್ಲ. ಮಾನ್ ಪಿರೆಗಳಿಗೂ ಆ ಸಮಾರಂಭ ಕಂಡರೆ ಆಗದು. ಆದ್ದರಿಂದ ಈಗ ನಾವು ಅದರ ನಟನೆಯಿಂದಷ್ಟೇ ತೃಪ್ತರಾಗಬೇಕಾಗಿದೆ."

ನಾನು ಅವಳನ್ನು ನೋಡಿದೆ. ಅವಳು ನನ್ನನ್ನು ನೋಡಿದಳು. ಬಾಳೆಕಾಯಿಯನ್ನು ಹುರಿಯುವಂಥ ಸಾಮಾನ್ಯ ವಿಷಯವನ್ನು ಹೇಳುತ್ತಿದ್ದವಳಂತೆ ಅವಳ ಮುಖಭಾವವಿತ್ತು.

"ಸೋಫಿನಾ, ನಿನ್ನೆ ರಾತ್ರಿ ನಡೆದದ್ದನ್ನು ಕಂಡಿದ್ದೇನೆ. ಒಬ್ಬ ತರುಣ ಅಲಿಮಾಗೃಹದಲ್ಲಿ ನುಗ್ಗಿದ. ಹೋರಾಡಿಯೆ ಆತ ಅಲ್ಲಿ ಹೋಗಬೇಕಾಯಿತು."

ಆ ಪಿಗ್ಮಿ ಹೆಂಗಸು ರೆಪ್ಪೆ ಕೂಡ ಬಡಿಯಲಿಲ್ಲ, "ಹೌದು, ಮಡಾಮಿ. ಆದರೆ ಆತ

ಹಿಂದಿನ ಬಾಗಿಲಿನಿಂದ ನೇರವಾಗಿ ಹೊರಬಿದ್ದು ಹೋದ."

ಮತ್ತೊಂದು ಕಪ್ಪು ಚಹಾ ಅವಳಿಗೆ ಕೊಟ್ಟೆ. ಆಮೇಲೆ ದಿನನಿತ್ಯದ ಸಂಸಾರದ ಮಾತುಗಳನ್ನು ಆಡಿದೆವು.

ಅಂದು ರಾತ್ರಿ ಕುಮಾರಿಯರ ಗೃಹದೆದುರು ಇನ್ನೊಂದು ಕಾಳಗ ನಡೆಯಿತು. ಹಿಂದಿನ ರಾತ್ರಿಯಷ್ಟು ಆತುರ-ಆವೇಶಗಳು ಎರಡೂ ಪಕ್ಷದವರಲ್ಲಿ ಇಂದು ಇದ್ದಂತೆ ಕಾಣಲಿಲ್ಲ. ಸೋಫಿನಾ ಹೇಳಿದ್ದನ್ನು ಜ್ಞಾಪಿಸಿಕೊಂಡು ಇದೆಲ್ಲ ಬರೇ ನಟನೆಯೆ ಎಂದು ಯೋಚಿಸಿದೆ. ಮಧ್ಯರಾತ್ರಿಯ ಸುಮಾರಿಗೆ ಅಡವಿಯಲ್ಲಿ ದೂರದಲ್ಲಿ ಸಣ್ಣ ದನಿಯಲ್ಲಿ ಕೊಂಬು ಬಾರಿಸಿದ ಧ್ವನಿ ಕೇಳಿಸಿತು. ಶಿಬಿರದ ಬೆಂಕಿಯ ಸುತ್ತ ನಡೆದ ಮಾತು ನಿಂತು ನಿಶ್ಶಬ್ದವಾಯಿತು. ಆ ಧ್ವನಿ ಮತ್ತೆ ಕೇಳಿಬಂತು. ಧ್ವನಿ ಮಧುರವಾಗಿತ್ತು. ನಾನು ಬಾಗಿಲಿಗೆ ಧಾವಿಸಿದೆ. ಹೆಂಗಸರೆಲ್ಲ ಅವಸರದಿಂದ ಗುಡಿಸಲೊಳಗೆ ಹೋಗುತ್ತಿರುವುದನ್ನೂ ಕಂಡೆ.

ಗಂಡಸರು ಬೆಂಕಿಯ ಸುತ್ತು ಕುಳಿತು ಬೆಂಕಿಯನ್ನೇ ದಿಟ್ಟಿಸುತ್ತಿದ್ದರು. ಒಮ್ಮೆಯೂ ಧ್ವನಿ ಬರುವ ಕಡೆ ಕಣ್ಣು ತಿರುಗಿಸಲಿಲ್ಲ.

ಅದು ಎಸಾಂಬಾ ಆಗಿತ್ತು. ನನಗೆ ಯಾರೂ ಹೇಳಬೇಕಾಗಿರಲಿಲ್ಲ. ಪಿಗ್ಮಿಗಳಲ್ಲಿ ಪ್ರಚಾರವಿದ್ದ ದಂತಕಥೆಗಳು ನೆನಪಿಗೆ ಬಂದವು. ಈ ಧ್ವನಿ ಕೆಡುಕಿನ ಸಂದೇಶವಾಗಿತ್ತು.

"ಎಸಾಂಬಾವನ್ನು ನೋಡಿದವರು ಸಾಯಲೇ ಬೇಕು" ಎಂದಿದ್ದರು ಅವರು.

ಹಳ್ಳಿಯ ರಸ್ತೆಗಿಂತ ಅಗಲವಾಗಿರದ ಲಿಯೊಪ್ಲೊ ರಸ್ತೆಯ ಆಚೆ ಮತ್ತೆ ಕೊಂಬಿನ ಧ್ವನಿಯಂಥ ಸ್ವರ ಕೇಳಬರತೊಡಗಿತು. ಅದರ ಮೂಲ ಎಲ್ಲಿತ್ತೋ ಯಾರು ಬಲ್ಲರು!

ನಾನು ಬಿಳಿಯ ಹೆಂಗಸು. ನಾಗರಿಕತೆ ಒದಗಿಸಿದ್ದ ಸಾಮಾನ್ಯ ಜ್ಞಾನವನ್ನೆಲ್ಲ ಹೊಂದಿದವಳು. ನಾನು ಶಸ್ತ್ರ ಧರಿಸಿ ನನ್ನ ಮನದಲ್ಲಿ ಮೂಡಿದ ಪ್ರಶ್ನೆಗಳಿಗೆ ಉತ್ತರ ದೊರಕಿಸಲು ಅಡವಿಗೆ ಹೋಗಬೇಕಾಗಿತ್ತು.

ಆದರೆ ನಾನು ಹಾಗೆ ಮಾಡಲಿಲ್ಲ. ನಾನು ತಿರುಗಿ ಒಳಗೆ ಹೋದೆ. ಎಸಾಂಬಾವನ್ನು ನೋಡುವ ಇಚ್ಛೆ ನನಗಿರಲಿಲ್ಲ.

ಮಾರನೆಯದಿನ ನಸುಕಿನಲ್ಲಿ ಒಬ್ಬಾತ ಓಡುತ್ತ ಬಂದು ಲಿಯೊಪ್ಲೋಕ್ಕೆ ಸಮೀಪದಲ್ಲಿರುದ ವಾವೇಸಿ ಶಿಬಿರದಲ್ಲಿ ಅಂಡೋಕಾಲನ ಸಂಬಂಧಿಕನೊಬ್ಬ ನಿನ್ನೆ ರಾತ್ರಿ ಸತ್ತನೆಂದು ತಿಳಿಸಿದನು.

ಅಂದಿಡೀ ಈ ರಹಸ್ಯಮಯ ಎಸಾಂಬಾದ ಕೇಡನ್ನು ಕುರಿತು ಯೋಚಿಸಿದೆ. ಯೋಚಿಸಿದಷ್ಟೂ ಕುಳ್ಳರ ಅಥವಾ ನನ್ನ ಭಯ ತಳಬುಡವಿಲ್ಲದ್ದು ಎಂದೇ ಅನಿಸುತ್ತಿತ್ತು.

ನಾನು ಅನಿಫಾಳನ್ನು ಎದುರು ಕೂಡ್ರಿಸಿಕೊಂಡು ಅವಳ ಚಿತ್ರ ಬರೆಯತೊಡಗಿದೆ. ಅವಳು ನನ್ನ ಗುಡಿಸಲಿನೆದುರು ಒಂದು ಚಿಕ್ಕ ತೊಗಟೆ ಬಟ್ಟೆ ಉಟ್ಟುಕೊಂಡು ಕುಳಿತಿದ್ದಳು. ಅವಳ ಕುತ್ತಿಗೆಯಲ್ಲಿ ಮಣಿಗಳ ಸರವೊಂದಿತ್ತು. ಕೈಗೆ ನೀಲಿ ಮಣಿಗಳ ಬಳೆಗಳಿದ್ದವು. ಇಷ್ಟನ್ನು ಬಿಟ್ಟು ಅವಳ ಮೈಮೇಲೆ ಅವಳ ಸ್ತ್ರೀತ್ವವನ್ನು ಮುಚ್ಚುವ ಮತ್ತಾವ ವಸ್ತುವೂ ಇರಲಿಲ್ಲ.

ಚಿತ್ರ ಬರೆಯುತ್ತಿರುವಾಗ ಆ ತರುಣ ಹಿಂಬಾಗಿಲಿಂದ ಹೊರಬಿದ್ದು ಹೋದ ಎಂದು ಸೋಫಿನಾ ಹೇಳಿದ್ದು ನಿಜವೇ ಎಂದು ಅನಿಫಾಳನ್ನು ಕೇಳಬೇಕೆಂದೆನಿಸಿತು. ಆದರೆ ಹಾಗೆ ಮಾಡದಿರಲು ನಿರ್ಧರಿಸಿದೆ.

ಏನೇ ಆಗಲಿ, ಇತುರಿ ಅಡವಿಯ ನಡುಮಧ್ಯದಲ್ಲಿದ್ದೆ. ಎಸಾಂಬಾ ಅಥವಾ ಅಲಿಮಾದ ರಹಸ್ಯವನ್ನು ಕೆಣಕಿ ಶೋಧಿಸಲು ನಾನಾರು? ಸೋಫಿನಾಳ ಮಾತು ಸುಳ್ಳೆಂದು ಸಾಧಿಸಲು ನಾನೇಕೆ ಯತ್ನಿಸಬೇಕು? ನನ್ನಲ್ಲಿದ್ದ ಸಾಕ್ಷಿಯಾದರೂ ಏನು? ಒಬ್ಬ ಮುದಿಕುಳ್ಳನ ಕಣ್ಣೀರುಗುಡುಗಿನ ಆರ್ಭಟದಲ್ಲಿ ಅಡಗಿಹೋದ ಒಬ್ಬ ಕುಮಾರಿಯ ಕೂಗು-ಇಷ್ಟೇ ಅಲ್ಲವೆ? *

This Magazine owned by the Loka Shikshana Trust, Hubli is printed and published by Shri H. R. Purohit at the Samyukta Karnatak Press, Koppikar Road, Hubli.

ಶ್ರೀ ದಿವಾಕರ ರಂಗರಾಯರ **ಕರ್ಮಯೋಗ** ೩ ನೇ ಆವೃತ್ತಿ

ಪುಟ: ೧೨೦ ಬೆಲೆ: ರೂ. ೧-೫೦ (ಅ. ವೆ. ಪ್ರತ್ಯೇಕ)

ಅಧ್ಯಾತ್ಮ ಕಾರ್ಯಾಲಯ, ಹುಬ್ಬಳ್ಳಿ ಹಾಗೂ ೨, ರೆಸಿಡೆನ್ಸಿ ರೋಡ್, ಬೆಂಗಳೂರು-೧

